
ಕಸ್ತೂರಿ



ಏಪ್ರಿಲ್, ೧೯೬೨

ಬೆಲೆ : ೭೫ ನ.ಪೈ.

ಇಂದಿನ ವಿಶ್ವಕ್ಕೊಂದು ಬೆಳಕಿಂಡಿ

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ ನೇ ದಿನಾಂಕ
ಪ್ರಕಟವಾಗುವುದು.

ಮುಖ್ಯ ಸಂಪಾದಕರು :
ರಂಗನಾಥ ದಿವಾಕರ

ಸಹಾಯಕ ಸಂಪಾದಕರು :
ಪಿ. ವಿ. ಆಚಾರ್ಯ

ಪ್ರಕಾಶಕರು :
ಲೋಕ ಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :
ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :
ಸಂಯುಕ್ತಕರ್ನಾಟಕಮುದ್ರಣಾಲಯ
ಹುಬ್ಬಳ್ಳಿ

ಮುಖಚಿತ್ರ :
ಸುಬ್ಬಣ್ಣ!
ಶ್ರೀ ರಾಮಚಂದ್ರರಾವ್

ಚಂದಾ ದರ :

ವಾರ್ಷಿಕ (ಅಂಚೆಸೇರಿ).	ರೂ.೮.೦೦
ಅರ್ಧ ವರ್ಷ —	ರೂ.೪.೫೦
ಬಿಡಿಸಂಚಿಕೆ —	ರೂ.೦.೭೫

Kasturi, April 1962

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ ಲೇಖಗಳ ಸಂಗಡವೇ ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು. ಲೇಖಗಳು ಅಕಸ್ಮಾತಾಗಿ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ.

ಲೇಖ ಪ್ರಕಟವಾದರೆ "ಕಸ್ತೂರಿ"ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವದು. ಅದು ಚಂದಾದಾರರಿಗೆ ಆಯಾ ತಿಂಗಳ ೫ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಕಸ್ತೂರಿ

ಸಂಚಿಕೆ ೮ ಎಪ್ರಿಲ್, ೧೯೬೨ ವರ್ಷ ೬

ಪ್ರಕೃತಿ - ವಿಕೃತಿ - ಸಂಸ್ಕೃತಿ

ಶ್ರೀಮತಿ ಸರಸ್ವತಿದೇವಿ ಚಾಳಿಹಳ್ಳಿ

ಜೀವನವು ಮೂರು ಸಂಗತಿಗಳಿಂದ ಕೂಡಿರುತ್ತದೆ. ಪ್ರಕೃತಿ, ವಿಕೃತಿ ಮತ್ತು ಸಂಸ್ಕೃತಿಗಳೇ ಆ ಸಂಗತಿಗಳು. ನಮಗೆ ಹಸಿವೆಯಾದಾಗ ಮಾತ್ರ ಊಟ ಮಾಡುವುದು ಪ್ರಕೃತಿ; ಅವಶ್ಯಕತೆಗಿಂತಲೂ ಜುಲುಮೆಯಿಂದ ಹೆಚ್ಚಿಗೆ ಉಣ್ಣುವುದು ವಿಕೃತಿ ಮತ್ತು ನಾವು ಹಸಿವೆಯಿಂದ ಬಳಲುತ್ತಿರುವಾಗ ನಮ್ಮೆದುರಿಗೆ ಬಂದ ಹಸಿದ ಅತಿಥಿಗೆ ನಮ್ಮ ಆಹಾರವನ್ನೇ ನೀಡಿ ಅವನ ಹಸಿವನ್ನು ಹಿಂಗಿಸುವುದು ಸಂಸ್ಕೃತಿ.

ಧಾನ್ಯವನ್ನು ತಿನ್ನುವುದು ಪ್ರಕೃತಿ. ಅದೇ ಹಣ್ಣು-ಹಂಪಲ ಮೊದಲಾದ ಇತರ ಫಲಗಳನ್ನು ಸೇವಿಸುವುದು ಸಂಸ್ಕೃತಿ; ಆದರೆ ಅವೇ ಹಣ್ಣುಗಳಿಂದ ಮಾದಕ ಪದಾರ್ಥಗಳನ್ನು ತಯಾರಿಸಿ ಕುಡಿಯುವುದು ವಿಕೃತಿ. ನಾವು ಅನೇಕ ಸಲ ವಿಭ್ರಮೆಯಿಂದ ವಿಕೃತಿಯನ್ನೇ ಸಂಸ್ಕೃತಿ ಎಂದು ಭಾವಿಸುತ್ತೇವೆ. ಇದು ಮೂರ್ಖತನದ ಪರಮಾವಧಿ.

ಉಂಡಿಯನ್ನು ತಿಂದು ಅರಗಿಸುವ ಸಾಮರ್ಥ್ಯ ನಮ್ಮಲ್ಲಿಲ್ಲದಿರುವಾಗ, ಗೆಳೆಯರು ಬಲುಮೆಯಿಂದ ಉಂಡೆಯನ್ನು ತಿನ್ನಿಸುವರು. ಇದು ಉಳಿದ ನೋಟಕರಿಗೆ ಮಿತ್ರಪ್ರೇಮವೆನಿಸಿದರೂ ಮಿತ್ರದ್ರೋಹವಾಗಿ ಪರಿಣಮಿಸುವುದು. ಒಂದು ವೇಳೆ ಆಧುನಿಕ ವೈಜ್ಞಾನಿಕ ಸಾಧನ (X-Ray) ಗಳಿಂದ ಹೊಟ್ಟೆಯ ಚಿತ್ರವನ್ನು ತೆಗೆದು ನೋಡಿದರೆ, ಅವಶ್ಯಕತೆಗಿಂತ ಹೆಚ್ಚು ತಿಂದುದರ ಭಯಂಕರ ಪರಿಣಾಮ ತಿಳಿಯದೇ ಇರದು. ಇದರಿಂದ ಒಂದೊಂದು ಸಲ ಆಪರೇಶನ್ ಅಥವಾ ಮೃತ್ಯುವಿನ ಸರದಿಯೂ ಬರಬಹುದು. ಜುಲುಮೆಯಿಂದ ಪ್ರೇಮಕ್ಕೆಂದು ಹೆಚ್ಚಾಗಿ ತಿನ್ನಿಸುವವರು ಅದರಿಂದಾಗುವ ಅನಾಹುತವನ್ನು ತಿಳಿದು, ಇನ್ನಾ

ದರೂ ಹೆಚ್ಚು ತಿನ್ನಲು ಆಗ್ರಹ ಮಾಡದಿರುವುದು ಬಹಳ ಉತ್ತಮ. ಇದೂ ಒಂದು ಚಿಕ್ಕ ಉಳಿತಾಯವಾಗುವುದೆಂದು ಹೇಳಿದರೆ ಅತ್ಯುಕ್ತಿ ಏನೂ ಅಲ್ಲ.

ವಿಜ್ಞಾನದ ಉನ್ನತಿಯಾದಂತೆ ವಿಕೃತಿಯು ಕ್ಷೀಣವಾಗುತ್ತ ಸಂಸ್ಕೃತಿ ಬೆಳೆಯುವುದೆಂದು ಧಾರಾಳವಾಗಿ ಹೇಳಬಹುದು. ವಿಜ್ಞಾನದ ಪ್ರಗತಿಯನ್ನು ಕಂಡು ಜನರು—"ಕಚ್ಚಾ ಮಾಲುಗಳು ಹೋಗಿ ಪಕ್ಕಾ ಮಾಲಾಗಿ ಬರುವವು" ಎಂದು ತಿಳಿದುಕೊಳ್ಳುತ್ತಿದ್ದಾರೆ. ಆದರೆ ಇದು ನಿಜವಲ್ಲ. ವಿಜ್ಞಾನವು ಹೆಚ್ಚುವುದರಿಂದ ಮಾನವನಿಗೆ ಹವೆ, ಸೂರ್ಯನ ಬೆಳಕು ಮೊದಲಾದವುಗಳ ಮಹಿಮೆಯು ಗೊತ್ತಾಗತೊಡಗುವುದು. ಅನಂತರ ಮನುಷ್ಯನು ಸ್ವತಃ ಪ್ರಕೃತಿಯ ಉಡಿಯಲ್ಲಿ ಮಲಗಲು, ಬರಿಯ ಕಾಲಿನಿಂದ ನಡೆಯಲು, ಹೊಲಗಳಲ್ಲಿ ಕೆಲಸ ಮಾಡಲು ಮತ್ತು ಪ್ರಕೃತಿಯ ಸಂಗಡ ಹೆಚ್ಚು ಹೆಚ್ಚಾಗಿ ಸಂಪರ್ಕವನ್ನಿಟ್ಟುಕೊಳ್ಳಲು ಬಯಸುವನು.

ಇತ್ತೀಚೆಗೆ ಅಮೇರಿಕೆಯ ಜನರು ವಾರದ ಕೊನೆಗೆ ಒಂದೆರಡು ದಿನ ತಮ್ಮ ತಮ್ಮ ಹೊಲಗಳಲ್ಲಿ ಹೋಗಿ ಕೆಲಸ ಮಾಡಿ ಬರುವ ಪರಿಪಾಠವನ್ನಿಟ್ಟುಕೊಂಡಿದ್ದಾರೆ. ಇದೂ ಸಹ ಸಂಸ್ಕೃತಿಯೇ. ವಿಜ್ಞಾನವು ಹೆಚ್ಚುವುದರಿಂದ ಈ ಸಂಗತಿ ಎಲ್ಲ ಜನರ ತಿಳುವಳಿಕೆಗೆ ಬರುವುದು. ಆಗ ಮಾತ್ರ ಎಲ್ಲರೂ ವಾರದಲ್ಲಿ ಒಂದೆರಡು ದಿನ ಪ್ರಕೃತಿಯ ಸಂಪರ್ಕವನ್ನಿಟ್ಟುಕೊಳ್ಳಲು ಹೊರಗೆ ಉಳಿಯಲಿಕ್ಕೆ ಹವಣಿಸುತ್ತಾರೆ. ಇದೇ ಮುಂದುವರೆಯುತ್ತ ಇಡೀ ವಾರವನ್ನೇ ಪ್ರಕೃತಿಗಾಗಿ ಏಕೆ ಮೀಸಲಿಡಬಾರದೆಂದು ಅವರ ಪ್ರಶ್ನೆಯಾಗುತ್ತದೆ. ಇದರಿಂದ ಸಂಸ್ಕೃತಿ ಬೆಳೆಯುತ್ತ ಹೋಗಿ ಸಾಮಾಜಿಕ ಜೀವನದಲ್ಲಿ ಸಾದಾತನವು ತಲೆದೋರುವುದು. ಇದೇ ಸಂಸ್ಕೃತಿ. *

ಮಗು ತಬ್ಬಲಿಯಾಗಿರುವುದು ಭಯಂಕರ, ಚೊಚ್ಚಲ ಮಗುವಾಗಿ ಹುಟ್ಟುವುದು ಕಷ್ಟ, ಕಿರಿಯ ಮಗುವಾಗಿರುವುದು ತ್ರಾಸದಾಯಕ, ನಡುವಿನ ಮಗುವಾಗಿರುವುದು ತೊಂದರೆ, ಮತ್ತು ಏಕಮಾತ್ರ ಪುತ್ರ ಅಥವಾ ಪುತ್ರಿಯಾಗಿರುವುದು ಭೀಕರ ಎಂದು ಮನೋವಿಜ್ಞಾನಿಗಳು ಹೇಳುತ್ತಾರೆ. ಅಂತೂ ಹುಟ್ಟುವಾಗಲೇ ಪ್ರಾಯಸ್ಥರಾಗಿರುವುದೊಂದೇ ಬಚಾವಿನ ದಾರಿ ಎನ್ನಿ.

ಅಂಗಹೀನರ ಕಲ್ಯಾಣಕ್ಕಾಗಿ ಇವರು ಹಗಲಿರುಳು ದುಡಿಯುತ್ತಾರೆ

ಶ್ರೀಮತಿ ಫಾತಿಮಾ ಇಸ್ಮಾಯಿಲ್

ಮುಂಬಯಿಯ ಸಚಿವಾಲಯದ ಭವ ಕಟ್ಟಡದ ಎಡಬದಿಗೆ ಕಫ್ ಪರೇಡ ದಿಕ್ಕಿನಲ್ಲಿ ತುಸು ಮುಂದಕ್ಕೆ ಸಾಗಿದರೆ ಜೀರ್ಣವಾಗಿರುವಂತೆ ಕಾಣುವ ಚಪ್ಪರದ ಮನೆಗಳ ಸಾಲೊಂದ್ಯ ಕಾಣುವುದು. ಈ ಚಪ್ಪರಗಳಲ್ಲಿ ಒಂದರಲ್ಲಿ ಹೊಕ್ಕು ನೋಡಿದರೆ ಅಲ್ಲಿ ನಾನಾವಿಧವಾದ ಚಟುವಟಿಕೆಗಳು ನಡೆದಿರುವುದು ಕಾಣಿಸುತ್ತದೆ. ಹೊಲಿಗೆಯ ಯಂತ್ರಗಳು, ಮುದ್ರಣ ಯಂತ್ರಗಳು, ಕೈಮಗ್ಗಗಳು- ಎಲ್ಲ ತಮ್ಮ ತಮ್ಮ ವಿಶಿಷ್ಟ ಸಪ್ಪಳ ಮಾಡುತ್ತ ಕೆಲಸ ನಡೆಸಿರುತ್ತವೆ. ತುಸು ಲಕ್ಷ ಗೊಟ್ಟು ನೋಡಿದರೆ ಈ ಸರ್ವಸಾಮಾನ್ಯವೆನ್ನುವ ಕೆಲಸದಲ್ಲಿಯ ವೈಶಿಷ್ಟ್ಯ ಕಾಣಿಸುವುದು. ಈ ಯಂತ್ರಗಳನ್ನು ನಡೆಸುವವರೆಲ್ಲ ಅಂಗಹೀನರಾಗಿರುತಾರೆ. ಕಾಲಿಲ್ಲದವರು, ಕೈಯಿಲ್ಲದವರು ಮರದ ಕೈಕಾಲುಗಳ ಸಹಾಯದಿಂದ ಯಂತ್ರಗಳನ್ನು ನಡೆಸುತ್ತಾರೆ. ನೈಸರ್ಗಿಕ ಅವಯವಗಳ ಕೊರತೆಯಿಂದ ಉದ್ಭವಿಸುವ ಅಡಚಣಿಗಳನ್ನಿವರು ತಮ್ಮ ಏಕಾಗ್ರತೆಯಿಂದ, ಜಿಗುಟುತನದಿಂದ ನಿವಾರಿಸಿಕೊಂಡು ಸಮರ್ಪಕವಾಗಿ ಕೆಲಸ ಮಾಡುತ್ತಿರುತ್ತಾರೆ.

ಇದೇ ಶ್ರೀಮತಿ ಫಾತಿಮಾ ಇಸ್ಮಾಯಿಲರು ಅಂಗಹೀನರ ಸುಗಮ ಬಾಳಿಗಾಗಿ ಕಟ್ಟಿರುವ ಉದ್ಯೋಗಾಲಯ.

ಜನ್ಮತಃ ಇಲ್ಲವೆ ಬೇನೆಯ ಮೂಲಕ ಅಥವಾ ಅಪಘಾತದಿಂದ ಅಂಗಹೀನರಾದವರ ಜೀವನ ದುಃಖಮಯವಾಗುವುದನ್ನು ನಾವೆಲ್ಲ ನೋಡುತ್ತೇವೆ. ಅಂಥವರು ತಮಗೂ ತಮ್ಮ ಪರಿವಾರ ಮತ್ತು ಸಮಾಜಕ್ಕೂ ಹೊರೆಯಾಗಿ ದುರ್ಭರ ಬಾಳನ್ನು ಸಾಗಿಸುತ್ತಿರುವದು ನಮ್ಮಲ್ಲಿ ತಲೆಮಾರುಗಳಿಂದಲೂ ನಡೆಯುತ್ತ ಬಂದಿದೆ. ಅಂಗಹೀನರಲ್ಲಿ ಹೆಚ್ಚಿನವರು ಬಿಕ್ಕೆ ಬೇಡಿ ಬದುಕಬೇಕಾದ ಪ್ರಸಂಗವಿರುವುದೇ ಹೆಚ್ಚು.

ಈ ಅಸಹ್ಯ, ಅನಿಷ್ಟ ಪರಿಸ್ಥಿತಿಯ ನಿವಾರಣೆಗಾಗಿ ಪ್ರಯತ್ನಿಸುವವರಲ್ಲಿ, ಪ್ರಯತ್ನಿಸಿ ಯಶಸ್ವಿಗಳಾಗುತ್ತ ನಡೆದಿರುವವರಲ್ಲಿ ಮುಂಬಯಿಯ ಶ್ರೀಮತಿ ಫಾತಿಮಾ ಇಸ್ಮಾಯಿಲರು ಒಬ್ಬರು. ಇವರು ೧೯೦೩ ರಲ್ಲಿ ಒಂದು ಧನಿಕ ಕಚ್ಛ ಕುಟುಂಬದಲ್ಲಿ ಹುಟ್ಟಿದರು. ಇವರ ಚುರುಕು ಬುದ್ಧಿಯನ್ನು ಕಂಡ ಇವರ ಅಣ್ಣ ಶ್ರೀ ಉಮರ ಸುಭಾನಿಯವರು ಇವರಿಗೆ ಒಳ್ಳೆಯ ಶಿಕ್ಷಣ ಕೊಡಿಸಿ ವೈದ್ಯಕೀಯ ಶಿಕ್ಷಣ ಪಡೆಯಲು ವಿಯೆನ್ನಾಕ್ಕೆ ಕಳಿಸಿದರು. ಆದರೆ ಅಲ್ಲಿ ೨-೩ ವರ್ಷ ಶಿಕ್ಷಣ ಪಡೆಯುವಷ್ಟರಲ್ಲಿ ಕೌಟುಂಬಿಕ ತೊಂದರೆಗಳ ಮೂಲಕ ಫಾತಿಮಾ ತಿರುಗಿ ಬರಬೇಕಾಯಿತು.

ಶ್ರೀ ಇಸ್ಮಾಯಿಲರೊಂದಿಗೆ ಇವರ ವಿವಾಹವಾದ ನಂತರದಲ್ಲಿ ಪತಿಯ ಮನೆಯ ಹಿರಿಯರ ಇಚ್ಛೆಯಂತೆ ಫಾತಿಮಾ ಆರು ವರ್ಷಗಳ ಕಾಲ ಘೋಷಾದಲ್ಲಿರಬೇಕಾಯಿತು ಆದರೆ ಪಡದೆಯ ಹಿಂದಿದ್ದ ಮಾತ್ರಕ್ಕೆ ಅವರಲ್ಲಿಯ ಸ್ವತಂತ್ರ ವಿಚಾರ, ಸಾಮಾಜಿಕ ಅರಿವುಗಳೇನೂ ಕಡಿಮೆಯಾಗಲಿಲ್ಲ. ಅಣ್ಣ ಶ್ರೀ ಉಮರರಿಗೆ ಪಂಡಿತ ಜವಾಹರಲಾಲರೇ ಮುಂತಾಗಿ ಅನೇಕ ದೇಶಪ್ರೇಮಿಗಳ ಸ್ನೇಹವಿದ್ದಿತು. ಅದರಿಂದಾಗಿ ಫಾತಿಮಾಳಲ್ಲಿ ಚಿಕ್ಕಂದಿನಿಂದಲೂ ಸ್ವಾತಂತ್ರ್ಯದ ವಿಚಾರ ಮೈಗೂಡಿತ್ತು. ಘೋಷಾದಲ್ಲಿರುವಾಗಲೂ ಅವರು ಅಂಜುಮನ್-ಇ-ಇಸ್ಲಾಂ ಶಾಲೆಯಲ್ಲಿ ಕಲಿಸಲು ಹೋಗುತ್ತಿದ್ದರು. ಘೋಷಾ ಸ್ವೀಕರಿಸಿ ಆರು ವರ್ಷಗಳಾದ ನಂತರ

"ಸ್ತ್ರೀ" ಯಿಂದ



ಮಾತ್ರ ಫಾತಿಮಾ ಅದನ್ನು ತ್ಯಜಿಸಲು ಕಚ್ಛಿ ಸಮಾಜವು ನಾನಾ ಬಗೆಯ ಟೀಕೆಗಳನ್ನು ಮಾಡಿತು. ಆದರೆ ಪತಿಯ ಬೆಂಬಲದಿಂದ ಫಾತಿಮಾ ಅದನ್ನು ಲೆಕ್ಕಿಸಲಿಲ್ಲ. ಅಖಿಲ ಭಾರತೀಯ ಮಹಿಳಾ ಪರಿಷತ್ತು ಮತ್ತು ಇನ್ನಿತರ ಅನೇಕ ಸಾಮಾಜಿಕ ಸಂಸ್ಥೆಗಳೊಡನೆ ಸಂಬಂಧ ಬಂತು ಅವರಿಗೆ. ವ್ಯಾಪಾರಕ್ಕೆಂದು ಪತಿ ಪೂರ್ವ ಆಫ್ರಿಕಕ್ಕೆ ಹೋದಾಗ ಅವರ ಜೊತೆಯಲ್ಲಿದ್ದ ಫಾತಿಮಾ ಪೂರ್ವ ಆಫ್ರಿಕದಲ್ಲಿ ಭಾರತೀಯ ಐಕ್ಯದ ವಿಚಾರವನ್ನು ಹರಡಿದರು. ಅಲ್ಲಿರುವ ಭಾರತೀಯರು ಪ್ರಾಂತೀಯ ಮತ್ತು ಜಾತೀಯ ಆಧಾರದ ಮೇಲೆ ಸಂಘಗಳನ್ನು ಕಟ್ಟಿಕೊಂಡಿದ್ದರು. ಆದರೆ ಭಾರತೀಯ ಸ್ತ್ರೀ ಸಂಘವನ್ನು ಸ್ಥಾಪಿಸಿ ಫಾತಿಮಾ ಎಲ್ಲ ಭಾರತೀಯರನ್ನು ಒಂದುಗೂಡಿಸಿದರು.

ಸಮಾಜಕಾರ್ಯದಲ್ಲಿ ಅವರಿಗೆ ವಿಶೇಷ ಆಸ್ಥೆಯಿದೆ. ಆ ಬಗ್ಗೆ ಮಾತಾಡುವಾಗ ಅವರು "ಗಿಡಕ್ಕೆ ಹೂ ಬಿಟ್ಟ ನಂತರವೇ ಫಲ ಕೈಗೆ ಸಿಗುವುದಲ್ಲವೆ? ಅದರಂತೆ ಮನುಷ್ಯ ಸಾಮಾಜಿಕ ಸೇವಾ ಕಾರ್ಯದಲ್ಲಿ ತೊಡಗುವ ಮೊದಲು ಅವನಲ್ಲಿ ಸಮಾಜದ ಬಗ್ಗೆ ವಿಚಾರ, ತನ್ನ ಮೇಲಿರುವ ಹೊಣೆ ಇತ್ಯಾದಿಗಳ ಅರಿವು ಮೂಡಬೇಕಾಗುತ್ತದೆ. ಅನಂತರವೇ ಅವನ ಸಾಮಾಜಿಕ ಕಾರ್ಯಕ್ಕೆ ಫಲ ದೊರೆಯುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಯಾವುದರ ಪ್ರಭಾವದಿಂದ ಅನೇಕರ ಮನಸ್ಸಿನಲ್ಲಿ ಸಮಾಜ ವಿಷಯಕ ಹೊಣೆಯ ಅರಿವು ಮೂಡುವುದೋ ಅದೇ ನಿಜವಾದ ಸಮಾಜಕಾರ್ಯ" ಎನ್ನುತ್ತಾರೆ.

ಅವರು ಕೈಕೊಂಡಿರುವ ಕಾರ್ಯವು ಅವರ ಮಾತಿಗೆ ಪ್ರತ್ಯಕ್ಷ ಸಾಕ್ಷಿಯಾಗಿರುತ್ತದೆ. ಅಂಗಹೀನರ ಶಿಕ್ಷಣಕ್ಕಾಗಿ, ಅವರು ಸ್ವಾವಲಂಬಿಗಳಾಗುವಂತೆ ಮಾಡುವುದಕ್ಕಾಗಿ, ಅವರಿಗೆ ಉದ್ಯೋಗ ದೊರಕಿಸಿಕೊಡುವುದಕ್ಕಾಗಿ ಶ್ರೀಮತಿ ಫಾತಿಮಾ ಅವರು ನಡೆಸುತ್ತಿರುವ ಉದ್ಯೋಗಾಲಯವು ಅವರಿಗೇ ಒದಗಿ ಬಂದ ಒಂದು ಆಪತ್ತಿನ ಫಲವಾಗಿದೆ. ಅವರ ಚಿಕ್ಕ ಮಗಳು ಉಷಾ (ಮಗಳಿಗೆ ಹೆಸರಿಡುವಾಗ ಅವರು ಧಾರ್ಮಿಕ ಬಂಧನಗಳ ಪರಿವೆಯನ್ನೆ ಮಾಡಲಿಲ್ಲ.) ಎರಡು ಎರಡೂವರೆ ವರ್ಷದವಳಾದಾಗ ಅವಳಿಗೆ ಪೋಲಿಯೊ ರೋಗವಾಯಿತು. ಡಾಕ್ಟರರು, ವೈದ್ಯರು, ಹಕೀಮರ ಉಪಚಾರ ನಡೆಯಿತು. ಆದರೆ ಸಾಮಾನ್ಯವಾಗಿ ಎಲ್ಲರೂ "ಈ ರೋಗವೇನೂ ಇನ್ನು ಪೂರ್ಣ ಗುಣವಾಗುವುದಿಲ್ಲ. ಸಂಕಟವನ್ನು ಧೈರ್ಯದಿಂದ ಎದುರಿಸಬೇಕು" ಎನ್ನುತ್ತಿದ್ದರು.

ಶ್ರೀಮತಿ ಇಸ್ಮಾಯಿಲರು ಧೈರ್ಯ ತೋರಿದರು. ಆದರೆ ಅವರು ನಿಸರ್ಗಕ್ಕೆ ಶರಣು ಹೋಗುವುದರಲ್ಲಿ ಧೈರ್ಯ ತೋರದೆ ಅದರ ಆಹ್ವಾನವನ್ನು ಸ್ವೀಕರಿಸುವುದರಲ್ಲಿ ಧೈರ್ಯ ತೋರಿಸಿದರು.

ತನ್ನ ಮಗಳ ಅವಯವಗಳಲ್ಲಿಯ ನಿಜವಾಗಿ ಯಾವ ಸ್ನಾಯು ಮತ್ತು ಮಜ್ಜಾತಂತುಗಳ ಶಕ್ತಿ ಕಳೆದಿದೆ ಮತ್ತು ಆ ಶಕ್ತಿಯನ್ನು ತಿರುಗಿ ಸಂಪಾದಿಸಲು ಏನು ಮಾಡಬೇಕು ಎಂಬುದನ್ನು ತಿಳಿದುಕೊಳ್ಳುವ ಹಂಬಲದಿಂದ ಅವರು ತಾವು ಪಡೆದಿದ್ದ ವೈದ್ಯಕೀಯ ಜ್ಞಾನದ ಆಧಾರದಿಂದ ಶರೀರಶಾಸ್ತ್ರದ ಮೇಲಿನ ಪುಸ್ತಕಗಳನ್ನು ಓದಲು ಆರಂಭಿಸಿದರು. ,ಮಲಬಾರಿನಲ್ಲಿ ಪೋಲಿಯೋ

ರೋಗದ ಮೇಲೆ ಉತ್ತಮ ಆಯುರ್ವೇದ ಚಿಕಿತ್ಸೆ ಮಾಡುತ್ತಾರೆಂದು ಕೇಳಿದ ಅವರು ಮಲಬಾರಿಗೆ ಹೊರಟರು. ಹಾದಿಯಲ್ಲಿ ಮದ್ರಾಸಿನಲ್ಲಿಳಿದಾಗ ಅವರಿಗೆ ಮಗಳ ಅವಯವಗಳಲ್ಲಿ ಈಗ ಯಾವ ಶಕ್ತಿ ಉಳಿದಿದೆ ಎಂದು ಡಾಕ್ಟರರಿಂದ ಪರೀಕ್ಷಿಸಿ ಕೊಂಡು ಮಲಬಾರಿನಿಂದ ತಿರುಗಿ ಬಂದ ಬಳಿಕ ಏನೇನು ಸುಧಾರಣೆಯಾಗಿದೆ ಎಂದು ನೋಡ ಬೇಕು ಎಂಬ ವಿಚಾರ ಬಂದು ಅವರು ಮದ್ರಾಸಿ ನಲ್ಲಿ ಡಾ. ಕಿಣಿ ಎಂಬವರಲ್ಲಿ ಹೋದರು.

ಡಾ. ಕಿಣಿಯವರು ಹುಡುಗಿಯನ್ನು ಪರೀಕ್ಷಿಸಿದ ರೀತಿಯಲ್ಲಿ ಏನೋ ಒಂದು ವೈಶಿಷ್ಟ್ಯವು ಶ್ರೀಮತಿ ಫಾತಿಮಾರಿಗೆ ಕಾಣಿಸಿತು. ಅವರು ತುಂಬ ವಿಚಾರ ಮಾಡಿ ಮಲಬಾರಿಗೆ ಹೋಗುವು ದನ್ನು ನಿಲ್ಲಿಸಿ ತಮ್ಮ ಮಗಳಿಗೆ ಚಿಕಿತ್ಸೆ ನಡೆಸಲು ಡಾ. ಕಿಣಿಯವರಿಗೇ ವಿನಂತಿ ಮಾಡಿಕೊಂಡರು.

ಆ ಕಾಲದಲ್ಲಿ ಭಾರತದಲ್ಲಿ ಅವಯವೋಪ ಚಾರ (ಫಿಜಿಯೊಥೆರಪಿ) ಶಾಸ್ತ್ರವನ್ನು ಬಲ್ಲ ಡಾಕ್ಟ ರರ ಸಂಖ್ಯೆ ತೀರ ಕಡಿಮೆ ಇತ್ತು. ಇಷ್ಟೇ ಅಲ್ಲ, ಪುಣೆಯಲ್ಲಿಯ ಸೈನಿಕ ಆಸ್ಪತ್ರೆಯಲ್ಲಿ ಕೆಲವು ದಾದಿಯರಿಗೆ ಈ ಶಿಕ್ಷಣ ಕೊಡುವ ಏರ್ಪಾಡು ಮಾಡಿದಾಗ ಕೇವಲ ಡಾ. ಕಿಣಿಯವರೊಬ್ಬರೇ ತಮ್ಮ ಒಬ್ಬ ದಾದಿಗೆ ಈ ಶಿಕ್ಷಣ ಕೊಡಿಸಿದ್ದರು. ಡಾ. ಕಿಣಿ ಮತ್ತು ಈ ದಾದಿ ಉಷಾಳಿಗೆ ಮಾಲೀಸು ಮಾಡುವುದು, ಬಗೆ ಬಗೆಯ ಶಾಸ್ತ್ರೀಯ ವ್ಯಾಯಾಮ ಮಾಡಿಸುವುದು ಮುಂತಾದ ಉಪ ಚಾರ ಮಾಡುತ್ತಿದ್ದಾಗ ಶ್ರೀಮತಿ ಇಸ್ಮಾಯಿಲರು ಸುಮ್ಮನೆ ಕೂಡ್ರಲಿಲ್ಲ. ಶರೀರಶಾಸ್ತ್ರವನ್ನು ಅಭ್ಯಾಸ ಮಾಡುತ್ತ ಡಾಕ್ಟರರ ಜೊತೆಯಲ್ಲಿ ಮಾತಾಡಿ ತಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳುತ್ತಿದ್ದರು. ಮಗಳಿಗೆ ಅವಳ ಮೇಲೆ ನಡೆಯುತ್ತಿರುವ ಉಪಚಾರದ ಮರ್ಮವನ್ನು ಅವಳಿಗೆ ತಿಳಿಯುವ ರೀತಿಯಲ್ಲಿ ಹೇಳುತ್ತಿದ್ದರು.

ರಾತ್ರಿ ಹಾಸಿಗೆಯ ಮೇಲೆ ಅಡ್ಡಾಗಿ ಶ್ರೀಮತಿ ಇಸ್ಮಾಯಿಲರು ಬಗೆಬಗೆಯ ಚಲನವಲನಗಳಿಂದ ಯಾವ ಯಾವ ಅವಯವಕ್ಕೆ ಹೇಗೇಗೆ ವ್ಯಾಯಾಮಾಗುತ್ತದೆ ಎಂದು ಅವಲೋಕಿಸುತ್ತಿದ್ದರು. ತಮಗೆ ತಿಳಿದುಬಂದ ವಿಚಾರಗಳನ್ನು ಕುರಿತು ಡಾಕ್ಟರರೊಡನೆ ಚರ್ಚಿಸುತ್ತಿದ್ದರು. ಈ ನಿಷ್ಠೆ, ಪ್ರಯತ್ನಗಳ ಬಲದಿಂದ ಶ್ರೀಮತಿ ಇಸ್ಮಾಯಿಲರು ತರಬೇತಿ ಪಡೆದಿದ್ದ ಆ ದಾದಿಗಿಂತಲೂ ತಜ್ಞಳಾದದ್ದು ಆಶ್ಚರ್ಯವೇನಲ್ಲ.

ಮುಂದೆ ಪುಣೆಯಲ್ಲಿ ಬಿಡಾರ ಮಾಡಿದಾಗ ಶ್ರೀಮತಿ ಇಸ್ಮಾಯಿಲರು ಮಗಳನ್ನು ಸೈನಿಕ ಆಸ್ಪತ್ರೆಗೆ ಕರೆದೊಯ್ಯತೊಡಗಿದರು. ಅಲ್ಲಿ ಅವ ರಿಗೆ ಇನ್ನಷ್ಟು ಅನುಭವ, ಮಾಹಿತಿ ದೊರೆಯಿತು. ಅದು ೧೯೪೬–೪೭ ರ ಸಮಯ. ಆ ಆಸ್ಪತ್ರೆಯ ಇಂಗ್ಲೀಷ್ ಡಾಕ್ಟರ್ ಸ್ವದೇಶಕ್ಕೆ ಮರಳುವವ ನಿದ್ದ. ಅವನು ಹೋದ ಮೇಲೆ ಅವಯವೋಪ ಚಾರದ ಶಾಖೆ ಮುಚ್ಚಲಿತ್ತು. "ಅಂದರೆ ಆಗ ಈ ಎಲ್ಲ ಸಾಧನ–ಸಾಮಗ್ರಿಗಳನ್ನು ಏನು ಮಾಡು ವಿರಿ ?" ಎಂದು ಶ್ರೀಮತಿ ಇಸ್ಮಾಯಿಲರು ಕೇಳಿ ದಾಗ, "ರದ್ದಿಯೆಂದು ಬಿಸಾಕುವೆವು" ಎಂಬ ಉತ್ತರ ಬಂತು.

ಈ ಉತ್ತರವನ್ನು ಕೇಳಿ ಶ್ರೀಮತಿ ಇಸ್ಮಾಯಿ ಲರಿಗೆ ಆಘಾತವಾಯಿತು. ಇಡೀ ದೇಶದಲ್ಲಿಯೇ ಇಂಥ ಸಾಧನಗಳು ಎಲ್ಲಿಯೂ ಇರಲಿಲ್ಲ. ರದ್ದಿ ಯೆಂದು ಅವುಗಳನ್ನು ಮಾರುವ ಕಲ್ಪನೆ ಅವ ರಿಗೆ ಅಸಹ್ಯವಾಯಿತು. ತಾವೇ ಅದನ್ನು ಕೊಳ್ಳುವ ನಿರ್ಧಾರವನ್ನು ಅವರು ಮಾಡಿದರು. ಆಸ್ಪತ್ರೆಯಲ್ಲಿ ಮಾಲೀಸು ಮಾಡುತ್ತಿದ್ದ ಕೆಲವು ಹುಡುಗರ ಸಹಾಯದಿಂದ ಈ ಸಾಧನಗಳು ರದ್ದಿ ಯೆಂದು ಬರೆಸಿ ಕೈವಶ ಮಾಡಿಕೊಳ್ಳುವ ತಂತ್ರ ವನ್ನು ಹೂಡಬೇಕಾಯಿತು.

ಇಷ್ಟರಲ್ಲಿ ಉಷೆ ತುಂಬ ಗುಣಮುಖಳಾಗಿ ದ್ದಳು. ಉಪಚಾರ ನಡೆದಿದ್ದಾಗಲೇ ಅವಳ ಶಿಕ್ಷಣಕಾರ್ಯವೂ ಸಾಗಿತ್ತಾದ್ದರಿಂದ ಶ್ರೀಮತಿ ಇಸ್ಮಾಯಿಲರಿಗೆ ಎಷ್ಟೋ ಭಾರಇಳಿದಂತಾಗಿತ್ತು. ಉಷೆಯ ನಿಮಿತ್ತದಿಂದ ಸಂಪಾದಿಸಿದ ಜ್ಞಾನದ ಉಪಯೋಗವನ್ನು ಇತರರಿಗೆ ಮಾಡಿಕೊಡುವ ಹಂಬಲದಿಂದ ಶ್ರೀಮತಿ ಇಸ್ಮಾಯಿಲರು ಯೋಗ್ಯ

ಸ್ಥಳವೊಂದನ್ನು ಹುಡುಕತೊಡಗಿದರು. ಬೆಕ್ಕು ತನ್ನ ಸಂಸಾರವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸ್ಥಳಾಂತರಿಸುವಂತೆ ಅವರು ತಮ್ಮ ಸಾಮಾನುಗಳನ್ನು ಮುಂಬಯಿಯ ಎರಡು ಮೂರು ಡಾಕ್ಟರರ ದವಾಖಾನೆಗಳಲ್ಲಿ ಓಡಾಡಿಸಬೇಕಾಗಿ ಬಂದರೂ ಎದೆಗೆಡದೆ ಕೊನೆಗೆ ೧೯೪೭ ರಲ್ಲಿ ಅವರು ಎಸ್. ಆರ್. ಸಿ. ಸಿ. ಸಂಸ್ಥೆಯನ್ನು ಸ್ಥಾಪಿಸಿ, ಪೋಲಿಯೊ ಮೊದಲಾದ ರೋಗಪೀಡಿತ ಮಕ್ಕಳ ಉಪಚಾರಕ್ಕಾಗಿ ಪುಣೆಯಲ್ಲಿ ಬಂದಾದ ಆಸ್ಪತ್ರೆಯಲ್ಲಿದ್ದ ಮಾಲೀಸು ತಜ್ಞ ಹುಡುಗರನ್ನು ಕರೆಸಿದರು. ಮದ್ರಾಸಿನಿಂದ ಡಾ. ಕಿಣಿಯವರು ಬಂದರು. ಸಂಸ್ಥೆಗೆ ಬಲ ಬಂತು. ದವಾಖಾನೆಯ ಮಗ್ಗಲಿಗೆ ಅಂಗಹೀನ ಮಕ್ಕಳಿಗಾಗಿ ಶಾಲೆಯೂ ತೆರೆಯಲ್ಪಟ್ಟಿತು. ಡಾ. ಕಿಣಿಯವರ ನಿಧನಾನಂತರ ಮುಂಬಯಿಯ ಡಾ. ಢೋಲಕಿಯಾ, ಡಾ. ಮಾಲಫಿರೋಜ, ಡಾ. ಬಾಳಿಗಾ ಮೊದಲಾದವರ ಸಹಕಾರದಿಂದ ಕೆಲಸ ಸಾಗಿತು. ಇಂದು ಮಹಾಲಕ್ಷ್ಮಿ ಹಾಜಿ ಅಲಿ ಪಾರ್ಕಿನ ಬಳಿ ಇರುವ ರುಗ್ಣಾಲಯದಲ್ಲಿ ೫೦ ಮಂಚಗಳಿದ್ದು ನಿತ್ಯವೂ ಹೊರಗಿನಿಂದ ನೂರಾರು ಮಕ್ಕಳು ಉಪಚಾರಕ್ಕಾಗಿ ಬರುತ್ತಾರೆ.

ಅಂಗಹೀನರಿಗೂ ತಾವು ಸಮಾಜದ ಉಪಯುಕ್ತ ಘಟಕಗಳಾಗಬೇಕು ಎಂದೆನಿಸುತ್ತಿರಲಿಕ್ಕಿಲ್ಲವೆ? ಇತರರ ಉಪೇಕ್ಷಾಪೂರ್ಣ ಕನಿಕರ ಅವರಿಗೆ ತಾಪವನ್ನುಂಟುಮಾಡುವುದಿಲ್ಲವೆ ಎಂಬ ವಿಚಾರದಿಂದ ಶ್ರೀಮತಿ ಇಸ್ಮಾಯಿಲರಲ್ಲಿ ಇನ್ನೊಂದು ಬಯಕೆ ಮೂಡಿತು. ಇತರ ಸಾಮಾನ್ಯರಂತೆ ಅಂಗಹೀನರಿಗೂ ವ್ಯವಹಾರ ಮಾಡಲು ಆಗುವಂತೆ ಮಾಡಬೇಕು ಎಂದು ಅವರು ಯೋಚಿಸತೊಡಗಿದರು. ೧೯೫೩ ರಲ್ಲಿ ಅವರು ಸರಕಾರದ ಶಿಫಾರಸಿನಿಂದ ಯುರೋಪ ಅಮೇರಿಕಗಳಿಗೆ ಹೋಗಿ ಅಲ್ಲಿಯ ಅಂಗಹೀನರ ಸಂಸ್ಥೆಗಳ ನಿರೀಕ್ಷಣೆ ಮಾಡಿಕೊಂಡು ಬಂದರು.

ಮುಂಬಯಿಯ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಖೇರರ ಮಗ ಶ್ರೀ ಹೇರಂಬ ಇವರು ಸ್ವತಃ ಅಂಗಹೀನರು. ಅವರು ಇಂಗ್ಲಂಡಿನಲ್ಲಿಯ ಅಂಗಹೀನರ ಸ್ನೇಹಮಂಡಳದ ವೃತ್ತಾಂತವನ್ನು ಪತ್ರಿಕೆಗಳಲ್ಲಿ ಪ್ರಕಟಿಸಿ ಭಾರತದಲ್ಲಿಯೂ ಈ ಬಗ್ಗೆ ಪ್ರಯತ್ನಗಳಾಗಬೇಕು ಎಂದು ಬರೆದರು. ಶ್ರೀ ಹೇರಂಬರ ಆಹ್ವಾನವನ್ನು ಸ್ವೀಕರಿಸಿ ಶ್ರೀಮತಿ ಇಸ್ಮಾಯಿಲರು ಮುಂದೆ ಬಂದರು. ಶ್ರೀಮತಿ ಶಿರೀನ ಕೋಠವಾಲಾ ಮತ್ತು ಶ್ರೀಮತಿ ಬ್ರಜ ರತನಲಾಲರು ಅವರಿಗೆ ನೆರವಾಗಿ ನಿಂತರು. ಮೊದಲನೆಯ ದಿನದ ಇವರ ಸಭೆಗೆ ಕೇವಲ ಎಂಟು ಮಂದಿ ಮಾತ್ರ ಬಂದರು. ಆದರೆ ಎದೆಗುಂದದೆ ಶ್ರೀಮತಿ ಇಸ್ಮಾಯಿಲರು ಪ್ರತಿ ಶನಿವಾರ ಸಭೆ ಸೇರಿಸಲು ನಿಶ್ಚಯಿಸಿದರು.

ಸಭೆಗೆ ಹೆಚ್ಚೆಚ್ಚು ಜನ ಬರತೊಡಗಿದರು. ಅಂಗಹೀನ ಮಕ್ಕಳಿಗಾಗಿ ಮನರಂಜನೆ ಒದಗಿಸುವ ಕಾರ್ಯಕ್ರಮಗಳ ಏರ್ಪಾಡಾಗತೊಡಗಿತು. ಈ ಸಭೆಯ ಕಾರ್ಯಗಳ ಪರಿಣಾಮವಾಗಿ ಅಂಗಹೀನರ ಮಿತ್ರಮಂಡಳ (ಫೆಲೊಶಿಪ್ ಆಫ್ ದಿ ಫಿಜಕಲಿ ಹ್ಯಾಂಡಿಕ್ಯಾಪ್ಡ್) ಉದಯಿಸಿತು. ಅದರಲ್ಲಿ ಅಂಗಹೀನರ ಜೊತೆಗೆ ಅವರ ಹಿತೇಚ್ಛುಗಳಾದ ಸದೃಢ ಸಭಾಸದರೂ ಸೇರಿದರು. ಅಂಗಹೀನರಿಗೆ ಸಾಮಾಜಿಕ ಜೀವನವನ್ನು ಒದಗಿಸಿಕೊಡುವುದು, ಅವರ ಸಮಸ್ಯೆಗಳನ್ನು ಅಭ್ಯಸಿಸಿ ಸಮಾಜದಲ್ಲಿ ವಿಚಾರ ಜಾಗೃತಿ ಮಾಡುವುದು, ಅದಕ್ಕಾಗಿ ಉದ್ಯೋಗಾಲಯವನ್ನು ಆರಂಭಿಸುವುದು ಎಂಬ ತ್ರಿವಿಧ ಉದ್ದೇಶವು ಈ ಸಂಸ್ಥೆಯದಾಯಿತು. ಕಿವುಡರು, ಕುರುಡರು, ಮೂಕರು ಇತ್ಯಾದಿಯರಿಗಾಗಿ ಬೇರೆ ಸಂಸ್ಥೆಗಳಿದ್ದುದರಿಂದ ಕೈಕಾಲು, ಬೆನ್ನೆಲಬುಗಳ ದೋಷದಿಂದ ಅಂಗಹೀನರಾಗುವವರ ಮಟ್ಟಿಗೆ ಮಾತ್ರ ಈ ಸಂಸ್ಥೆಯ ಕಾರ್ಯ ಮಿತವಾಯಿತು.

ಉದ್ಯೋಗಾಲಯಕ್ಕಾಗಿ ತುಸು ಹಣ ಕೂಡಿಸಲಾಯಿತು. ಒಂದು ವರ್ಷದ ನಂತರ ೧೫ ಜನರಿಗೆ ಇದರಲ್ಲಿ ಕೆಲಸ ಕೊಡಲ್ಪಟ್ಟಿತು. ಸ್ನೇಹಿತರ ಮನೆಯಲ್ಲಿಯ ರದ್ದಿ ಕಾಗದಗಳನ್ನು

ಸಂಗ್ರಹಿಸಿ ಶ್ರೀಮತಿ ಇಸ್ಮಾಯಿಲರು ಅಂಗಹೀನರಿಂದ ಕಾಗದದ ಚೀಲಗಳನ್ನು ತಯಾರಿಸಿ ಅಂಗಡಿಕಾರರಿಗೆ ಮಾರತೊಡಗಿದರು. ಈ ಕಾರ್ಯದಲ್ಲಿ ಅವರು ಮತ್ತು ಅವರ ಉತ್ಸಾಹಿ ಕಾರ್ಯಕರ್ತರು ಅಡ್ಡಿ ಅಡಚಣಿಗಳನ್ನು ಎದುರಿಸಬೇಕಾದರೂ ದಿನಗಳೆದಂತೆ ಯಶ ಬರತೊಡಗಿತು. ಕೆಲಸ ಮಾಡಲು ಹೆಚ್ಚೆಚ್ಚು ಅಂಗಹೀನರು ಮುಂದೆ ಬರತೊಡಗಿದರು. ಹೊಸ ಹೊಸ ಕೆಲಸಗಳನ್ನು ಹುಡುಕಬೇಕಾಯಿತು. ಟಾಯಿಮ್ಸ್ ಮುದ್ರಣಾಲಯದಲ್ಲಿ ಕೆಲಸ ಮಾಡಿದ್ದ ಒಬ್ಬ ಅಂಗಹೀನನ ಅನುಭವ ಬಲದಿಂದ ಬುಕ್ ಬೈಂಡಿಂಗ ಕೆಲಸ ಆರಂಭವಾಯಿತು ಆಲ್ಬಮ್ಸ್ ಪ್ಯಾಡ್ಸ್, ಫೈಲ್ಸ್‌ಗಳು ತಯಾರಾಗಹತ್ತಿದವು. ಚಿಕ್ಕ ಟ್ರೆಡಲ್ಸ್‌ಗಳು ಬಂದು ಮುದ್ರಣ ಕಾರ್ಯವೂ ಆರಂಭವಾಯಿತು. ಹೀಗೆ ನಾನಾಬಗೆಯ ಕೆಲಸಗಳ ಮೂಲಕ ಅಂಗಹೀನರ ಬಾಳು ಸುಗಮವಾಗುವಂತಾಯಿತು. ಕಳೆದ ಮೂರು ವರ್ಷಗಳಲ್ಲಿ ಈ ಉದ್ಯೋಗಾಲಯದಲ್ಲಿ ಕೆಲಸಗಾರರಿಗೆ ಕೂಲಿ ಹಣವೆಂದು ೧॥ ಲಕ್ಷ ರೂಪಾಯಿಗಳು ಹಂಚಲ್ಪಟ್ಟಿವೆ.

ಸಂಸ್ಥೆಯಲ್ಲೀಗ ೨೧೫ ಸದಸ್ಯರಿದ್ದಾರೆ. ಇವರಲ್ಲಿ ೧೧೩ ಜನ ಅಂಗಹೀನರು. ಹೊಲಿಗೆ, ಮುದ್ರಣ, ಬುಕ್ ಬೈಂಡಿಂಗ್, ಕೈಮಗ್ಗದ ನೇಯ್ಗೆ ಮುಂತಾದ ಹದಿನಾಲ್ಕು ಬಗೆಯ ಕೆಲಸಗಳನ್ನೀಗ ಅಂಗಹೀನರು ಇತರ ಸಾಮಾನ್ಯರಷ್ಟೆ ಉತ್ತಮ ರೀತಿಯಲ್ಲಿ ಮಾಡುತ್ತಿದ್ದಾರೆ. ಕೆಲಸಗಾರರಿಗೆ ದಿನಕ್ಕೆ ೧॥ ಯಿಂದ ೪ ರೂಪಾಯಿಗಳ ವರೆಗೆ ಕೂಲಿ ಸಿಗುತ್ತದೆ.

ಅಂಗಹೀನರಿಗೆ ಬೇಕಾಗುವ ಸಾಧನಗಳು, ಕೃತ್ರಿಮ ಅವಯುವಗಳು ಮುಂತಾದವನ್ನು ಪುಕ್ಕಟೆಯಾಗಿಯಾಗಲಿ ಇಲ್ಲವೆ ತೀರ ಸುಲಭ ದರದಲ್ಲಿ ದೊರಕಿಸಿ ಕೊಡಲಾಗುತ್ತಿದೆ. ಕಳೆದ ವರ್ಷ ಕೆಲಸಕ್ಕಾಗಿ ೧೮೮ ಅಂಗಹೀನರು ಅರ್ಜಿ ಮಾಡಿಕೊಂಡಿದ್ದರು. ಅವರಲ್ಲಿ ೧೦೩ ಜನರಿಗೆ ಕೆಲಸ ಕೊಡಲ್ಪಟ್ಟಿತು. ಚನ್ನಾಗಿ ಕೆಲಸ ಮಾಡಲು ಬಂದ ಮೇಲೆ ಬೇರೆಡೆ ಅವರಿಗೆ ಕೆಲಸ ಕೊಡಿಸುತ್ತಾರೆ.

ಸಂಸ್ಥೆಯ ಕಾರ್ಯವಿಸ್ತಾರದ ದೃಷ್ಟಿಯಿಂದ ಶ್ರೀಮತಿ ಇಸ್ಮಾಯಿಲರು ಪ್ರಚಾರಕಾರ್ಯ ನಡೆಸುತ್ತಿದ್ದಾರೆ ಕಳೆದ ವರ್ಷ ಅವರು ಈ ಸಂಬಂಧದಲ್ಲಿ ಮುಂಬಯಿಯಲ್ಲಿ ಒಂದು ಪರಿಷತ್ತನ್ನೂ ಚರ್ಚಾಕೂಟವನ್ನೂ ಸೇರಿಸಿದರು. ಈ ಸಂಸ್ಥೆಯು ತ್ರೈಮಾಸಿಕ ಪತ್ರಿಕೆಯನ್ನೂ ಹೊರಡಿಸುತ್ತದೆ.

ಹದಿಮೂರು ಲಕ್ಷ ರೂಪಾಯಿಗಳ ವೆಚ್ಚದಿಂದ ಕಟ್ಟಲಿರುವ ಹೊಸ ಕಟ್ಟಡದಲ್ಲಿ ೪೦೦ ಅಂಗಹೀನರಿಗೆ ಶಿಕ್ಷಣ, ಅರ್ಥಾರ್ಜನ ಮತ್ತು ವ್ಯವಸಾಯ ಶೋಧನೆಯ ಕೆಲಸಗಳು ನಡೆಯಲಿವೆ. ನಾಗಪುರ, ಅಹಮದಾಬಾದ ಮತ್ತು ಬೆಂಗಳೂರುಗಳಲ್ಲಿ ಇಂಥ ಸಂಸ್ಥೆಗಳು ತಲೆಯೆತ್ತುವ ಲಕ್ಷಣಗಳಿವೆ.

ಆದರೆ ಶ್ರೀಮತಿ ಇಸ್ಮಾಯಿಲರಿಗೆ ತಮ್ಮ ಹಳೆಯ ಕಟ್ಟಡದ ಮೇಲೆ ಪ್ರೇಮವಿದೆ. ಇಂಥ ಮನೆಗಳು ಹಳ್ಳಿ ಹಳ್ಳಿಗಳಲ್ಲಿ ತಲೆಯೆತ್ತಬೇಕು ಎಂದವರ ಬಯಕೆಯಿದೆ. ಅಂಗಹೀನರ ಸಮಸ್ಯೆಯೆ ಅಳಿದು ಹೋಗಬೇಕೆನ್ನುತ್ತಾರವರು. ಅವರ ದುರ್ದಮ್ಯ ಆಶಾವಾದ, ಕಷ್ಟಸಹಿಷ್ಣುತೆ, ನಿಸ್ವಾರ್ಥವೃತ್ತಿ, ಯೋಜನಾಬದ್ಧ ಕಾರ್ಯನೀತಿ ಇವೇ ಅವರ ಯಶಸ್ಸಿನ ಗುಟ್ಟು.

ಶ್ರೀಮತಿ ಇಸ್ಮಾಯಿಲರ ಇನ್ನೊಬ್ಬ ಮಗಳು ಮಾಸುಮಾ ಹೇಳುತ್ತಾಳೆ "ಅಮ್ಮನ ಯಶಸ್ಸಿನಲ್ಲಿ ಇನ್ನೊಂದು ಗುಟ್ಟಿದೆ. ಸಂಸ್ಥೆಯ ಕಾರ್ಯ ಎಷ್ಟೋ ದಿನಗಳ ವರೆಗೆ ನಮ್ಮ ಮನೆಯಲ್ಲಿಯೆ ನಡೆಯುತ್ತಿತ್ತು. ಅಮ್ಮನ ಕಾರ್ಯದರ್ಶಿ ಕುಂಟಕಾಲಿನ ಪಮೇಲಾ ಮೆಕಾರ್ಥರ್ ಸಂಜೆ ೪ ಹೊಡೆಯುತ್ತಲೇ ಬಂದು Mr. Ismail it is office time" (ಆಫೀಸಿನ ವೇಳೆಯಾಯಿತು, ಮಿ. ಇಸ್ಮಾಯಿಲ್) ಎನ್ನುತ್ತಿದ್ದಳು. ಪಾಪ, ಅಪ್ಪ ತಮ್ಮ ಕಾಗದಪತ್ರಗಳನ್ನೆತ್ತಿಕೊಂಡು ಹೊರಬಿದ್ದು ಕೋಣೆಯನ್ನು ತೆರವು ಮಾಡಿಕೊಡುತ್ತಿದ್ದರು."

*



ನಿಶ್ಶಬ್ದ ಶಬ್ದದಿಂದ ಅಚ್ಚರಿಗಳು

ಎಚ್. ವಿ. ಸುಬ್ಬರಾವ್

ಸಮಯೋಚಿತವಾದ ಒಂದು ಧ್ವನಿಯು ಕ್ರೂರಿಯನ್ನು ದಯಾಳುವಾಗಿಯೂ ಮೂಢನನ್ನು ಜ್ಞಾನಿಯಾಗಿಯೂ ಮಾಡಬಹುದೆಂದು ಹೇಳುತ್ತಾರೆ; ಅದೇ ಧ್ವನಿಯು ಬಂಡೆಗಳನ್ನು ಕೊರೆಯಬಲ್ಲುದೆಂದೂ ಆಭರಣಗಳನ್ನು ತಯಾರಿಸಬಹುದೆಂದೂ ರೋಗಗಳನ್ನು ವಾಸಿ ಮಾಡಬಹುದೆಂದೂ ನಂಬಬಹುದೆ? ಇವೆಲ್ಲವೂ ಇಂದು ವಿಜ್ಞಾನಕ್ಕೆ ಸಾಧ್ಯವಾಗಿವೆ.

ವಸ್ತುಗಳ ಅದಿರುವಿಕೆಯಿಂದ ಧ್ವನಿಯು ಉತ್ಪನ್ನವಾಗುತ್ತದೆ. ಪ್ರಶಾಂತವಾದ ಕೊಳದ ಮಧ್ಯದಲ್ಲಿ ಹಾಕಿದ ಕಲ್ಲು ನೀರಿನಲ್ಲಿ ವರ್ತುಲಾಕಾರದ ಅಲೆಗಳನ್ನು ಹುಟ್ಟಿಸುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಅದರಂತೆಯೇ ಕಂಪಿಸುತ್ತಿರುವ ವಸ್ತುವಾದರೂ ಹವೆಯಲ್ಲಿ ಒತ್ತಡದ ಅಲೆಗಳನ್ನು ಹುಟ್ಟಿಸುತ್ತದೆ. ಈ ಅಲೆಗಳು ಗೋಲಾಕಾರದಲ್ಲಿ ಪಸರಿಸುತ್ತಾ ಕಿವಿಯ ಪರೆಗೆ ಬಡಿದಾಗ ಅದು ಕಂಪನವಾಗಿ ಧ್ವನಿಯ ಅನುಭವ ಉಂಟಾಗುತ್ತದೆ. ಕಂಪಿಸುತ್ತಿರುವ ವಸ್ತುವಿನ ಕಂಪನ ವೇಗವು ಒಂದು ಮಿತಿಗಿಂತ ಕಡಿಮೆಯಾದರೆ ಧ್ವನಿಯು ಕೇಳುವುದಿಲ್ಲ. ಗುಂಗಾಡು ಹಾರುವಾಗ ಶಬ್ದ ಕೇಳಿದರೂ ಗುಬ್ಬಿ ಹಾರುವಾಗ ಕೇಳದಿರಲು ಕಾರಣ ಇದೇ. ಸಾಮಾನ್ಯವಾಗಿ ಕಂಪನದ ವೇಗ ಸೆಕೆಂಡಿಗೆ ೧೬ ಕ್ಕಿಂತ ಕಡಿಮೆಯಾದರೆ ನಮ್ಮ ಶ್ರವಣ ನರಗಳು ಪ್ರತಿಕ್ರಿಯೆ ತೋರಲಾರವು. ಅದರಂತೆಯೇ ಸೆಕೆಂಡಿಗೆ ೧೨,೦೦೦ ಕ್ಕಿಂತ ಹೆಚ್ಚು ಕಂಪನವಾದರೂ ಧ್ವನಿ ಕೇಳುವುದಿಲ್ಲ. "ಧ್ವನಿಯೇ ಕೇಳದ ಮೇಲೆ ಅದು ಧ್ವನಿ ಹೇಗೆ?" ಎಂದು ಕೇಳಬಹುದು ನೀವು. ಏನಾದರೂ ಅನ್ನಿ, ಅವು ಇರುವುದಂತೂ ಸತ್ಯ. ದಿನನಿತ್ಯದ ಉದಾಹರಣೆ ಬೇಕಾದರೆ, ಕತ್ತಲೆಯಲ್ಲಿ ತೊಗಲುಬಾವಲಿಗಳು ತಮ್ಮ ರೆಕ್ಕೆ ಬಡಿತದಿಂದ ಧ್ವನಿ ಉಂಟುಮಾಡಿ ಅದು ಪರಾವರ್ತನವಾದಾಗ ಎದುರಿಗಿರುವ ವಸ್ತುವಿನ ಬಗ್ಗೆ ತಿಳಿಯುತ್ತವೆ. ಆದರೆ ನಮಗಾ ಶಬ್ದ ಕೇಳಿಸದು. ನಮಗೆ ಕೇಳದ ಧ್ವನಿಗಳು ನಾಯಿಗಳಿಗೆ ಕೇಳುವುವು ಸೆಕೆಂದಿಗೆ ೩೫,೦೦೦ ಕಂಪನಗಳ ಶಬ್ದಗಳನ್ನು ನಾಯಿಗಳು ಗುರುತಿಸಬಹುದಾದರೂ ನಮಗೆಅವು ,ಶ್ರವಣಾತೀತ ಶಬ್ದಗಳು.

ಮಾನವನ ಕಿವಿಗೆ ಕೇಳಿಸದ ಶಬ್ದಗಳು ಕಬ್ಬಿಣವನ್ನು ಕೊರೆಯಬಲ್ಲವು !

ಎಲ್ಲ ಧ್ವನಿಗಳೂ ಕಂಪನದಿಂದಲೇ ಆಗುವುದಾದರೆ ಬೇರೆ ಬೇರೆ ವಾದ್ಯಗಳ ಧ್ವನಿ ಗುರುತಿಸುವುದು ಹೇಗೆ? ಯಾವುದೇ ಎರಡು ವ್ಯಕ್ತಿಗಳ ಧ್ವನಿ ಭಿನ್ನವಾಗಿರುವುದು ಹೇಗೆ? ವಸ್ತುವಿನ ಕಂಪನದ ವೇಗ ಹೆಚ್ಚಿದಂತೆ ಅದರ 'ಮಟ್ಟ' ಅಥವಾ ತೀವ್ರತೆ ಹೆಚ್ಚುವುದು. ಡೋಲು ಬಾರಿಸುವಾಗಿನ ಕಂಪನದ ವೇಗ ಕಡಿಮೆ; ಆದ್ದರಿಂದ

ಅದು 'ದಪ್ಪ' ಧ್ವನಿ. ಕೊಳಲಿನ ನಾದ ಕೀರಲು; ಏಕೆಂದರೆ ಕಂಪನದ ವೇಗ ಜಾಸ್ತಿ. ಇದರಿಂದ ಧ್ವನಿಯನ್ನು ಗುರುತಿಸಲು ಸಾಧ್ಯ.

ಶಬ್ದಗಳ ಮಟ್ಟ ಅಥವಾ ತೀವ್ರತೆ ಬೇರೆ, ಗಡಸು (ಗಟ್ಟಿ) ತನ ಬೇರೆ ಎಂಬುದನ್ನರಿಯಬೇಕು. ಕಂಪನಗಳ ವೇಗವು ಮಟ್ಟವನ್ನು ನಿರ್ಧರಿಸಿದರೆ ಈ ಕಂಪನಗಳು ಎಷ್ಟು ದೂರ ಹೋಗಬಲ್ಲವೆಂಬುದರಿಂದ ಅದರ ಗಟ್ಟಿತನ ಗೊತ್ತಾಗುತ್ತದೆ. ಉದಾಹರಣೆಗೆ ಹಾರ್ಮೋನಿಯಂ ನ "ಸ"ವನ್ನೊತ್ತಿ ಮೆಲ್ಲಗೆ ಗಾಳಿ ಹಾಕಿದರೆ ಮೆಲ್ಲಗೆ ದನಿಯಾಗುತ್ತದೆ; ಜೋರಾಗಿ ಗಾಳಿ ಹಾಕಿದರೆ ಗಡಸು ದನಿಯಾಗುತ್ತದೆ. ಆದರೆ ಎರಡೂ "ಸ"ವೇ; ಅಂದರೆ ಕಂಪನ ಸಂಖ್ಯೆ ಒಂದೇ; ಆದರೂ ಒತ್ತಡ ಮಾತ್ರ ಹೆಚ್ಚು ಕಡಿಮೆ. ಅದೇ "ರಿ" ಒತ್ತಿದಾಗ ಕಂಪನ ಸಂಖ್ಯೆ ಹೆಚ್ಚುತ್ತದೆ. ಈಗ ಮಟ್ಟ ಹೆಚ್ಚಿತು.

ನಾವೀಗ ಹೇಳುತ್ತಿರುವ ಅದ್ಭುತಗಳನ್ನು ಸಾಧಿಸುವುದು ಸೆಕೆಂದಿಗೆ ೧೬ಕ್ಕಿಂತ ಕಡಿಮೆ ಕಂಪನದ "ಶಬ್ದ"ವಲ್ಲ, ನಮ್ಮ ಕಿವಿಗೆ ನಿಲುಕಲಾರದಷ್ಟು ತೀವ್ರವಾದ ೧೭,೦೦೦ ಕ್ಕಿಂತ ಹೆಚ್ಚು ಕಂಪನ ವೇಗದ "ಶಬ." ಈ ಶ್ರವಣಾತೀತ ಶಬ್ದಗಳಿಂದ ಯಾವುದೇ ಪರಿಣಾಮ ಉಂಟುಮಾಡಲು ಆ ಶಬ್ದದ ಗಟ್ಟಿತನ ಹೆಚ್ಚಿರಬೇಕಾದುದು ಅವಶ್ಯ. ಇದಕ್ಕಾಗಿ ವಿದ್ಯುತ್ತಿನ ಸಹಾಯದಿಂದ ವಜ್ರದುಂಡೆ ಕಲ್ಲಿನಲ್ಲಿ ತೀವ್ರ ಕಂಪನವುಂಟುಮಾಡುವರು. ಇದರಿಂದುಂಟಾಗುವ ಒತ್ತಡವು ಕಲ್ಪನೆಗೂ ನಿಲುಕದಷ್ಟಾಗಿ, ಸಾಮಾನ್ಯ ವಾಯು ಒತ್ತಡದ ೫,೦೦೦ ಪಟ್ಟು ಆಗುವುದು. ಅಂದರೆ ನಮ್ಮ ಕೈಯನ್ನು ಆ ಅಲೆಗಳಿಗೆ ಒಡ್ಡಲಾಗಿ ಪ್ರತಿ ಚದರ ಅಂಗುಲಕ್ಕೆ ೭೫,೦೦೦ ಪೌಂಡು ಭಾರ ಬೀಳುವುದು ಎಂದಾಗ ಅದರ ತೀವ್ರತೆಯನ್ನು ತಿಳಿಯಬಹುದು. ಈ ಅಲೆಗಳ ಒತ್ತಡಕ್ಕೆ ನೀರಿನ ಪಾತ್ರೆಯೊಳಗಿಡಲ್ಪಟ್ಟ ಅಲ್ಯುಮಿನಂ ಸುರುಳಿ ನುಚ್ಚುನೂರಾಗುವುದು. ಇದರೊಂದಿಗೆ ಶಾಖವೂ ಸಹ ಹೆಚ್ಚಾಗಿ, ಅನೇಕ ಕಡೆ ತಾತ್ಕಾಲಿಕವಾಗಿ ಸೂರ್ಯನ ಹೊರಮೈಗಿಂತಲೂ—೨೦,೦೦೦° (F) ದಷ್ಟು ಹೆಚ್ಚಾಗುವುದು. ಸಿಡಿಲಿನ ಅಬ್ಬರದ ಸಾವಿರ ಪಟ್ಟಿಗಿಂತ ಮಿಗಿಲಾದ ಧ್ವನಿಯನ್ನು ಈ ರೀತಿ ಉತ್ಪಾದಿಸಲು ಸಾಧ್ಯವುಂಟು.

ಶ್ರವಣಾತೀತ ಶಬ್ದಗಳಿಂದ ವಿಜ್ಞಾನಿಯು ಅಪೂರ್ವ ಕಾರ್ಯಗಳನ್ನು ಮಾಡಿಸಲು ಸಮರ್ಥನಾಗಿದ್ದಾನೆ. ಅದು ಪ್ರಚಂಡ ಔದ್ಯಮಿಕ ಕಾರಗಳನ್ನು ಮಾಡಿದಂತೆ ನಿಮ್ಮ ನಮ್ಮ ದಿನಬಳಕೆಯ ಸಾಮಗ್ರಿಗಳ ನಿರ್ಮಾಣದಲ್ಲೂ ಕೈನೆರವು ನೀಡತೊಡಗಿದೆ. ಅಮೇರಿಕದಲ್ಲಿ ಮಹಿಳೆಯರು ಆಗಲೇ ಶ್ರವಣಾತೀತ ಶಬ್ದಗಳಿಂದ ತಯಾರಿಸಿದ ಮುಖಪ್ರಸಾಧನಗಳನ್ನು ಬಳಸುತ್ತಿದ್ದಾರೆ. ತಯಾರಕನು ಸೆಕೆಂಡಿಗೆ ೩೫,೦೦೦–೫೦,೦೦೦ ಕಂಪನಗಳ "ಶಬ್ದ" ದ ಸಹಾಯದಿಂದ ನೀರಿನ ಕಣಗಳ ಸುತ್ತ ಎಣ್ಣೆಯ ಆವರಣ ನಿರ್ಮಿಸುತ್ತಾನೆ; ಆಗದು ಮುಖ ನಿರ್ಮಲೀಕರಣದ ಕ್ರೀಂ ಆಗುತ್ತದೆ; ತದ್ವಿರುದ್ಧವಾಗಿ ಎಣ್ಣೆಯ ಕಣಗಳ ಸುತ್ತ ನೀರಿನ ಆವರಣವನ್ನು ಹೊದಿಸಿ ಅವನು ವ್ಯಾನಿಶಿಂಗ್ ಕ್ರೀಮನ್ನು ಸಿದ್ಧಪಡಿಸುತ್ತಿದ್ದಾನೆ.

ಮನೆವಾರ್ತೆಯ ಸಾಮಾನುಗಳ ತಯಾರಕರು ಆಗಲೆ ಶ್ರವಣಾತೀತ ಲಾಂಡ್ರಿಗಳನ್ನು ಪ್ರದರ್ಶಿಸಿದ್ದಾರೆ. ಅತಿ ತೀವ್ರವಾದ ಶ್ರವಣಾತೀತ ಶಬ್ದಗಳಿಂದ ಈ ಯಂತ್ರವು ನಿಮ್ಮ ಸೂಟಿನ ಎಂಥ ಕಲೆಗಳನ್ನೂ ಐದು ನಿಮಿಷಗಳಲ್ಲಿ ಇಲ್ಲದಂತೆ ಮಾಡಬಲ್ಲದು. ಆದರೆ ಇಂಥ ಲಾಂಡ್ರಿಗಳು ಇನ್ನೂ ಮನೆವಾರ್ತೆಯಲ್ಲಿ ಹೆಚ್ಚು ಉಪಯೋಗಕ್ಕೆ ಬರಬೇಕಷ್ಟೇ. ಬದಲಿಗೆ ಕಾರಖಾನೆಗಳಲ್ಲಿ ಯಂತ್ರಭಾಗಗಳಿಗೂ ಉಪಕರಣಗಳಿಗೂ ಇತರ ಸಾಮಗ್ರಿಗಳಿಗೂ ಅಂಟಿದ ಚರ್ಬಿ ಮೊದಲಾದ ಕೊಳೆಗಳನ್ನು ಸ್ವಚ್ಛ ಮಾಡಲು ಅವುಗಳನ್ನುಪಯೋಗಿಸುತ್ತಾರೆ. ಸ್ವಚ್ಛಗೊಳಿಸಬೇಕಾದ ಸಲಕರಣೆಯನ್ನು ನೀರಲ್ಲಿಟ್ಟು ಆ ನೀರಿನ ಮೂಲಕ ಸೆಕೆಂಡಿಗೆ ಲಕ್ಷಾಂ-

ತರ ಸಲ ಕಂಪಿಸುವ ಶ್ರವಣಾತೀತ ಶಬ್ದವನ್ನು ಹಾಯಿಸಿದಾಗ ಎಂಥ ಗಟ್ಟಿಗೊಂಡ ಕೊಳೆಯೂ ಧ್ವಂಸವಾಗಿ ಹೋಗುತ್ತದೆ. ಬರಬರುತ್ತ ಈ ಯಂತ್ರದ ಬೇರೆ ಆವೃತ್ತಿಗಳು ಮನೆಯಲ್ಲಿ ಬಟ್ಟೆಗಳನ್ನೂ ಮುಸುರೆ ಪಾತ್ರೆಗಳನ್ನೂ ತೊಳೆಯಲು ಕೂಡ ಉಪಯೋಗಕ್ಕೆ ಬರಬಹುದು. ಸಾಮಾನ್ಯ ನಿರ್ಮಲೀಕರಣದಲ್ಲಿ ಪಾತ್ರೆ ಅಥವಾ ಉಪಕರಣದ ಸಂದಿಗಳಲ್ಲೂ ಸೂಕ್ಷ್ಮ ತೂತುಗಳಲ್ಲೂ ಸೇರಿಕೊಂಡ ಕೊಳೆ ಹೋಗುವುದೇ ಇಲ್ಲ. ಶ್ರವಣಾತೀತ ನಿರ್ಮಲೀಕರಣದಲ್ಲಿ ಅತಿ ಸೂಕ್ಷ್ಮ ತೂತು-ಸಂದಿಗಳೂ ಸ್ವಚ್ಛವಾಗುತ್ತವೆ.

ಶ್ರವಣಾತೀತ ಶಬ್ದಗಳಿಂದ ಮಾಂಸ, ಮೀನು, ಹಣ್ಣು, ತರಕಾರಿಗಳನ್ನು ಅನೇಕ ವರ್ಷಗಳ ವರೆಗೂ ಕಾಪಾಡಲು ಸಮರ್ಥನಾಗಿದ್ದಾನೆ—ಆಹಾರ ವ್ಯಾಪಾರಿ. ಮಂಜಿನಿಂದ ಹೆಪ್ಪುಗಟ್ಟಿಸಲ್ಪಟ್ಟ ಆಹಾರವನ್ನು ಉಪ್ಪು ನೀರಿನಲ್ಲಿಟ್ಟು ಸೆಕೆಂಡಿಗೆ ೧,೦೦೦ ದಿಂದ ೧೦,೦೦,೦೦೦ ಆವರ್ತಗಳ ಧ್ವನಿಯ ಅಲೆಗಳಿಗೆ ಒಳಪಡಿಸಿದಾಗ ಆಹಾರವು ತನ್ನ ಬಿರುಸುತನವನ್ನು ಕಳೆದುಕೊಳ್ಳುವುದಲ್ಲದೇ ರುಚಿ, ಆಕಾರಗಳಲ್ಲಿ ತೀರ ನೈಜತೆಯನ್ನು ಪಡೆಯುವುದೆಂದು ಗೊತ್ತಾಗಿದೆ. ಹಾಲಿನೊಳಗಿರುವ ಜೀವಾಣುಗಳ ನಾಶಕ್ಕೂ ಇದನ್ನು ಉಪಯೋಗಿಸಲಾಗುತ್ತದೆ. ಇದರಂತೆಯೇ ಕಾರ್ಖಾನೆಯ ಹೊಗೆಯ ಗೂಡುಗಳಲ್ಲಿ ಕಟ್ಟಿಕೊಂಡ ಮಸಿಯನ್ನು ಇದು ತೆಗೆಯಬಲ್ಲದು ಈ ಅಲೆಗಳ ತೀವ್ರತೆಯಿಂದ ಮಸಿಯು ಗಟ್ಟಿಯಾಗುವುದರಿಂದ ಸಾಧಾರಣ ಸೂಕ್ಷ್ಮದರ್ಶಕಗಳಿಂದಲೂ ಕಾಣಲಾಗದಷ್ಟು ಸಣ್ಣ ಕಣಗಳನ್ನೂ ತೆಗೆಯಬಹುದು ಸುತ್ತಲ ಪ್ರದೇಶದ ಆರೋಗ್ಯ ರಕ್ಷಣೆಗೆ ಇದು ಅತ್ಯುಪಕಾರಿ.

ಶ್ರವಣಾತೀತ ಶಬ್ದದ ಅತ್ಯದ್ಭುತ ಕಾರ್ಯವೆಂದರೆ ಕೊರೆಯುವಿಕೆ. ಶ್ರವಣಾತೀತ ಭೈರಿಗೆಗಳು ಗಾಜಿನಲ್ಲಿ, ಕಬ್ಬಿಣದಲ್ಲಿ, ಬೇಕಾದಷ್ಟು ಗಟ್ಟಿಯಾದ ಲೋಹದಲ್ಲಿ ತೂತುಗಳನ್ನು ಕೊರೆಯುತ್ತವೆ. ಸೆಕೆಂಡಿಗೆ ೨೦,೦೦೦ ಆವರ್ತದಿಂದ ಕಣ್ಣಿಗೆ ಕಾಣಿಸದಂತೆ ಕಂಪಿಸುವ ಈ ಭೈರಿಗೆಗಳು ಒಮ್ಮೆಗೆ ೧।೧೦೦೦ ಇಂಚಿನಷ್ಟೇ ಚಲಿಸಿದರೂ ತನ್ನ ಆಘಾತಗಳಿಂದ ಭೈರಿಗೆಯ ಮೊನೆಯ ಆಕೃತಿಯಲ್ಲೇ ತೂತು ಹೊಡೆಯುತ್ತವೆ. ಇವರ ಅನುಕೂಲತೆಗಳು ಹಲವು. ಸಾದಾ ಭೈರಿಗೆಯು ಸುತ್ತುಸುತ್ತು ತಿರುಗುವುದರಿಂದ ಅದರಿಂದ ದುಂಡು ತೂತುಗಳಷ್ಟೇ ಆಗಬಲ್ಲವು. ಶ್ರವಣಾತೀತ ಭೈರಿಗೆ ಸುತ್ತು ತಿರುಗಬೇಕಾಗಿಲ್ಲವಾಗಿ ಅದು ಬೇಕಾದ ಆಕೃತಿಯ—ಚಚ್ಚೌಕ, ತ್ರಿಕೋಣ ಅಥವಾ ಮತ್ತಾವ ವಿರೂಪ ಆಕೃತಿಯ—ತೂತುಗಳನ್ನು ಕೊರೆಯಬಲ್ಲದು. ಮೇಲಾಗಿ ಈ ಭೈರಿಗೆಗೆ ಕಠಿನ ಪದಾರ್ಥಗಳನ್ನು ಕೊರೆಯಲು ವಜ್ರದಂಥ ತುಟ್ಟಿತುದಿ ಬೇಕಾಗಿಲ್ಲ. ಈ ಭೈರಿಗೆಗಳಿಗೆ ಬಂಡೆಗಳೂ ಎದುರಲ್ಲ ರತ್ನಗಳನ್ನೂ ಅವು ಕೊರೆಯಬಲ್ಲವಾದ್ದರಿಂದ ಆಭರಣ ನಿರ್ಮಾಣದಲ್ಲೂ ಅವುಗಳ ಉಪಯೋಗವಾಗುತ್ತವೆ. ಶ್ರವಣಾತೀತ ಕತ್ತರಿಸುವ ಯಂತ್ರಗಳನ್ನೂ ತಯಾರಿಸಲಾಗಿದೆ.

ವೈದ್ಯಶಾಸ್ತ್ರದಲ್ಲೂ ಇದರ ಪ್ರಯೋಜನ ಅತಿ ಮಹತ್ವದ್ದಾಗಿದೆ. ಶಸ್ತ್ರಚಿಕಿತ್ಸೆಗೆ ಉಪಯೋಗಿಸುವ ಸಲಕರಣಗಳನ್ನು ತೊಳೆಯಲು ಶ್ರವಣಾತೀತ ಧ್ವನಿಯನ್ನು ಉಪಯೋಗಿಸುತ್ತಿದ್ದಾರೆ. ಸಾಮಾನ್ಯವಾದ ರೀತಿಗಳಿಗಿಂತ ಈ ಪ್ರಕಾರದಿಂದ ಧೂಳಿ, ಒಣಗಿದ ರಕ್ತ, ಕಣಜಾಲಗಳು ಬೇಗ ವಿಭಜನೆಯಾಗಿ ಸಲಕರಣೆಗಳನ್ನು ಶುದ್ಧವಾಗಿಡುವುದರಲ್ಲಿ ತೀವ್ರತೆಯನ್ನೂ ಪರಿಪೂರ್ಣತೆಯನ್ನೂ ಒದಗಿಸಬಹುದು. ಮಾನವ ಶರೀರದ ಒಳಗಿನ ವೈಪರೀತ್ಯಗಳನ್ನು ಕಂಡುಹಿಡಿಯಲು 'ಕ್ಷ' ಕಿರಣಗಳಂತೆಯೇ ಈ ಅಲೆಗಳನ್ನೂ ಉಪಯೋಗಿಸಬಹುದು. ಧ್ವನಿಯು ವಸ್ತುಗಳಿಗೆ ಬಡಿದಾಗ ಪ್ರತಿಧ್ವನಿ ಬರುವಂತೆಯೇ ಈ ಅಲೆಗಳು ಶರೀರದ ಬೇರೆ ಬೇರೆ ಅವಯವಗಳಿಗೆ ತಾಗಿ ಪ್ರತಿಧ್ವನಿಯಾಗುತ್ತವೆ. ಈ ಪ್ರತಿಧ್ವನಿತ ಅಲೆಗಳ ಪ್ರಕಾರಗಳಿಂದ ಒಳಗಿನ ದುರ್ಮಾಂಸಗಳು, ಕ್ಯಾನ್ಸರ್, ವ್ರಣ, ಮತ್ತಿತರ ರೂಪ ಭೇದಗಳನ್ನು

ಗುರುತಿಸಬಹುದು. ಶ್ರವಣಾತೀತ ಅಲೆಗಳನ್ನು ಎಲುವು ಸ್ನಾಯು ಮೊದಲಾದವುಗಳ ಮೇಲೆ ಬಿಟ್ಟು ಪರಾವರ್ತಿತ ಅಲೆಗಳನ್ನು 'ಧ್ವನಿ ಗೋಲಕ'ಗಳ ಮೂಲಕ ಹಾಯಿಸುವುದರಿಂದ ವಸ್ತುಗಳ ಪ್ರತಿಬಿಂಬಗಳನ್ನು ಸಹ ಪಡೆಯಬಹುದು. ಕಣ್ಣಿನೊಳಗೆ ಇದುವರೆಗೂ ನೋಡಲಾಗದ ಅನೇಕ ಭಾಗಗಳನ್ನು ಅಭ್ಯಸಿಸಲು ಈ ಅಲೆಗಳು ಸಹಾಯಕವಾಗಿವೆ.

ಶ್ರವಣಾತೀತ ಶಬ್ದದಿಂದ ಚಲಿಸುವ ಚಿಕ್ಕ ಬೈರಿಗೆಗಳಿಂದ ಈಗ ಕೆಟ್ಟ ಹಲ್ಲುಗಳನ್ನು ಕೊರೆದು ದಂತ ವೈದ್ಯರು ಅವುಗಳನ್ನು ತುಂಬುತ್ತಿದ್ದಾರೆ. ಈ ಬೈರಿಗೆಗಳು ರೋಗಿಗೆ ನೋವನ್ನುಂಟು ಮಾಡುವುದಿಲ್ಲ.

ಯುರೋಪಿನಲ್ಲಿ ಶ್ರವಣಾತೀತ ಮಾಲೀಸು ಯಂತ್ರಗಳು ಬಳಕೆಗೆ ಬಂದಿವೆ. ಸಂಧಿವಾತ ಮೊದಲಾದ ರೋಗಗಳಲ್ಲಿ ನೋವನ್ನು ನಿವಾರಿಸಲು ಸೆಕೆಂಡಿಗೆ ೮,೦೦,೦೦೦ ಕಂಪನವುಳ್ಳ ಲೋಹದ ತಗಡನ್ನು ನೋಯುವ ಭಾಗದ ಮೇಲೆ ಆಡಿಸಲಾಗುತ್ತದೆ. ಇತರ ಮಾಲೀಸುಗಳಿಗಿಂತ ಇದು ಹೆಚ್ಚು ಪರಿಣಾಮಕಾರಿಯಾಗಿದೆ.

ಈಗ ತಿಳಿದಿರುವ ಉಪಯೋಗಗಳು ಒಂದು ಅಧ್ಯಾಯದ ಆರಂಭ ಮಾತ್ರ. ಇದರೊಂದಿಗೆ ನೂರಾರು ದೈನಿಕ ಉಪಯೋಗಗಳು ಕಂಡುಹಿಡಿಯಲ್ಪಟ್ಟು ಅನತಿಕಾಲದಲ್ಲಿ ಇದು ಮಾನವನ ಅತಿ ಸುಲಭ ಸಾಧನವಾಗಬಹುದು. ಆದರೆ ಶ್ರವಣಾತೀತ ಅಲೆಗಳು ಎಷ್ಟು ಉಪಯುಕ್ತವೋ ಅಷ್ಟೇ ಹಾನಿಕರವೂ ನಿಜ. ಈ ಅಲೆಗಳ ಪರಿಣಾಮವು ಜೀವಕಣಗಳ ಮೇಲೆ ಹೇಗೆ ಆಗುವುದೆಂದು ತಿಳಿಯುವುದು ತೀರ ಅವಶ್ಯ. ★

ಸಿಗರೇಟು ಸೇದುವ ಬ್ರೌನಿ ನಾಯಿ

ಶೋರ್‌ಹ್ಯಾಮ್-ಆನ್-ಸೀ ಎಂಬಲ್ಲಿ ಐರಿಸ್ ವಿಲ್ಸ್ ಎಂಬ ಮಹಿಳೆ ಬ್ರೌನಿ ಎಂಬ ಒಂದು ಸಿಗರೇಟು ಸೇದುವ ನಾಯಿಯನ್ನು ಸಾಕಿದ್ದಾಳೆ. ಅದು ಎಂಟು ವಾರದ್ದಿದ್ದಾಗ ಅದನ್ನಾಕೆ ಮನೆಗೆ ತಂದಳು. ಅದು ಆಗಲೇ ರಸ್ತೆಯಿಂದ ಸುಟ್ಟ ಸಿಗರೇಟುಗಳನ್ನು ಬಾಯಲ್ಲಿ ಹಿಡಿಯಲು ಕಲಿಯಿತು. ಆಕೆಗೆ ಅದರ ಬಾಯೊಳಗಿನ ಸಿಗರೇಟು ತುಂಡುಗಳನ್ನು ತೆಗೆದೊಗೆಯುವುದೊಂದು ಹೆಚ್ಚಿನ ಕೆಲಸವೇ ಆಯಿತು. ಮುಂದೆ ಆರು ತಿಂಗಳಾದಾಗ ನಾಯಿ ಒಮ್ಮೆ ತೋಟಗನು ಹೊತ್ತಿಸಿದ ಸಿಗರೇಟನ್ನು ಆತನ ಕೈಯಿಂದ ಕಚ್ಚಿಕೊಂಡು ಅಭ್ಯಸ್ತ ಪ್ರಾಣಿಯಂತೆ ತುಟಿಯಲ್ಲಿ ಸೇದತೊಡಗಿತು. ಅದು ತುಟಿಗಳನ್ನು ಒಳಗೂ ಹೊರಗೂ ಮಾಡುತ್ತಿರುವುದು ಬಲು ಮೋಜಾಗಿತ್ತು. ಒಮ್ಮೆಯಂತೂ ಯಜಮಾನಿ ತಿರುಗಾಡಲಿಕ್ಕೆ ಹೋದಾಗ ಎಲ್ಲಿಂದಲೊ ಹೊತ್ತಿಸಿದ ಸಿಗರೇಟಿನ ತುಂಡನ್ನೇ ಬಾಯಿಗೆತ್ತಿ ಸೇದಿ ತೋರಿಸಿತ್ತೀ ನಾಯಿ. ಸಿಗರೇಟಿನ ಒಂದು ತುದಿಗೆ ಬೆಂಕಿ ಹತ್ತಿದ್ದಾಗ ಇನ್ನೊಂದು ತುದಿ ತಂಪಾಗಿರುತ್ತದೆಂದು ಅದಕ್ಕೆ ತಿಳಿದಿದೆ. ಅದಕ್ಕೆ ಯಾವ ಪ್ರಯೋಗಶಾಲೆಯಲ್ಲೂ ಸಿಗರೇಟು ಸೇದುವ ಶಿಕ್ಷಣ ಕೊಟ್ಟಿಲ್ಲ. ಅದಕ್ಕೆ ಹೊಗೆ ಎಳಕೊಳ್ಳಲು ಬರುವುದಿಲ್ಲ. ಆದರೂ ಮುಖದಲ್ಲಿ ಮಾತ್ರ ಸೇದಿದ ಸಂತೋಷ ಸೂರೆಯುತ್ತದೆ. —ಬಿ.ಬಿ.ಸಿ.



ನಾಯರ

ಪತ್ರಿಕೋದ್ಯಮಿಯೊಬ್ಬನ
ಸಂಬಳಾರದ ಸಾಹಸ!

ನಾನು ಜಿನ್ನಾ

ಆಗ ನಾನು ಮುಂಬಯಿಯ ಒಂದು ಪ್ರಮುಖ ಪತ್ರಿಕೆಯ ಸುದ್ದಿಗಾರನಾಗಿದ್ದೆ. ಒಂದು ದಿನ ನಾನು ಆಫೀಸಿನಲ್ಲಿದ್ದಾಗ ಫೋನ್ ಗಂಟೆ ಬಾರಿಸಿತು. ಎತ್ತಿ 'ಹಲೋ' ಎನ್ನುವುದರೊಳಗಾಗಿ 'ನಾಯರ್, ನಾಯರ್' ಎಂದು ಎರಡು ಮಾತುಗಳಷ್ಟೇ ಕೇಳಿಸಿ ಫೋನ್ ಸ್ತಬ್ಧವಾಯಿತು. ಅದು ನಮ್ಮ ಸಂಪಾದಕ ಶ್ರೀ ಸದಾನಂದರ ದನಿಯೆಂದು ನನಗೆ ಗುರುತು ಹತ್ತಿತು. ಏನಾದರೂ ಮಹತ್ವದ ಕೆಲಸವಿದ್ದರೆ ಅವರು ನನ್ನನ್ನು ಹೀಗೇ ಕರೆಯುತ್ತಿದ್ದರು. ಯಾವುದೋ ತಪ್ಪಿಗಾಗಿ ಬೈಯಿಸಿಕೊಳ್ಳಬೇಕಾಗುವುದೆಂದು ಭಾವಿಸಿದೆ. ಕೈಯೊಳಗಿನ ಕೆಲಸ ಅಲ್ಲಿಯೇ ಬಿಟ್ಟು ಸಂಪಾದಕರ ಕೋಣೆಗೆ ಹೋದೆ. ಅಲ್ಲಿ ಒಂದು ಕಡೆಗೆ ಮುಚ್ಚಳ ತೆಗೆದ ಎಣ್ಣೆಯ ಬಾಟಲಿ ಇತ್ತು. ಸಂಪಾದಕರು ತಲೆಗೆ ಎಣ್ಣೆ ಹಚ್ಚಿ ತಿಕ್ಕಿಕೊಳ್ಳುತ್ತಿದ್ದರು ಯಾವುದಾದರೂ ಸಮಸ್ಯೆಯಿಂದ ತಲೆಗೆ ತಾಪವಾದರೆ ಅವರು ಹೀಗೆ ಮಾಡುವರೆಂದು ನನಗೆ ಗೊತ್ತು. ಅವರನ್ನು ಕಣ್ಣಿಗೆ ಕಣ್ಣಿಟ್ಟು ನೋಡುವ ಸಾಹಸ ನನಗಾಗಲಿಲ್ಲ. ನಾನು ಕೋಣೆಯ ಚಿತ್ರಗಳನ್ನು ನೋಡುತ್ತ ನಿಂತೆ.

ಅವರು ಗರ್ಜಿಸಿದರು. "ಅಲ್ಲಿ ಏನು ನೋಡುವೆ? ದೊಡ್ಡ ಮನುಷ್ಯನಯ್ಯ ನೀನು. ಸಾವಿರ ಸಲ ಕರೆದ ಹೊರತು ಬರುವುದೇ ಇಲ್ಲ. ಎಲ್ಲಿ ಹೋಯಿತು ನಿನ್ನ ದೇಶಪ್ರೇಮ? ನಿದ್ದೆ ಮಾಡುತ್ತಿರುವೆಯಾ? ಆ ತಲೆ ಕೆಟ್ಟ ಮುಸಲ್ಮಾನರು ಒಂದು ರಿಪೋರ್ಟ್ ತಯಾರು ಮಾಡಿದ್ದಾರೆ. ಅದು ಪ್ರಕಟವಾಗುವುದೇ ತಡ, ದೇಶದಲ್ಲೆಲ್ಲ ರಕ್ತದ ಕಾಲುವೆ ಹರಿಯಲಿದೆ...."

ಇದು ತಪ್ಪಿನ ಶಿಕ್ಷೆಯಲ್ಲ, ದೊಡ್ಡ ಹೊಣೆಗಾರಿಕೆ ಒಪ್ಪಿಸುವ ಪೂರ್ವಸಿದ್ಧತೆ ಎಂದು ಕೂಡಲೆ ತಿಳಿದುಹೋಯಿತು. ನಾನು ಅವರನ್ನು ಅಷ್ಟಕ್ಕೆ ತಡೆದು ನುಡಿದೆ: "ರಾಯರೆ, ಉಳಿದ ವಿಚಾರ ಹಾಗಿರಲಿ. ಮುಖ್ಯ ವಿಷಯಕ್ಕೆ ಬನ್ನಿ. ಮತ್ತು ಆ ಮುಂಚೆ—ಅಂದರೆ ಈ ಹೊಸ ಕೆಲಸ ನನಗೊಪ್ಪಿಸುವ ಮೊದಲು—ಈಗ ನಡೆಯುತ್ತಿರುವುದು ಮೇ ತಿಂಗಳಾದರೂ ಮಾರ್ಚಿನಿಂದ ಬಾಕಿ ನಿಂತಿರುವ ಸಂಬಳದಲ್ಲಿ ಕನಿಷ್ಠ ಪಕ್ಷ ಮಾರ್ಚ್ ತಿಂಗಳ ಸಂಬಳವನ್ನಾದರೂ ಕೊಡಿಸಿರಿ. ನನಗೆ ಈಗ ಬಹಳ ಅಗತ್ಯವಿದೆ".

ಆಗ ಸಂಪಾದಕರು ಇಂಗ್ರೇಜಿ ಬಿಟ್ಟು ತಮಿಳಿನಲ್ಲಿ ಹೇಳತೊಡಗಿದರು: "ನಾಯರ್, ಮೊದಲು ನನ್ನ ಕಷ್ಟವನ್ನು ತಿಳಿದುಕೊಳ್ಳಯ್ಯಾ. ನಾನು ಈಗ ಹೇಳುತ್ತಿರುವುದು ಪೀರಪುರ ಕಮಿಟಿಯ ರಿಪೋರ್ಟಿನ ವಿಷಯ. ಅದನ್ನು ಈಗ ವಶಪಡಿಸಿಕೊಳ್ಳುವುದು ಬಹಳ ಅಗತ್ಯವಾಗಿದೆ-

"ಧರ್ಮಯುಗ" ದಿಂದ

ವರದಿ ಕದ್ದೆ!



ಜಿನ್ನಾ

ಪ್ರಸ್ತುತಗೊಳಿಸಿದವರು
ಮುಕ್ತಾ ರಾಜೆ

ಮತ್ತು ಅದನ್ನು ದೊರಕಿಸುವುದು ನಿನ್ನ ಹೊರತು ಬೇರೆ ಯಾರಿಂದಲೂ ಆಗಲಾರದು." ಅವರ ಕೊನೆಯ ವಾಕ್ಯ ನನ್ನನ್ನು ತುಂಬಾ ಉಬ್ಬಿಸುವಂತಿತ್ತಾದರೂ ನಾನು ಮತ್ತೊಮ್ಮೆ ಮಾರ್ಚ್ ತಿಂಗಳ ಸಂಬಳದ ಪ್ರಸ್ತಾಪವೆತ್ತಿದೆ.

ಸದಾನಂದರು "ಅಲ್ಲೋ ಮಹಾರಾಯಾ, ಮೊದಲು ಆ ರಿಪೋರ್ಟಿನ ವಿಷಯ ಹೇಳು. ಹೇಗಾದರೂ ಮಾಡಿ ಆ ರಿಪೋರ್ಟನ್ನು ಹಾರಿಸಿಕೊಂಡು ಬಾ. ನಾನು ಮ್ಯಾನೇಜರರಿಗೆ ಹೇಳಿ ನಿನ್ನ ಸಂಬಳ, ಭತೆ ಎರಡನ್ನೂ ಕೊಡಿಸುವೆ," ಎಂದರು. ನಾನು ರಿಪೋರ್ಟ್ ತರಲು ಸಾಧ್ಯವಿದಷ್ಟು ಯತ್ನಿಸುವೆನೆಂದು ತಿಳಿಸಿ ಅಲ್ಲಿಂದ ಹೊರಟು ಸಂಬಳವನ್ನು ಮೊದಲು ಇಸಿದುಕೊಂಡೆ.

ಸಂಬಳ ತೆಗೆದುಕೊಂಡದ್ದಂತೂ ಆಯಿತು. ಆದರೆ ಇದು ಜೀವವನ್ನು ಪಣಕ್ಕಿಡುವ ಜವಾಬ್ದಾರಿಯಾಗಿತ್ತು. ಅದರೊಂದಿಗೇ ಈ ಕಾರ್ಯ ಸಫಲವಾದರೆ ನನಗೆ ಉಜ್ವಲ ಭವಿಷ್ಯವಿತ್ತೆಂಬುದೂ ಅಷ್ಟೇ ಉತ್ಸಾಹದಾಯಕವಾಗಿತ್ತು. ರಿಪೋರ್ಟ್ ದೊರಕಿಸುವುದು ಸಾಮಾನ್ಯ ಕೆಲಸವಾಗಿರಲಿಲ್ಲ. ೧೯೩೫ ರ ಗವರ್ಮೆಂಟ್ ಆಫ್ ಇಂಡಿಯಾ ಆಕ್ಟಿನ ಮೇರೆಗೆ ೧೯೩೭ ರಲ್ಲಿ ನಡೆದ ಚುನಾವಣೆಯಲ್ಲಿ ೧೧ ಪ್ರಾಂತಗಳ ಪೈಕಿ ಒಂಭತ್ತರಲ್ಲಿ ಕಾಂಗ್ರೆಸ್ಸಿನ ಪ್ರಾಬಲ್ಯವಾಗಿತ್ತು. ಅಲ್ಲೆಲ್ಲ ಕಾಂಗ್ರೆಸ್ ಸರಕಾರ ಮತ್ತು ಬ್ರಿಟಿಶ್ ಗವರ್ನರರ ಸಹಯೋಗದಿಂದಲೇ ಕಾರ್ಯಸಾಗಿತ್ತಾದ್ದರಿಂದ ರಾಜಕಾರಣದಲ್ಲಿ ಜಿನ್ನಾ ಸಾಹೇಬರ ಹೆಸರು ಕೇಳಿಸದಂತಾಗಿತ್ತು. ಇದನ್ನು ಜಿನ್ನಾ ಸಾಹೇಬರು ಸಹಿಸಿಯಾರೇ? ಕಾಂಗ್ರೆಸ್ಸಿಗೆ ಬುದ್ಧಿ ಕಲಿಸಲು ಒಂದು ಹಂಚಿಕೆ ಹೂಡಿದರು. ಪೀರಪುರದ ದೊಡ್ಡ ಶ್ರೀಮಂತ ಮಹಾರಾಜನ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದರು. ಹಿಂದುಗಳ ಕಾಂಗ್ರೆಸ್ ಹಾಗೂ ಕಾಂಗ್ರೆಸ್ಸಿನ ಹಿಂದೂ ಮುಂದಾಳು ಗಾಂಧಿ ಇವರನ್ನು ದ್ವೇಷಿಸಿ ವಿರೋಧಿಸುವುದೇ ಪರಮ ಧರ್ಮವೆಂದು ಜಿನ್ನಾ ಸಾಹೇಬರಿಂದ ತರಬೇತಿ ಪಡೆದ ಇತರರು ಆ ಸಮಿತಿಯ ಸದಸ್ಯರಾಗಿದ್ದರು. ಕಾಂಗ್ರೆಸ್ಸಿನ ಮೇಲೆ ತರತರದ ದೋಷಾರೋಪಣೆ ಮಾಡುವ ೨೦೦ ಪುಟದ ಒಂದು ರಿಪೋರ್ಟನ್ನು ಈ ಸಮಿತಿಯು ತಯಾರಿಸಿತ್ತು.

ಮುಸಲ್ಮಾನರ ಜಾತೀಯ ಭಾವನೆಯನ್ನು ಉದ್ರೇಕಗೊಳಿಸುವುದೂ ಕಾಂಗ್ರೆಸ್ಸನ್ನು ಗುಂಪುಗಾರಿಕೆಯ ಪಕ್ಷವೆಂದೂ ಅನ್ಯಾಯೀ ಪಕ್ಷವೆಂದೂ ಸಿದ್ಧ ಮಾಡುವುದೂ ಈ ರಿಪೋರ್ಟಿನ ಉದ್ದೇಶವಾಗಿತ್ತು. ಮುಸಲ್ಮಾನರಿಗೆ ಸರಕಾರಿ ನೌಕರಿಗಳು ಸಿಗುವುದಿಲ್ಲ. ಸಿಕ್ಕರೂ ಸರಿಯಾಗಿ ನಡೆಸಿಕೊಳ್ಳಲಾಗುವುದಿಲ್ಲ. ಇಷ್ಟೇ ಅಲ್ಲ; ಕಾಂಗ್ರೆಸ್ಸಿ

ಮುಸಲ್ಮಾನರ ಧರ್ಮವನ್ನೇ ಅಳಿಸುವ ಪ್ರಯತ್ನವಲ್ಲಿದೆ ಎಂದೆಲ್ಲ ಈ ರಿಪೋರ್ಟಿನಲ್ಲಿತ್ತು. ದೇಶಾದ್ಯಂತ ಕಾಂಗ್ರೆಸ್ಸಿನ ಹೆಸರು ಕೆಡಿಸಿ, ಬ್ರಿಟಿಶ ಸರಕಾರ ಕಾಂಗ್ರೆಸ್ಸನ್ನು ಪದಚ್ಯುತಗೊಳಿಸಬೇಕೆಂದು ದಂಗೆ ಎಬ್ಬಿಸಲು ಈ ಮೂಲಕ ದೇಶದ ಸಮಸ್ತ ಮುಸಲ್ಮಾನರಿಗೆ ಪ್ರೇರಣೆ ಕೊಡುವುದು ಇದರ ಉದ್ದೇಶವಾಗಿತ್ತು. ಆದ್ದರಿಂದ ಈ ರಿಪೋರ್ಟನ್ನು ಹಾರಿಸಿದರೆ ಜಿನ್ನಾ ಸಾಹೇಬರ ಗುಟ್ಟನ್ನು ರಟ್ಟಾಗಿ ಮಾಡಬಹುದು, ಆಗ ಅವರ ಹೆಸರುಕೆಟ್ಟು ಅವರ ದುರ್ವ್ಯಾಪಾರ ನಡೆಯದಂತಾಗುವುದು ಎಂದು ನಮ್ಮ ಸಂಪಾದಕರು ಭಾವಿಸಿದ್ದರು.

ಆದರೆ ಈ ರಿಪೋರ್ಟನ್ನು ಪಡೆಯುವುದು ಎಲ್ಲಿಂದ? ೧೯೩೮ ರಲ್ಲಿ ನಾನು ಜಿನ್ನಾ ಮತ್ತು ಪಂ. ನೆಹರೂರವರ ಪತ್ರವ್ಯವಹಾರದ ಫಾಯಿಲನ್ನೇ ಅವರ ಮನೆಯಿಂದ ಹಾರಿಸಿ ತಂದಿದ್ದೆ. ಆದರೆ ಈಗ ಅವರ ಮನೆಗೆ ಹೋಗುವ ಧೈರ್ಯ ನನಗಿರಲಿಲ್ಲ. ಜಿನ್ನಾರ ಆಫೀಸಿನ ಸೆಕ್ರೆಟರಿಗೂ ನನಗೂ ಸ್ನೇಹವಿತ್ತು. ಆಗ ಆಲ್ ಇಂಡಿಯಾ ಮುಸ್ಲಿಮ್ ಲೀಗಿನ ಕಛೇರಿ ಮೊಹಮ್ಮದ ಅಲಿ ರೋಡಿನಲ್ಲಿ ಸಹಾರಾ ಕಾಸಿಲಿನಲ್ಲಿತ್ತು. ಈ ಆಫೀಸಿನಲ್ಲಿ ಒಂದು ದೊಡ್ಡ ಗೋದರೇಜ್ ಸ್ಟೀಲಿನ ತಿಜೋರಿಯಿತ್ತು. ಅದರ ಕೀಲಿಯ ಒಂದು ಕೈ ನನ್ನ ಮಿತ್ರ ಸೆಕ್ರೆಟರಿ ಸೈಯ್ಯದನ ಕಡೆಗಿತ್ತು. ಇನ್ನೊಂದು ಮುಂಬಯಿ ಪ್ರಾಂತೀಯ ಮುಸ್ಲಿಮ್‌ಲೀಗ್ ಪ್ರೆಸಿಡೆಂಟ್ ಆಯ್.ಆಯ್. ಚುಂದ್ರೀಗಾರರ ಕಡೆಗಿತ್ತು.

ಆದರೆ ಹೇಗಾದರೂ ಕೆಲಸ ಸಾಧಿಸಲೇ ಬೇಕಿತ್ತು. ನಾನು ಮುಸ್ಲಿಮ್ ಲೀಗ್ ಆಫೀಸಿಗೆ ಹೋದೆ. ಸೈಯ್ಯದ ಟ್ಯಾಪ್ ಮಾಡುತ್ತಿದ್ದ. "ಯಾಕಲೆ ಸುಮ್ಮನೇ ಆ ಬಡ ಟ್ಯಾಪರ‍್ಯಾಟರ್ ರಿನ ಕೊಲೆ ಮಾಡುತ್ತಿರುವೆ?" ಎಂದೆ ನಾನು.

"ಎಲಾ ತಲೆ ತಿರುಕಾ, ನೀನೆಲ್ಲಿಂದ—ಬಂದೆ?" ಎಂದನಾತ. ತುಂಬ ರಂಗಿನಲ್ಲಿದ್ದಾಗ ಆತ ನನ್ನನ್ನು ಹಾಗೆ ಸಂಬೋಧಿಸುತ್ತಿದ್ದ. ನನ್ನ ಉತ್ತರ ಕೇಳದೆನೆ, "ಈ ಪತ್ರ ಮುಗಿಸಿ ಆ ಮೇಲೆ ಮಾತಾಡುವೆ" ಎಂದು ಆತ ಹೇಳಿದ. ಅವನ ಹಿಂದೇ ತಿಜೋರಿ ಇತ್ತು. ತೆರೆದಿತ್ತು. ಕೀಲಿಕೈ ಗೊಂಚಲೂ ಅದಕ್ಕೇ ತೂಗಾಡುತ್ತಿತ್ತು.

ಆತ ಕೆಲಸ ಮುಗಿಸಿದ ಮೇಲೆ ನಾನು ಅವನೊಂದಿಗೆ ಕೆಲ ಸಲಿಗೆಯ ಬೈಗಳ ಮಾತುಗಳನ್ನು ಆಡಿ, ಕೊನೆಗೆ ಸಲೀಲವಾಗಿ "ಪೀರಪುರ ರಿಪೋರ್ಟು ನಿನ್ನ ಕಡೆ ಇದೆಯೆಂದು ಜಿನ್ನಾ ಸಾಹೇಬರೇ ನನಗೆ ಹೇಳಿದ್ದಾರೆ. ನೀನು ನನ್ನ ಮಿತ್ರ, ಅದರ ವಿಚಾರ ನನಗೆ ತಿಳಿಸಬಾರದೆ? ಅದರಲ್ಲೇನಾದರೂ ಸತ್ಯಾಂಶವಿದ್ದರೆ ನಾನೂ ನಿನ್ನೊಂದಿಗೆ ಹೆಗಲಿಗೆ ಹೆಗಲು ಹಚ್ಚಿ ಈ ಕಾಂಗ್ರೆಸ್ಸನ್ನು ಮಣ್ಣುಗೂಡಿಸಲು ಸಹಾಯ ಮಾಡುವೆ" ಎಂದು ನಾನು ಹೇಳಿದೆ.

ಆತ ಮೆಲ್ಲಗೆ ಸಿಗರೇಟು ಹೊತ್ತಿಸುತ್ತ, "ಆ ರಿಪೋರ್ಟಿನ ವಿಚಾರ ಬಹಿರಂಗಪಡಿಸಲು ನಾನೇನು ನಿನ್ನ ಹಾಗೆ ತಲೆತಿರುಕನೆ? ಮೇಲಾಗಿ ಪ್ರಕಟವಾಗುವವರೆಗೆ ಇದರ ಒಂದು ಶಬ್ದವನ್ನೂ ಹೊರಗೆಡಹುವುದಿಲ್ಲೆಂದು ನಾವೆಲ್ಲ ಕುರಾನ್ ಮುಟ್ಟಿ ಆಣೆ ಮಾಡಿದ್ದೇವೆ" ಎಂದು ನನ್ನ ಮಾತನ್ನು ಕುಡಿಯಲ್ಲೇ ಚಿವುಟಲು ಯತ್ನಿಸಿದ.

ಕುರಾನಿನ ಆಣೆಗಾಗಿ ಪ್ರಾಣವನ್ನೂ ನೀಗಬಲ್ಲರು ಈ ಮುಸಲ್ಮಾನರು ಎಂದು ನಾನು ಬಲ್ಲೆ. ಅಂತೂ ರಿಪೋರ್ಟ್ ಸೈಯ್ಯದನ ಕಡೆಗಿದೆ, ಅಂದರೆ ಅವನ ಹಿಂದಿನ ಕಪಾಟಿನಲ್ಲೇ ಅದು ಇದೆ. ದೈವಯೋಗದಿಂದ ಕಪಾಟಿನ ಬಾಗಿಲೂ ತೆರೆದಿದೆ. ಆದರೂ ರಿಪೋರ್ಟಿಗೆ ಕೈ ಹಚ್ಚಿದರೆ ನನ್ನ ರುಂಡ ಮುಂಡದಿಂದ ಬೇರಾಗುವುದು ಖಂಡಿತವೆಂದು ನಾನು ತಿಳಿದುಕೊಂಡೆ. ನಾನು ಕೇಳಿದೆ: "ಹೋಗಲಿಬಿಡು. ರಿಪೋರ್ಟು ಎಷ್ಟು ಪುಟಗಳದಿದೆ? ಎಂದು ಪ್ರಕಟವಾಗುತ್ತದೆ?" ಅದಕ್ಕೂ ಆತ ಸಗ್ಗಲಿಲ್ಲ. ನಾನು ಕೈ ತೊಳೆದುಕೊಂಡು ಬೆನ್ನುಹತ್ತಿದೆ. ಕೊನೆಗೆ ಆತ "ನೋಡಿಲ್ಲಿ. ಹಳೇ ಸ್ನೇಹಕ್ಕೋಸ್ಕರ ದೂರದಿಂದ ನಿನಗೆ

ಆ ರಿಪೋರ್ಟ್ ತೋರಿಸುವೆ. ಹೀಗೆ ಮಾಡಿದರೆ
ನಿನ್ನ ಮನಸ್ಸು ನೋಯಿಸಿದಂತಾಗದು. ಆಣೆ
ಮುರಿದಂತೆಯೂ ಆಗದು. ಆದರೆ ಅದನ್ನು
ಮುಟ್ಟತಕ್ಕದ್ದಲ್ಲ. ಜೋಕೆ," ಎಂದು ಹೇಳಿ
ಫೂಲ್‌ಸ್ಕೇಪ್ ಸೈಜಿನ ಒಂದು ಬೈಂಡ್
ಮಾಡಿದ ರಿಪೋರ್ಟನು ಕಪಾಟಿನಿಂದ ತೆಗೆದು
ತೋರಿಸಿ ಮತ್ತೆ ಅಲ್ಲಿಯೆ ಇಟ್ಟುಬಿಟ್ಟ.

ಆ ಮೇಲೆ ಮತ್ತಿಷ್ಟು ಹರಟೆ ಹೊಡೆದು
ನಾನು ಅಲ್ಲಿಂದ ಹೊರಬಿದ್ದೆ. ಒಂದು ಹೊಟೆಲಿ
ನಲ್ಲಿ ಹೊಕ್ಕು ಚಹಾ ಕುಡಿದೆ. ನನ್ನ ತಲೆ
ನಾನಾ ತರಹದ ಯೋಚನೆಗಳನ್ನು ಹೆಣೆಯ
ತೊಡಗಿತ್ತು. ಕೊನೆಗೊಂದು ಉಪಾಯ ಹೊಳೆ
ಯಿತು. ಇಡೀ ಆಫೀಸಿನ ನಕ್ಷೆ ನನ್ನ ತಲೆಯ
ಲ್ಲಿತ್ತು. ಅದರ ಎಲ್ಲ ಬಚ್ಚಲು ಮನೆಗಳೂ
ಹೊರಗೆ ಸಾಲಾಗಿ ಇವೆ. ಆದ್ದರಿಂದ ಅಲ್ಲಿ
ಹೋಗಬೇಕಾದರೆ ಪ್ರತಿ ಒಬ್ಬನೂ ತನ್ನ ಕೋ-
ಣೆಯಿಂದ ಹೊರ ಬರಲೇಬೇಕು. ಸೈಯದನೂ
ಹೇಳಿಕೇಳಿ ಮನುಷ್ಯ. ಅಂದಮೇಲೆ ಒಮ್ಮೆ ಆ-
ತನೂ ಹೊರಗೆ ಬರಲಿಕ್ಕೇ ಬೇಕು. ವಿಚಾರವನ್ನು
ನಿಶ್ಚಿತಗೊಳಿಸಿಕೊಂಡು ನಾನು ಭೆಂಡಿ ಬಾಜಾ
ರಕ್ಕೆ ಹೋಗಿ ಅಲ್ಲಿ ಒಂದು ಮುಸಲ್ಮಾನೀ
ಲುಂಗಿ ಖರೀದಿ ಮಾಡಿ, ಭೂಲೇಶ್ವರಕ್ಕೆ
ಹೋಗಿ ಕೃತ್ರಿಮ ಮೀಸೆ ಕೊಂಡು, ಮನೆಗೆ
ಹೋದೆ. ಹಳೆ ಕೋಟು ಹುಡುಕಿ ತಗೆದು
ವೇಷ ಹಾಕಿದೆ. ಕನ್ನಡಿಯ ಮುಂದೆ ನಿಂತು
ನೋಡಿದೆ ನನಗೇ ಆಶ್ಚರ್ಯವಾಯಿತು. ನಾನು
ಮುಸಲ್ಮಾನನಲ್ಲ ಎಂದು ಹೇಳುವುದೇ ಸಾಧ್ಯ
ವಿರಲಿಲ್ಲ. ನಾನು ನಿಶ್ಚಿಂತನಾಗಿ ಆ ದಿನ ನಿದ್ರಿ
ಸಿದೆ. ಬಹುಶಃ ಇದು ನನ್ನ ಕೊನೆಯ ನಿದ್ರೆ
ಯಾಗಲೂಬಹುದೆಂದು ನಾನು ಭಾವಿಸಿದೆ.

ಮರುದಿನ— ಬಹುಶಃ ಬುಧವಾರವಿರ
ಬೇಕು —ಮುಂಜಾನೆ ೧೧ ಕ್ಕೆ ಮುಸ್ಲಿಮ್
ಲೀಗ್ ಆಫೀಸಿಗೆ ವೇಷ ಹಾಕಿಕೊಂಡೇ ಹೋದೆ.
ಸೈಯ್ಯದನ ಕೋಣೆಯ ಹತ್ತಿರದ ಹಾಲಿನಲ್ಲಿ
ನಾನು ಕೂತಿದ್ದೆ. ಅಲ್ಲಿಂದ ಸೈಯದನ
ಕೋಣೆಯ ಬಾಗಿಲು ಸ್ಪಷ್ಟವಾಗಿ ಕಾಣುತ್ತಿತ್ತು.
ನಾನೊಂದು ಕುರ್ಚಿಯಲ್ಲಿ ಕೂತು ಮೇಜಿನ
ಮೇಲಿನ ಉರ್ದು ಪೇಪರನ್ನು ಎತ್ತಿಕೊಂಡೆ.
ಓದತೊಡಗಿದೆ ಆದರೆ, ಎಲಾ ಇದೇನು,
ಉರ್ದು ಹಿಂದಿನ ಪುಟದಿಂದ ಓದುತ್ತಾರಲ್ಲವೇ?
ಸುದೈವ. ನನ್ನ ತಪ್ಪು ಬೇರೆಯವರಿಗೆ ತಿಳಿಯುವ
ಮೊದಲೇ ನನಗೆ ನೆನಪಾಯಿತು. ಇಲ್ಲವಾದರೆ
ನನ್ನ ಹೂರಣ ಹೊರಬೀಳಬಹುದಿತ್ತು. ಹಾಗೆ
ಕೇಳಿದರೆ ಮೊದಲೇ ನಾನು ಯೋಚಿಸಿಟ್ಟದ್ದೆ.
ಎಲ್ಲಾದರೂ ಸಿಕ್ಕಿಬಿದ್ದರೆ ಸೈಯದನಿಗೆ ನಾ-
ನಿನ್ನು ಮುಸಲ್ಮಾನ ಧರ್ಮದೀಕ್ಷೆ ಹೊಂದುವವ
ನಿದ್ದೇನೆಂದು ಹೇಳಿ ಪಾರಾಗಬೇಕು ಎಂದು ..

ಎಷ್ಟೋ ಗಂಟೆ ಕೂತೆ. ನನ್ನ ಭಯ ಹೆಚ್ಚ
ತೊಡಗಿತ್ತು. ಅಷ್ಟರಲ್ಲಿ ಸೈಯದ ಲಟಿಕೆ ಮುರಿ
ಯುತ್ತ ಕೋಣೆಯಿಂದ ಹೊರಬಂದ. ಎಷ್ಟಾ
ದರೂ ಮನುಷ್ಯ ತಾನೆ. ಬಚ್ಚಲ ಮನೆಯ
ಕಡೆಗೆ ಹೋದ. ನಾನು ಅವನ ಕೋಣೆಗೆ
ವಿದ್ಯುದ್ವೇಗದಿಂದ ಹಾರಿದೆ ಸುದೈವದಿಂದ
ಕೀಲಿಕೈ ಗೊಂಚಲು ತಿಜೋರಿಯ ಬಾಗಿಲಿಗೇ
ತೂಗುತ್ತಿತ್ತು. ರಿಪೋರ್ಟ್ ತೆಗೆದುಕೊಂಡವನೇ
ನಾನು ಅದನ್ನು ಬಗಲಿಗೆ ಹಾಕಿ ವಿಶೇಷವೇನೂ
ನಡೆಯಲೇ ಇಲ್ಲ ಎಂಬಂತೆ ಹೊರಗ ಬಂದೆ.

ಹೊರ ಬಾಗಿಲಿಗೆ ಬಂದು ಅಟ್ಟದ ಪಾವಟಿ
ಗೆಗೆ ನಾನು ತಲುಪಿದ್ದೆನೋ ಇಲ್ಲವೊ ಬಚ್ಚಲಿ
ನಿಂದ ತಿರುಗಿ ಬರುತ್ತಿದ್ದ ಸೈಯದ ಕಾಣಿಸಿದ.
ಬಹುಶಃ ಬಚ್ಚಲಮನೆ ಮುಚ್ಚಿರಬೇಕು. ನನಗೆ
ಸಿಡಿಲು ಬಡಿದಂತಾಯಿತು. ನನ್ನ ಹೆಣವೇ ನನ್ನ
ಕಣ್ಮುಂದೆ ನಿಂತಂತಾಯಿತು. ನನ್ನ ಗುರುತು
ಅವನಿಗೆ ಸಿಗಲಿಲ್ಲವಾದರೂ ಬಗಲೊಳಗಿನ
ರಿಪೋರ್ಟಿನ ಗುರುತು ಸಿಕ್ಕಿತು. ಅವನ ಕಣ್ಣಲ್ಲಿ
ಮಿಂಚು ಕಾಣಿಸಿತು. ನಾನು ಓಟಕಿತ್ತೆ ಕೊ-
ನೆಯ ಪಾವಟಿಗೆ ಮುಟ್ಟುತ್ತಿದ್ದಾಗ ಅತ್ತ,
"ಲಾಲಾ, ಲಾಲಾ, ಅವನನ್ನು ಹಿಡಿ" ಎಂದದ್ದು
ಕೇಳಿಸಿತು. ನಾನು ಮುಂದೆ ಓಡುತ್ತಿದ್ದೆ ನನ್ನ
ಹಿಂದೆ ಸೈಯದ ಮತ್ತು ಚೌಕೀದಾರ ಲಾಲಾ


ಓಡುತ್ತಿದ್ದರು. ಅವರೊಂದಿಗೇ ನನ್ನ ರಕ್ತವನ್ನೇ ಕುಡಿಯಲೆಂಬಂತೆ ಕೆಲ ಮುಸಲ್ಮಾನರೂ ಸೇರಿಕೊಂಡರು. ಆದರೆ ೧೯೪೭ ರ ಮೇ ತಿಂಗಳ ಆ ಬುಧವಾರದಂದು ಯಮರಾಜ ನನ್ನನ್ನು ಕರೆಯಲಿಲ್ಲ. ಅಂತೆಯೇ ದಾರಿಯಲ್ಲೊಂದು ಡಬಲ್ ಡೆಕರ್ ಬಸ್ ಒಂದು ನಿಮಿಷ ವೇಗ ಕಡಿಮೆ ಮಾಡಿತು. ನಾನು ಅದನ್ನು ಹತ್ತಿದೆ.

ನಾನು ಕ್ರಾಫರ್ಡ್ ಮಾರ್ಕೆಟ್ಟಿನಲ್ಲಿ ಇಳಿದು ಶೀಘ್ರವಾಗಿ ಒಂದು ಸಂದಿಯಲ್ಲಿ ಮರೆಸಿಕೊಂಡೆ. ಬೆಂಬತ್ತಿ ಬಂದವರು ಬಂದಿದ್ದರೆ ಮುಂದೆ ಹೋಗಲಿ ಎಂದು ಅಲ್ಲೇ ಸ್ವಲ್ಪ ತಡೆದು ಒಂದು ಟ್ಯಾಕ್ಸಿಯನ್ನು ಕರೆದೆ. ಹಾರ್ನಬಿ ರೋಡಿನಲ್ಲಿದ್ದ ಯುನೈಟೆಡ್ ಪ್ರೆಸ್ ಆಫ್ ಇಂಡಿಯಾದ ಆಫೀಸಿಗೆ ಹೋದೆ. ಅಲ್ಲಿ ಆಗ ಸಂಪಾದಕ ಹಾಗೂ ಸಹಾಯಕ ಸಂಪಾದಕರಾಗಿದ್ದ ಜೆ. ಎಂ. ದೇಬ ಮತ್ತು ಚೌಧರಿ ಇದ್ದರು. ಅವರಿಬ್ಬರೂ ಉತ್ತಮ ಟ್ಯಾಪಿಸ್ಟರಿದ್ದರು. ನನಗೂ ೧೯೪೫ ರಲ್ಲಿ ಅಖಿಲ ಭಾರತ ಟ್ಯಾಪ್‌ರ್‍ಯಾಟಿಂಗ್ ಸ್ಪರ್ಧೆಯಲ್ಲಿ ಮೂರನೇ ಬಹುಮಾನ ದೊರೆತಿತ್ತು. ನಾನು ಕೂಡಲೇ ರಿಪೋರ್ಟನ್ನು ಮೂರು ವಿಭಾಗ ಮಾಡಿ ಎರಡನ್ನು ಅವರಿಬ್ಬರಿಗೆ ಕೊಟ್ಟು "ಆ ಮೇಲೆ ಮಾತಾಡುವೆ" ಎಂದು ಹೇಳಿ ಮೊದಲು ಟ್ಯಾಪ್ ಮಾಡಲು ಹೇಳಿದೆ. ನನ್ನ ಸ್ಥಿತಿ ನೋಡಿ ಅವರೂ ಮಾತು ಬೆಳೆಸಲೇ ಇಲ್ಲ. ನಾವು ಮೂವರೂ ಕೂಡಿ ರಿಪೋರ್ಟಿನ ಪ್ರತಿ ಮಾಡಿದೆವು.

ಆ ಮೇಲೆ ನಾನು ಸೈಯದನಿಗೆ ಫೋನ್ ಮಾಡಿ ಅತ್ಯಂತ ಶಾಂತವಾಗಿ ಮಾತನಾಡಿದೆ. ರಿಪೋರ್ಟನ್ನು ನಾನೇ ಕದ್ದಿರುವೆನೆಂದೆ. ಆದರೆ ಅವನೇನಾದರೂ ಗಲಾಟೆ ಮಾಡಿದರೆ ಸೈಯ್ಯದನಿಂದ ಎಷ್ಟೋ ಸಾವಿರ ರೂಪಾಯಿಗೆ ನಾನು ಇದನ್ನು ಕೊಂಡಿರುವೆನೆಂದು ಜಿನ್ನಾರಿಗೆ ತಿಳಿಸುವುದಾಗಿ ಹೆದರಿಸಿದೆ. ಆತ ದಿಙ್ಮೂಢನಾಗಿ, "ನಾನಿನ್ನು ಏನು ಮಾಡಲಿ?" ಎಂದು ಮೆತ್ತಗಿನ ಸ್ವರದಲ್ಲಿ ಕೇಳಿದ. ಆಗ ನಾನು "ರಿಪೋರ್ಟನ್ನು ಒಂದು ತಾಸಿನಲ್ಲಿ ಕಳಿಸುವೆ. ಲಾಲಾ ಮತ್ತು ನನ್ನ ಬೆನ್ನು ಹಿಂದೆ ಬಂದ ಆ ಜನರ ಬಾಯಿ ಮುಚ್ಚಿಸುವುದು ಹೇಗೆ ಎಂಬುದನ್ನು ಮಾತ್ರ ನೀನೇ ನೋಡಿಕೊ" ಎಂದು ಹೇಳಿದೆ. ಆ ಮೇಲೆ ರಿಪೋರ್ಟಿನ ಪ್ರತಿಯನ್ನು ಒಯ್ದು ನಮ್ಮ ಸಂಪಾದಕ ಸದಾನಂದರ ಟೇಬಲ್ ಮೇಲಿಟ್ಟೆ. ಎಲ್ಲ ವಿಷಯ ಆಮೇಲೆ ಹೇಳುವೆನೆಂದು ಅಲ್ಲಿ ನಿಲ್ಲದೇ ನನ್ನ ಕೋಣೆಗೆ ಬಂದು ನನ್ನ ಸಹಾಯಕ ಲೋಬೋನಿಗೆ ಹೇಳಿದೆ: "ಈ ರಿಪೋರ್ಟನ್ನು ಮುಸ್ಲಿಮ್ ಲೀಗ್ ಆಫೀಸಿಗೆ ಕಳಿಸಬೇಕಾಗಿದೆ. ನೀನು ಹೋಗಬೇಡ. ಹೋದರೆ ಪ್ರಾಣಸಹಿತ ಮರಳಲಾರೆ. ಆದ್ದರಿಂದ ಜಕರಿಯಾ ಮಸೀದೆಗೆ ಹೋಗಿ ಅಲ್ಲಿ ಯಾವನಾದರೂ ಹುಡುಗನಿಗೆ ಎಂಟಾಣೆ ಕೊಟ್ಟು ಅವನಿಂದ ಕಳಿಸಿಕೊಡು. ಮತ್ತು ನೀನು ಮರಳಿ ಬಾ."

ಬಳಿಕ ನಿಶ್ಚಿಂತೆಯಿಂದ ಉಸಿರೆಳೆದು ದೇವರಿಗೆ ಧನ್ಯವಾದಗಳನ್ನರ್ಪಿಸಿದೆ. ನಾನು ರಿಪೋರ್ಟನ್ನೂ ಹಾರಿಸಿದ್ದೆ. ಮಿತ್ರ ಸೈಯದನ ಪ್ರಾಣವನ್ನೂ ಉಳಿಸಿದ್ದೆ. ★

"ಷರ್ಸ್" ಪತ್ರಿಕೆಯಲ್ಲಿ ಶ್ರೀ ಕೆ. ಪಿ. ಆರ್. ನಾಯರರು ಬರೆದ ಲೇಖದ ಆಧಾರದಿಂದ



ಅಧಿಕಾರ ಮತ್ತು ಸ್ವಾತಂತ್ರ್ಯಗಳು ಉಷ್ಣ-ಶೀತದಂತೆ. ಇವುಗಳ ಬೆರಕೆ ಸರಿಯಾಗಿದ್ದರೆ ಎಲ್ಲವೂ ಪ್ರಗತಿಶೀಲವಾಗುವುದು. ಹಾಗಲ್ಲದೇ ಅವು ಒಂದೊಂದು ಪ್ರತ್ಯೇಕವಾಗಿದ್ದರೆ ವಿನಾಶಕಾರಿಯಾಗುತ್ತವೆ.

—ಸ್ಮಾಯಿಲ್



"ವಹಿನೀಚ್ಯಾ ಬಾಂಗಡ್ಯಾ" ದ ಲೇಖಕನ ಮರಾಠಿ ಸಾಹಿತ್ಯದಲ್ಲೇ
ಅತ್ಯಂತ ಹೃದಯಸ್ಪರ್ಶಿಯಾದ ನಿಬಂಧ

ನನ್ನ ಜಯಾ ತಿರುಗಾಡಲು ಹೋಗಿದ್ದಾಳೆ

ಮೂಲ:
ಯ. ಗೋ. ಜೋಶಿ

ಅನುವಾದ:
ರಾಮಚಂದ್ರ ಕೊಟ್ಟಲಗಿ

ಹಾಗೆ ನೋಡಿದರೆ, ಯಾರೂ ನನ್ನನ್ನು ತಪ್ಪಾಗಿ ಭಾವಿಸುವ ಸಂಭವವಿಲ್ಲ. ಆದರೂ ಮೊದಲಿಗೇ ಹೇಳಿಬಿಡುವುದು ಕ್ಷೇಮ. ಜಯಾ ಅಂದರೆ ನನ್ನ ಮಗಳು. ಸುಮಾರು ಎರಡು ವರುಷದಾಕೆ.

ಚಂಪಕ ಸಮ ಶುಭ್ರ ಧವಲ
ಮೈದಾ ಸಮ ಮೃದು ಕೋಮಲ

ಎಂದು ಯಾವ ಕವಿಯೂ ಅವಳನ್ನು ವರ್ಣಿಸಬಹುದಾಗಿತ್ತು. ಆ ಜಯಾ ಮೊನ್ನೆ ತಿರುಗಾಡಲಿಕ್ಕೆ ಹೋದಳು. ಮೊನ್ನೆ ಅನಂತ ಚತುರ್ದಶಿಯ ದಿನ ಗಣಪತಿ ವಿಸರ್ಜನವಾಯಿತಲ್ಲ— ಅದರ ಹಿಂದಿನ ದಿನವೇ: ಇನ್ನೂ ಅವಳು ಹಿಂದಿರುಗಿ ಬಂದೇ ಇಲ್ಲ. ಹೇಗೆ ಬಂದಾಳು? ನಾವಾದರೂ ಅವಳು ಹಿಂದಿರುಗಿ ಬರುವ ದಾರಿಯನ್ನೆಲ್ಲಿ ಕಾಯುತ್ತಿದ್ದೇವೆ? ಕಾರಣ, ಒಮ್ಮೆ ಹೋದವರು ತಿರುಗಿ ಬರಲಾರದ ನಾಡಿಗೇ ಅವಳು ಹೋಗಿಬಿಟ್ಟಿದ್ದಾಳೆ.

ನಮ್ಮ ಜಯಾ ಹೋಗುವಾಗಲೇ ತಿಳಿಸಿ ಹೋದಳು— ಅಲ್ಲ- ನಾವೇ ಅವಳನ್ನು ಈ ದೂರದ ಪ್ರವಾಸಕ್ಕೆ ಕಳಿಸಿ ಬಂದೆವು— ಊಹೂಂ.... ಅವಳಿಗೆ ನಮ್ಮ ಜೊತೆಯಲ್ಲಿ ಇರುವ ಮನಸ್ಸಿರಲಿಲ್ಲವೆಂದಲ್ಲ..... ಅಥವಾ ನಮಗೇ ಅವಳ ಸಹವಾಸ ಬೇಡವಾಗಿತ್ತೆಂದೂ

ಅಲ್ಲ. ಚಂದ್ರನನ್ನು ಬೇಡಿ ಕಾಡುವ ಎಳೆ ಮಕ್ಕಳಂತೆ ಅವಳು ಹಟ ಹಿಡಿದಳೆಂದೂ ಅಲ್ಲ. ಆದರೆ ಯಾರು ಜಯಾಳನ್ನು ಈ ಮನೆಯಲ್ಲಿ ತಂದು ಬಿಟ್ಟಿದ್ದರೋ ಅವರೇ ಅವಳನ್ನು ಕೂಗಿ ಕರೆದ ನಂತರ . . . . . ಪಾಪ . . . . ಅವಳಾದರೂ ಒಲ್ಲೆನೆಂದು ಹೇಳುವುದು ಹೇಗೆ? ನಾವಾದರೂ ಇಲ್ಲವೆನ್ನುವುದು ಹೇಗೆ?

ಜಯಾ ಯಾವ ದಿನ ನಮ್ಮ ಮನೆಗೆ ಬಂದಳೊ ಅದೇ ದಿನ ನಮ್ಮ ಮನೆಯಲ್ಲಿ ಒಬ್ಬ ಪರಮ ಸ್ವಕೀಯರ ಲಗ್ನ ಸಮಾರಂಭವಿತ್ತು. ಅಂದು ಮನೆ ಮಂಗಲ ತೋರಣದಿಂದ ಸಿಂಗಾರವಾಗಿತ್ತು. ಅಂಗಳದಲ್ಲಿ ಥಳಿ-ರಂಗವಲ್ಲಿಯನ್ನು ಹಾಕಿತ್ತು. ಮಂಗಲವಾದ್ಯ ಬಾಗಿಲಲ್ಲಿ ಮೊಳಗುತ್ತಿದ್ದವು. ತನ್ನ ಆಗಮನದ ಪ್ರೀತ್ಯರ್ಥ ಇದೆಲ್ಲ ನಡೆದಿದೆಯೆಂಬ ಭಾವನೆಯಿಂದಲೋ ಏನೋ ನಮ್ಮ ಜಯಾ ಅಂದು ನಮ್ಮ ಮನೆಯಲ್ಲಿ ಅವಸರವಸರವಾಗಿ ಪ್ರವೇಶಿಸಿದಳು.

ಧವಲ-ಶುಭ್ರ ಕಾಯಕಾಂತಿ, ಶನಿಯ ಹರಳಿನಂತಹ "ನೀಲ" ನಯನ - ಅದರ ವಿದ್ಯುದ್ದೀಪ್ತಿ-ಅದು ಕೇವಲ ಜಯಾಳಿಗೇ ದತ್ತವಾಗಿ ಬಂದಂತಿತ್ತು. ಯಾರೋ ಅಂದರು— "ವಾದ್ಯ ಘೋಷದ ಸಂಭ್ರಮದಲ್ಲಿ ಬಂದಿದ್ದಾಳೆ— ಜಯಶ್ರೀ ಎಂದು ನಾಮಕರಣ ಮಾಡಿ" ಎಂದು.

ಜಯಶ್ರೀ ನಮ್ಮ ಪರಿವಾರದವಳಾದಳು. ದಿನದುಂಬಿ ಬೆಳೆಯತೊಡಗಿದಳು. ಅವಳು ನಗುತ್ತಿದ್ದಳು-ಆಡುತ್ತಿದ್ದಳು-ಬೆಳೆಯುತ್ತಿದ್ದಳು. ಆನಂದದಿಂದ ಹುಂಕರಿಸುತ್ತಿದ್ದಳು. ಮನೆತುಂಬ ಗಾಳಿಯಂತೆ ಅಲೆಯುತ್ತಿದ್ದಳು. ಕೈಗೆ ಸಿಕ್ಕದ್ದನ್ನು ಎತ್ತಿ ಎಸೆಯುತ್ತಿದ್ದಳು. ಅವಳ ಕೈಗೆ ಎಟಕುವಂತೆ ಯಾವ ವಸ್ತು-ಯಾವ ಸಾಮಾನನ್ನೂ ನೆಲದ ಮೇಲೆ ಇರಿಸುವ ಸಂಭವ ಉಳಿಯಲಿಲ್ಲ. ಅವಳ ನಗೆ-ಆಟಕ್ಕೆ ದಾಂಡಿಗತನಕ್ಕೆ ಸುಗ್ಗಿ ನೆರೆದಂತಾಗಿತ್ತು. ಅಕ್ಕಿ ಚೆಲ್ಲಿತು, ಕುಂಕುಮ ಕರಡಿಗೆ ಬೋರಲಾಯಿತು. ಚೆಲ್ಲಿದ ಕುಂಕುಮದಿಂದ ಜಯಾಳ ಮುಖಮಂಡಲ ಆರಕ್ತ ರಂಗವಾಯಿತು . . . . ಥೇ ಒಂದೇ . . . ಎರಡೇ! ಈಗಂತೂ ಈ "ಧ್ಯಾನ" ಎದ್ದು ಓಡಾಡತೊಡಗಿತು. ಈ ಸರ್ವ ಬಾಲಲೀಲೆಯನ್ನು ನೋಡಿ ಅಂತರ್ಯಾಮದಲ್ಲಿ ಆನಂದ ಉಮ್ಮಳಿಸಿದ ನನ್ನ "ಈಕೆ" —ಕುಳಿತೆಡೆಯಿಂದಲೇ ನಗುನಗುತ್ತ—

"ಏ, ಒಂದಿಷ್ಟು ಯಾರಾದರೂ ಜಯಾಳನ್ನ ಸಂಭಾಳಿಸಿರಲ್ಲ" ಎಂದು ಹೇಳಬೇಕು.

ವಾಸ್ತವಿಕವಾಗಿ ಜಯಾ ನನ್ನ ಪತ್ನಿಯ ಆನಂದವಾಗಿದ್ದಳು. ಉಲ್ಲಾಸವಾಗಿದ್ದಳು. ಜಯಾಳ ಈ ಬಾಲಲೀಲೆಯನ್ನು ನೋಡಿ, ನನ್ನ ಪತ್ನಿಗೆ, ನಮ್ಮ ದೇವರ ಮನೆಯಲ್ಲಿ ಒಂದು ಸಣ್ಣ ದೇವರು ಬಾಲರೂಪ ಧಾರಣ ಮಾಡಿ, ನಮ್ಮ ಮನೆಯಲ್ಲಿ ಲೀಲಾವಿಲೋಲನಾಗಿರಬೇಕೆಂದು ಅನಿಸುತ್ತಿರಬೇಕು. ಆದರೆ ಆನಂದದ ಉಲ್ಲಾಸದ ಸಹವಾಸವೂ ಮಾನವನಿಗೆ ಸದಾಸರ್ವಕಾಲ ಸಹನವಾಗುವುದಿಲ್ಲ. ಇಂಥ ಆನಂದದ ಸಮಯದಲ್ಲೂ, ಅವನಿಗೆ ಆಲಸ್ಯದ ನಿಃಶ್ವಾಸವನ್ನು ಬಿಡಬೇಕೆಂದೆನಿಸುತ್ತದೆ. ಅಂಥ ಭಾವನೆಯಿಂದಲೇ ಇರಬೇಕು. ನನ್ನ ಪತ್ನಿ ಹೇಳುತ್ತಿದ್ದುದು:

"ಏ ಯಾರಾದರೂ ಒಂದಿಷ್ಟು ಜಯಾಳನ್ನ ಸಂಭಾಳಿಸಿರಲ್ಲ" ಎಂದು.

ಏನೋ ಯಾರಿಗೆ ಗೊತ್ತು? ನನಗೂ ಇಂಥ ಆಲಸ್ಯದ ನಿಃಶ್ವಾಸ ಬಿಡಬೇಕಾದೀತಲ್ಲ ಎಂದು ಇತ್ತೀಚಿಗೆ ಅನ್ನಿಸತೊಡಗಿತ್ತು.

ಒಬ್ಬರ ಸುಖ ಇನ್ನೊಬ್ಬರಿಗೆ ಸಹನವಾಗುವುದಿಲ್ಲವೆಂದು ನಾವು ಸದಾ ಹಾಡುತ್ತೇವೆ. ಆದರೆ ಒಮ್ಮೊಮ್ಮೆ ನಮ್ಮ ಸ್ವಂತದ ವೃತ್ತಿಯೇ ವಿಚಿತ್ರವಾಗಿ— ನಮ್ಮ ಸುಖವೇ ನಮಗೆ ಅಸಹನೀಯವಾಗಿಬಿಡುತ್ತದೆ. ಹೇಳಬೇಕಾದುದನ್ನು ಸ್ಪಷ್ಟವಾಗಿ ತಿಳಿಯುವಂತೆ ಹೇಳಿದೆನೋ ಇಲ್ಲವೋ ನಾನೇ ಅರಿಯೆ. ಆದರೆ ಹೇಗೆ ಆಗುವುದು-ಅನಿಸುವುದು ಶಕ್ಯವಿದೆ ಎನ್ನುವುದನ್ನು ಸರ್ವರೂ ಮಾನ್ಯ ಮಾಡುವುದು ಖಚಿತ.

ಜ್ಞಾನೇಶ್ವರಿಯನ್ನು ಪ್ರಕಟಿಸುವಲ್ಲಿ ನಾನು

ತುಂಬ ಸಾಹಸ ಮಾಡಿದ್ದೆ. ಅದಕ್ಕೆ ಯಶ ಬಂದಿತ್ತು. ಇಪ್ಪತ್ತೈದು ವರುಷಗಳ ಹಿಂದೆ ಬರೆದ "ವಹಿನೀಚ್ಯಾ ಬಾಂಗಡ್ಯಾ" ಕಥೆ-ಚಿತ್ರ ರೂಪಿತವಾಗಿ, ಆರ್ಥಿಕ ದೃಷ್ಟಿಯಲ್ಲಿ ಕೂಡ ಲೋಕಪ್ರಿಯವಾಗಿತ್ತು. ಈ ಆಕಸ್ಮಿಕ ಘಟನೆ ಯಿಂದ ನಾನೇ ಅಚ್ಚರಿಪಡುವಂತಾದೆ. ಮನ ಸ್ಸಿಗೆ ಏನೋ ಒಂದು ಬಗೆಯ ಹುರುಹುರು ಎನಿಸತೊಡಗಿತು— ಆಲಸ್ಯದ-- ಸ್ವಾಸ್ಥ್ಯದ, ಅಲ್ಪವಿರಾಮದಂತೆ, ತೀರ ಚಿಕ್ಕ ಒಂದು ಆಕ ಳಿಕೆಯನ್ನು ಬಿಡಬೇಕಾಗಬಹುದು ಎಂದೆನಿಸ ತೊಡಗಿತು.

—ಮತ್ತೆ, ಮನಸ್ಸಿನ ಈ ಹುರುಹುರಿಕೆ— ನನ್ನ ಜಯಾ ದೂರದ ಪ್ರಯಾಣ ಬೆಳಸಿದಾಗ— ಆಕಸ್ಮಿಕವಾಗಿ ಹೊರಟುನಡೆದಾಗ—ತಂತಾನೇ ನಿಂತಿತು. ಈಗ ನನ್ನ ಜಯಾ ತಿರುಗಾಡಲಿಕ್ಕೆ ಹೋಗಿದ್ದಾಳೆ.

ನಾನು ಸ್ವಭಾವತಃ ಮಾತುಗಾರ. ಆದರೆ ಈಚೆಗೆ ಒಂದು ಬಗೆಯ ಮೌನ ಅದನ್ನು ಆವರಿ ಸಿತ್ತು. ಅದನ್ನು ನೋಡಿ ನನ್ನ ಅನೇಕ ಜನ ಸ್ನೇಹಿತರು—

"ವಹಿನೀಚ್ಯಾ ಬಾಂಗಡ್ಯಾದಿಂದ ಜೋಶಿ ಬುವಾ ಅವರಿಗೆ ಒಂದಿಷ್ಟು ಅಮಲು ಬಂದಿದೆ" ಎಂದರು.

ಆಗುತ್ತಿರುವುದು ನಡೆದಿರುವುದು ಒಂದು— ಅದರ ಬಗ್ಗೆ ಇತರರಿಗೆ ಆಗುವ— ಬರುವ ಭಾವನೆ ಇನ್ನೊಂದು. ಏನು? ನನಗೆ ಯಶದ ಅಮಲು ತುಡುಕಿದೆಯಂತೆ. ಆದರೆ ನಾನೆಂತಹ ಭಾಗ್ಯವಂತನೆಂಬುದು ಅನ್ಯರಿಗೆಲ್ಲಿ ಗೊತ್ತಿದೆ. ಪರಮೇಶ್ವರ ಎಂದಿನಿಂದಲೂ ನನ್ನ ಪಕ್ಷವನ್ನು ಸಾವರಿಸುತ್ತ ಬಂದಿದ್ದಾನೆ. ನಾನು ಅಮಲೇರಿ ದಂತೆ ಮಾಡಬೇಕೆಂದು ಭಾವಿಸಿದರೂ ಅವನು ನನ್ನನ್ನು ಉಚ್ಛೃಂಖಲನಾಗಗೊಡಲಾರ. ಈ ಪ್ರಸಂಗದಲ್ಲಿ ಅದು ಮತ್ತೆ ಸಿದ್ಧವಾದಂತಾ ಯಿತು. ನನಗೆ ಯಶದ ಅಮಲು ಬಂದೀತೆಂಬ ಕಲ್ಪನೆ ದೇವರಿಗ ಬಂದಿರಬೇಕು— ಅಂತೇ ಈ ವೇಳೆಯಲ್ಲಿ—

ನನ್ನ ಜಯಾ ತಿರುಗಾಡಲು ಹೋದಳು.

ನನ್ನ ಮನೆಯ ಮುಂದಿನ— ಹಿಂದಿನ ಅಂಗಳ ದಲ್ಲಿ ಪಾರಿಜಾತದ ಗಿಡಗಳಿವೆ. ಆ ಹೂವಿನಿಂದ ಥಳಿ ಹಾಕಿದಂತೆ ಹಡದಿ ಹಾಸುತ್ತದೆ.

ಅಲ್ಲಿ ನನ್ನ ಜಯಾ ನಿತ್ಯವೂ ಆಡುತ್ತಿದ್ದಳು. ಇತ್ತೀಚೆ ಹೂವನ್ನಾರಿಸುತ್ತಲಿದ್ದಳು.

ಅಮೃತ ಸರೋವರ। ಕುಬೇರ
ಭಾಂಡಾರ।
ನಿನ್ನ ರೂಪದಲ್ಲಿ ಬಂದ। ಚಿನ್ನ ನನ್ನ
ವಿಶಂಭರ।

ನನ್ನ ಜಯಾನ ಬಾಲಲೀಲೆಯಿಂದ ಮುಗ್ಧ ಮೋಹಿತಳಾಗಿ, ನನ್ನ ಹೆಂಡತಿ ಹಾಡುತಿದ್ದಳು.

ಜಾಗರಿಸುವ ತನ್ನ ಕಂದಮ್ಮನನ್ನು ಕಂಡು ಯಾವ ತಾಯಿಗೆ ಹೀಗೆ ಅನಿಸದಿದ್ದೀತು?

ಅಂಗಳದಲ್ಲಿಯ ಪಾರಿಜಾತ।
ಮಾಡಬೇಡ ಜಣ ದಿಮಾಕು।
ನೋಡು ನನ್ನ ಕಣ್ಣ ಮಣಿಯ।
ಬಣ್ಣಕೆಂತು ಶುಭ್ರ ಥಳಕು ॥

ನಾನು ಸುರುವಾತಿನಲ್ಲೇ ಹೇಳಿಲ್ಲವೇನು?— ನನ್ನ ಜಯಾ ತಿರುಗಾಡಲು ಹೋಗಿದ್ದಾ ಳೆಂದು—

ಕಂಣೆಗಿಡುವೆ ಕಾಡಿಗೆ। ಮಾಡದಿರು
ಹುಂಬತನ॥
ಲಕ್ಷ ನಕ್ಷತ್ರದ ದೃಷ್ಟಿ। ಕಂದಾ। ನಿನಗೆ
ತಾಕೀತು॥
ಬಚ್ಚ ಬತ್ತಲೆ ಸದಾ ಸರ್ವದಾ।
ನೀಲಗಗನದಂತೆ ಸುಂದರ।
ಹಾಗೇ ಆಡುತಲಿರುವನು ಮುಕುಂದ।
ಇರದೆ ಅರಿವೆಯ ಪರಿವೆಯು।
ವದ್ಯ ಪಕ್ಷದ ಚಂದ್ರಮ। ಯಾಕನ್ನ
ನನ್ನ ಬಾಗಿಲಿಗೆ ಬಂದ।

ನೋಡು, ಬೇಡುತಲಿರುವ ಕಡವಾಗಿ।
ನನ್ನ ಕಂದಮ್ಮನ ಮುಖಪ್ರಭಾ॥

ಯಾಕೆ? ನಗುವಿರೇಕೆ? ನನ್ನ "ವಹಿನೀಚ್ಯಾ ಬಾಂಗಡ್ಯಾ" ಚಿತ್ರಪಟದಲ್ಲಿಯ– ಶಾಂತಾರಾಮ ಅಠವಲೆ ಅವರ ಓವಿಯನ್ನು ಇಲ್ಲಿ ಉದ್ಧರಿಸಿದ್ದೇನೆಂದು ನಗುವಿರೇನು? ಛೀ .... ಈ ಓವಿ ವಹಿನೀಚ್ಯಾ ಬಾಂಗಡ್ಯಾದಲ್ಲಿಯದೂ ಅಲ್ಲ — ಶಾಂತಾರಾಮ ಅಠವಲೇ ವಿರಚಿತವೂ ಅಲ್ಲ.

ಈ ಓವಿ ನನ್ನ – ಖಾಸಾ ನನ್ನ ಮನೆಯದು. ಶಾಂತಾರಾಮ ಅಠವಲೆ ಅವರ ಪರಿಚಯ ನಿಮಗಿರಬಹುದು. ಅವರನ್ನು ನಾನು ಚಿಕ್ಕಂದಿನಿಂದಲೂ ಬಲ್ಲೆ. ಆದರೆ ಅವರು ಇಂಥಾ "ಎಬ್ಬಿಸುವ ಗಿರಾಕಿ" ಇದ್ದಾರೆಂದು ನಿನ್ನೆ ಮೊನ್ನೆಯ ವರೆಗೂ ಕಲ್ಪನೆ ಇರಲಿಲ್ಲ. ನನಗೆ ಸಂಶಯ ಬರಬಾರದೆಂದು ಅವರು ಈ ಓವಿಯಲ್ಲಿಯ ಜಯಶ್ರೀಯನ್ನು ಬದಿಗೆ ಸರಿಸಿ, ಮುಕುಂದ ಕಂದಮ್ಮ ಶಬ್ದ ಸೇರಿಸಿ, ಕವಿತೆ ತಮ್ಮದೇ ಎಂದು ದಬಾಯಿಸಿಬಿಟ್ಟಿದ್ದಾರೆ ಅಷ್ಟೇ! ನಾನಾದರೂ ಎಂಥಾ ಸಾಧು - ಭೋಳೆ - ನೀವೇ ನೋಡಿರಿ. ಮೊನ್ನಿನ ವರೆಗೂ ಈ ಕವಿತೆ ಶಾಂತಾರಾಮರದೆಂದೇ ನನ್ನ ಕಲ್ಪನೆಯಾಗಿತ್ತು. ಅದು ನನ್ನ ಮನೆಯದು ಎಂಬುದು ಎಂದು ಲಕ್ಷ್ಯಕ್ಕೆ ಬಂದಿತೆಂದಿರಿ—

ಎಂದು ನನ್ನ ಜಯಾ ತಿರುಗಾಡಲಿಕ್ಕೆ ಹೋದಳೋ ಅಂದು.

ಅವಳ ಸಹವಾಸದಿಂದ ಜೀವಂತವಾಗಿದ್ದ ಈ ವಸ್ತುಗಳ ಕಡೆಗೆ ನೋಡತೊಡಗಿದೆ– ಇನ್ನೂ ಆನಂದಿಂದ ನೋಡುತ್ತೇನೆ. ಆ ಸಂಪಿಗೆ ಆ ಪಾರಿಜಾತ ಆ ಜಾಜಿಮಲ್ಲಿಗೆ ಆ ಚಂದ್ರಮ ಆ ಅಂಗಳ.... ಈ ಎಲ್ಲ......ಎಲ್ಲ ವಸ್ತುಗಳೂ ನನಗೆ ತೇಜಸ್ವಿಯೆಂದು ಸುಗಂಧಿತವೆಂದು ಅನ್ನಿಸತೊಡಗುತ್ತವೆ. ನನ್ನ ಜಯಾ ತನ್ನ ಮೈಗಂಪು - ತನ್ನ ತೇಜ - ತನ್ನ ಸೌಂದರ‍್ಯವನ್ನು, ಹೋಗುವಾಗ ಕದಾಚಿತ್ ಈ ಜತೆಯ ಗಳೆಯರಿಗೆ ಬಿಟ್ಟು ಹೋಗಿರಬೇಕು. ಇವೆಲ್ಲವನ್ನೂ ನೋಡಿ ನನಗೆ ನಿರತಿಶಯ ಆನಂದವಾಗುತ್ತದೆ.

ನನ್ನ ಜಯಾ ಇನ್ನು ಪುನಃ ಅಲ್ಲಿ ಕಾಣಲಾರಳು– ಎಂದು.

ಅಲ್ಲಿ ಮೊದಲು ಕಾಣುತ್ತಿದ್ದಳೆಂದು.

ನನ್ನ ಮನೆಯು ಈ ಗದ್ಯಕಾವ್ಯವನ್ನು ಇದ್ದಂತೆ ಎತ್ತಿ— ಅದರಲ್ಲಿ ಕೇವಲ ತಮ್ಮ ಚರಣ ರೇಖೆ ಎಳೆದು ಇಂದು ಶಾಂತಾರಾಮ ಅಠವಲೆ ವಹಿನೀಚ್ಯಾ ಬಾಂಗಡ್ಯಾದ ಪದ್ಯ ಲೇಖಕನೆಂದು ಮೆರೆಯತೊಡಗಿದ್ದಾನೆ. ನಾನು ಅವನನ್ನು ಮನಸಾ ಕ್ಷಮಿಸಿದ್ದೇನೆ. ಕಾರಣ ಅವನು ನನ್ನ ಪರಮ ಸ್ನೇಹಿತ.

ಆನಂದ ಸಂಭ್ರಮದಲ್ಲಿದ್ದಾಗ ಮನುಷ್ಯನಿಗೆ ಖಚಿತವಾಗಿ ತಾನು ಇಂಥದೇ ಆನಂದದಲ್ಲಿರುವೆನೆಂಬುದು ತಿಳಿಯುವುದಿಲ್ಲ. ಸುಖಸಮಯದಲ್ಲಿ-ಸುಖದ ಆಸ್ವಾದ ಮಾಡುವುದಕ್ಕಿಂತ ಇನ್ನೂ ಏನೇನು ಕೊರತೆ ಇದೆ ಎನ್ನುವುದನ್ನು ಅಳೆಯುತ್ತಲೇ ಮನುಷ್ಯ ಕಳವಳಿಸುತ್ತಿರುತ್ತಾನೆ. ಆಗ ಪರಮೇಶ್ವರ ಏನಾದರೂ ಅಕಸ್ಮಿಕ–ಅಗಮ್ಯ ಕೃತಿಯನ್ನು ಮಾಡಬೇಕಾಗುತ್ತದೆ. ಆಗ ಚುಟಕಿ ಹೊಡೆದಂತಾಗಿ ನಾವೇ ಅನ್ನುತ್ತೇವೆ— "ನಮ್ಮ ಲಕ್ಷ್ಯದಲ್ಲಿಯೇ ಬಂದಿರಲಿಲ್ಲ— ನಾವು ಎಂಥ ಆನಂದದಲ್ಲಿದ್ದೆವೆಂಬುದು" ಎಂದು.

ಜಯಾಳ ರೂಪದಲ್ಲಿ ಬಾಲ ವೈಭವ ನನ್ನ ಮನೆಯಲ್ಲಿ ಲೀಲಾ ವಿಹಾರಿಯಾದಾಗ — ಆಯುಷ್ಯವೆಂಬುದು ಪ್ರತಿನಿತ್ಯ ತಾರೀಖಿನ ಕಾಗದವನ್ನು ಹರಿಯುವ ಕ್ಯಾಲೆಂಡರಿನಂತೆ ಇದೆ ನನಗನಿಸುತ್ತಿತ್ತು. ಅದು ಅಪ್ರಾಪ್ಯ ಆನಂದವಾಗಿತ್ತೆಂದು ಈಗ ಅನ್ನಿಸತೊಡಗಿದೆ. ಅದೇ ನನ್ನ ವೈಭವವಾಗಿತ್ತು. ಹುಡುಗರನ್ನು ಸಿನೇಮಾ-ನಾಟಕಕ್ಕೆ ಕರೆದುಕೊಂಡು ಹೋಗುವ ಷೋಕು ನನಗಿಲ್ಲ. ಅರಿವೆ ಅಂಚಡಿಯಲ್ಲಿ ಅವರನ್ನು ಮೆರೆಯಿಸುವ ಷೋಕು ನನಗಿಲ್ಲ. ಆದರೆ ಒಂದೇ ಒಂದು ಷೋಕಿದೆ. ನಾಕೆಂಟು ದಿನಗಳಲ್ಲಿ

ಒಮ್ಮೆಯಾದರೂ ಸ್ವಹಸ್ತದಿಂದ ನನ್ನ ಹುಡುಗರಿಗೆ ಸ್ನಾನಕ್ಕೆ ಹಾಕುವುದು. ಅದರಲ್ಲಿ ನನಗೆ ಅಲೌಕಿಕ ಆನಂದವೆನಿಸುತ್ತದೆ.

ಜಯಾ ನನಗೆ ಎಷ್ಟು ಆನಂದದಾಯಿಯಾಗಿದ್ದಳೆಂಬುದು ಈ ಪ್ರಸಂಗದಿಂದ ನನಗೀಗ ತಿಳಿಯತೊಡಗಿದೆ. ಈ ಅಲೌಕಿಕ ಕಿವಿಮಾತನ್ನು ಇದೇ ಮೊದಲು ಪರಮೇಶ್ವರ ನನ್ನ ಕಿವಿಯಲ್ಲಿ ಊದಲಿಲ್ಲ. ಬಹಳ ಜನರಿಗೆ ಇದನ್ನು ಅವನು ಹೇಳಿರಬೇಕು. ಅದರ ಸುಖವನ್ನು ನಾನು ಇದೀಗ ಅನುಭವಿಸುತ್ತಿದ್ದೇನೆ.

ದೀಪಾವಳಿಯ ಸುರುವಾತಿಗೆ ಅಭ್ಯಂಗ ಸ್ನಾನವಾಗುತ್ತದೆ. ದೀಪಾವಳಿಯ ಈ ಶುಭಸಮಯದಲ್ಲಿ ನಾನು ನನ್ನ ಅನುಭವ ಕಥನ ಮಾಡುತ್ತಿದ್ದೇನೆ. ಕಾರಣ ಅದರಿಂದ ಅನೇಕರ ಗತಸ್ಮೃತಿಗಳು ಜಾಗರಿಸುವ ಸಂಭವವಿದೆ. ಆ ಸ್ಮೃತಿಯಿಂದ ಅವರು ಅಭ್ಯಂಗ ಸ್ನಾತರಾಗಬಹುದಾಗಿದೆ. ಇಂಥ ವಿರಹದ ಅಭ್ಯಂಗ ಸ್ನಾನವಿಲ್ಲವೆ ಸಂಸಾರಕ್ಕೆ ಖಚಿತ ರುಚಿಯೇ ಬರಲಾರದು. ಇಂಥ ಅಭ್ಯಂಗ ಸ್ನಾನದಿಂದ ನವಕ್ಷಿತದ ದರ್ಶನ ಘಟಿಸುತ್ತದೆ. ಬಳಕೆಯಿಂದ ಮ್ಲಾನ-ಮಲಿನವಾದ ಆನಂದಕ್ಕೂ ನವ-ನವ್ಯತೆ ಬರುತ್ತದೆ.

ಅದೇಕೆ? ನನ್ನ ವಿಷಯವನ್ನೇ ತೆಗೆದುಕೊಳ್ಳಿರಲ್ಲ. ನನ್ನ ಆಯುಷ್ಯ ತೀರ ಗದ್ಯಸ್ವರೂಪಿಯಾಗಿದೆ. ನಾನು ನನ್ನ ಹೆಂಡತಿಯನ್ನು ಪ್ರೀತಿಸುತ್ತಿರಲಿಕ್ಕಿಲ್ಲ– ಕೇವಲ ಸನಾತನೀ ಪದ್ಧತಿಯ ರೂಕ್ಷ ಸಂಸಾರ ಜೀವನ ಸಾಗಿಸುತ್ತಿರಬೇಕು– ಎಂದು ನನ್ನ ಅನೇಕ ಮಿತ್ರರ ಕಲ್ಪನೆಯಾಗಿದೆ; ಒಮ್ಮೊಮ್ಮೆ ನನಗೂ ಅಂಥ ಶಂಕೆ ಬರುತ್ತದೆ. ಕಾರಣವೆಂದರೆ ನಾನು ಎಂದೂ ಹೆಂಡತಿಯನ್ನು ಕಟ್ಟಿಕೊಂಡು ಅಲೆದಾಟಕ್ಕೆ ಹೋಗಿಲ್ಲ. ಸಿನೇಮಾ-ನಾಟಕಕ್ಕೆ ಹೋಗಿಲ್ಲ. ಕಾರಣ ತಿರುಗಾಟದ– ಸಿನೇಮಾ ನಾಟಕದ— ಒಗ್ಗರಣೆಯನ್ನು ಕೊಡದಿದ್ದರೂ ನಮ್ಮ ಸಂಸಾರ ಅರುಚಿಯಾದೀತೆಂದು ನನಗಾಗಲೀ ನನ್ನ ಹೆಂಡತಿಗಾಗಲೀ ಅನಿಸೇ ಇಲ್ಲ.

ಈಗ ತಮಾಷೆ ಹೇಗಿದೆ ನೋಡಿರಲ್ಲ– ನನ್ನ ಜಯಾ ತಿರುಗಾಡಲಿಕ್ಕೆ ಹೋಗಿಬಿಟ್ಟಳು. ನಾವು ಉಭಯತರೂ ದೃಷ್ಟಾದೃಷ್ಟಿಯಾಗುವುದನ್ನು ತಪ್ಪಿಸತೊಡಗಿದೆವು. ನಂತರ ನೋಡತೊಡಗಿದೆವು. ಇನ್ನೂ ಒಂದು ಚಮತ್ಕಾರ-ನನ್ನ ಕಣ್ಣು ಒದ್ದೆಯಾಗಬಾರದೆಂದು ಇವಳು ಅಟ್ಟಹಾಸದಿಂದ ತನ್ನ ಕಣ್ಣನ್ನು ಒಣಗಿಸಿಬಿಟ್ಟದ್ದಾಳೆ.

ಇತ್ತ ನಾನೂ ಅದೇ ಪ್ರಯತ್ನದಲ್ಲಿಯೇ ಇದ್ದೆ. ಜಯಶ್ರೀಯ ವಿಷಯವನ್ನು ನಾವು ತೆಗೆಯುವುದೇ ಇಲ್ಲ–ಆಕೆ ಎಂದೂ ನಮ್ಮವಳಾಗಿರಲಿಲ್ಲ ವೆಂಬ ಭಾವನೆಯಿಂದ. ಅವಳು ನಮ್ಮ ಮನೆಯಲ್ಲಿಯೇ ಇದ್ದಳೆಂಬ ನೆನಪೂ ನಮಗೆ ಬರುವುದಿಲ್ಲ– ಅವಳು ತಿರುಗಾಡಲಿಕ್ಕೆ ಹೋಗಿದ್ದೂ ಲಕ್ಷದಲ್ಲಿ ಸುಳಿಯುವುದಿಲ್ಲ. ಸಂಭಾವಿತರಂತೆ ಹರಟೆ ಹೊಡೆಯುತ್ತ "ಮಳೆ-ಬೆಳೆ ಚೆನ್ನಾಗಿದೆ. ಕದಾಚಿತ್ ರೇಶನಿಂಗ್ ಹೋದೀತು" ಎಂದು ಮಾತನಾಡಿಕೊಳ್ಳುತ್ತೇವೆ.

ಅಂಗಳದಲ್ಲಿಯ ಸಂಪಿಗೆ ತರುವಿನ ಕಡೆಗೆ ನೋಡಿ, "ಇಂದು ಯಾರೂ ಹೂ ಕೊಯ್ಯಲೇ ಇಲ್ಲ. ಇದ್ದರೆ ಇರಲೊಲ್ಲವೇಕೆ ಗಿಡದಲ್ಲಿಯೇ!" ಎಂದು ಅವಳೆನ್ನುತ್ತಾಳೆ.

ಎಂಭತ್ತು ವರುಷ ದಾಟಿದ ನನ್ನ ತಾಯಿ ಮನೆಯಲ್ಲಿಯೇ ಇದ್ದಾಳೆ. ಬಹಳ ದಿನವಾಯಿತು ಅವಳಿಗೆ ಕಾಣಿಸದಂತಾಗಿ. ಕಂಣಾರೆ ಅವಳೆಂದೂ ನನ್ನ ಜಯಾಳನ್ನು ನೋಡಲಿಲ್ಲ. ಇಂದಂತೂ ಶಕ್ಯವೇ ಇಲ್ಲ. ಅವಳು ನೋಡದೆಯೂ ಜಯಾಳ ಆನಂದವನ್ನು ಅನುಭವಿಸಿದಳು. ಅದೇ ಅಂಥದೇ ಆನಂದವನ್ನು ನಾನಾದರೂ ಏಕೆ ಭೋಗಿಸಬಾರದು? ಭೋಗಿಸಲು ಶಕ್ತನಾಗಬಾರದು? ಆ ಅದೃಶ್ಯ ಆನಂದವೇ ಇಂದು ನನ್ನ ಪಾಲಿಗೆ ಉಳಿದಿದೆ. ಜಯಾಳ ಮಟ್ಟಿಗೆ—ನಾನು ನನ್ನ ತಾಯಿಯಂತೆ ಕುರುಡಾಗಿದ್ದೇನೆ. ಜಯಾ ಆಡಿದ ಜಾಗ ಅವಳು ಆರಿಸಿದ ಹೂ ನನಗೆ ಕಂಡರೂ ನನ್ನ ಜಯಾ ಮಾತ್ರ ನನ್ನ ತಾಯಿಗೆ ಕಾಣದಂತೆ ನನಗೂ

ಕಾಣದಾಗಿದ್ದಾಳೆ. ಅವಳು ಇನ್ನೂ ಇಲ್ಲಿಯೇ ಇರುವ ಆಭಾಸ ಮಾತ್ರ ಆಗುತ್ತದೆ.

ನನ್ನ ಜಯಾಳ ಆಯುಷ್ಯ ಒಂದೆರಡು ವರುಷದ್ದು ಅಷ್ಟೇ! ಹೂವಿನಂತೆ ಆ ಕೂಸು! ಅವಳು ನಮಗೆ ಇನ್ನೂ ಎಷ್ಟೋ ಸುಖ ಕೊಡಬೇಕಾಗಿತ್ತು. ಒಂದು ಸಂಣ ಹೂವಿನಿಂದ ಕಲಶ ತುಂಬ ಅತ್ತರನ್ನು ಅಪೇಕ್ಷಿಸುವುದಾದರೂ ಹೇಗೆ? ಅತ್ತರ್ ಕೊಟ್ಟ ಮೇಲೂ ಹೂ ಎಲ್ಲಿದೆಯೆಂದು ಕಳವಳಿಸುವುದೇಕೆ?

ಮನುಷ್ಯನಿಗೆ ಅತ್ತರೂ ಬೇಕೆನ್ನಿಸುತ್ತದೆ, ಹೂವೂ ಬೇಕೆನ್ನಿಸುತ್ತದೆ.

ಒಮ್ಮೆ ನೆತ್ತಿಯ ಮೇಲೆ—ಮೇಲಿನ ನೀಲಾಕಾಶದಲ್ಲಿ ಇಂದ್ರಧನು ಅಕಸ್ಮಾತ್ತಾಗಿ ಮೂಡುತ್ತದೆ; ಇಲ್ಲದಾಗುತ್ತದೆ. ನನ್ನಂಥವನ ಬದುಕಿನಲ್ಲಿ ಜಯಾ ಬರುತ್ತಾಳೆ, ಹೋಗುತ್ತಾಳೆ.

ಇಂಥ ಈ ಪ್ರಸಂಗದಿಂದ ನನ್ನ ಪಾಲಿಗೆ ಸುಖ ಬರಲಿಲ್ಲವೇನು? ಜಯಾ ಇನ್ನು ದೊಡ್ಡವಳಾಗಲಾರಳು. ಜಯಶ್ರೀಯ ಬಾಲರೂಪ—ನನ್ನ ಕಂಣೆದುರು ಕಟ್ಟಿದ್ದು—ಅದೆಂದೂ ದೊಡ್ಡದಾಗಲಾರದು. ಇನ್ನು ನನ್ನ ಜಯಾಳಿಗೆ ಚಿರಂತನ ಬಾಲ್ಯವೇ! ಅವಳು ದೊಡ್ಡವಳಾದ—ಲಗ್ನಕ್ಕೆ ನೆರೆದ—ಸಂಸಾರ ಮಾಡಬೇಕಾದ ಯಾವ ಚಿಂತೆಯೂ ನನಗಿಲ್ಲ. ಎಷ್ಟು ಚಿಂತೆಯಿಂದ ನಾನು ಅಕಸ್ಮಾತ್ತಾಗಿ ಮುಕ್ತನಾದೆ. ಇನ್ನು ಜಯಾಳ ಯಾವ ಚಿಂತೆಯೂ ನನಗುಳಿಯಲಿಲ್ಲ. ಉಳಿದದ್ದು ಬರೀ ಅವಳ ಮಧುರ ಸ್ಮೃತಿ.

ನನ್ನ ಜಯಾ.....ನನ್ನ ಕಂಣೆದುರು ದುಡುದುಡು ನಡೆದಾಡುತ್ತಿದ್ದರೂ ನನ್ನ ಉಳಿದ ಕಂದಮ್ಮಗಳಿರಾ.....ನಿಮಗೆ ತಪ್ಪದೆ ನಾಕೆಂಟು ದಿನಕ್ಕೆ ಸ್ನಾನಕ್ಕೆ ಹಾಕುವುದನ್ನು ನಾನು ಮರೆಯಲಾರೆ—ಬಿಡಲಾರೆ. ತಿಳಿಯಿತೇ!

ನಿಮ್ಮ ಪಾಲಿಗೆ ಮತ್ತೆ ನಾಲ್ಕು ತಂಬಿಗೆ ಜಾಸ್ತಿ ನೀರು.

ಮತ್ತೆ ಕೆಲವರನ್ನುತ್ತಾರೆ, ಅದು ಮಾತ್ರ ನಿಜ. "ಜೋಶಿಬುವಾ—ನೀವಂತೂ ಜ್ಞಾನೇಶ್ವರಿಯನ್ನು ಪ್ರಕಟಿಸಿದ್ದೀರಿ."

ನಾನಾದರೂ ಏನು ಹೇಳುತ್ತಿದ್ದೇನೆ? ಜ್ಞಾನೇಶ್ವರಿಯನ್ನು ಮುದ್ರಿಸಿ—ಪ್ರಕಟಿಸಿದ್ದು ನನ್ನ ಲಕ್ಷ್ಯದಲ್ಲಿ ಇಲ್ಲವೇನು? ಅದನ್ನು ಓದುವುದೆಂದು ಖಚಿತವಾಗಿ ನಿರ್ಣಯಿಸಿಕೊಂಡಿದ್ದೇನೆ. ಇತ್ತಿತ್ತಲಾಗಿ ಏನಾಗುತ್ತಿತ್ತೆಂದಿರಿ — ನಾನು ಓದಲು-ಬರೆಯಲು ಕುಳಿತರೆ ನನ್ನ ಜಯಾ ಬಂದು ತುಂಬ ತೊಂದರೆ ಕೊಡಬೇಕು. ಪುಸ್ತಕದ ಪುಟ ಹಿರಿಯಬೇಕು—ಹರಿಯಬೇಕು. ಈಗ ಆ ಜಯಾ ತಿರುಗಾಡಲಿಕ್ಕೆ ಹೋಗಿದ್ದಾಳೆ. ಜ್ಞಾನೇಶ್ವರಿಯನ್ನು ಓದುವಷ್ಟು ಶಾಂತ ಅವಕಾಶ ಆಯುಷ್ಯದಲ್ಲಿ ನನಗೆ ದೊರೆತಿದೆ. ಈಗ ಜ್ಞಾನೇಶ್ವರಿಯನ್ನು ಓದಲು ಮೊದಲು ಮಾಡುವುದು:

ಓಂ ನಮೋಜೀ ಆದ್ಯಾ। ವೇದಪ್ರತಿಪಾದ್ಯಾ
ಜಯಜಯಾಜಿ ಸ್ವಸಂವೇದ್ಯಾ। ಆತ್ಮರೂಪ

ಅಂದರೇನು?

ನನ್ನ ಜಯಾ, ದೂರ-ದೂರ—ಬಹಳ ದೂರ ತೀರ ಕ್ಷಿತಿಜದ ಆಚೆಗೆ ತಿರುಗಾಡಲೆಂದು ಹೊರಟು ಹೋಗಿದ್ದಾಳೆ. *

ಜೀವನ

ಬದುಕು ದಿಟ, ಬದುಕು ನಿಜ
ಸಾವದರ ಗುರಿಯಲ್ಲ.

—ಲಾಂಗ್‌ಫೆಲೋ

ಇದುವೆ ಜೀವ, ಇದು ಜೀವನ

ಬೆಂಗಳೂರಿನಲ್ಲಿ ನಾನೂ ನನ್ನ ಗೆಳೆಯನೂ ಬೈಸಿಕಲ್ ಕೊಳ್ಳುವ ವಿಚಾರದಿಂದ ಒಂದು ಅಂಗಡಿಯನ್ನು ಹೊಕ್ಕೆವು. ಅದು ಒಬ್ಬ ಸಿಂಧೀಯನ ಅಂಗಡಿ. ಸಾಹುಕಾರನಿಗೆ ಕನ್ನಡ ಬಾರದು. ನಾವು ಬೈಸಿಕಲ್ಲುಗಳನ್ನು ಪರೀಕ್ಷಿಸುತ್ತಿದ್ದಾಗ ಹೊರಗಿನಿಂದ ಒಬ್ಬರು ಮುದುಕರು ಬಂದರು. "ಏನು ರಾಯರು ಸೈಕಲ್ ನೋಡುತ್ತಿದ್ದೀರಾ ?.. ಓ ಅದು ಚೆನ್ನಾಗಿದೆ, ಪರವಾಯಿಲ್ಲ .... ಈ ಮಡ್‌ಗಾರ್ಡ್ ತುಂಬಾ ಶೈನಿಂಗ್ ಇದೆ. ಈ ಪೆಡ್ಲು ಹ್ಯಾಂಡ್ಲು ಬಹಳ ಉತ್ತಮವಾಗಿದೆ. ಈಚೆಗೆ ನಮ್ಮೂರ ಗೌಡ್ರ ಮಗ ಈ ಮೇಕಿಂದೇ ಸೈಕಲ್ ಕೊಂಡಿದ್ದಾರೆ. ತುಂಬ ಬಾಳಿಕೆ ಬರುತ್ತಿದೆ ಎಂದರು. ತಗೊಳ್ಳಿಕ್ಕೆ ಅಡ್ಡಿ ಇಲ್ಲ. . . ." ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕೈಯಲ್ಲಿ ಕಾಸಿಲ್ಲದ್ದರಿಂದ ನಾವು, "ಆಗಲಿ ನೋಡೋಣ" ಎಂದು ಅಲ್ಲಿಂದ ಜಾರಿದೆವು.

ನಾವು ಮನೆಗೆ ವಾಪಸು ಹೋಗುವಾಗ ಮುದುಕರು ಇನ್ನೂ ಅಲ್ಲೇ ನಿಂತಿದ್ದನ್ನು ನೋಡಿ ನಾನು ಕೇಳಿದೆ: "ಏನು ಸ್ವಾಮಿ, ಇನ್ನೂ ಇಲ್ಲೆ ನಿಂತಿದ್ದೀರಿ?" ಅವರು "ಹೌದು, ಯಾರನ್ನೋ ಕಾಯುತ್ತಿದ್ದೇನೆ" ಎಂದರು. ಅನಂತರ ಪಕ್ಕದಲ್ಲಿ ನಿಂತಿದ್ದ ಇನ್ನೊಬ್ಬ ಗಿರಾಕಿಗೆ, "ನೋಡ್ರಿ ಇದು ಹೇಗಿದೆ ಅಂತ. ನಾನು ಆಗಲೆ ಒಂದನ್ನು ತೆಗೆದುಕೊಂಡು ಬಿಟ್ಟಿದ್ದೇನೆ" ಎಂದು ಒಂದು ಸೈಕಲ್ ತೋರಿಸಿದರು.

ಮರುದಿನ ಬೆಳಿಗ್ಗೆ ಯಾಕೋ ಅದೇ ಅಂಗಡಿಯ ಮುಂದೆ ಹಾಯ್ದು ಹೋಗಬೇಕಾಯಿತು. ಆ ಮುದುಕರು ಅಂಗಡಿಯ ಬಾಗಿಲು ತೆರೆಯುತ್ತಿದ್ದರು. ಅವರ ಬಳಿ ಹೋಗಿ, "ಏನ್ರೀ, ನೀವು ಇಲ್ಲಿ ನೌಕರಿ ಮಾಡುತ್ತಿದ್ದೀರಾ? ನಿನ್ನೆ ನೀವು ಗಿರಾಕಿಯೇನೋ ಅಂದುಕೊಂಡಿದ್ದೆ" ಎಂದೆ.

ಅವರು ಹೇಳಿದರು: "ಹೌದು, ನಾನು ಇಲ್ಲಿ ಗಿರಾಕಿಯಂತೆ ಕೆಲಸ ಮಾಡುವ ನೌಕರಿ ಮಾಡುತ್ತಿದ್ದೇನೆ."

—ರಾಮಚಂದ್ರ ಮೆಹೆಂದಳೆ

ನೀವು ಈ ಕೆಳಗೆ ಓದುವ ಸಂಗತಿಯು ಈಗ್ಗೆ ಸುಮಾರು ೨೫ ವರ್ಷಗಳ ಹಿಂದಿನದಾದರೂ ಇದರಲ್ಲಿ ಅಡಕವಾಗಿರುವ ಜೀವನದ ಅನುಭವಾಮೃತವು ಮಹತ್ವವುಳ್ಳದ್ದಾಗಿದೆ. ಹಿಂದೆ ನಂಜನಗೂಡಿನಲ್ಲಿ ಒಂದು ಸಂಸ್ಕೃತ ಪಾಠಶಾಲೆಯಿತ್ತು. (ಅದರ ಇಂದಿನ ಸ್ಥಿತಿ ಗೊತ್ತಿಲ್ಲ). ಸಂಸ್ಕೃತ ಪಂಡಿತರಾಗಿದ್ದ ಶಾಸ್ತ್ರಿಗಳು ಅಲ್ಲಿ ಅಧ್ಯಾಪಕರಾಗಿದ್ದರು. ಶಾಸ್ತ್ರಿಗಳು "ಮುಪ್ಪಿನದೆಸೆಯಿಂದಾಗಿ ನಾನು ಕೆಲಸ ಮಾಡಲು ಅಶಕ್ತನಾಗಿದ್ದೇನೆ. ಆದ್ದರಿಂದ ನನ್ನನ್ನು ನಿವೃತ್ತಿ ಮಾಡಿ, ಪೆನ್ಶ್ಯನ್ ಕೊಡಬೇಕೆಂದು" ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಇದಾದ ಕೆಲವು ದಿನಗಳಲ್ಲೇ ಆಗಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್‌ರವರು ಆ ಊರಿಗೆ ಭೇಟಿ ಇತ್ತರು. ಶಾಸ್ತ್ರಿಗಳು ಅವರನ್ನು ಭೇಟಿ ಮಾಡಿ ಇದ್ದ ಸಂಗತಿಯನ್ನು ತಿಳಿಸಿದರು. ಆಗ ಮಿರ್ಜಾರವರು, "ಶಾಸ್ತ್ರಿಗಳೇ, ನಿಮಗೆ ಮಕ್ಕಳಿಲ್ಲವೇ?" ಎಂದರು. ಅದಕ್ಕೆ

ಶಾಸ್ತ್ರಿಗಳು "ಸ್ವಾಮೀ, ಒಬ್ಬ ತಂದೆಯು ೧೦ ಮಕ್ಕಳಿದ್ದರೂ ಸಹ ಅವರನ್ನು ಅಕ್ಕರೆಯಿಂದ ಸಾಕುವನು. ೧೦ ಮಕ್ಕಳಾದರೂ ತಂದೆಗೆ ಆ ಮಕ್ಕಳು ಭಾರವಲ್ಲ. ಆದರೆ ಮಕ್ಕಳು ದೊಡ್ಡವರಾದ ಮೇಲೆ ಆ ಒಬ್ಬ ತಂದೆಯೇ ೧೦ ಜನ ಮಕ್ಕಳಿಗೂ ಭಾರವಾಗುತ್ತಾನೆ" ಎಂದಾಗ ಮಿರ್ಜಾ ಸಾಹೇಬರು "ಶಾಸ್ತ್ರಿಗಳೇ ನಿಮ್ಮ ಮಾತಿಗೆ ಮೆಚ್ಚಿದೆ. ಆದ್ದರಿಂದ ನಿಮಗೆ ಪೆನ್ಶನ್ ಕೊಡಲು ಏರ್ಪಾಡು ನಡೆಸುತ್ತೇನೆ" ಎಂದರು

—ಕೃಷ್ಣ, ಬೆಂಗಳೂರು

ಈಗ್ಗೆ ಕೆಲವು ದಿನಗಳ ಹಿಂದೆ ಎರಡನೇ ತರಗತಿಯ ರೈಲು ಬಂಡಿಯಲ್ಲಿ ನಮ್ಮೂರಿನಿಂದ ಪಕ್ಕದಲ್ಲಿದ್ದ ದೊಡ್ಡ ಪಟ್ಟಣಕ್ಕೆ ನಾನು ನನ್ನ ಗೆಳೆಯನೊಂದಿಗೆ ಪ್ರಯಾಣ ಮಾಡುತ್ತಿದ್ದೆ. ಅದೇ ಡಬ್ಬಿಯಲ್ಲಿ ಇಬ್ಬರು ಪ್ರವಾಸಿ ಅಮೇರಿಕನ್ನರೂ ಇದ್ದರು. ನಡುವಿನ ಒಂದು ರೈಲ್ವೇ ಸ್ಟೇಶನ್‌ನಲ್ಲಿ ಗಡ್ಡ ಮೀಸೆ ಚೆನ್ನಾಗಿ ಬೆಳಸಿಕೊಂಡವರೊಬ್ಬರು ನಮ್ಮ ಡಬ್ಬಿಗೆ ಹತ್ತಿದ ಕೂಡಲೇ ಆ ಅಮೇರಿಕನ್ನರು ಅವರನ್ನು ಭಿಕ್ಷುಕರೆಂದು ತಿಳಿದು ಒಂದು ರೂಪಾಯಿ ತೆಗೆದುಕೊಟ್ಟೇ ಬಿಟ್ಟರು. ಆ ಮನುಷ್ಯರೂ ಮಾತನಾಡದೇ ರೂಪಾಯಿಯನ್ನು ಗಂಭೀರವಾಗಿ ಜೇಬಿಗೆ ಸೇರಿಸಿದರು. ಅವರು ಇಳಿಯಬೇಕಾಗಿದ್ದ ಸ್ಟೇಶನ್ ಸಿಕ್ಕಿದ ಕೂಡಲೇ ಇಳಿದು ಹೊರಟುಹೋದರು.

ನನ್ನ ಗೆಳೆಯನೊಂದಿಗೆ ಮನೆಯ ಕಡೆ ಟಾಂಗಾದಲ್ಲಿ ಹೋಗುತ್ತಿದ್ದಾಗ, ನನ್ನ ಗೆಳೆಯ ನನಗೆ ಹೇಳಿದ— "ಆ ಗಡ್ಡ ಮೀಸೆ ಬಿಟ್ಟವರು ಪ್ರಸಿದ್ಧ ಮನೋವಿಜ್ಞಾನಿ" ಎಂದು.

—ಎಚ್. ಎಂ. ಸೂರ್ಯನಾರಾಯಣ

ಜ್ಯುಡಿಶಿಯಲ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಬ್ಬ ಹೆಣ್ಣುಮಗಳ ಮೇಲೆ ಒಂದು ಖಟ್ಲೆಯನ್ನು ಹಾಕಲಾಗಿತ್ತು. ಆದರೆ ಆ ಹೆಣ್ಣುಮಗಳು ಅಪ್ರಾಯಸ್ಥಳಾಗಿದ್ದ ಕಾರಣ ಆ ಖಟ್ಲೆಯನ್ನು ಜ್ಯುವೆನಾಯಿಲ್ ಕೋರ್ಟಿಗೆ ವರ್ಗ ಮಾಡಬೇಕೆಂದು, ಸರಕಾರಿ ವಕೀಲರು ಸೆಶನ್ಸ್ ಕೋರ್ಟಿಗೆ ಅರ್ಜಿ ಮಾಡಿಕೊಂಡಿದ್ದರು. ಆ ಅರ್ಜಿಯ ವಿಚಾರಣೆ ಬಗ್ಗೆ ಆರೋಪಿ ಹೆಣ್ಣುಮಗಳಿಗೆ ಸೆಶನ್ಸ್ ಕೋರ್ಟಿನವರು ನೋಟೀಸು ಕಳಿಸಿದರು. ನೋಟೀಸನ್ನು ಪೋಲೀಸರು ಜಾರಿ ಮಾಡಿ ಈ ಕೆಳಗಿನಂತೆ ರಿಪೋರ್ಟ್ ಮಾಡಿದರು:

"ಸದರೀ ನೋಟೀಸಿನಲ್ಲಿ ನಮೂದಾದ ಆರೋಪಿತಳನ್ನು ಹುಡುಕಲಾಗಿ ಅವಳು ಊರಲ್ಲಿರಲಿಲ್ಲ. ಬೇರೆ ಊರಿಗೆ ಹೋಗಿದ್ದಳು. ಕಾರಣ ಅವಳ ಮನೆಯಲ್ಲಿದ್ದ ಅವಳ ವಯಸ್ಕ ಮಗನ ಮೇಲೆ ಸದರ ನೋಟೀಸು ಜಾರೀ ಮಾಡಿ ಪರತ ಮಾಡಲಾಗಿದೆ."

—ವಿ. ಎಚ್. ಲಕ್ಷ್ಮೇಶ್ವರ ವಕೀಲ

ಮಾಡಿದಡುಗೆಯು ಕೆಡಲು, ಮನೆಯ ಗಂಡಸು ಬಿಡಲು, ಕೂಡಿದ್ದ ಸತಿಯು ತಾ ಕುಣಿಸ್ಯಾಡಲು, ಗೋಡೆಯಲ್ಲಿ ಬರೆದ ಹುಲಿ ಗುಡುಗುಡಿಸಿ ತಿನಬರಲು, ಆಡದಾ ಮಾತುಗಳ ಅಖಿಲರೂ ನಿಜವೆನಲು, ಆರೇನು ಮಾಡುವರು ಅವನಿಯೊಳಗೆ ?

—ಪುರಂದರದಾಸರು

ಇವರು ಒಂದು ಅಪರೂಪ ವ್ಯಕ್ತಿ

ಸ್ವಾಮಿ ಅಗೇಹಾನಂದ ಭಾರತಿ



ಸ್ವಾಮೀ ಅಗೇಹಾನಂದ ಭಾರತಿಯವರು ಅವರ ಹೆಸರು ಸೂಚಿಸಬಹುದಾದಂತೆ, ಭಾರತೀಯರಲ್ಲ. ಅವರು ಯುರೋಪಿನಲ್ಲಿ ಹುಟ್ಟಿ ಕ್ರೈಸ್ತ ಧರ್ಮದ ಆಸರೆಯಲ್ಲಿ ಬೆಳೆದು, ಭಾರತದ ಬಗ್ಗೆ ಆಸ್ಥೆ ತಳೆದು, ಕೊನೆಗೆ ಇಲ್ಲಿ ಬಂದು ಸಂನ್ಯಾಸ ಸ್ವೀಕಾರ ಮಾಡುವಷ್ಟು ದೂರ ಹೋದ ಅತಿ ಅಪರೂಪ ವ್ಯಕ್ತಿಗಳಲ್ಲಿ ಒಬ್ಬರು.

ಅಗೇಹಾನಂದರು ಈಚೆಗೆ ಬರೆದ The Ochre Robe (ಕಾವಿ ಬಟ್ಟೆ) ಎಂಬ ಆತ್ಮ ಚರಿತ್ರೆ ಯುರೋಪ್ ಅಮೇರಿಕಗಳಲ್ಲಿ, ಕೌತುಕ ವನ್ನು ಕೆರಳಿಸಿತು, ಭಾರತದಲ್ಲಿ ಹುಬ್ಬುಗಳನ್ನು ಗಂಟಿಕ್ಕಿಸಿತು. ಅವರು ಶಂಕರಾದ್ವೈತ ಸಂಪ್ರದಾಯದ ದಶನಾಮಿ ಪಂಥದ ಸಂನ್ಯಾಸಿಯಾಗಿದ್ದರೂ ಭಾರತದ ಆಧ್ಯಾತ್ಮಿಕ ರಂಗದಲ್ಲಿ ಇಂದು ನಡೆದಿರುವ ಅನೇಕ ಸಂಗತಿಗಳು ಅವರ ಮನಸಿಗೆ ಬಂದಿಲ್ಲವೆಂದು ಆ ಪುಸ್ತಕದಿಂದ ವ್ಯಕ್ತವಾಗುತ್ತದೆ. ಅವರೀಗ ತಮ್ಮದೇ ಒಂದು ಸಂಪ್ರದಾಯುವನ್ನು ಪ್ರಾರಂಭಿಸಬೇಕೆಂದಿದ್ದಾರೆ. ಹಲವು ವರ್ಷ ಭಾರತದಲ್ಲಿದ್ದು ಸಾವಿರಾರು ಮೈಲು ಪಾದಯಾತ್ರೆ ಮಾಡಿದ ಅವರೀಗ ಅಮೇರಿಕದಲ್ಲಿದ್ದಾರೆ. ಪೂರ್ವ–ಪಶ್ಚಿಮಗಳಲ್ಲಿ, ವಿಶೇಷವಾಗಿ ಭಾರತಕ್ಕೂ ಪಾಶ್ಚಾತ್ಯ ರಾಷ್ಟ್ರಗಳಿಗೂ ನಡುವೆ ಹೆಚ್ಚಿನ ತಿಳಿವಳಿಕೆಯನ್ನುಂಟುಮಾಡುವುದು ಅವರೀಗ ಇಟ್ಟುಕೊಂಡಿರುವ ಧ್ಯೇಯ.

೩೮ ವಯಸ್ಸಿನ ಸ್ವಾಮಿ ಅಗೇಹಾನಂದ ಭಾರತಿಯವರ ಪೂರ್ವಾಶ್ರಮದ ಹೆಸರು ಲಿಯೊಪಾಲ್ಡ್ ಫಿಶರ್. ಆಸ್ಟ್ರಿಯದ ರಾಜಧಾನಿ ವಿಯೆನಾದಲ್ಲಿ ಅನುಕೂಲವಂತ ಕುಟುಂಬದಲ್ಲಿ ಬೇಕಾದಷ್ಟು ಬಗೆಬಗೆಯ ಬೊಂಬೆಗಳೊಡನೆ ಅವರ ಬಾಲ್ಯ ಸುಖವಾಗಿಯೆ ಕಳೆಯಿತೆನ್ನುತ್ತಾರೆ ಅವರು. ತಿಂಡಿಗಳ ಮೇಲೆ ಮಿತಿಮೀರಿದ ಪ್ರೀತಿಯಿತ್ತಂತೆ ಅವರಿಗೆ. ತಿಂಡಿಗಳಿಗೆ ಬರಗಾಲವಿರದ್ದರಿಂದ ಲಿಯೊಪಾಲ್ಡ್ ತುಂಬ ಬೊಜ್ಜು ಬೆಳೆದ ಹುಡುಗನಾಗಿದ್ದ. ಸಂನ್ಯಾಸ ಸ್ವೀಕಾರ ಮಾಡಿ ನಿಯಮಿತ ಜೀವನ, ಸುದೀರ್ಘ ಸಂಚಾರವನ್ನು ಕೈಕೊಂಡಿದ್ದರೂ ಅಗೇಹಾನಂದರು "ತುಸು ದಪ್ಪವಾಗಿಯೆ" ಇದ್ದಾರೆ. ಈ ಕಾರಣದಿಂದ ತಮ್ಮ ಜೀವನಕಾರ್ಯ ಪೂರ್ತಿಯಾಗುವ ಮೊದಲೇ ಎಲ್ಲಿ ಆಯುಷ್ಯ ಮುಗಿದು ಹೋಗುವುದೊ ಎಂಬ ಶಂಕೆ ಅವರಿಗಿದೆ.

"ಲಿಯೊಪಾಲ್ಡ್ ಫಿಶರ್ ಚಿಕ್ಕಂದಿನಲ್ಲೇ ಬಂಡಾಯಗಾರ ಮನೋವೃತ್ತಿಯವರಾಗಿದ್ದರು. ಇಂದಿಗೂ ಬಂಡಾಯಗಾರರಾಗಿ ಉಳಿದಿದ್ದಾರೆ. ಚಿಕ್ಕಂದಿನಲ್ಲಿ ಶಾಲೆಗೆ ಹೋಗುವಾಗ ಕೆಥೋಲಿಕ್ ಪಾದ್ರಿಗಳ ಹಟವಾದಿ ಧರ್ಮಬೋಧನೆಯಿಂದ ಹೇಸಿ ಅವರು ಬಂಡೆದ್ದರು. ವಿಯೆನಾದಲ್ಲಿದ್ದ "ಭಾರತೀಯ ಸಮಾಜ"ವನ್ನು ಹದಿಮೂರನೇ ವಯಸ್ಸಿನಲ್ಲಿ ಫಿಶರರು ಸೇರಿದರು. ಇದು ಅವರ ಶಾಲಾಧಿಕಾರಿ ಪಾದ್ರಿಯ ರೋಷವನ್ನು ಹೆಚ್ಚಿಸಿತು. "ಪಾಷಂಡ" ಎಂಬ ಬಿರುದು ಅವರಿಗೆ ದೊರೆಯಿತು.

ಭಾರತದ ಬಗ್ಗೆ ಅವರು ಕದ್ದುಮುಚ್ಚಿ ಓದಿದ್ದ ಪುಸ್ತಕಗಳು ಅವರ ಬಾಲಬುದ್ಧಿಯನ್ನು ಪ್ರಚಂಡವಾಗಿ ಉತ್ತೇಜಿತಗೊಳಿಸಿದ್ದವು. ಉದಯಶಂಕರರ ಒಂದು ನೃತ್ಯ ಕಾರ್ಯಕ್ರಮವನ್ನು ನೋಡಿದ ಬಳಿಕ ಭಾರತೀಯ ದೇವ ದೇವತೆಗಳ ಬಗ್ಗೆ ಒಂದು ಅನಿರ್ವಚನೀಯವಾದ ಆದರ ಭಾವನೆ ಅವರಲ್ಲಿ ಅಂಕುರಿಸಿತು. ಪಾದ್ರಿಗಳ ಠುಂಠತನ ಅವರನ್ನು ಅತ್ತ ತಳ್ಳಲು ಮತ್ತಷ್ಟು ಸಹಾಯ ಮಾಡಿತು. ಭಾರತದ ಬಗ್ಗೆ ಹೆಚ್ಚು ಜ್ಞಾನ ಪಡೆಯಲು ಅವರು ವಿಯೆನಾದಲ್ಲಿ ರಸಾಯನ ಶಾಸ್ತ್ರ ಓದುತ್ತಿದ್ದ ಒಬ್ಬ ಆಂಧ್ರ ವಿದ್ಯಾರ್ಥಿಯಿಂದ ಇಂಗ್ಲೀಷ್ ಕಲಿಯತೊಡಗಿದರು. (ಇಂದು ಅಗೇಹಾನಂದರು ಯುರೋಪಿಯನ್ನರಂತಲ್ಲ—ಭಾರತೀಯರಂತೆ ಇಂಗ್ಲೀಷ್ ಮಾತಾಡುತ್ತಾರೆ).

ವಿಯೆನಾದಲ್ಲಿದ್ದ ಭಾರತೀಯ ವಿದ್ಯಾರ್ಥಿಗಳಿಗೆ ಜರ್ಮನ್ ಕಲಿಸಿ ಅವರಿಂದ ಭಾರತೀಯ ಭಾಷೆಗಳನ್ನು ಫಿಶರ್ ಕಲಿತರು. ಡಾ. ಕೇಸರಬಾನಿಯವರಿಂದ ಸಂಸ್ಕೃತವನ್ನು, ಅಲಹಾಬಾದಿನಿಂದ ಬಂದಿದ್ದ ವೈದ್ಯಕೀಯ ವಿದ್ಯಾರ್ಥಿಯೊಬ್ಬನಿಂದ ಹಿಂದಿಯನ್ನು ಇತರರಿಂದ ಉರ್ದು ಬಂಗಾಲಿಗಳನ್ನು ಕರಗತಮಾಡಿಕೊಂಡರು. ಬೇಗನೆ ೧೪ ವರ್ಷದ ಫೀಶರ್‌ಗೆ ವಿಯೆನಾದ ಯಾವ ಭಾರತೀಯ ವಿದ್ಯಾರ್ಥಿಗಿಂತಲೂ ಹೆಚ್ಚು ಸಂಸ್ಕೃತ ಬರುವಂತಾಯಿತು. ೧೯೩೭ ರಲ್ಲಿ ವಿಯೆನಾದಲ್ಲಿ ಗಾಂಧಿಜಯಂತಿ ಆಚರಿಸಲ್ಪಟ್ಟಾಗ ಭಗವದ್ಗೀತೆಯನ್ನೋದಿದವನು ಯಾರಾದರೊಬ್ಬ ಭಾರತೀಯ ವಿದ್ಯಾರ್ಥಿಯಲ್ಲ, ಲಿಯೋಪಾಲ್ಡ್ ಫಿಶರ್.

ಕ್ರೈಸ್ತ ಧರ್ಮದ ಮೇಲೆ ತೀರ ವಿರಕ್ತಿಯುಂಟಾಗಿದ್ದುದರಿಂದ ಫಿಶರರು ತಮ್ಮ ೧೬ ನೇ ಹುಟ್ಟುಹಬ್ಬದಂದು ಭಾರತೀಯ ಸಮಾಜದಲ್ಲಿ ಭಾಯಿ ಸಚ್ಚಿದಾನಂದ ಎಂಬ ಹಿಂದೂ ಧರ್ಮ ಪ್ರಚಾರಕರಿಂದ ಪಂಚಗವ್ಯಪ್ರಾಶನ ಪೂರ್ವಕವಾಗಿ ಹಿಂದೂ ಧರ್ಮದ ದೀಕ್ಷೆಯನ್ನು ಪಡೆದರು. ಫಿಶರರಿಗೆ ಶ್ರೀರಾಮನ ಕಾರ್ಯಗಳ ಮೇಲೆ ತುಂಬ ಆದರ. ಆದ್ದರಿಂದ ಈ ನವದೀಕ್ಷಿತನಿಗೆ ರಾಮಚಂದ್ರ ಎಂದು ನಾಮಕರಣವಾಯಿತು.

೧೯೪೨ ರಲ್ಲಿ ನೇತಾಜಿ ಸುಭಾಷಚಂದ್ರರು ಭಾರತದಿಂದ ಕಾಣೆಯಾಗಿ ಬರ್ಲಿನ್ನಿಗೆ ಬಂದಾಗ ಲಿಯೊಪಾಲ್ಡ್ ರಾಮಚಂದ್ರರಿಗೆ ಕರೆ ಬಂತು. ೧೯೪೩ ಫೆಬ್ರುವರಿಯಲ್ಲಿ ಅವರು ಜರ್ಮನಿಯಲ್ಲಿ ಸುಭಾಷರು ಕಲೆ ಹಾಕಿದ ಭಾರತೀಯ ಪಡೆಯನ್ನು ಸೇರಿದರು. ತಮ್ಮಂತೆಯೆ ಸ್ವಚ್ಛ ಹಿಂದುಸ್ತಾನಿ, ಬಂಗಾಲಿಗಳನ್ನು ಮಾತಾಡುವ ಈ ತರುಣನು ಭಾರತೀಯ ಸೈನಿಕರಲ್ಲಿ ತುಂಬ ಜನಪ್ರಿಯನಾದ. ಈಗಾಗಲೇ ಫಿಶರರಿಗೆ ಭಾರತದ ಶಾಸ್ತ್ರಗಳ ಪರಿಚಯ ಸಾಕಷ್ಟಾಗಿತ್ತು. ಅವರು ಜರ್ಮನಿಯಲ್ಲಿದ್ದ ಭಾರತೀಯ ಪಡೆಗಳಿಗಾಗಿ ಒಂದು ಹಿಂದೂ ದೇವಾಲಯವನ್ನೂ ಸ್ಥಾಪಿಸಿದರು. ಅಲ್ಲಿ ಪುರಾಣ, ಭಗವದ್ಗೀತಾ ಪ್ರವಚನಗಳನ್ನು ನೆರವೇರಿಸುತ್ತಿದ್ದರು. ಭಾರತೀಯ ಪಡೆಗಳಲ್ಲಿ ಮತ್ತಾರಿಗಿಂತ ಹೆಚ್ಚು ಸಂಸ್ಕೃತ ಬಲ್ಲ ಅವರು ಭಾರತೀಯರ ಪೌರೋಹಿತ್ಯ ಮಾಡಿದ ಪ್ರಪ್ರಥಮ ಯುರೋಪಿಯನ್ನರಾಗಿರಬೇಕು.

ಯುದ್ಧ ಮುಗಿಯಿತು. ಯುರೋಪಿನಲ್ಲಿ ಫಿಶರರಿಗೆ ಪರಿಚಿತರಾಗಿದ್ದ ಅಸಂಖ್ಯ ವಿದ್ಯಾರ್ಥಿಗಳಲ್ಲಿ ಭಾರತದ ಧರ್ಮಗಳ ಬಗ್ಗೆ ಅಸಡ್ಡೆ ಮತ್ತು ತಿರಸ್ಕಾರವೇ ಹೆಚ್ಚಾಗಿತ್ತೆಂದು ಕಂಡಿದ್ದರೂ ಫಿಶರ

ರಲ್ಲಿ ಮಾತ್ರ ಹಿಂದೂ ಧರ್ಮದ ಕಡೆ ಯಾಕೊ ಆಕರ್ಷಣೆ ಹೆಚ್ಚುತ್ತಲೇ ಇತ್ತು. ವಿಯೆನಾ ವಿಶ್ವ ವಿದ್ಯಾಲಯದಲ್ಲಿ ಅವರು ಭಾರತ ಶಾಸ್ತ್ರವನ್ನು ಎರಡು ವರ್ಷ ಅಭ್ಯಸಿಸಿದ ಮೇಲೆ ತಮ್ಮ ಸಂಸ್ಕೃತ ಸಾಕಷ್ಟು ಭದ್ರವಾಗಿದೆಯೆನಿಸಿ ಭಾರತದ ಬೇರೆ ಬೇರೆ ಮಠಗಳಿಗೆ ಸಂಸ್ಕೃತದಲ್ಲೇ ಪತ್ರ ಬರೆದರು. ರಾಮಚಂದ್ರ ಫಿಶರರಿಗೆ ಸಂನ್ಯಾಸದ ಹಂಬಲ ಹಿಡಿದಿತ್ತು. ಇದಕ್ಕೆ ಬಂದ ಪ್ರತಿಕ್ರಿಯೆ ಪ್ರೋತ್ಸಾಹಕರವಾಗಿದ್ದಿಲ್ಲ. ರಾಮಕೃಷ್ಣ ಮಠದವರಿಂದ ಮಾತ್ರವೇ ಅವರಿಗೆ ಉತ್ತರ ಬಂದಿತ್ತು.

ಅಂತೂ ೧೯೪೯ ಪ್ರಾರಂಭದಲ್ಲಿ ಕ್ರೈಸ್ತಧರ್ಮಕ್ಕೆ ಸಂಪೂರ್ಣ ಶರಣು ಹೊಡೆದು ರಾಮಚಂದ್ರ ಫಿಶರರು ಭಾರತದಲ್ಲಿ ಬಂದಿಳಿದರು. ಕಲಕತ್ತೆಯ ಬೇಲೂರು ಮಠದಲ್ಲಿ ಸ್ವಾಮಿ ಯೋಗೇಶ್ವರಾನಂದರು ಅವರ ಸಂಸ್ಕೃತ ಜ್ಞಾನವನ್ನು ಪರೀಕ್ಷಿಸಿದರು. ಮರುದಿನ ಫಿಶರರು ತಮ್ಮ ಯುರೋಪಿಯನ್ ವೇಷವನ್ನು ಪರಿತ್ಯಜಿಸಿದರು. ರಾಮಕೃಷ್ಣ ಮಿಶನ್ನಿನ ಸ್ವಾಮಿ ವಂದನಾನಂದರು ಮುಂಡನವಿಧಿಯನ್ನು ಸಾಂಗಗೊಳಿಸಿದರು. ಬ್ರಹ್ಮಚಾರಿ ವೇಷವನ್ನು ಧರಿಸಿದ ಫಿಶರರು ಸಾಕಷ್ಟು ದೀರ್ಘಕಾಲ ಸಾಧನೆ–ಸೇವೆಗಳನ್ನು ಮಾಡಿದ ನಂತರ ಅವರಿಗೆ ಪೂರ್ಣ ಸಂನ್ಯಾಸ ದೀಕ್ಷೆ ದೊರೆಯಲಿತ್ತು.

ಆದರೆ ಕಡೆಗೆ ಅವರಿಗೆ ರಾಮಕೃಷ್ಣ ಮಠದಿಂದ ಸಂನ್ಯಾಸ ದೀಕ್ಷೆ ದೊರೆಯಲಿಲ್ಲ. ಸಾಧನೆ-ಸೇವೆಗಳನ್ನೇನೋ ಅವರು ಸರಿಯಾಗಿಯೇ ಮಾಡಿದರು. ಕಲಕತ್ತೆಯಲ್ಲಿ ಕೆಲ ಕಾಲ ಅವರ ಚರ್ಯೆಗಳನ್ನೂ ತತ್ಪರತೆಯನ್ನೂ ಕಣ್ಣಿಟ್ಟು ಪರೀಕ್ಷಿಸಿದ ನಂತರ ಹಿಮಾಲಯದ ಹೃದಯಾಭಿರಾಮ ಶಾಂತ ಪರಿಸರದೊಳಗೆ ಅಲ್ಮೋಡಾದಲ್ಲಿರುವ ರಾಮಕೃಷ್ಣ ಮಿಶನ್ನಿನ ಅದ್ವೈತಾಶ್ರಮಕ್ಕೆ ಕಳಿಸಲಾಯಿತು. ಎಲ್ಲ ಸಂನ್ಯಾಸಾಪೇಕ್ಷಿ ಬ್ರಹ್ಮಚಾರಿಗಳಂತೆ ರಾಮಚಂದ್ರ ಫಿಶರರೂ ಬ್ರಾಹ್ಮ ಮುಹೂರ್ತದಲ್ಲೆದ್ದು ಕೋಡುವ ನದಿಯಲ್ಲಿ ಸ್ನಾನ ಮಾಡಿ ಧ್ಯಾನ ಧಾರಣೆಗಳನ್ನು ಅಭ್ಯಾಸ ಮಾಡಿದರು. ಆಶ್ರಮ ನಿಯಮಗಳಂತೆ ಮುಸುರೆ ತೊಳೆಯುವುದರಿಂದ ಹಿಡಿದು ಗ್ರಂಥಗಳ ಮುದ್ರಣಕ್ಕಾಗಿ ಕರಡು ತಿದ್ದುವುದರ ವರೆಗಿನ ಕಾರ್ಯಗಳಲ್ಲಿ ತಮ್ಮ ಪಾಲನ್ನು ಕ್ರಮವಾಗಿ ಪೂರೈಸಿದರು. ಮಠಾಧಿಪತಿಯಾದ ಸ್ವಾಮೀ ಯೋಗೇಶ್ವರಾನಂದರ ಚರಣ ತಲದಲ್ಲಿ ಶಾಸ್ತ್ರಾರ್ಥ ಚರ್ಚೆ ದಿನದಿನವೂ ನಡೆಯಿತು. ಸ್ವಾಮಿ ವಿರಜಾನಂದರಿಂದ ಗುಹ್ಯ ಮಂತ್ರೋಪದೇಶವೂ ದೊರೆಯಿತು. ಎರಡು ವರ್ಷ ಕಾಲ ಹೀಗೆ ಬ್ರಹ್ಮಚರ್ಯ ಪಾಲನ ಮಾಡಿದ ನಂತರ ಬ್ರಹ್ಮಚಾರಿ ರಾಮಚಂದ್ರ ಇನ್ನೇನು ಸಂನ್ಯಾಸದೀಕ್ಷಿತನಾಗಲಿದ್ದಾನೆನ್ನುವಾಗ ಸ್ವಾಮೀ ಯೋಗೇಶ್ವರಾನಂದರು ಅವನನ್ನು ಬಿಡುಗಡೆ ಮಾಡಿಬಿಟ್ಟರು.

ಕಾರಣ ಬೇರೇನೂ ಇರಲಿಲ್ಲ. ಬ್ರಹ್ಮಚಾರಿ ರಾಮಚಂದ್ರನಿಗೆ ಶ್ರೀರಾಮಕೃಷ್ಣ ಪರಮಹಂಸರು ದೈವೀ ಅವತಾರವೆಂಬ ವಿಶ್ವಾಸವಿರಲಿಲ್ಲ. ಅದನ್ನವರು ಬಹಿರಂಗವಾಗಿಯೆ ಆಡಿತೋರಿಸುತ್ತಿದ್ದರು. ವಿವೇಕಾನಂದರು ರಚಿಸಿದ ಮಠನಿಯಮಾವಳಿಯಲ್ಲಿ ಪರಮಹಂಸರ ದೇವತ್ವವನ್ನು ನಂಬಲೇಬೇಕೆಂಬ ವಿಧಿಯಿಲ್ಲದಿದ್ದರೂ ಈಗದು ಆ ಸಂಪ್ರದಾಯದ ನಂಬಲೇಬೇಕಾದ ವಿಧಿಗಳಲ್ಲೊಂದೆಂದು ಅಲಿಖಿತ ಶಾಸನವಾಗಿಬಿಟ್ಟಿದೆ. ಇದರ ವಿರುದ್ಧ ಹಳೇ ಫಿಶರ್ ಬಂಡಾಯಗಾರ ಬುದ್ಧಿ ತಲೆಯೆತ್ತಿ ನಿಂತಿತ್ತು.

ಬ್ರಹ್ಮಚಾರಿ ರಾಮಚಂದ್ರರು ಈಗ ಕಾಶಿಗೆ ಬಂದರು. ಸಂನ್ಯಾಸಿಯಾಗುವ ಅವರ ನಿರ್ಧಾರ ಮೊದಲಿನಷ್ಟೇ ಅಚಲವಾಗಿತ್ತು. ಕಾಶಿಯಲ್ಲವರು ಮಠದಿಂದ ಮಠಕ್ಕೆ ಸಂನ್ಯಾಸಿಯಿಂದ ಸಂನ್ಯಾಸಿಯ ಕಡೆಗೆ ಸಂನ್ಯಾಸಭಿಕ್ಷೆ ಬೇಡುತ್ತ ಅಲೆದರು. ಎಲ್ಲರೂ ಅವರ ಪಾಂಡಿತ್ಯವನ್ನು ಮೆಚ್ಚಿದರು. ಆದರೆ ಯಾರೂ ಬಿಳಿಯರಾಗಿ ಹುಟ್ಟಿದ ಅವರಿಗೆ ಸಂನ್ಯಾಸವೀಯಲೊಪ್ಪಲಿಲ್ಲ.

ಉಪಾಯಗಾಣದೆ ಗುರುರಹಿತವಾದ ಸ್ವತಂತ್ರ ಸಂನ್ಯಾಸವೊಂದೇ ಇನ್ನು ತಮಗಿರುವ ಗತಿಯೆಂದು ಯೋಚಿಸುತ್ತಿದ್ದಾಗ ದಕ್ಷಿಣಭಾರತೆ

ದಿಂದ ಬಂದಿದ್ದ ವೃದ್ಧ ದಶನಾಮಿ ಸಂನ್ಯಾಸಿ ಸ್ವಾಮಿ ವಿಶ್ವಾನಂದರು ಅವರಿಗೆ ದೊರಕಿದರು. "ಅಪ್ಪಾ, ನಿನ್ನ ಹಂಬಲವನ್ನು ಅರಿತಿದ್ದೇನೆ, ಯೋಗ್ಯತೆಯನ್ನು ಮನಗಂಡಿದ್ದೇನೆ. ವಿರಕ್ತಿ ಬಂದೊಡನೆ ಪರಿವ್ರಾಜಕನಾಗಬೇಕು ಎಂಬೊಂದು ಶಾಸ್ತ್ರವಚನವನ್ನಾಧರಿಸಿ ನಿನಗೆ ಸಂನ್ಯಾಸ ಕೊಡುತ್ತೇನೆ. ಆದರೆ ಹಿಂದುವಾಗಿ ಹುಟ್ಟದ ನಿನ್ನನ್ನು ಸಂನ್ಯಾಸಿಯೆಂದು ಯಾರೂ ಸ್ವೀಕರಿಸದಿರಬಹುದು. ಹಾಗಾದರೆ ನನ್ನನ್ನು ದೂರಬೇಡ," ಎಂದು ಅವರು ಎಚ್ಚರವಿತ್ತರು. ಫಿಶರರು ಹಾಗೇ ಆಗಲೆಂದರು.

ಮುಂದಿನ ಪೂರ್ಣಿಮೆಯ ರಾತ್ರಿ ಮಣಿಕರ್ಣಿಕಾ ಘಾಟಿನಲ್ಲಿ ಸುಡುತ್ತಿರುವ ಮೂರು ಚಿತೆಗಳ ಮಧ್ಯಸ್ಥಾನದಲ್ಲಿ ಮಂಡಲ ಬರೆದು ಎಡಗೈಯಿಂದ ಆಚಮನ ಮಾಡಿ ಸ್ವಾಮೀ ವಿಶ್ವಾನಂದರು ವಿರಜಾಹೋಮ ಮಾಡಿಸಿದರು. ಅನಂತರ ಬ್ರಹ್ಮಚಾರಿಯ ಜುಟ್ಟು ಕತ್ತರಿಸಿ ಹೋಮಕುಂಡದಲ್ಲಿ ಒಗೆದು ಚಿತೆಯ ಮೇಲೆ ಅವರನ್ನು ಮಲಗಿಸಿ ಸಾಂಕೇತಿಕ ದಹನ ಕಾರ್ಯ ಮುಗಿಸಿದರು. ಅನಂತರ ಕಾವಿ ಬಟ್ಟೆ ತೊಡಿಸಿ "ಇನ್ನು ನೀನು ಈ ಲೋಕದ ಪಾಲಿಗೆ ಸತ್ತೆ. ಈಗ ನೀನು ಮುಕ್ತ. ನಿನಗೆ ಸ್ವಾಮಿ ಅಗೇಹಾನಂದ ಭಾರತಿಯೆಂದು ಹೆಸರು ಕೊಟ್ಟಿದ್ದೇನೆ. ತೆಗೆದುಕೋ ದಂಡ" ಎಂದರು.

ಶಕುಂತಲೆ ಹುಟ್ಟಿದೊಡನೆ ಅವಳನ್ನು ಮೇನಕೆ ತೊರೆದು ಹೋದಂತೆ ಸ್ವಾಮಿ ವಿಶ್ವಾನಂದರು ಅಗೇಹಾನಂದರಿಗೆ ಆಶ್ರಮ ಕೊಟ್ಟೊಡನೆ ಇನ್ನು ನಿನ್ನ ದಾರಿ ನಿನಗೆ ಎಂದುಬಿಟ್ಟರು. "ನಾನು ಸಂನ್ಯಾಸ ಸ್ವೀಕರಿಸಿದೊಡನೆ ಒಮ್ಮೆ ನಮ್ಮ ಸಂಪ್ರದಾಯದ ಮೂಲಪೀಠವಾದ ಶೃಂಗೇರಿಗೆ ಪಾದಯಾತ್ರೆ ಮಾಡಿ ಬಂದಿದ್ದೆ" ಎಂದು ಮಾತ್ರ ಅವರು ಹೇಳಿದರಲ್ಲದೆ ನೀನೂ ಹೋಗು ಎನ್ನಲಿಲ್ಲ.

ಒಬ್ಬೊಂಟಿಗರಾಗಿ ದಂಡಕಮಂಡಲು ಭಿಕ್ಷಾಪಾತ್ರಹಸ್ತರಾಗಿ ಅಗೇಹಾನಂದರು ಕಾಲ್ನಡಿಗೆಯಲ್ಲಿ ಶೃಂಗೇರಿಗೆ ಸಾಗಿದರು. ಉಷಃಕಾಲದಲ್ಲೆದ್ದು ದಿನಕ್ಕೊಂದು ಪಯಣ ನಡೆದು, ಏಳು ಮನೆಗಳಲ್ಲಿ ಭಿಕ್ಷೆಯೆತ್ತಿ, ಗ್ರಾಮ ದೇವಾಲಯದಲ್ಲೋ ಮರದಡಿಯಲ್ಲೋ ತಂಗಿ, ಸಂಜೆ ಬಂದು ನಮಸ್ಕರಿಸಿದ ಹಳ್ಳಿಗರಿಗೆ ಧರ್ಮೋಪದೇಶ ಮಾಡುತ್ತಿದ್ದರು. ಈ ಪರ್ಯಟನದ ಮಧುರ ಸ್ಮೃತಿಗಳನ್ನವರು ತಮ್ಮ ಪುಸ್ತಕದಲ್ಲಿ ವರ್ಣಿಸಿದ್ದಾರೆ. ಹಳ್ಳಿಗರು ಭಾರತೀಯ ವಿದ್ಯಾವಂತ-ಆಧುನಿಕರು ಹೇಳುವಷ್ಟು ಹೆಡ್ಡರಲ್ಲವೆಂದೂ ಅವರಲ್ಲಿ ಮಾನವ ದಯೆ ತುಂಬಿದೆಯೆಂದೂ ಅಗೇಹಾನಂದರ ಅಭಿಪ್ರಾಯ. ನಡುವೆ ಮಳೆಗಾಲ ಬಂದುದರಿಂದ ಬಳ್ಳಾರಿಯಲ್ಲಿ ಚಾತುರಾಸ್ಯವನ್ನು ಕಳೆದು ಪುನಃ ಪ್ರಯಾಣ ಮುಂದುವರಿಸಿದರು. ಆದರೆ ಒಂಭತ್ತು ತಿಂಗಳ ಕಾಲ ನಡೆದು ೧೫೦೦ ಮೈಲನ್ನುತ್ತರಿಸಿ ಕೊನೆಗೆ ಶೃಂಗೇರಿಯನ್ನು ತಲುಪಿದಾಗ ಅವರಿಗಾಗಿ ದೊಡ್ಡ ನಿರಾಶೆ ಕಾದಿತ್ತು. ಅವರ ಸಂಪ್ರದಾಯದ ಮೂಲ ಪೀಠದ ಅಧಿಪತಿಗಳಾದ ಜಗದ್ಗುರು ಶಂಕರಾಚಾರ್ಯ ಚಂದ್ರಶೇಖರ ಭಾರತಿಯವರು ಈ ಬಿಳಿಯ ಸಂನ್ಯಾಸಿಗೆ ದರ್ಶನವೀಯಲು ನಿರಾಕರಿಸಿದರು!

ಖಿನ್ನಮನಸ್ಕರಾಗಿ ಸ್ವಾಮೀ ಅಗೇಹಾನಂದರು ಕಾಶಿಗೆ ಮರಳಿದರು. ಅಂದಿನಿಂದ ಏಳು ವರ್ಷ ಕಾಲ ಅವರು ಭಾರತದಲ್ಲಿ ಕಳೆದರು. ಈ ಅವಧಿಯಲ್ಲಿ ಅವರು ಮಹತ್ಕಾರ್ಯಗಳನ್ನು ಮಾಡಿದರು, ಸಾರ್ಥಕತೆಯ ಕ್ಷಣಗಳನ್ನು ಅನುಭವಿಸಿದರು, ನಿರರ್ಥಕತೆಯ ಮುಹೂರ್ತಗಳನೂ ಎದುರಿಸಿದರು.

ದಿಲ್ಲಿ ವಿಶ್ವವಿದ್ಯಾಲಯವು ತುಂಬ ಉತ್ಸಾಹದಿಂದ ಅವರನ್ನು ಆಚಾರ್ಯರಾಗಿ ನೇಮಿಸಿಕೊಂಡಿತು. ಜರ್ಮನ್ ಭಾಷೆ ಮತ್ತು ಸಾಹಿತ್ಯ, ತತ್ವಜ್ಞಾನಗಳನ್ನವರು ಕಲಿಸುತ್ತಿದ್ದರು. ಸಂನ್ಯಾಸಿಯಾದುದರಿಂದ ಸಂಬಳ ತೆಗೆದುಕೊಳಲಿಲ್ಲ. ಅವರ ಅಶನ ವಸನದ ವೆಚ್ಚವನ್ನಷ್ಟು ವಿಶ್ವವಿದ್ಯಾಲಯ ನೋಡಿಕೊಳ್ಳುತ್ತಿತ್ತು. ಆದರೆ

ಒಂದೇ ವರ್ಷದಲ್ಲಿ ಅವರು ಆ ಪದವಿಯನ್ನು ಬಿಡಬೇಕಾಯಿತು. ಸ್ತ್ರೀ-ಪುರುಷ ವಿದ್ಯಾರ್ಥಿಗಳನ್ನು ಕಟ್ಟುನಿಟ್ಟಾಗಿ ಪ್ರತ್ಯೇಕಿಸಿಡುವುದರಲ್ಲಿ ಅವರು ತೋರಿಸಿದ ಶೈಥಿಲ್ಯ ಅವರನ್ನು ಹಿರಿಯರಿಗೆ ಅಪ್ರಿಯವಾಗಿ ಮಾಡಿತ್ತು.

ಅಗೇಹಾನಂದರ ಜೀವನದ ಒಂದು ಸಾರ್ಥಕ ಕ್ಷಣ ೧೯೫೧ ರಲ್ಲಿ ದಿಲ್ಲಿಯಲ್ಲಿ ಜರುಗಿದ ವಿಶ್ವ ಸಾಧು ಸಮ್ಮೇಲನ ಕಾಲದಲ್ಲಿ ಒದಗಿತು. ಆ ಸಮ್ಮೇಲನದಲ್ಲಿ ಹಳೇ ಕಂಪನಿ ಉದ್ಯಾನದಿಂಡ ಹೊರಟ ಸಹಸ್ರ ಸಹಸ್ರ ಸಾಧುಗಳ ಮೆರವಣಿಗೆಯಲ್ಲಿ ಎಲ್ಲರಿಗಿಂತ ಮುಂದಿದ್ದವರೆಂದರೆ ಸ್ವಾಮಿ ಅಗೇಹಾನಂದರು. ತಮ್ಮ ಗುರುಪೀಠ ತಮಗೆ ಮನ್ನಣೆ ಕೊಡದಿದ್ದರೇನಾಯಿತು ? ಈ ಸಾಧುಗಳು ತಮ್ಮ ಯೋಗ್ಯತೆಯನ್ನರಿತುಕೊಂಡಿದ್ದಾರಲ್ಲ ಎನಿಸಿರಬೇಕು ಅಗೇಹಾನಂದರಿಗೆ.

ಇನ್ನೊಂದು ಸಾರ್ಥಕತೆಯ ಕ್ಷಣವೆಂದರೆ ಗೋವಿಂದ ಮಾಲವೀಯರು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ತುಲನಾತ್ಮಕ ತತ್ವಜ್ಞಾನ ಕಲಿಸಲು ಅವರನ್ನು ಕರೆದಾಗಿನದು. ಬುದ್ಧನಿಂದಾರಂಭಿಸಿ ಇಂದಿನ ವರೆಗೂ ಭಾರತದಲ್ಲಿ ಧಾರ್ಮಿಕ ವಿಚಾರದಲ್ಲಿ ಪ್ರಮುಖರಾದವರೆಲ್ಲರೂ ಕಾಶಿಯಲ್ಲಿ ತಮ್ಮ ಜಯಭೇರಿ ಮೊಳಗಿಸಿದ್ದಾರೆ. ವಿದೇಶೀ ಹಿಂದುವಾದ ಅಗೇಹಾನಂದರಿಗೆ ಈ ಗೌರವ ಅಮೂಲ್ಯವೆನಿಸಿದ್ದು ಸಹಜವೇ. ೧೯೫೪ರ ವರೆಗೆ ಅವರು ಅಲ್ಲಿ ಆಚಾರ್ಯರಾಗಿದ್ದರು.

೧೯೫೪ ರಲ್ಲಿ ಪ್ರಯಾಗದಲ್ಲಿ ನಡೆದ ಕುಂಭಮೇಳದಲ್ಲಿ ಅಗೇಹಾನಂದರಿಂದ ಒಂದು ವಿಸ್ಮಯಕರ ಕೃತಿ ಜರುಗಿಹೋಯಿತು. ಸಾಧುಗಳು ಕುಂಭಸ್ನಾನಕ್ಕೆ ಮೆರವಣಿಗೆಯಲ್ಲಿ ಸಾಗಿದಾಗ ಒಮ್ಮೆಲೆ ಅಸಾಧ್ಯ ಗೊಂದಲವೆದ್ದು ಪ್ರೇಕ್ಷಕ ವರ್ಗದಲ್ಲಿ ಅನೇಕರು ನೆಲಕ್ಕೆ ಬಿದ್ದರು. ನೂಕುನುಗ್ಗಲಿನಲ್ಲಿ ಸಾಧುಗಳೂ ಉಳಿದವರೂ ಅವರನ್ನು ಮೆಟ್ಟಿದರು. ಸ್ವಲ್ಪ ಸಮಯದಲ್ಲೆ ಮುನ್ನೂರು ಜನ ಸ್ತ್ರೀ-ಪುರುಷ-ಬಾಲಕರ ಹೆಣ ಬಿತ್ತು. ಈ ನಿಟ್ಟಿನಲ್ಲಿ ಸ್ನಾನ ಘಟ್ಟದಿಂದ ಕಾರಿನಲ್ಲಿ ಹಿಂತಿರುಗುತ್ತಿದ್ದ ಅಗೇಹಾನಂದರನ್ನು ಕಂಡು ತರುಣ ಸಂನ್ಯಾಸಿಯೊಬ್ಬ ಆರ್ತಭಾವದಿಂದ "ನನ್ನನ್ನು ಕಾಪಾಡಿ, ಈ ಬಡಪಾಯಿಗಳನ್ನು ಕಾಪಾಡಿ!" ಎಂದು ಕೂಗಿಕೊಂಡ. ಅಗೇಹಾನಂದರು ತಟ್ಟನೆ ಕಾರಿನಿಂದ ಜಿಗಿದರು. ಎರಡೂ ಕೈಗಳನ್ನೆತ್ತಿ "ಶಾಂತರಾಗಿರಿ! ಕೂಡಿರಿ! ಕೂಗಬೇಡಿ! ಏನೂ ಆಗಿಲ್ಲ" ಎಂದು ಘೋಷಿಸಿದರು. ಆಗ ಅವರ ಕಂಠದಿಂದ ಯಾವ ದೈವೀ ವಾಣಿ ಮಾತಾಡುತ್ತಿತ್ತೋ, ತತ್‌ಕ್ಷಣ ಎಲ್ಲ ಕೋಲಾಹಲ ಶಾಂತವಾಗಿಹೋಯಿತು. ಸರಾಗವಾಗಿ ಸಂತ್ರಸ್ತರನ್ನು ಪಾರು ಮಾಡುವ ಕೆಲಸ ನಡೆಯಿತು.

ಕುಂಭಮೇಳದಲ್ಲಿ ಸಾವಿರಗಟ್ಟಳೆ ಜನರ ಸಭೆಯಲ್ಲಿ ಸ್ವಾಮಿ ಅಗೇಹಾನಂದರು ಪಂಡಿತರೊಡನೆ ಶಾಸ್ತ್ರಚರ್ಚೆ ಮಾಡಿದರು. ಶಂಕರಾಚಾರ್ಯರು ಸ್ಥಾಪಿಸಿದ ಇನ್ನೊಂದು ಪ್ರಧಾನಪೀಠವಾದ ಗೋವರ್ಧನ ಪೀಠದ ಜಗದ್ಗುರು ಶಂಕರಾಚಾರ್ಯರು ಅವರನ್ನು ಕರೆಸಿದರು. ಅಗೇಹಾನಂದರು ಅವರೊಡನೆ ಸಂಸ್ಕೃತದಲ್ಲಿ ಮೋಕ್ಷವಿಚಾರ ಸಂನ್ಯಾಸದ ಅಗತ್ಯ-ಅನಗತ್ಯಗಳ ಬಗ್ಗೆ ವಾದ ಮಾಡಿದರು. ಶೃಂಗೇರಿಯಲ್ಲಿ ಆದ ನಿರಾಶೆ ಇಲ್ಲಿ ಪರಿಮಾರ್ಜನೆ ಹೊಂದಿದಂತಾಯಿತು.

ಹಿಂದೂ ವಿಶ್ವವಿದ್ಯಾಲಯದಿಂದ ನಿವೃತ್ತರಾದ ಮೇಲೆ ಸ್ವಾಮೀ ಅಗೇಹಾನಂದರು ಕೆಲ ಕಾಲ ನಾಲಂದದಲ್ಲಿ ಹೊಸದಾಗಿ ಸ್ಥಾಪಿತವಾದ ಬೌದ್ಧ ವಿಹಾರದಲ್ಲಿ ಪಾಠ ಹೇಳಿ ಅನಂತರ ತಾಯಿಲಂಡಿನ ರಾಜಧಾನಿ ಬಂಗಕೋಕ ವಿದ್ಯಾಲಯದಲ್ಲಿ ಮತ್ತು ಜಪಾನಿನ ಕ್ಯೋಟೋ ವಿಶ್ವವಿದ್ಯಾಲಯದಲ್ಲಿ ಭಾರತೀಯ ತತ್ವಜ್ಞಾನವನ್ನು ಕುರಿತು ಪಾಠ ಹೇಳಿದರು. ಆ ಮೇಲೆ ಅಮೇರಿಕಕ್ಕೆ ಹೋಗಿ ವಾಶಿಂಗ್‌ಟನ್ ವಿಶ್ವವಿದ್ಯಾಲಯದ ಪೌರಸ್ತ್ಯ ಇನ್‌ಸ್ಟಿಟ್ಯೂಟಿನಲ್ಲಿ ಕಲಿಸತೊಡಗಿದರು. ಅಲ್ಲಿ ಅವರು ಹಿಂದೀ ಮತ್ತು ಸಂಸ್ಕೃತ ವರ್ಗಗಳನ್ನು ಪ್ರಾರಂಭಿಸಿದಾಗ ಹೆಸರು ಕೊಡಲು ಬಂದ ವಿದ್ಯಾರ್ಥಿಗಳ ಸಂಖ್ಯೆನೋಡಿ ಅವ

ರಿಗೇ ಆಶ್ಚರ್ಯವಾಯಿತು.

ತಾವು ಹುಟ್ಟಿದ ಧರ್ಮವನ್ನು ತೊರೆದು ಬೇರೆ ಧರ್ಮವನ್ನವಲಂಬಿಸುವವರಲ್ಲಿ ತಮ್ಮ ಹೊಸ ಧರ್ಮದ ಬಗ್ಗೆ ಆ ಧರ್ಮದಲ್ಲಿ ಹುಟ್ಟಿದವರಿಗಿಂತಲೂ ಹೆಚ್ಚು ದುರಭಿಮಾನ ಕಾಣಿಸುವುದುಂಟು. ಅಗೇಹಾನಂದರು ಹಾಗಲ್ಲ. ಹಿಂದೂ ಧರ್ಮದ ಮತ್ತು ಭಾರತದ ಬಗ್ಗೆ ಅವರಲ್ಲಿ ಆದರವೆಷ್ಟೇ ಇದ್ದರೂ ಅವರು ಅವುಗಳಲ್ಲಿರುವ ದೋಷಗಳನ್ನು ಬೆಳಕಿಗೆ ಹಿಡಿಯಲು ಹಿಂದುಮುಂದು ನೋಡಿಲ್ಲ. ಶ್ರೀ ರಾಮಕೃಷ್ಣ ಮಠದ ಬಗ್ಗೆ ಅವರು ಕೆಲ ಕಟು ಮಾತುಗಳನ್ನು ಹೇಳುತ್ತಾರೆ. ಅದರ ಸಮಾಜ ಸೇವೆ, ಅದರ ಸಂನ್ಯಾಸಿಗಳ ಚಾರಿತ್ರ್ಯ ಇವೆಲ್ಲವುಗಳು ಪ್ರಶಂಸಾರ್ಹವಾಗಿದ್ದರೂ ರಾಮಕೃಷ್ಣ ಪರಮಹಂಸರೇ ಚರಮ ಮತ್ತು ಪರಮ ಸತ್ಯವನ್ನು ಕಂಡವರು ಎಂಬ ಹಟವಾದದಿಂದ ಅವರ ಅನುಯಾಯಿಗಳು ಔದಾರ್ಯವನ್ನು ಕಳೆದುಕೊಂಡಿದ್ದಾರೆಂದು ಅಗೇಹಾನಂದರು ವಿಷಾದಿಸುತ್ತಾರೆ. ಒಟ್ಟಿನ ಮೇಲೆ ಭಾರತ, ಅದರ ಧರ್ಮ ಸಂಸ್ಕೃತಿಗಳ ಮೇಲೆ ಇದೀಗ ಹೊಸದಾಗಿ ಅಭಿಮಾನಪಡಲು ಕಲಿತ ಇಂಗ್ಲೀಷ್ ಶಿಕ್ಷಣಹೊಂದಿದ ವರ್ಗದಲ್ಲಿ ಹೆಚ್ಚಾಗಿ ಅಗೇಹಾನಂದರು ಈ ಮನೋವೃತ್ತಿಯನ್ನು ಕಂಡಿದ್ದಾರೆ. ಈ ನವಾಭಿಮಾನಿಗಳಿಗೆ ಸಂಸ್ಕೃತ ಗೊತ್ತಿಲ್ಲ, ತಮ್ಮ ಧರ್ಮ ಸಂಸ್ಕೃತಿಗಳ ಮೂಲಗ್ರಂಥಗಳನ್ನು ಅವರು ಓದಿಲ್ಲವಾದರೂ ಉದ್ದಾಮವಾದ ಅಸಹನಾ ಪೂರ್ವಕ ಅಭಿಮಾನ ಮಾತ್ರ ಇದೆ. ಇವರಿಗಿಂತಲೂ ಹಳೇ ಸಂಪ್ರದಾಯದಲ್ಲಿ ಪಳಗಿದ ಸಂಸ್ಕೃತ ಪಂಡಿತರಲ್ಲಿ ಪ್ರತಿವಾದಿಗಳ ಬಗ್ಗೆ ಹೆಚ್ಚು ಸೈರಣೆ ಕಾಣಿಸುತ್ತದೆನ್ನುತ್ತಾರೆ ಅಗೇಹಾನಂದರು.

ಅಗೇಹಾನಂದರು ಈಗ ಪೌರಾಸ್ತ್ಯ ಪಾಶ್ಚಾತ್ಯರೊಳಗೆ ತಿಳಿವಳಿಕೆ ಹೆಚ್ಚಿಸುವುದಕ್ಕಾಗಿ ದುಡಿಯುತ್ತಿದ್ದಾರೆ. ಅವರು ಭಾರತೀಯ ಶಾಸ್ತ್ರಗಳ ಬಗ್ಗೆ ಈಗಾಗಲೆ ಐವತ್ತು ಮಿಕ್ಕಿ ಲೇಖಗಳನ್ನು ಬರೆದಿದ್ದಾರೆ. ತಂತ್ರಶಾಸ್ತ್ರದ ಬಗ್ಗೆ ಒಂದು ಗ್ರಂಥ ಬರೆಯುತ್ತಿದ್ದಾರೆ. ಪೌರಸ್ತ್ಯ ದೇಶಗಳು ರಹಸ್ಯಪೂರ್ಣವಾದವು ಎಂಬ ಪಾಶ್ಚಾತ್ಯ ಭಾವನೆಯನ್ನವರು ನಿರಾಕರಿಸುತ್ತಾರೆ. ಅಗ್ಗದ ಪುಸ್ತಕಗಳನ್ನೋದಿ ಪೂರ್ವದೇಶಗಳ ಬಗ್ಗೆ ಪಾಶ್ಚಾತ್ಯರು ಮಾಡಿಕೊಂಡ ಭ್ರಾಮಕ ಕಲ್ಪನೆಯದೆಂದು ಅವರ ಮತ. ಆದ್ದರಿಂದ ಯೋಗ, ಪುನರ್ಜನ್ಮ ಮೊದಲಾದವುಗಳ ಬಗ್ಗೆ ತಮ್ಮೊಡನೆ ಚರ್ಚಿಸಬರುವವರಿಗೆ ಅವರು ಹೇಳುವುದಿದು: "ಮೊದಲತಿ ಸಂಸ್ಕೃತ ಕಲಿತು ಮೂಲ ಗ್ರಂಥಗಳನ್ನು ಮನನ ಮಾಡಿರಿ. ಆಮೇಲೆ ಬನ್ನಿರಿ."

ಅಗೇಹಾನಂದರು ಪುನಃ ಏಶಿಯಕ್ಕೆ ಬರುವ ಉದ್ದೇಶವಿಟ್ಟುಕೊಂಡಿದ್ದಾರೆ. ★


"ಏನು ನಮ್ಮ ಮಗಳ ಮದುವೆ ವಿಚಾರ ತಲೇನೇ ಹಾಕ್ತಾ ಇಲ್ಲ ನೀವು ?" ಎಂದಳು ಹೆಂಡತಿ.

"ಏನವಸರ ಈಗ? ಸರಿಯಾದ ವರ ಬರೋತನಕ ಕಾಯೋಲ್ಲ ಅಂತಾಳೇನು ಅವಳು ?" ಎಂದ ಗಂಡ.

"ಯಾಕೆ ಕಾಯೋದು ?" ಎಂದಳು ಹೆಂಡತಿ. "ನಾ ಕಾದಿದ್ನೆ ?"

ಗಾಂಧೀಜಿ ಅಡವೀಪಾಲಾದಾಗ!

ಪಿ. ರಾಮಸ್ವಾಮಿ



೧೯೨೧. ಗಾಂಧೀಜಿಯವರು ಅಸ್ಸಾಂ ಪ್ರಾಂತದಲ್ಲಿ ಪ್ರವಾಸ ಕೈಕೊಂಡಿದ್ದರು. ಆ ಪ್ರಾಂತದಲ್ಲಿ ಸುಖವಾಗಿ ರೈಲು ಪ್ರಯಾಣ ಮಾಡಿ ಮುಗಿಸುವುದೆಂದರೆ ಒಂದು ಗಂಡಾಂತರದಿಂದ ಪಾರಾದ ಹಾಗೇ ಎಂಬ ಮಾತು ಜನಜನಿತವಾಗಿತ್ತು. ಬೆಟ್ಟ ಗುಡ್ಡಗಳ ನಡುವೆ ಕಣಿವೆ ಕಿಬ್ಬೆಗಳನ್ನು ಹಾದು ಹೋಗುವಾಗ ರೈಲು ಕಂಬಿತಪ್ಪಿ ಪಕ್ಕಕ್ಕೆ ಹೊರಳುವುದಾಗಲೀ, ಬಾಲದ ಡಬ್ಬಿಗಳು ಕಳಚಿಕೊಂಡು ಹಿಂದೆಯೇ ಉಳಿಯುವುದಾಗಲೀ ಅಸಂಭವವೇನಿರಲಿಲ್ಲ.

ಅಂತಹ ರೈಲೊಂದನ್ನು ಗಾಂಧೀಜಿ ಹತ್ತಿದರು. ರಾತ್ರಿ ಪ್ರಯಾಣ. ಮಾರ್ಗದ ಉದ್ದಕ್ಕೂ ಸಣ್ಣ ಸಣ್ಣ ಸ್ಟೇಷನ್ನುಗಳೇ. ಇಳಿಯುವವರೂ ಇಲ್ಲ, ಹತ್ತುವವರೂ ಇಲ್ಲ. ನಿದ್ದೆಯ ವೇಳೆಯಾಯಿತು. ಗಾಂಧೀಜಿ ಮಲಗಿದರು. ಜೊತೆಗೇ ಪ್ರಯಾಣ ಮಾಡುತ್ತಿದ್ದ ಅವರ ಅನುಚರ ಕೃಷ್ಣದಾಸ ಮಗ್ಗುಲ ಡಬ್ಬಿಯಲ್ಲಿ ಮಲಗಿದ್ದ. ರಾತ್ರಿ ಸುಮಾರು ೧೨ ರ ಸಮಯ. ಘೋರಾರಣ್ಯದ ಮಧೆ ವೇಗವಾಗಿ ಹೋಗುತ್ತಿದ್ದ ರೈಲಿಗೆ ಒಮ್ಮೆಗೇ ಸಿಡಿಲು ಬಡಿದಂತಾಯ್ತು. ಎಲ್ಲರೂ ಗಾಬರಿಗೊಂಡು ಇಳಿದು ನೋಡುವಲ್ಲಿ ಎಂಜಿನ್ನಿನ ತಲೆಗೆ ಎರಡು ಡಬ್ಬಿಗಳು ಸಿಕ್ಕಿ ಡಿಕ್ಕಿಯಾಗಿಡೆ. ಅದೇ ದಾರಿಯಲ್ಲಿ ಹೊರಟ ಹಿಂದಿನ ರೈಲು ತನ್ನ ಎರಡು ಡಬ್ಬಿಗಳನ್ನು ಕಳಚಿಕೊಂಡುಬಿಟ್ಟಿತ್ತು. ಸರಿ, ಮಾಡುವುದೇನು? ಮುಂದಿನ ಡಬ್ಬಿಗಳನ್ನು ತಳ್ಳಿಕೊಂಡು ರೈಲು ತನ್ನ ಪ್ರಯಾಣವನ್ನು ಮುಂದುವರಿಸಿತು.

ಸುಮಾರು ಅರವತ್ತು-ಎಪ್ಪತ್ತು ಮೈಲುಗಳಷ್ಟು ದಾರಿ ಸವೆದಿರಬಹುದು. ಬೆಳಗಿನ ಜಾವದಲ್ಲಿ ಇದ್ದಕ್ಕಿದ್ದಂತೆ ಕೃಷ್ಣದಾಸನಿಗೆ ಎಚ್ಚರವಾಯಿತು. ಕಣ್ಬಿಟ್ಟು ನೋಡಿದರೆ ರೈಲು ನಿಂತಿದೆ. ಯಾವುದೋ ಸಣ್ಣ ಸ್ಟೇಷನ್. ಜನವೆಲ್ಲ ಇಳಿದು ಕೂಗಾಡುತ್ತಿದ್ದಾರೆ. ಏನೆಂದು ವಿಚಾರಿಸಿದಲ್ಲಿ—"ಗಾಂಧೀಜಿಯವರು ಮಲಗಿದ್ದ ಡಬ್ಬಿಯೇ ಪತ್ತೆಯಿಲ್ಲ." ಬಾಲದಲ್ಲಿದ್ದ ಆ ಡಬ್ಬಿ ಯಾವ ವೇಳೆಯಲ್ಲಿ,

ಯಾವ ಕಗ್ಗಾಡಿನ ಮಧ್ಯ ಭಾಗದಲ್ಲಿ ಕಳಚಿಕೊಂಡು ಬಿಟ್ಟಿತ್ತೊ? ಭಯವಿಹ್ವಲರಾದ ರೈಲ್ವೆ ಅಧಿಕಾರಿಗಳು ತಂತಮ್ಮಲ್ಲೇ ಸಮಾಲೋಚನೆ ನಡೆಸಿ ರೈಲು ಹಿಂದಕ್ಕೆ ಹೊರಡುವುದೆಂತಲೂ ಕಳಚಿಕೊಂಡ ಡಬ್ಬಿ ಸಿಕ್ಕಾಗ ತಗಲಿಸಿಕೊಂಡು ಬರತಕ್ಕದ್ದೆಂತಲೂ ನಿರ್ಧರಿಸಿದರು. ರೈಲು ಹಿಂದಕ್ಕೆ ಹೊರಟಿತು. ಎಲ್ಲರ ಮನಸ್ಸಿನಲ್ಲೂ ಕಳವಳ, ಭಯ. ಕೃಷ್ಣದಾಸನ ದುಗುಡವಂತೂ ಹೇಳತೀರದು. "ಘೋರಾರಣ್ಯ ಮಧ್ಯದಲ್ಲಿ, ನಿರ್ಜನ ಪ್ರದೇಶದಲ್ಲಿ ಆ ಮುರುಕು ಡಬ್ಬಿ ಎಲ್ಲಿ ಉಳಿದಿರಬಹುದು? ಒಬ್ಬೊಂಟಿಗರಾಗಿ ಮೈಮರೆತು ನಿದ್ರೆ ಮಾಡುತ್ತಿರುವ ಗಾಂಧೀಜಿಯವರ ಸ್ಥಿತಿ ಏನಾಗಿರಬಹುದು? ನಿಶೆಯಲ್ಲಿ ಚರಿಸುವ ಯಾವುದೋ ದುಷ್ಟ ಮೃಗವೊಂದು ನರಮಾಂಸದ ವಾಸನೆ ಹಿಡಿದು ಬಂದಿದ್ದರೆ—"

ಅರ್ಧ ಘಂಟೆ ಕಳೆಯುವ ವೇಳೆಗೆ ಕಳಚಿಕೊಂಡಿದ್ದ ಡಬ್ಬಿಗೆ ರೈಲಿನ ಬಾಲ ಡಿಕ್ಕಿ ಹೊಡೆಯಿತು. ಜನರೆಲ್ಲ ಇಳಿದು ಡಬ್ಬಿಯ ಕಡೆ ಹೊರಟರು. ಎಲ್ಲರಿಗಿಂತ ಮುಂದಾಗಿ, ಅಂಗೈಯಲ್ಲಿ ಜೀವ ಹಿಡಿದುಕೊಂಡು, ಬಹು ಪ್ರಯಾಸದಿಂದ ಉಕ್ಕಿ ಬರುತ್ತಿದ್ದ ಅಳಲನ್ನು ಹತ್ತಿಕ್ಕಿ ಕೃಷ್ಣದಾಸ ಡಬ್ಬಿಯನ್ನು ಸಮೀಪಿಸಿದ. ಕಿಟಕಿಯಲ್ಲೇ ಕಾಣಿಸಿತು ಗಾಂಧೀಜಿಯ ಮುಖ! ನಗುಮುಖ! ಹಾಲುಹಸುಳೆಯಂತೆ ಗಹಗಹಿಸಿ ನಗುತ್ತಿದ್ದಾರೆ! "ಹಿಂದಿನಿಂದ ಬರುವ ರೈಲು ನನ್ನನ್ನು ಮುಂದೆ ತಳ್ಳಿಕೊಂಡು ಹೋಗಬಹುದೆಂದು ಬಗೆದಿದ್ದೆ. ಆದರೆ ನೀವೇ ಬಂದಿರಿ" ಎನ್ನುತ್ತಾರೆ! *



ಅರಸನ ತೀರ್ಪು

ಬಹಳ ಕಾಲದ ಹಿಂದೆ ಇಬನ್ ಸೌದ್ ಅರೇಬಿಯಾ ದೇಶವನ್ನು ಆಳುತ್ತಿದ್ದಾಗ ಒಂದಾನೊಂದು ದಿನ ಆತನು ಒಡ್ಡೋಲಗದಲ್ಲಿರಲು ಒಬ್ಬ ಬಾಲೆ ಬಂದು ಆತನೆದುರು ಮೊರೆಯಿಟ್ಟಳು: "ಖಾವಂದ್, ನನ್ನ ಪತಿ ಖರ್ಜೂರದ ಮರದಡಿಯಲ್ಲಿ ಕೆಲಸ ಮಾಡುತ್ತಿದ್ದಾಗ ನಿಮ್ಮ ನೌಕರನೊಬ್ಬನು ಮರದ ಮೇಲಿನಿಂದ ನನ್ನ ಪತಿಯ ಮೇಲೆ ಬಿದ್ದು ಕೊಂದನು."

"ನಿನ್ನ ಪತಿಯನ್ನು ಕೊಂದದ್ದಕ್ಕಾಗಿ ಆತನಿಂದ ಹಣದ ರೂಪದಲ್ಲಿ ಪರಿಹಾರವನ್ನು ಸ್ವೀಕರಿಸುತ್ತೀಯಾ?" ಎಂಬುದಾಗಿ ಅರಸ ಕೇಳಿದ.

"ಖಾವಂದರೇ, ಜೀವಕ್ಕೆ ಜೀವ ಎಂದು ಶಾಸ್ತ್ರವಿದೆ. ನನ್ನ ಪತಿಯನ್ನು ಕೊಂದುದರ ತೃಪ್ತಿಗಾಗಿ ಅವನ ಜೀವವನ್ನೂ ತೆಗೆಯಬೇಕು," ಎಂದಳಾಕೆ.

ಸ್ವಲ್ಪ ಚಿಂತಿಸಿ ಅರಸನು, "ಅಮ್ಮಾ! ನೀನು ನುಡಿಯುತ್ತಿರುವುದು ನ್ಯಾಯವಾಗಿದೆ. ಜೀವಕ್ಕೆ ಬದಲು ಜೀವವನ್ನೇ ತೆಗೆಯಬೇಕು. ನ್ಯಾಯಸಮ್ಮತವಾಗಿ ಅವನನ್ನು ನಿನಗೊಪ್ಪಿಸುತ್ತೇನೆ. ಆದರೊಂದು ನಿಬಂಧನೆ. ನಿನ್ನ ಪತಿಯ ಮೇಲೆ ಅವನು ಬಿದ್ದಂತೆ ಅದೇ ಮರದ ಕೆಳಗೆ ಅವನ ಮೇಲೆ ನೀನು ಬೀಳಬೇಕು" ಎಂದ. ಆ ಹೆಣ್ಣು ತನ್ನ ಉದ್ಧಟತನಕ್ಕಾಗಿ ಮರುಗಿ ಕ್ಷಮಾಪಣೆ ಕೋರಿ ಪರಿಹಾರ ಧನದೊಡನೆ ತೆರಳಿದಳು.

ಸಂಗ್ರಹ: ಬಿ. ಆರ್. ಶಂಕರ್

ಜ್ಯೋತಿಷ್ಯ –



ಕ್ರಿ. ಪೂ. ೬೧ರ ಶಿಲಾವ. ಯು ಚಿತ್ರ

ಮಿಥ್ಯವೋ ಮೋಸವೋ ಸತ್ಯವೋ?

ಪಾವೆಂ

ಪ್ರಧಾನ ಮಂತ್ರಿ ನೆಹರೂ ಅವರು ಅದರ ವಿರುದ್ಧ ದಿನ ಬಿಟ್ಟು ದಿನ ಪ್ರಚಾರ ಸತ್ರವನ್ನೇ ನಡೆಸುತ್ತಿದ್ದಾರೆ; ವಿಜ್ಞಾನಿಗಳು ಅದನ್ನು ಬರಿ ಬೂಟಾಟಿಕೆಯೆಂದು ತಿರಸ್ಕರಿಸುತ್ತಾರೆ; ಆಧುನಿಕರೆನಿಸುವವರು ಅದರಲ್ಲಿ ತಮಗೆ ವಿಶ್ವಾಸವಿಲ್ಲೆಂದು ಸಾರುತ್ತಾರೆ. ಆದರೆ ಜ್ಯೋತಿಷ ಶಾಸ್ತ್ರ ಎಂದಿಗಿಂತಲೂ ಬಲಾಢ್ಯವಾಗುತ್ತಲೇ ನಡೆದಿದೆ. ನೆಹರೂ ಅವರ ಪಕ್ಷದ ಅನೇಕ ಅಮಾತ್ಯರೇ ಜ್ಯೋತಿಷದಲ್ಲಿ ಅಂತರಂಗ ಬಹಿರಂಗ ವಿಶ್ವಾಸವುಳ್ಳವರಾಗಿದ್ದಾರೆ. ಉತ್ತರಪ್ರದೇಶದ ಹಿಂದಿನ ಮುಖ್ಯಮಂತ್ರಿ ಡಾ. ಸಂಪೂರ್ಣಾನಂದರು ಜ್ಯೋತಿಷದಲ್ಲಿ ತಮಗೆ ವಿಶ್ವಾಸವುಂಟೆಂದು ಹೇಳಲು ನಾಚುವುದಿಲ್ಲ; ನೆಹರೂ ಮಂತ್ರಿಮಂಡಲದಲ್ಲಿ ಹಿಂದೆ ಇದ್ದ ಡಾ. ಕೆ. ಎಂ ಮುನಶಿಯವರು ಕೂಡ. ಸದ್ಯ ನೆಹರೂ ಮಂತ್ರಿ ಮಂಡಲದಲ್ಲಿರುವ ಕನಿಷ್ಠ ಒಬ್ಬ ಹಿರಿಯ ಮಂತ್ರಿಗೆ ಕಾಯಂ ಜ್ಯೋತಿಷ ಸಲಹೆಗಾರನಿದ್ದಾನೆ.

ಹಿಂದುಳಿದ ಭಾರತದಲ್ಲೆ ಹೀಗಾಗಿದೆಯೆಂದಲ್ಲ. ಪ್ರಗತಿಪರ ರಾಷ್ಟ್ರಗಳಲ್ಲಿ ಹಿರಿಯದೆನಿಸಿದ ಅಮೇರಿಕದಲ್ಲಿ ಇಂದು ಏನಿಲ್ಲೆಂದರೂ ೫,೦೦೦ ಜ್ಯೋತಿಷಿಗಳು ರಾಶಿ ರಾಶಿ ಹಣ ಗಳಿಸುತ್ತಿದ್ದಾರೆಂದು "ಲೈಫ್" ಪತ್ರಿಕೆ ವರದಿ ಮಾಡಿದೆ. ಅಲ್ಲಿ ಅನೇಕ ಶೇರ್ ಬಾಜಾರಿನ ವ್ಯಾಪಾರಿಗಳು ಜ್ಯೋತಿಷಿಗಳ ಸಲಹೆ ಕೇಳಿಯೆ ಕೊಳ್ಳುತ್ತಾರೆ, ಮಾರುತ್ತಾರೆ. ಕೋಟಿಗಟ್ಟಳೆಯಲ್ಲಿ ಪ್ರಸಾರವನ್ನೆಣಿಸುವ ಐದು ಬ್ರಿಟಿಶ್ ಪತ್ರಿಕೆಗಳು ದೈನಿಕ ಭವಿಷ್ಯಗಳನ್ನು ಎಡೆಬಿಡದೆ ಪ್ರಕಟಿಸುತ್ತವೆ. ಫ್ರಾನ್ಸಿನಲ್ಲಿ ಜ್ಯೋತಿಷ್ಯದ ಶಾಲೆಗಳಿವೆ. ಇಟೆಲಿಯಲ್ಲಿ ಪಾದ್ರಿಗಳು ಗುಟ್ಟಾಗಿ ಜ್ಯೋತಿಷ ಕಲಿಯುತ್ತಾರೆ. ಜರ್ಮನ್ನರಲ್ಲಿ ಸೇಕಡಾ ೨೭ ಜನರಿಗೆ ಜ್ಯೋತಿಷದಲ್ಲಿ ವಿಶ್ವಾಸವುಂಟೆಂದು ಮತಗಣನೆಯಿಂದ ತಿಳಿದಿದೆ

ಜಪಾನಿನಲ್ಲಿ ನಕ್ಷತ್ರ ನೋಡದೆ ಹಡಗು ನೀರಿಗಿಳಿಯದು. ಸಿಂಹಳದಲ್ಲಿ ಮುಹೂರ್ತ ನೋಡದೆ ಯಾವ ರಾಜಕೀಯ ಕೆಲಸಗಳೂ ಪ್ರಾರಂಭವಾಗುವುದಿಲ್ಲ. ಭಾರತದಲ್ಲಿ ಆಷಾಢ ಅಮಾವಾಸ್ಯೆಯ ಮಧ್ಯರಾತ್ರಿಯ ಅಮಂಗಲ ಮುಹೂರ್ತದಲ್ಲಿ ಸ್ವಾತಂತ್ರ್ಯವನ್ನು ಸ್ವೀಕರಿಸದೆ ತಮ್ಮ ಹೇಳಿಕೆಯಂತೆ ಆ ದಿನವನ್ನು ಮುಂದೆ ಹಾಕಿದ್ದರೆ ಅನಂತರ ಒದಗಿದ ರಕ್ತಪಾತ ಒದಗುತ್ತಿರಲಿಲ್ಲೆಂದು ಜ್ಯೋತಿಷಿಗಳು ಹೇಳಿದರು. ಬರ್ಮಾದ ಪ್ರಧಾನಿಗೆ ಜ್ಯೋತಿಷದಲ್ಲಿರುವ ಅವಿ

ಚಲ ವಿಶ್ವಾಸದಿಂದ ಸ್ವಾತಂತ್ರ್ಯದ ದಿನವನ್ನು ಸುಮುಹೂರ್ತ ನೋಡಿ ಗೊತ್ತುಪಡಿಸಲಾಯಿತು. ಆದರೂ ಅಲ್ಲಿ ಇಂದಿಗೂ ಅಂತರ್ಯುದ್ಧ ನಡೆದಿದೆಯೆಂಬ ಮಾತು ಬೇರೆ.

ನಿಜ ಕೇಳಿದರೆ ಕಮ್ಯುನಿಸ್ಟ್ ಜಗತ್ತಿನ ಹೊರಗೆ ನಾರ್ವೆ ಮತ್ತು ಸೈಪ್ರಸ್ ದ್ವೀಪದಲ್ಲಿ ಮಾತ್ರ ಜ್ಯೋತಿಷಿಗಳು ಕಬ್ಬಿಣದಂಗಡಿಯ ನೊಣಗಳಂತಿದ್ದಾರೆ. ಉಳಿದೆಲ್ಲ ಕಡೆ ನೂರು ವರ್ಷಗಳಿಗೆ ಹಿಂದಿದ್ದುದಕ್ಕಿಂತಲೂ ಇಂದು ಜ್ಯೋತಿಷ್ಯದ ಪ್ರಭಾವ ಹೆಚ್ಚಿದೆ

ಜ್ಯೋತಿಷ ಬಹಳ ಹಳೇ ಶಾಸ್ತ್ರ. ಯಜುರ್ವೇದದಲ್ಲಿ ಬರುವ ನಕ್ಷತ್ರ ವಿಚಾರಗಳನ್ನು ನೋಡಿದರೆ ಋಷಿಗಳು ಈ ಅಂಶವನ್ನು ಗಾಢವಾಗಿ ಅಭ್ಯಸಿಸಿದ್ದರೆಂದು ಅರ್ಥವಾಗುತ್ತದೆ. ಅದಕ್ಕೂ ಮೊದಲೇ ಇಜಿಪ್ಟಿನಲ್ಲಿ ಅದು ಪ್ರಚಲಿತವಾಗಿತ್ತೆಂದು ಭಾವಿಸಲಾಗಿದೆ. ಬೆಬಿಲೋನಿಯದವರು ಈ ಶಾಸ್ತ್ರವನ್ನು ಬಹಳ ಸುಧಾರಿಸಿದರು. ತುರ್ಕಿಯ ನೆಮ್ರೂದ್ ದಾಗ್ ಗುಡ್ಡದಲ್ಲಿ ದೊರೆತ ಪ್ರಾಚೀನ ಗ್ರೀಕ್ – ಇರಾಣಿ ಸಂಸ್ಕೃತಿಯ ಅವಶೇಷಗಳಲ್ಲಿ ರಾಜ ಅಂತಿಯೋಕನ ಜಾತಕವೊಂದು ದೊರೆತಿದೆ. ಕ್ರಿಸ್ತಪೂರ್ವ ೬೧ ರದೆಂದೆಣಿಸಲಾದ ಈ ಜಾತಕವನ್ನು ಕಲ್ಲಿನಲ್ಲಿ ಕಡೆದ ಸಿಂಹರೂಪ ಫಲಕದಲ್ಲಿ ಕೊರೆಯಲಾಗಿದೆ ಕ್ರಿ. ಶ ನಾಲ್ಕನೇ ಶತಮಾನದೊಳಗೆ ಗ್ರೀಕ್ ಜ್ಯೋತಿಷ ಮತ್ತು ಭಾರತೀಯ ಜ್ಯೋತಿಷಗಳಲ್ಲಿ ಸಾಕಷ್ಟು ವಿಚಾರಗಳ ಕೊಡುಕೊಳೆ ನಡೆದಿತ್ತು. ೨೮ ನಕ್ಷತ್ರಗಳನ್ನಾಧರಿಸಿದ್ದ ವೈದಿಕ ಜ್ಯೋತಿಷ ಆಗ ೧೨ ರಾಶಿಗಳನ್ನು ಆಧಾರವಾಗಿ ಸ್ವೀಕರಿಸಿತು.

ಜ್ಯೋತಿಷವು ಇತಿಹಾಸದ ಮೇಲೆ ಬೀರಿದ ಪ್ರಭಾವ ಚಿಕ್ಕ ಪುಟ್ಟದಲ್ಲ. ಭಾರತದಲ್ಲಿ ಯುದ್ಧಾರಂಭದಿಂದಾರಂಭಿಸಿ ಅನ್ನಪ್ರಾಶನದವರೆಗೆ ಎಲ್ಲವೂ ಜ್ಯೋತಿಷಿಗಳನ್ನು ಕೇಳಿಯೆ ನಡೆಯುತ್ತಿತ್ತೆಂಬುದು ಸರ್ವವಿದಿತವಾದ ಮಾತು. ಗ್ರೀಕರ ಒಂದು ಶಾಖೆಯಾದ ಸ್ಪಾರ್ಟನ್ನರು ವಿಶಿಷ್ಟ ಅನುಕೂಲ ತಿಥಿ ಒದಗಿದಲ್ಲದೆ ಯುದ್ಧಾರಂಭ ಮಾಡಲೊಪ್ಪದ್ದರಿಂದ ಇಡೀ ದೇಶವೇ ಶತ್ರುಗಳಿಂದ ಪೆಟ್ಟು ತಿನ್ನಬೇಕಾಯಿತು. ರೋಮನ್ ಚಕ್ರವರ್ತಿಗಳು ಜ್ಯೋತಿಷವನ್ನು ನಂಬುತ್ತಿದ್ದರೂ ಅದರ ಸಲಹೆ ತಮಗೆ ಮಾತ್ರ ಸಿಗಬೇಕೆಂದು ಬಯಸಿ ಸಾರ್ವಜನಿಕರು ಜ್ಯೋತಿಷ ಕೇಳಕೂಡದೆಂದು ವಿಧಿಸಿದ್ದರು. ಕೆಲವು ಅರಸರು ತಮ್ಮ ಭವಿಷ್ಯ ಹೇಳಿದ ಜ್ಯೋತಿಷಿಗಳು ಇತರರಿಗೆ ಗುಟ್ಟು ತಿಳಿಸಿಯಾರೆಂದು ಅವರನ್ನು ಕೊಲ್ಲಿಸಿದ್ದುಂಟು. ಈಚೆಗಿನ ಇತಿಹಾಸ ಹೇಳಬೇಕಾದರೆ ಹಿಟ್ಲರನು ಜ್ಯೋತಿಷಿಗಳನ್ನು ಕೇಳಿಯೆ ಎರಡನೇ ಮಹಾಯುದ್ಧದ ಪ್ರತಿಯೊಂದು ಹೊಸ ಚಾಲನೆಯನ್ನು ಆರಂಭಿಸುತ್ತಿದ್ದನು. ಜ್ಯೋತಿಷಿಗಳು ಅವನಿಗೆ ಏನು ಹೇಳುತ್ತಿರಬಹುದೆಂದು ತಿಳಿದುಕೊಳ್ಳಲು ಚರ್ಚಿಲ್ಲರೂ ರೂಜವೆಲ್ಟರೂ ಬೇರೆ ಜ್ಯೋತಿಷಿಗಳನ್ನು ನೇಮಿಸಿಕೊಂಡಿದ್ದರು.

ಜ್ಯೋತಿಷಿಗಳೆಲ್ಲರೂ ಜನರ ಅಜ್ಞಾನವನ್ನು ಲಾಭದಾಯಕವಾಗಿ ಉಪಯೋಗಿಸಿಕೊಳ್ಳುವ ಮೋಸಗಾರರಾಗಿದ್ದಾರೆಂದು ತಿಳಿಯಕೂಡದು. ಪ್ರಾಚೀನ ಯುಗದ ಅತಿ ಶ್ರೇಷ್ಠ ವಿಜ್ಞಾನಿಗಳೂ ಗಣಿತ ಶಾಸ್ತ್ರಿಗಳೂ ಖಗೋಳ ಶಾಸ್ತ್ರಿಗಳೂ ಅದರ ಆರಾಧಕರಾಗಿದ್ದರು. ಗ್ರೀಕ್ ವಿಜ್ಞಾನಿ ಪೈಥಾಗರಸ್ ಅದನ್ನು ನಂಬಿದ್ದನು. ಖಗೋಳ ಶಾಸ್ತ್ರದ ದಿಗ್ಗಜ ಪ್ಟೊಲೆಮಿ ಜ್ಯೋತಿಷಿಯೂ ಆಗಿದ್ದನು. ಭೂಮಿ ತಿರುಗುತ್ತದೆ, ಸೂರ್ಯನಲ್ಲ ಎಂದು ಹೇಳಿದ ಏಕಮಾತ್ರ ಭಾರತೀಯ ಖಗೋಳ-ಗಣಿತ ಶಾಸ್ತ್ರಜ್ಞ ಆರ್ಯಭಟ (ಕ್ರಿ. ಶ. ೫ ನೇ ಶತಮಾನ), ಗಣಿತ ಶಾಸ್ತ್ರದಲ್ಲಿ ತನ್ನ ಕಾಲದಲ್ಲಿ ಜಗತ್ತಿನಲ್ಲೇ ಅಪ್ರತಿಮನಾಗಿದ್ದ ಭಾಸ್ಕರಾಚಾರ್ಯ (೧೨ನೇ ಶತಮಾನ) ಜ್ಯೋತಿಷಿಗಳಾಗಿದ್ದರು. ಈಚೆಗೆಂದರೆ, ಗ್ರಹಗಳ ಚಲನೆಗೆ ಒಂದು ನಿರ್ದಿಷ್ಟ ನಿಯಮವನ್ನು ಪ್ರಪ್ರಥಮವಾಗಿ ಹೇಳಿದ ಖಗೋಲ ವಿಜ್ಞಾನಿ ಕೆಪ್ಲರನು "ಈಗಿನ ಜ್ಯೋತಿಷ ಶಾಸ್ತ್ರವೆಲ್ಲ ಶುದ್ಧ

ಅರ್ಥಹೀನವಾದದ್ದು" ಎಂದು ಹೇಳಿ ಸರಿಯಾದ ಜ್ಯೋತಿಷ ಹೇಳಲು ಅನುಕೂಲವಾಗಲೆಂದೇ ತನ್ನ ಖಗೋಲ ಸಂಶೋಧನೆಗೆ ತೊಡಗಿದವನಾಗಿದ್ದ.

ಜಾತಕವೆಂದರೇನು? ನಿಮ್ಮ ಭವಿಷ್ಯವನ್ನು ನಿಮ್ಮ ಜಾತಕ (ಕುಂಡಲಿ) ದ ಆಧಾರದಿಂದ ಹೇಳಲಾಗುತ್ತದೆ. ಜಾತಕ ಎಂದರೆ ನೀವು ಹುಟ್ಟಿದ ಗಳಿಗೆಯಲ್ಲಿ ಗ್ರಹರು ಆಕಾಶದಲ್ಲಿ ಎಲ್ಲೆಲ್ಲಿ ಇದ್ದರು ಎಂದು ತೋರಿಸುವ ಪತ್ರಿಕೆ. ಜನ್ಮಪತ್ರಿಕೆ ಅಥವಾ ಜಾತಕ ಎಂದರೇನೆಂದು ತಿಳಿದುಕೊಳ್ಳಬೇಕಾದರೆ ಸ್ವಲ್ಪಮಟ್ಟಿಗಾದರೂ ಖಗೋಳಶಾಸ್ತ್ರದ ಪರಿಚಯ ಬೇಕಾಗುತ್ತದೆ.

ಪತ್ರಿಕೆಗಳಲ್ಲಿ ಬರುವ ಭವಿಷ್ಯವನ್ನು ನೋಡುವವರೆಲ್ಲರೂ "ರಾಶಿ"ಗಳ ಹೆಸರು ಕೇಳಿದ್ದಾರೆ. ರಾಶಿಗಳು ಹನ್ನೆರಡು: ಮೇಷ, ವೃಷಭ ಇತ್ಯಾದಿ. ಆಕಾಶದಲ್ಲಿ ಸೂರ್ಯ, ಚಂದ್ರ, ಮಂಗಳ ಮೊದಲಾದ ಗ್ರಹಗಳು ಚಲಿಸುವ ಪಥವನ್ನು "ಭಚಕ್ರ" ಎಂದು ಕರೆಯುತ್ತಾರೆ. ಈ ಭಚಕ್ರವನ್ನು ಪೂರ್ವಪಶ್ಚಿಮವಾಗಿ ೧೨ ಭಾಗವಾಗಿ ಮಾಡಿದೆ. ಈ ಒಂದೊಂದು ಭಾಗಕ್ಕೂ ಒಂದೊಂದು ಹೆಸರು ಕೊಟ್ಟಿದೆ. ಅವೇ ರಾಶಿಗಳು.

ಭಚಕ್ರದ ಪ್ರದೇಶದಲ್ಲಿ ನೂರಾರು ನಕ್ಷತ್ರಗಳು ಬರುತ್ತವಲ್ಲ. ಅವುಗಳನ್ನು ಬೇರೆ ಬೇರೆ ೨೭ ಗುಂಪುಗಳಾಗಿ ಮಾಡಿ ಅಶ್ವಿನಿ, ಭರಣಿ ಮೊದಲಾದ ೨೭ ಹೆಸರು ಕೊಡಲಾಗಿದೆ. ೧೨ ರಾಶಿಗಳ ಪ್ರದೇಶದಲ್ಲಿ ೨೭ ನಕ್ಷತ್ರಗಳಿರುವುದರಿಂದ ಪ್ರತಿ ರಾಶಿಯಲ್ಲಿ ೨೭ ÷ ೧೨ = ೨¼ ನಕ್ಷತ್ರಗಳು ಬರುತ್ತವೆ. ಹೀಗೆ ಅಶ್ವಿನಿ, ಭರಣಿ ಮತ್ತು ಕೃತ್ತಿಕೆಯ ಕಾಲಂಶ ಸೇರಿದರೆ ಮೇಷರಾಶಿ, ಕೃತ್ತಿಕೆಯ ಮೂರಂಶ, ರೋಹಿಣಿ ಪೂರ್ಣ ಮತ್ತು ಮೃಗಶಿರಿಯ ಅರ್ಧ ಸೇರಿದರೆ ವೃಷಭ ಇತ್ಯಾದಿ.

ಪ್ರತಿ ದಿನ ಭೂಮಿ ತನ್ನ ಅಚ್ಚಿನ ಸುತ್ತ ತಿರುಗುವಾಗ ಈ ರಾಶಿಗಳು ಒಂದೊಂದಾಗಿ ಮೊದಲು ಮೇಷ, ಬಳಿಕ ವೃಷಭ ಹೀಗೆ ಪೂರ್ವದಲ್ಲಿ ಮೂಡಿ ಸಾವಕಾಶವಾಗಿ ಮೇಲೇರುತ್ತ ನಡುನೆತ್ತಿಯ ಮೇಲೆ ಬಂದು ಆಮೇಲೆ ಇಳಿಯುತ್ತ ಪಶ್ಚಿಮದಲ್ಲಿ ಕಣ್ಮರೆಯಾಗುತ್ತವೆ. ಹೀಗೆ ಒಮ್ಮೆಗೆ ನಮಗೆ ಕಾಣಸುವ ರಾಶಿಗಳು ಆರು ಮಾತ್ರ, ಇನ್ನಾರು ಭೂಮಿಯ ಆಚೆಗಿರುತ್ತವೆ.

ಈಗ ನೀವು ಹುಟ್ಟಿದಾಗ ಆಕಾಶದಲ್ಲಿ ಪೂರ್ವದಲ್ಲಿ ವೃಷಭರಾಶಿ ಮೂಡುತ್ತ ಇತ್ತೆಂದು ತಿಳಿಯಿರಿ ಆಗ ನೀವು ವೃಷಭ ಲಗ್ನದಲ್ಲಿ ಹುಟ್ಟಿದ್ದೀರೆಂದು ಜ್ಯೋತಿಷಿ ಹೇಳುತ್ತಾನೆ. ನೀವು ಹುಟ್ಟಿದಾಗ ಮೂಡುತ್ತಿದ್ದ ರಾಶಿಯು ನಿಮ್ಮ ಜೀವನ, ಅದೃಷ್ಟಗಳಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸುತ್ತದೆಂದು ಜ್ಯೋತಿಷಿಗಳ ಮತ. ಅನಂತರ ನೀವು ಹುಟ್ಟಿದ ಗಳಿಗೆಯಲ್ಲಿ ಯಾವ ಯಾವ ಗ್ರಹರು ಯಾವ ಯಾವ ರಾಶಿಯಲ್ಲಿದ್ದರೆಂದು ಅವರು ನೋಡುತ್ತಾರೆ. ನೀವು ಹುಟ್ಟಿದಾಗ ಯಾವ ಯಾವ ಗ್ರಹರು ಯಾವ ಯಾವ ರಾಶಿಯಲ್ಲಿದ್ದರೆಂದು ತೋರಿಸುವುದೇ ನಿಮ್ಮ ಜಾತಕ.

ನೀವು ಹುಟ್ಟಿದಾಗ ಯಾವ ರಾಶಿ ಮೂಡುತ್ತಿತ್ತೆಂಬುದು ಮಹತ್ವದ್ದಾಗಿರುವಂತೆ ಆ ಗಳಿಗೆಯಲ್ಲಿ ಚಂದ್ರನು ಯಾವ ರಾಶಿಯಲ್ಲಿದ್ದನೆಂಬುದು (ಭಾರತೀಯ ಮತ್ತು ಪೌರಸ್ತ್ಯ ಜ್ಯೋತಿಷದಲ್ಲಿ) ಮಹತ್ವದ್ದು. ಚಂದ್ರನು ಇರುವ ರಾಶಿಯೆ ನಿಮ್ಮ 'ರಾಶಿ'. ಪತ್ರಿಕೆಗಳಲ್ಲಿ ಬರುವ ರಾಶಿಫಲಗಳೆಲ್ಲ ನಿಮ್ಮ 'ರಾಶಿ'ಯನ್ನು ಅಂದರೆ ನೀವು ಹುಟ್ಟಿದಾಗ ಚಂದ್ರನಿದ್ದ ಸ್ಥಾನವನ್ನು ಅವಲಂಬಿಸಿರುತ್ತದೆ. (ಪಾಶ್ಚಾತ್ಯ ಜ್ಯೋತಿಷದಲ್ಲಿ ನೀವು ಹುಟ್ಟಿದಾಗ ಸೂರ್ಯನಿರುವ ರಾಶಿಯೇ ಮಹತ್ವದ್ದೆಂದು ಪರಿಗಣಿಸಲ್ಪಡುತ್ತದೆ)

ಜ್ಯೋತಿಷದ ಈ ವೈಜ್ಞಾನಿಕ ಭಾಗ ಹೈಸ್ಕೂಲಿನ ಕೆಳವರ್ಗದ ಹುಡುಗರಿಗೂ ತಿಳಿಯಬಹುದಾದಷ್ಟು ಸುಲಭವಿದೆ. ಆದರೆ ಅದರ ಮೇಲಿಂದ ಫಲ ಹೇಳುವ ಕೆಲಸ ಮಾತ್ರ ಅತ್ಯಂತ ಜಟಿಲವಾದದ್ದು. ಏಕೆಂದರೆ ಫಲ ಜ್ಯೋತಿಷಿಯು ಅಸಂಖ್ಯ ಬೇರೆ ಬೇರೆ ಅಂಶಗಳನ್ನು ತೂಗಿ ನೋಡಿ, ಆ ಅಂಶಗಳ ಬಲಾಬಲಗಳನ್ನು ಅಂದಾಜು

ಮಾಡಿ, ಭವಿಷ್ಯ ಹೇಳಬೇಕಾಗುವುದು. ಉದಾಹರಣೆಗಾಗಿ, ಒಂದೊಂದು ರಾಶಿಗೂ ಒಂದೊಂದು ಸ್ವಭಾವವಿದೆ. ಒಂದು ಗ್ರಹವು ಮೇಷ ರಾಶಿಯಲ್ಲಿದ್ದರೆ ಕೊಡುವ ಫಲವೇ ಬೇರೆ. ವೃಷಭ ರಾಶಿಯಲ್ಲಿದ್ದರೆ ಕೊಡುವುದೇ ಬೇರೆ, ಸಾಲದ್ದಕ್ಕೆ ನೀವು ಹುಟ್ಟಿದ ಲಗ್ನದಿಂದ ಆ ಗ್ರಹ ಎಷ್ಟನೇ ರಾಶಿಯಲ್ಲಿದೆಯೆಂಬುದು ಈ ಫಲವನ್ನು ವ್ಯತ್ಯಾಸಗೊಳಿಸಬಲ್ಲದು; ಆ ಗ್ರಹದೊಡನೆ ಇನ್ನೂ ಒಂದು ಗ್ರಹವಿದ್ದರೆ ಫಲವು ಮತ್ತಷ್ಟು ವ್ಯತ್ಯಾಸಗೊಳ್ಳುತ್ತದೆ; 'ರಾಶಿ'ಯಿಂದ ಎಷ್ಟನೇ ಸ್ಥಾನದಲ್ಲಿ ಯಾರಿದ್ದಾನೆ, 'ಲಗ್ನ'ದಿಂದ ಎಷ್ಟರಲ್ಲಿ ಯಾರಿದ್ದಾನೆ, ಅವರು ಒಬ್ಬರಿಂದೊಬ್ಬರು ಎಷ್ಟರಲ್ಲಿದ್ದಾರೆ ಇತ್ಯಾದಿಗಳನ್ನೂ ನೋಡಬೇಕು.

ಇಷ್ಟೆಲ್ಲ ಮಾಡಿದರೆ ನಿಮ್ಮ ಅದೃಷ್ಟದ ಸಾಮಾನ್ಯ ಸ್ವರೂಪ ಮಾತ್ರ ತಿಳಿಯುತ್ತದಷ್ಟೇ. ನಿಮ್ಮ ಜೀವನದ ಘಟನೆಗಳನ್ನು ಹೇಳಬೇಕಾದರೆ ನಿಮ್ಮ ಯಾವ ವಯಸ್ಸಿನಲ್ಲಿ ಯಾವ ಗ್ರಹರು ಎಲ್ಲೆಲ್ಲಿರುತ್ತಾರೆ ಎಂಬುದನ್ನು ನೋಡಿ ಮತ್ತೆ ಅವರ ಬಲಾಬಲಗಳನ್ನು ಅಂದಾಜು ಮಾಡಿ ನಿಮ್ಮ ಜನ್ಮಕಾಲದ ಸ್ಥಿತಿಗಳೊಡನೆ ಹೊಂದಿಸಿ ಘಟನೆಗಳ ಭವಿಷ್ಯ ಹೇಳಬೇಕು.

ಒಂದು ದೃಷ್ಟಾಂತ ಮೂಲಕ ಹೇಳಬೇಕಾದರೆ, ಒಂಭತ್ತು ಜನ ಚಿತ್ರಕಾರರಿದ್ದಾರೆ; ಅವರ ಮನೋಭೂಮಿಕೆ ಗಳಿಗೆಗಳಿಗೆ ಮಾತ್ರವಲ್ಲ, ಒಬ್ಬರೊಬ್ಬರ ದರ್ಶನ ಸ್ಪರ್ಶನಗಳಿಂದಲೂ ತೀವ್ರವಾಗಿ ಬದಲಾಗುತ್ತದೆ; ಅವರು ಹೆಚ್ಚು ಕಡಿಮೆ ಮಾನದಲ್ಲಿ ಕುಡಿದಿದ್ದಾರೆ; ಅವರಲ್ಲಿ ಪ್ರತಿಯೊಬ್ಬನ ಹತ್ತಿರವೂ ನಾನಾ ಬಣ್ಣಗಳಿವೆ; ಇವರೆಲ್ಲರೂ ಒಂದು ಕೋಣೆಯಲ್ಲಿಟ್ಟ ಕೆನ್ವಾಸಿನ ಮೇಲೆ ಯದ್ವಾತದ್ವಾ ಬಣ್ಣ ಹಚ್ಚಿ ಒಂದು ಸಂಯುಕ್ತ ಚಿತ್ರ ತಯಾರಿಸುತ್ತಿದ್ದಾರೆ. ಈಚೆ ಕೋಣೆಯಲ್ಲೊಬ್ಬ ಕಣ್ಣು ಕಟ್ಟಿಸಿಕೊಂಡು ಕೊತು, ಯಾವ ಯಾವ ಚಿತ್ರಕಾರ ಆವೊತ್ತು ಯಾವ ಹೊತ್ತಿನಲ್ಲಿ ಕೋಣೆಗೆ ಬಂದ, ಅಂದು ಬೆಳಿಗ್ಗೆ ಅವನು ಯಾವ ಗಡಂಗಿನಲ್ಲಿ ಯಾವ ಸೆರೆ ಕುಡಿದ ಎಂಬ ಸುದ್ದಿಯನ್ನು ಮಾತ್ರ ಆಧರಿಸಿ ಆಚೆ ಕೋಣೆಯಲ್ಲಿರುವ ಚಿತ್ರವನ್ನು ವರ್ಣಿಸುತ್ತಿದ್ದಾನೆ. ಅವನೇ ನಿಮ್ಮ ಭವಿಷ್ಯ ಹೇಳುವ ಜ್ಯೋತಿಷಿ.

ವೈಜ್ಞಾನಿಕವೆ? ಇದಕ್ಕೆ ವೈಜ್ಞಾನಿಕ ಆಧಾರವಾದರೂ ಇದೆಯೆ? ಹಳೇ ಪದ್ಧತಿಯ ಜ್ಯೋತಿಷಿಗಳು ಪ್ರಾಂಜಲವಾಗಿ 'ಇಲ್ಲ' ಎಂದೊಪ್ಪುತ್ತಾರೆ. ಪ್ರಾಚೀನ ಋಷಿ ಮುನಿಗಳು, ದ್ರಷ್ಟಾರರು ತಮ್ಮ ಅಪರೋಕ್ಷ ಜ್ಞಾನದಿಂದ ಹೇಳಿದ ಶಾಸ್ತ್ರ ಇದು. ಆದ್ದರಿಂದ ಅದು ಸತ್ಯ ಎಂದವರ ಹೇಳಿಕೆ. ಭವಿಷ್ಯ ತಪ್ಪಾದರೆ ಅದು ಭವಿಷ್ಯ ಹೇಳುವವನ ಲೆಕ್ಕಾಚಾರ ತಪ್ಪಿ (ಯಾವ ಮಾನವ ತಪ್ಪು ಮಾಡುವುದಿಲ್ಲ?) ದ್ದರಿಂದಾದ ಪ್ರಮಾದ ಹೊರತು ಶಾಸ್ತ್ರದ ತಪ್ಪಲ್ಲ. ಮೇಲೆ ಹೇಳಿದ ತೊಡಕುಗಳ ಮಾಲೆಯನ್ನು ಗಮನಿಸಿದರೆ ಅವರ ಭವಿಷ್ಯ ಸರಿಯಾಗುವುದಕ್ಕಿಂತ ಹೆಚ್ಚು ಸಲ ತಪ್ಪಾಗುವುದು ಅನಿವಾರ್ಯವೆಂದೊಪ್ಪಬೇಕಾಗುತ್ತದೆ.

ಆದರೆ ಆಧುನಿಕ ವೈಜ್ಞಾನಿಕ ಪ್ರವೃತ್ತಿಯ ಸುಶಿಕ್ಷಿತರನ್ನು ಆಕರ್ಷಿಸಬಯಸುವವರು ಇದು ವೈಜ್ಞಾನಿಕವೆಂದು ಸಾಧಿಸುತ್ತಾರೆ. ಗ್ರಹನಕ್ಷತ್ರಗಳು ಮಾನವ ಜೀವನದ ಮೇಲೆ ರಹಸ್ಯಮಯವೆಂದು ತೋರಿದರೂ ಕಟ್ಟುನಿಟ್ಟಾದ ನಿಯಮಗಳಿಗೊಳಪಟ್ಟ ರೀತಿಯಲ್ಲಿ ಪ್ರಭಾವ ಬೀರುತ್ತಾರೆಂದು ಅವರ ಹೇಳಿಕೆ. ಆಧುನಿಕ ಪ್ರಸರಣ (ರೇಡಿಯೇಶನ್) ಭೌತಶಾಸ್ತ್ರ, ಗುರುತ್ವಾಕರ್ಷಣಶಾಸ್ತ್ರ ಮೊದಲಾದವುಗಳ ಶೋಧಗಳನ್ನುಪಯೋಗಿಸಿ ಅವರು ತಮ್ಮ ವಾದಗಳನ್ನು ಮಂಡಿಸುತ್ತಾರೆ.

ಅವರ ವಾದಗಳಲ್ಲಿ ಹೆಚ್ಚಿನವು ಅರ್ಥರಹಿತವಾದವುಗಳೆಂದು ಒಪ್ಪಬೇಕು. ಮೊದಲನೆಯದಾಗಿ ಭಚಕ್ರವನ್ನು ರಾಶಿಗಳಾಗಿ ವಿಂಗಡಿಸಿದ್ದು, ರಾಶಿಗಳಿಗೆ ವಿಶಿಷ್ಟ ಗುಣಗಳನ್ನು ಗೊತ್ತುಪಡಿಸಿದ್ದು, ಗ್ರಹರ ಸ್ವಭಾವ ಇವೇ ಮೊದಲಾದ

ಅನೇಕ ಸಂಗತಿಗಳು ಯಾರೋ ಸ್ವೇಚ್ಛಾನುಸಾರವಾಗಿ ನಿರ್ಧರಿಸಿದವುಗಳಾಗಿವೆಯಲ್ಲದೆ ಅವುಗಳಿಗೆ ಯಾವ ವೈಜ್ಞಾನಿಕ ಆಧಾರವೂ ಕಾಣಿಸುವುದಿಲ್ಲ.

ತಮ್ಮ ಉದ್ಯೋಗವನ್ನು ಹೆಚ್ಚು ವೈಜ್ಞಾನಿಕವಾಗಿ ತೋರಿಸಬೇಕೆಂಬ ಅಭಿಲಾಷೆಯಿಂದ ಕೆಲ ಆಧುನಿಕ ಜ್ಯೋತಿಷಿಗಳು ಹೊಸದಾಗಿ ಶೋಧಿಸಲ್ಪಟ್ಟ ಯುರೆನೆಸ್, ನೆಪ್ಚೂನ್, ಪ್ಲೂಟೋ ಗ್ರಹಗಳನ್ನೂ ತಮ್ಮ ಜ್ಯೋತಿಷದಲ್ಲಿ ಸೇರಿಸಿಕೊಂಡಿದ್ದಾರೆ ಇದು ಸಾಮಾನ್ಯ ಜನರನ್ನು ಸಮಾಧಾನಪಡಿಸಬಹುದಾದರೂ ವಿಚಾರಿಗಳನ್ನಲ್ಲ. ಈ ಗ್ರಹರು ಶೋಧಿಸಲ್ಪಟ್ಟ ಮೇಲೆ ಇನ್ನೂ ಭಚಕ್ರಕ್ಕೆ ಒಂದು ಸುತ್ತು ಹಾಕಿಲ್ಲ, ಅಷ್ಟ ಮಂದಗತಿ ಅವುಗಳದು. ಹೀಗಿರುವಾಗ ಯಾವ ರಾಶಿಯಲ್ಲಿ ಆ ಗ್ರಹಗಳು ಏನು ಫಲ ಕೊಡುತ್ತಾರೆಂದು ಇವರಿಗೆ ಹೇಗೆ ತಿಳಿಯಿತು?

ಜನ್ಮಕಾಲದ ವೇಳೆಯೇ ಮನುಷ್ಯನ ಭವಿಷ್ಯ ನಿರ್ಣಯವಾಗುವುದು ನಿಜವಾದರೆ ಅವಳಿ ಮಕ್ಕಳ ಸಮಸ್ಯೆಗೆ ಜ್ಯೋತಿಷಿಗಳು ಉತ್ತರ ಕೊಡಬೇಕಾಗುವುದು. ಅದರಲ್ಲೂ ಸಂದುಗೂಡಿದ ಅವಳಿಗಳು ಜ್ಯೋತಿಷಕ್ಕೊಂದು ಆಹ್ವಾನವೇ ಆಗಿದ್ದಾರೆ. ಒಂದುಕ್ಕೊಂದು ಕೂಡಿದ ಈ ಅವಳಿಗಳು ಏಕ ಕಾಲಕ್ಕೆ ಹುಟ್ಟುತ್ತಾರೆ. ಆದರೂ ಅವರ ಸ್ವಭಾವಗಳು ಭಿನ್ನವಾಗಿರುತ್ತವೆ ಕಳೆದ ಶತಮಾನದಲ್ಲಿ ಪ್ರಸಿದ್ಧರಾಗಿದ್ದ "ಸಯಾಮಿ" ಅವಳಿಗಳಾದ ಚೆಂಗ್ ಮತ್ತು ಎಂಗರಲ್ಲಿ ಒಬ್ಬನಿಗೆ ಕುಡಿಯುವ ಚಟವಿತ್ತು, ಇನ್ನೊಬ್ಬ ಮದ್ಯವೆಂದರೆ ಹೇಸುತ್ತಿದ್ದ.

ಜ್ಯೋತಿಷಿಗಳನ್ನು ತೊಡಕಿಗೆ ಗುರಿಮಾಡುವ ಇನ್ನೊಂದು ಸಮಸ್ಯೆ ತತ್ವಜ್ಞಾನಿಗಳನ್ನು ಅನಾದಿಯಿಂದ ಕಾಡುತ್ತಿರುವ ಮಾನವನ ಇಚ್ಛಾಸ್ವಾತಂತ್ರ್ಯದ್ದಾಗಿದೆ. ಮಾನವನ ಅದೃಷ್ಟವನ್ನು ಗ್ರಹಗಳು ನಿರ್ಧರಿಸುವವಾದರೆ ಅವನ ಭವಿಷ್ಯವನ್ನು ತಿಳಿದರೇನು ತಿಳಿಯದಿದ್ದರೇನು? ಅವನ ಇಚ್ಛೆ ಸ್ವತಂತ್ರವಾಗಿದ್ದರೆ ಗ್ರಹಗಳ ಹಂಗು ಅವನಿಗೇನು? ಜ್ಯೋತಿಷಿಗಳು ಇದಕ್ಕೆ ಕೊಡುವ ಉತ್ತರವೆಂದರೆ ಗ್ರಹಗಳ ಪರಿಣಾಮವು ಇದ್ದೇ ಇದೆ, ಆದರೆ ಮನುಷ್ಯ ಯತ್ನದಿಂದ ಆ ಪರಿಣಾಮವನ್ನು ಕಡಮೆ ಮಾಡಿಕೊಳ್ಳಬಲ್ಲ. ಇದಕ್ಕೆ ಭವಿಷ್ಯವನ್ನು ತಿಳಿದುಕೊಂಡರೆ ಅನುಕೂಲ. ಒಂದು ಮಾತಿನಲ್ಲಿ ಜ್ಯೋತಿಷಿಗಳು ನಮ್ಮ ಶತ್ರು (ಮತ್ತು ಮಿತ್ರ) ಶಿಬಿರಗಳಲ್ಲಿರುವ ನಮ್ಮ ಗೂಢಚಾರರು, ಎಂದವರ ಹೇಳಿಕೆ.

ಕೆಲ ಜ್ಯೋತಿಷಿಗಳು- ಖಾಸಗಿಯಲ್ಲಿ— ಜ್ಯೋತಿಷವು ನಿಮ್ಮ ಜೀವನದ ಸಾಮಾನ್ಯ ರೂಪರೇಖೆಯನ್ನಷ್ಟೇ ಹೇಳುತ್ತದೆ, ಅದು ಘಟನೆಗಳನ್ನು ಹೇಳಲಾರದು ಎಂದೊಪ್ಪುವರು ಆದರೆ ಈ ತಳಕಟ್ಟನ್ನೊಪ್ಪಿದರೆ ಜ್ಯೋತಿಷಿಗಳಿಗೆ ಹೆಚ್ಚು ಗಿರಾಕಿಗಳು ಸಿಕ್ಕಲಾರರೆಂದು ಅವರಿಗೆ ಗೊತ್ತಿದೆ. ಒಟ್ಟಿನ ಮೇಲೆ ತರ್ಕದೃಷ್ಟಿಯಿಂದ ಹೇಳುವುದಾದರೆ ಜ್ಯೋತಿಷವು ವಿಜ್ಞಾನಕ್ಕಿಂತ ಹೆಚ್ಚಾಗಿ ಬುದ್ಧಿವಂತಿಕೆಯಿಂದ ಊಹಾಪೋಹ ಮಾಡುವ ಕಲೆಯಾಗಿದೆ.

ಎಲ್ಲ ಅಡ್ಡ ಸವಾಲುಗಳಿಗೂ ಉತ್ತರ ಕೊಡಲು ಸಾಧ್ಯವಾಗದಿದ್ದರೂ ಜ್ಯೋತಿಷಿಗಳು ಒಂದು ಮಾತಿನಿಂದ ವಾದಿಗಳ ಬಾಯಿ ಮುಚ್ಚಿಸುತ್ತಾರೆ: "ವಿಜ್ಞಾನ ಏನೇ ಹೇಳಲಿ, ನಮ್ಮ ಭವಿಷ್ಯ ಹೆಚ್ಚು ಸಲ ಸತ್ಯವಾಗುತ್ತಿರುವುದರಿಂದಲೇ ಜನ ಅದನ್ನು ನಂಬುತ್ತಾರೆ." ಇದು ಮಾತ್ರ ನಿಜವೆಂದೊಪ್ಪಬೇಕಾಗುತ್ತದೆ.

ಬರಲಿರುವ ಘಟನೆಗಳನ್ನು ಸರಿಯಾಗಿ ಭವಿಷ್ಯ ಹೇಳಿದ ಉದಾಹರಣೆಗಳ ದೊಡ್ಡ ಮಾಲಿಕೆಯನ್ನೇ ಕೊಡಬಹುದು ಪ್ರಸಿದ್ಧ ಪಾಶ್ಚಾತ್ಯ ಜ್ಯೋತಿಷಿ ಚೀರೋ ಬರಲಿರುವ ಘಟನೆಗಳನ್ನು ದಶಕದಶಕಗಳ ಮುಂಚೆಯೇ ಬರೆದಿಟ್ಟದ್ದು ಬಹುಮಟ್ಟಿಗೆ ಸತ್ಯವಾಗಿ ಪರಿಣಮಿಸಿತು ಅವನು ಮಹಾ ಪುರುಷರ ಮರಣ, ದೇಶಗಳ ಏರಿಳಿತ ಮೊದಲಾದ ನಾನಾ ತರದ ಭವಿಷ್ಯಗಳನ್ನು ಹೇಳಿದ್ದ.

ತೀರ ಈಚೆಗಿನ ಕೆಲ ಉದಾಹರಣೆಗಳನ್ನು

ಹೇಳಬೇಕಾದರೆ ೧೯೫೩ ಏಪ್ರಿಲಿನಲ್ಲಿ ಕಾರ್ಲ್ ಟೋಬಿ ಎಂಬ ಜ್ಯೋತಿಷಿ ರಶಿಯದ ಮಲೆಂಕೋವರ ಜಾತಕ ನೋಡಿ ಜುಲೈ ೧೦ ರಂದು ರಶಿಯದ ಆಳುವ ವರ್ಗದಲ್ಲಿ ಮಹತ್ವದ ಘಟನೆಯಾಗಲಿದೆಯೆಂದು ಒದರಿದ್ದ. ಅದೇ ದಿನ ಪೋಲೀಸ್ ಮಂತ್ರಿ ಬೇರಿಯಾನನ್ನು ಹಿಡಿದು ಕೆಲ ಕಾಲಾನಂತರ ಗಲ್ಲಿಗೇರಿಸಿದರು. ೧೯೫೮ ಅಕ್ಟೋಬರ್ ೧೦ ರಷ್ಟು ಹೊತ್ತಿಗೆ ಪೋಪರ ಜೀವಕ್ಕೆ ಗಂಡಾಂತರವಿದೆಯೆಂದು ೧೯೫೭ ಡಿಶಂಬರಿನಲ್ಲೆ ಬಿಶ್ಚಾಫ್ ಎಂಬ ಜ್ಯೋತಿಷಿ ಹೇಳಿದ್ದ. ಅವನು ಹೇಳಿದ ಹಿಂದಿನ ದಿನ ಪೋಪರು ಪರಂಧಾಮವನ್ನು ಸೇರಿದರು.

ಆದರೆ ಜ್ಯೋತಿಷಿಗಳಾಗಲಿ ಜನರಾಗಲಿ ಸತ್ಯವಾದ ಭವಿಷ್ಯಗಳನ್ನಷ್ಟೇ ನೆನಪಿಡುತ್ತಾರೆ; ಸುಳ್ಳಾದವನ್ನಲ್ಲ ಎಂಬ ಜ್ಯೋತಿಷ ವಿರೋಧಿಗಳು ಹೇಳುತ್ತಾರೆ.

ವಿಜ್ಞಾನ ಏನನ್ನುತ್ತದೆ? ಇಷ್ಟೆಲ್ಲ ಹೇಳಿದ ಮೇಲೂ ಜ್ಯೋತಿಷ ಕೆಲ ಮಟ್ಟಿಗಾದರೂ ಸತ್ಯವಾದ ಉದಾಹರಣೆಗಳನ್ನು ನಿರಾಕರಿಸುವುದು ಕಷ್ಟ. "ಕೆಲ ಜ್ಯೋತಿಷಿಗಳು ತಮ್ಮ ಶಾಸ್ತ್ರವು ವಿಜ್ಞಾನ ಸಮ್ಮತವೆಂದು ಹೇಳುತ್ತಿದ್ದರೂ ಆ ಬಗ್ಗೆ ವೈಜ್ಞಾನಿಕ ಪದ್ಧತಿಯಲ್ಲಿ ಸಂಶೋಧನೆಗಳನ್ನು ನಡೆಸಿ ಪರಿಣಾಮಗಳನ್ನು ಪ್ರಕಟಿಸದಿರುವುದು ದುರ್ದೈವದ ಸಂಗತಿ. ಸಾವಿರಾರು ಜಾತಕಗಳನ್ನು ನೋಡುವ ಜ್ಯೋತಿಷಿಗಳು ಅಂಕಿಸಂಖ್ಯಾಶಾಸ್ತ್ರದ ಕ್ರಮಗಳನ್ನನುಸರಿಸಿ ತಮ್ಮ ಪ್ರತ್ಯಕ್ಷಾನುಭಗಳನ್ನು ವಿಂಗಡಿಸಿ ತಖ್ತೆಗಳನ್ನು ಶೇಖರಿಸಬಹುದು. ವೈದ್ಯಕೀಯ ಸಂಶೋಧನೆಯ ಕ್ರಮಗಳನ್ನನುಸರಿಸಿ ತಮ್ಮ ಭವಿಷ್ಯಗಳ ಆಧಾರ ಮತ್ತು ಪರಿಣಾಮಗಳನ್ನೂ ಸೇಕಡಾ ಎಷ್ಟು ಸರಿ–ತಪ್ಪುಗಳಾದವೆಂಬುದನ್ನೂ ಸಂಗ್ರಹಿಸಿ ಪ್ರಕಟಿಸಬಹುದು.

ವಿಚಿತ್ರವೆಂದರೆ, ಜ್ಯೋತಿಷದ ಕೆಲ ಮೂಲ ಗ್ರಹಿಕೆಗಳಿಗೆ ಬೆಂಬಲವು ಜ್ಯೋತಿಷೇತರ ಸಂಶೋಧಕರ ಸಂಶೋಧನೆಗಳ ಫಲಿತಾಂಶಗಳಿಂದ ಇದೀಗ ಸಿಗುತ್ತಿದೆ.

ರೇಡಿಯೋ ಪ್ರಸಾರದಲ್ಲಿ ಉಂಟಾಗುವ ವಿಕಾರಗಳನ್ನು ಎಲ್ಲ ರೇಡಿಯೋ ಶ್ರೋತೃಗಳು ಬಲ್ಲರು. ಈ ಗೊಂದಲಗಳಿಗೆ ಪೃಥ್ವಿಯ ವಾತಾವರಣದ ಮೇಲ್ಗಡೆ ಇರುವ ಅಯೋಣು ವಲಯ (ionosphere) ದಲ್ಲಿ ಉಂಟಾಗುವ ಗೊಂದಲಗಳು ಕಾರಣ. ಹವಾಮಾನ ಶಾಸ್ತ್ರಜ್ಞರು ಈ ಅಯೋಣು ವಲಯದ ಗೊಂದಲಗಳ ಭವಿಷ್ಯ ಹೇಳುತ್ತಾರೆ. ಆದರೆ ಅದು ಸೇಕಡಾ ೬೫ ರಷ್ಟು ಮಾತ್ರ ನಿಜವಾಗುತ್ತದೆ. ಇದರಿಂದ ರೇಡಿಯೋ ಪ್ರಸಾರಕರಿಗೆ ತುಂಬಾ ಕಷ್ಟವಾಗುವುದನ್ನು ಗಮನಿಸಿ ಅಮೇರಿಕದ ಆರ್ ಸಿಯೆ ಸಂಸ್ಥೆಯವರು ಜಾನ್ ನೆಲ್ಸನ್ ಎಂಬ ವಿಜ್ಞಾನಿಯನ್ನು ಈ ಬಗ್ಗೆ ಸಂಶೋಧನೆ ನಡೆಸಲು ಕೇಳಿಕೊಂಡರು. ಹತ್ತು ವರ್ಷಗಳ ಸಂಶೋಧನೆಯ ನಂತರ ಅವರು ಕೆಲ ಅನಿರೀಕ್ಷಿತ ಅಂಶಗಳನ್ನು ಹೊರಗೆಡಹಿದರು. ಅವುಗಳ ಪ್ರಕಾರ ಗ್ರಹಗಳು ಕೆಲ ವಿಶಿಷ್ಟ ಕ್ರಮಗಳಲ್ಲಿ ಇದ್ದಾಗ ಅಯೋಣು ವಲಯವು ಶಾಂತವಾಗಿರುತ್ತದೆ ಮತ್ತು ಬೇರೆ ಕೆಲ ಕ್ರಮಗಳಲ್ಲಿ ಇದ್ದಾಗ ಅಲ್ಲಿ ಅಶಾಂತಿಯೇಳುತ್ತದೆ. ಈ ಸಂಶೋಧನೆಗಳ ಫಲವಾಗಿ ಅಯೋಣು ವಲಯದ ಸ್ಥಿತಿಗತಿಗಳನ್ನು ಸೇಕಡಾ ೯೦ ರಷ್ಟು ಸರಿಯಾಗಿ ಭವಿಷ್ಯ ಹೇಳಲು ಸಾಧ್ಯವಾಯಿತು.

ಇದು ಪ್ರಕಟವಾದಾಗ ಜ್ಯೋತಿಷಿಗಳು ಉತ್ಸಾಹಿತರಾದರು. ಏಕೆಂದರೆ ಅವರ ಪುಸ್ತಕಗಳಲ್ಲಿ ಯಾವ ಗ್ರಹಮಾನಗಳು ಹಿತಕರವೆಂದು ಹೇಳಲಾಗಿದೆಯೋ; ಆ ಗ್ರಹಮಾನಗಳು ಬಹುತರವಾಗಿ ಜಾನ್ಸನ್ನರು ಕಂಡುಹಿಡಿದ ಹಿತಕರ ಗ್ರಹಮಾನಗಳೊಂದಿಗೆ ಹೊಂದುತ್ತವೆ. ಹಾಗೆಯೆ ಜಾನ್ಸನ್ನರು ಕಂಡುಹಿಡಿದ ಗೊಂದಲಕಾರಕ ಗ್ರಹಮಾನಗಳಿಗೂ ಜ್ಯೋತಿಷಿಗಳು ಹೇಳುವ ಪ್ರತಿಕೂಲ ಗ್ರಹ ಯೋಗಗಳಿಗೂ ತುಂಬ ಸಾಮ್ಯವಿದೆ.

ಕೋಟ್ಯಂತರ ಮೈಲು ದೂರದಲ್ಲಿರುವ ಗ್ರಹ

ಯೋಗಗಳು ಭೂಮಿಯ ಮೇಲೆ ಹಿತಾಹಿತ ಪರಿಣಾಮ ಮಾಡುತ್ತವೆಂಬುದನ್ನು ಅಲ್ಪಮಟ್ಟಿಗಾದರೂ ಇದು ಸಿದ್ಧಪಡಿಸಿದೆ. ಅದಕ್ಕೂ ಮೊದಲು ಅಮೇರಿಕದ ಶೇರ್ ಪೇಟೆಯ ವ್ಯಾಪಾರಿ ಡೇವಿಡ್ ವಿಲಿಯಮ್ಸರು ಸುದೀರ್ಘ ಪರಿಶೋಧನೆಯ ನಂತರ ಕಳೆದ ೨೦೦ ವರ್ಷಗಳಿಂದ ಅಮೇರಿಕದ ಆರ್ಥಿಕ ಸ್ಥಿತಿಯ ಏರಿಳಿತಗಳಿಗೂ ಗುರು-ಶನಿ-ಯುರೇನೆಸ್ ಯುತಿಗಳಿಗೂ ನಿಕಟ ಸಂಬಂಧ (ಸುಮಾರು ಸೇಕಡಾ ೭೦ ರಷ್ಟು) ವಿದೆಯೆಂದು ಕಂಡುಹಿಡಿದರು. ಜಾನ್ಸನ್ನರ ವರದಿ ಪ್ರಕಟವಾದ ನಂತರ ಅದರಿಂದ ಕೆಲವಂಶಗಳನ್ನು ತಮ್ಮ ಲೆಕ್ಕಾಚಾರದಲ್ಲಿ ಸೇರಿಸಿಕೊಂಡು ಈಗ ಪೇಟೆಯ ಏರುಪೇರುಗಳನ್ನು ಸೇಕಡಾ ೬೦ ರಷ್ಟು ಸರಿಯಾಗಿ ತರ್ಕಿಸಲು ಸಾಧ್ಯವಿದೆಯೆಂದು ವಿಲಿಯಮ್ಸರು ಹೇಳುತ್ತಿದ್ದಾರೆ. ತಮ್ಮ ಸಂಶೋಧನೆಗಳ ಫಲವಾಗಿ ಅವರು ಸಟ್ಟಾದಲ್ಲಿ ಆಗಲೇ ತುಂಬ ಹಣ ಗಳಿಸಿದ್ದಾರೆ. ಹೀಗೆ ತೋರಿಕೆಗಂತೂ ಭೂಮಿಯ ಜಡ ಪ್ರಕೃತಿಯ ಮೇಲೆ ಮಾತ್ರವಲ್ಲ, ಮನುಷ್ಯರ ವ್ಯವಹಾರಗಳ ಮೇಲೂ ಗ್ರಹಗಳು ಪರಿಣಾಮ ಮಾಡುತ್ತವೆಂದು ಸ್ಪಷ್ಟವಾಗುತ್ತದೆ.

ಇನ್ನೊಂದು ತುಣುಕು ಪುರಾವೆ ಫ್ರಾನ್ಸಿನಿಂದ ಬಂದಿದೆ. ಮನೋವಿಜ್ಞಾನ ಮತ್ತು ಅಂಕಸಂಖ್ಯಾಶಾಸ್ತ್ರದ ಡಾಕ್ಟರೇಟ್ ಪದವೀಧರರಾದ ಮೈಕೇಲ್ ಗಾಕಲಿನ್ನರು ಎರಡು ಶ್ರೇಣಿಗಳಲ್ಲಿ ಸಾವಿರಗಟ್ಟಳೆ ಜನ್ಮಪತ್ರಿಕೆಗಳನ್ನು ಸಂಖ್ಯಾಶಾಸ್ತ್ರ ಕ್ರಮದಿಂದ ವಿಶ್ಲೇಷಿಸಿದರು. ಒಂದು ಶ್ರೇಣಿಯಲ್ಲಿ ಯುರೋಪಿನ ೨೫,೦೦೦ ಪ್ರಸಿದ್ಧ ಪುರುಷರ "ಜಾತಕ"ವನ್ನು ಪರಿಶೀಲಿಸಲಾಯಿತು. ಅದರಲ್ಲಿ ವಿಜ್ಞಾನ, ಯುದ್ಧ ಮತ್ತು ಆಟಪಾಟಗಳಲ್ಲಿ ಹೆಸರಾಂತವರ ಜನ್ಮಕಾಲದಲ್ಲಿ ಹೆಚ್ಚಾಗಿ ಮಂಗಳನು ಉದಯಿಸುತ್ತಿದ್ದುದು ಇಲ್ಲವೆ ಮಧ್ಯಾಕಾಶದಲ್ಲಿದ್ದುದು ಕಂಡುಬಂತು; ಸಾಹಿತಿಗಳು ಮತ್ತು ಇತರ ಕಲಾವಿದರು ಹುಟ್ಟಿದಾಗ ಮಂಗಳನು ಆಕಾಶದಲ್ಲಿದ್ದುದೇ ವಿರಳ. ರಾಜಕಾರಣಿಗಳು, ನಟರು, ಸೇನಾಪತಿಗಳ ಜನ್ಮಕಾಲದಲ್ಲಿ ಗುರುವು ಉದಯ ಅಥವಾ ಮಧ್ಯಾಕಾಶ ಸ್ಥಿತಿಯಲ್ಲಿರುವುದು ಹೆಚ್ಚು; ವಿಜ್ಞಾನಿಗಳಲ್ಲಿಗಳಲ್ಲಿ ಇದು ಕಡಿಮೆ. ಶನಿಯು ಉದಯ ಅಥವಾ ಮಧ್ಯಾಕಾಶದಲ್ಲಿರುವಾಗ ವಿಜ್ಞಾನಿಗಳ ಜನ್ಮ ಹೆಚ್ಚಾಗಿಯೂ ಲೇಖಕ ಕಲಾವಿದರ ಜನ್ಮ ವಿರಳವಾಗಿಯೂ ಆಗುತ್ತದೆ. ಚಂದ್ರನು ಮೇಲೆ ಹೇಳಿದ ಸ್ಥಿತಿಗಳಲ್ಲಿದ್ದಾಗ ರಾಜಕಾರಣಿ, ಸಾಹಿತಿಗಳ ಜನ್ಮಕ್ಕೆ ಅನುಕೂಲ; ಆಟಗಾರರ, ಸೈನ್ಯ ಕುಶಲರ ಜನ್ಮಕ್ಕೆ ಅನಾನುಕೂಲ. ಮಹಾ ವೈದ್ಯ ಶಾಸ್ತ್ರಿಗಳು ಹುಟ್ಟುವಾಗ ಬಹುತೇಕ ಮಂಗಳ ಗುರು ಶನಿಗಳ ಪ್ರಾಧಾನ್ಯ ಕಂಡು ಬಂತೆಂದೂ ಅವರು ಪ್ರಕಟಿಸಿದ್ದಾರೆ.

ಗಾಕಲಿನ್ನರ ಸಂಶೋಧನೆ ಇನ್ನೂ ನಡೆದಿದೆ. ಈಗ ಅವರು ಮಕ್ಕಳ ಜನ್ಮಮುಹೂರ್ತಗಳನ್ನು ಸಂಗ್ರಹಿಸಿ ಗ್ರಹ ಸ್ಥಿತಿಗೂ ಈ ಮಕ್ಕಳು ಪ್ರಗತಿ ಹೊಂದುತ್ತಿರುವ ದಾರಿಗೂ ಸಂಬಂಧವಿದೆಯೇ ಎಂದು ನೋಡುತ್ತಿದ್ದಾರೆ. ಗ್ರಹಗಳ ಸ್ಥಿತಿಗಳು ಮನುಷ್ಯನ ಪ್ರಕೃತಿಯನ್ನೇ ನಿರ್ಧರಿಸುತ್ತವೆಯಾದ್ದರಿಂದ ಅವರ ಜೀವನದಲ್ಲಿ ಅವು ಪ್ರಭಾವ ಬೀರುತ್ತವೆಯೆಂಬ ಅವರ ಊಹೆಗೆ ಆಗಲೆ ಸಾಕಷ್ಟು ಬೆಂಬಲ ದೊರಕಿದೆ.

ಜರ್ಮನಿಯ ಮ್ಯುನಿಕ್ ವಿಶ್ವವಿದ್ಯಾಲಯದ ಭೂಭೌತ ಶಾಸ್ತ್ರ ಪ್ರೊ. ತೋಮಶ್ಕೇಕರು ಯುರೆನಸ್ ಗ್ರಹಕ್ಕೂ ಭೂಕಂಪಗಳಿಗೂ ಸಂಬಂಧವಿರುವುದನ್ನು ಕಂಡುಹಿಡಿದಿದ್ದಾರೆ. ೪೮ ವರ್ಷಕ್ಕೊಮ್ಮೆ ಪ್ರಚಂಡ ಭೂಕಂಪವಾಗುವುದು ಗೋಚರಿಸಿದೆ. ಆಗ ಹೆಚ್ಚಾಗಿ ಯುರೆನೆಸ್ ಗ್ರಹ ತಲೆಯ ಮೇಲೂ ಇತರ ಎರಡು ಗ್ರಹಗಳು ಯುರೆನೆಸ್‌ನೊಡನೆ ಸಮಭುಜ ತ್ರಿಕೋಣ ಸ್ಥಿತಿಯಲ್ಲೂ ಇರುತ್ತವೆ. ಆಸಾಂ (೧೯೫೦), ಟೋಕಿಯೋ (೧೯೨೩) ಭೂಕಂಪಗಳು ಈ ಗ್ರಹ ಸ್ಥಿತಿಯಲ್ಲೇ ಜರಗಿದವು.

ಜ್ಯೋತಿಷಿಗಳಿಗೆ ಇವೆಲ್ಲ ಶೋಧಗಳು ಸಂತೋಷವುಂಟುಮಾಡುವುದು ಸ್ವಾಭಾವಿಕ.

ಅವರಿಗೆ ಅಸಂತೋಷವುಂಟುಮಾಡುವ ಅಂಶಗಳೂ ಹೊರಬಿದ್ದಿವೆ ಎಲ್ಲಕ್ಕಿಂತದೊಡ್ಡ ಹೊಡೆತವೆಂದರೆ ಗ್ರಹಗಳ ಸ್ಥಾನದ ಪ್ರಭಾವ ಇರಬಹುದಾದರೂ ಬಲುಗಾಲದಿಂದ ಜ್ಯೋತಿಷಿಗಳು ನೆಚ್ಚಿದ "ರಾಶಿ"ಗಳಿಗೆ ಏನೂ ಮಹತ್ವವಿಲ್ಲೆಂದು ಸಂಶೋಧನೆಗಳು ಸಾಮಾನ್ಯವಾಗಿ ತೋರಿಸಿವೆ. ದೃಷ್ಟಿಗಳು, ಸ್ವಸ್ಥಾನ, ಶತ್ರುಸ್ಥಾನ ಮೊದಲಾದ ಜ್ಯೋತಿಷಿಗಳ ಅನೇಕ ಅಳತೆಗೋಲುಗಳಾವುವೂ ಗಾಕಲಿನ್ನರ ಶೋಧಗಳಲ್ಲಿ ಸಥಪಡಲಿಲ್ಲ. ಹಾಗೆಯೆ ಬುಧ, ಶುಕ್ರ ಗ್ರಹಗಳಿಗೂ ವಿಶೇಷ ಪ್ರಭಾವವಿದ್ದಂತೆ ಈ ವರೆಗೆ ಅವರಿಗೆ ಕಂಡುಬಂದಿಲ್ಲ. ಅವರೆನ್ನುತ್ತಾರೆ: ಈಗ ಕಂಡುಬಂದಿರುವಂತೆ ಗ್ರಹಗಳ ದೈನಿಕ ಗತಿ ಮಾತ್ರವೇ ಮನುಷ್ಯನ ಮೇಲೆ ಪ್ರಭಾವ ಬೀರುತ್ತದೆ. ಅರ್ಥಾತ್ ಆಯಾ ಕಾಲದಲ್ಲಿ ನಮಗೆ ಕಾಣಿಸುವ ಅರ್ಧ ಆಕಾಶದಲ್ಲಿರುವ ಗ್ರಹರಷ್ಟೇ ಮುಖ್ಯ.

ವೈಜ್ಞಾನಿಕ ಕ್ರಮದಿಂದ ಜ್ಯೋತಿಷದ ಸಂಶೋಧನೆ ನಡೆಸಬೇಕೆಂಬುವಕ್ಕೆ ಮೇಲಿನ ಅಂಶಗಳು ಸಾಕಷ್ಟು ಸಮರ್ಥನೆಗಳನ್ನೊದಗಿಸುತ್ತವೆ. ಆ ಸಂಶೋಧನೆಗಳಿಂದ ಜ್ಯೋತಿಷಿಗಳು ತಮ್ಮ ಅನೇಕ ರೂಢ ಕಲ್ಪನೆಗಳನ್ನು ಕೈಬಿಡಬೇಕಾದ ಪ್ರಸಂಗ ಬಂದೀತು. (ಯಾವ ವಿಜ್ಞಾನಕ್ಕೆ ಈ ಗತಿ ಬಂದಿಲ್ಲ?) ಆದರೆ ವಿಚಾರಿಗಳು ಈಗ ತೆಗಳುತ್ತಿರುವ ಈ ಶಾಸ್ತ್ರದಿಂದ ಮುಂದೆ ಮಾನವನ ಹಿತಕ್ಕಾಗಿ ವಿನಿಯೋಗಿಸಲ್ಪಡುವ ಹೆಚ್ಚು ಅನುಕೂಲಗಳೊದಗಬಲ್ಲವು. ಭೂಕಂಪಗಳಂಥ ಅನಾಹುತಗಳ ಹಾನಿಯನ್ನು ಕಡಿಮೆ ಮಾಡುವ ದೊಡ್ಡ ಕೆಲಸಗಳಿಗೆ ಅದು ನೆರವಾದೀತು. ಹಾಗೆಯೆ ರೋಗಿಗಳ ಚಿಕಿತ್ಸೆಯಂಥ ಸಣ್ಣ, ಆದರೆ ಅಷ್ಟೇ ಮಹತ್ವದ ಕೆಲಸಗಳಿಗೂ ಅದು ಸಹಾಯ ಮಾಡೀತು. ಭಾರತೀಯ ವೈದ್ಯಕದಲ್ಲಿ ಜ್ಯೋತಿಷದ ಅರಿವು ಚಿಕಿತ್ಸೆಯಲ್ಲಿ ನೆರವಾಗಬಲ್ಲದೆಂಬ ಕಲ್ಪನೆ ಮೊದಲಿಂದ ಇದೆ. ಈ ಶತಮಾನದ ಮೂವರು ಮಹಾ ಮನೋವಿಜ್ಞಾನಿಗಳಲ್ಲೊಬ್ಬರಾದ ಡಾ. ಯುಂಗರು ಇದನ್ನು ಬೆಂಬಲಿಸಿದ್ದಾರೆ. ಮನುಷ್ಯನ ಪ್ರಕೃತಿಯ ಅರಿವಿಗೆ ಜ್ಯೋತಿಷ ಕೈಗನ್ನಡಿಯಾಗಬಲ್ಲದಾದರೆ ಅವನ ಚಿಕಿತ್ಸೆಗೆ ಅದು ಸಹಾಯ ಮಾಡಲಾರದೆ? ★




ಹುಡುಗ ಬುದ್ಧಿ

ಶಾಲೆಯ ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳಿಗೆ ಸದ್ಯದಲ್ಲೇ ನಡೆಯಲಿರುವ ಪರೀಕ್ಷೆಯ ವಿಷಯವಾಗಿ ಹೇಳುತ್ತಲಿದ್ದರು—"ನೋಡಿ! ನೀವೆಲ್ಲರೂ ಚೆನ್ನಾಗಿ ಓದಿ ಪರೀಕ್ಷೆಯಲ್ಲಿ ಉತ್ತಮವಾಗಿ ಪಾಸು ಮಾಡಿ ನಮ್ಮ ಶಾಲೆಯ ಗೌರವವನ್ನು ಉಳಿಸಬೇಕು. ಇನ್ನು ಹೆಚ್ಚು ಸಮಯವಿಲ್ಲ. ಈಗಾಗಲೇ ಪ್ರಶ್ನಪತ್ರಗಳು ಪ್ರೆಸ್ಸಿನಲ್ಲಿ ಅಚ್ಚಾಗುತ್ತಿವೆ...... ನಿಮಗೇನಾದರೂ ಕೇಳಲಿಕ್ಕಿದ್ದರೆ ಈಗಲೇ ನನ್ನೊಡನೆ ಕೇಳಿ."

ಸೂಟಿಯಾಗಿದ್ದ ಚಿಕ್ಕ ಹುಡುಗನೊಬ್ಬ ಕೂಡಲೆ ಎದ್ದು ನಿಂತು ಕೇಳಿದ: "ಸಾರ್, ಪ್ರಶ್ನಪತ್ರಗಳು ಯಾವ ಪ್ರೆಸ್ಸಿನಲ್ಲಿ ಅಚ್ಚಾಗುತ್ತಿವೆ ಹೇಳುತ್ತೀರಾ?"

—ನಾಗೇಶರಾವ್, ಉಡುಪಿ

ಜೆ. ಡಿ. ರ್‍ಯಾಟ್‌ಕ್ಲಿಫ್



**ಪ್ರತಿ ವರ್ಷ ಕೋಟ್ಯಂತರ
ಜನರನ್ನು ಪೀಡಿಸುವ
ರೋಗದ ಮೇಲೆ ಇದೀಗ
ವಿಜಯ ದೊರಕುತ್ತಿದೆ**

ನೆಗಡಿಯ ಮೇಲೆ ವಿಜ್ಞಾನಿಗಳ ಹೋರಾಟ

ಮಾನವನನ್ನು ಪೀಡಿಸುವ ಅತ್ಯಂತ ವ್ಯಾಪಕ ಮತ್ತು ಆರ್ಥಿಕ ಹಾನಿಕಾರಕ ರೋಗವನ್ನು ಪ್ರತಿಬಂಧಿಸುವ ಮತ್ತು ಗುಣಪಡಿಸುವ ಉಪಾಯ ಹುಡುಕಲು ಇಂಗ್ಲಂಡಿನ ಸ್ಯಾಲಿಸ್‌ಬರಿ ಪಟ್ಟಣದಲ್ಲಿ ಒಂದು ವಿಜ್ಞಾನಿ ತಂಡವು ರಭಸದ ಪ್ರಯತ್ನ ಮಾಡುತ್ತಿದೆ. ಆ ರೋಗವೆಂದರೆ ನೆಗಡಿ.

ನೆಗಡಿಯ ಪೀಡೆಗೆ ಪರಿಹಾರವು ಈಗ ಕಣ್ಣಳವಿನೊಳಗೆ ಬಂದಿದೆಯೆಂದು ಆಶಿಸಿದರೆ ತಪ್ಪಲ್ಲ. ಕಳೆದ ಮೂರು ವರ್ಷಗಳಲ್ಲಿ ಬ್ರಿಟಿಶ್ ಸಂಶೋಧಕರು ಈ ವೊದಲು ಯಾರಿಗೂ ಸಾಧ್ಯವಾಗದ್ದನ್ನು ಸಾಧಿಸಲು ಸಮರ್ಥರಾಗಿದ್ದಾರೆ. ಅವರು ನೆಗಡಿಯನ್ನು ಪ್ರಯೋಗಶಾಲೆಯಲ್ಲಿ ಕೈಹಿಡಿದು ನಿಲ್ಲಿಸಿದ್ದಾರೆ ಅರ್ಥಾತ್ ನೆಗಡಿಯನ್ನು ಪ್ರಯೋಗನಲಿಕೆಯಲ್ಲಿ ಹಿಡಿದು ಹಾಕಿ ಅವರು ಅದನ್ನೀಗ ಆಳವಾದ ಪರೀಕ್ಷೆಗೆ ಗುರಿಪಡಿಸುತ್ತಿದ್ದಾರೆ.

ಇದಲ್ಲದೆ, ಬ್ರಿಟಿಶ್ ವಿಜ್ಞಾನಿಗಳು ನೆಗಡಿಯ ಚುಚ್ಚುಮದ್ದೊಂದನ್ನು (ವ್ಯಾಕ್ಸಿನ್) ಕಂಡು ಹಿಡಿಯುವುದರಲ್ಲಿ ಪ್ರಗತಿ ಪಡೆದಿದ್ದಾರೆ. ಅವರು ಉತ್ಪಾದಿಸಿದ ಔಷಧವು ಪೆನಿಸಿಲಿನ್ ನಂತರ ವೈದ್ಯಶಾಸ್ತ್ರದಲ್ಲಿ ಎಲ್ಲಕ್ಕೂ ದೊಡ್ಡ ಮುನ್ನಡೆಯೆನಿಸುವ ಸಂಭವವಿದೆ. ಅದರ ಹೆಸರು "ಇಂಟರ್‌ಫೆರಾನ್." ಪೆನಿಸಿಲಿನ್ ಮತ್ತು ಇತರ ಆಂಟಿಬಯಾಟಿಕ್ ಔಷಧಗಳು ಜೀವಾಣು (ಬೆಕ್ಟೀರಿಯಾ)ಗಳ ಮೇಲಷ್ಟೇ ಹೆಚ್ಚಾಗಿ ಪರಿಣಾಮಕಾರಿಯಾಗುತ್ತಿದ್ದರೆ ಈ ಹೊಸ ಔಷಧ ವೈರಸ್‌ಗಳನ್ನು ಕೊಲ್ಲುತ್ತದೆ. ಈಗ ಕಾಣುವ ಆಶೆ ಕೊನೆತನಕ ಉಳಿದರೆ ಈ ಪದಾರ್ಥದಿಂದ ನೆಗಡಿ, ಇನ್‌ಫ್ಲುಯೆಂಜಾ, ಪೋಲಿಯೋ ಮತ್ತು ಮಾನವಕುಲವನ್ನು ಕಾಡುವ ಇನ್ನೂ ಅನೇಕ ವೈರಸ್ ರೋಗಗಳ ಮೇಲೆ ಶೀಘ್ರ ಪರಿಣಾಮಕಾರಿಯಾದ ಇಂಜಕ್ಶನ್ ಅಥವಾ ಗುಳಿಗೆಗಳು ತಯಾರಾಗಬಹುದು

ಬ್ರಿಟಿಶ್ ವೈದ್ಯಕೀಯ ಸಂಶೋಧನ ಮಂಡಲದ ನೆಗಡಿ ಸಂಶೋಧನ ವಿಭಾಗದ ಕಾರ್ಯವು ೧೯೪೬ ರಲ್ಲಿ, ಸ್ಯಾಲಿಸ್‌ಬರಿಯ ಹೊಲಗದ್ದೆಗಳ ನಡುವೆ ೨೨ ಪೂರ್ವನಿರ್ಮಿತ ಗೃಹ ಮತ್ತು ಕೆಲ ಗುಡಿಸಲುಗಳಿಂದೊಡಗೂಡಿದ ನಿರಾಡಂಬರ ಪರಿಸರದಲ್ಲಿ ಪ್ರಾರಂಭವಾಯಿತು. ಸಾಂಸರ್ಗಿಕ ರೋಗ ಸಂಶೋಧನಕ್ಕಾಗಿ ಈ ಪೂರ್ಣ ಆಸ್ಪತ್ರೆ

"ಟುಡೇಸ್ ಹೆಲ್ತ್" ನಿಂದ

ಯನ್ನು ಹರವಾರ್ಡ್ ವಿಶ್ವವಿದ್ಯಾಲಯ ಮತ್ತು ಅಮೇರಿಕದ ರೆಡ್‌ಕ್ರಾಸ್ ಸಂಸ್ಥೆ ಇವು ಒಂದಾಗಿ ೧೯೪೧ ರಲ್ಲಿ ಬ್ರಿಟನ್ನಿಗೆ ದಾನವಮಾಡಿದ್ದವು.

ಯುದ್ಧ ಮುಗಿದ ಮೇಲೆ ಈ ಆಸ್ತಿಯನ್ನು ಬ್ರಿಟಿಶ್ ವೈದ್ಯಕೀಯ ಸಂಶೋಧನ ಸಂಸ್ಥೆಗೆ ಅದರ ಇಚ್ಛಾನುಸಾರ ಉಪಯೋಗಿಸಲು ಬಿಟ್ಟುಕೊಡಲಾಯಿತು. ಪ್ರಸಿದ್ಧ ವೈರಸ್ ಶಾಸ್ತ್ರಜ್ಞರೂ ಇನ್‌ಫ್ಲುಯೆಂಜಾದ ಪ್ರಥಮ ವೈರಸ್ಸನ್ನು ಕಂಡುಹಿಡಿದವರೂ ಆದ ಸರ್ ಕ್ರಿಸ್ಟೋಫರ್ ಆಂಡ್ರೂಸರು ಸ್ಯಾಲಿಸ್‌ಬರಿಯಲ್ಲಿ ನೆಗಡಿಯ ವಿರುದ್ಧ ಅತ್ಯಂತ ಉದ್ದಾಮ ಹೋರಾಟ ಹೂಡಬೇಕೆಂದು ನಿರ್ಧರಿಸಿದರು.

ಅವರ ಮುಂದಿದ್ದ ಸಮಸ್ಯೆಗಳು ಪ್ರಚಂಡವಾಗಿದ್ದವು. ನೆಗಡಿಯು ಸಂಶೋಧಕರನು ಎದುರಿಸಿದ ಅತ್ಯಂತ ರಹಸ್ಯಮಯ ರೋಗಗಳಲ್ಲಿ ಒಂದಾಗಿದೆಯೆಂಬುದು ನಿಸ್ಸಂಶಯ. ಅದು ಪೋಲಿಯೋಗಿಂತಲೂ ಕಠಿನ ಮತ್ತು ಕ್ಷಯಕ್ಕಿಂತಲೂ ಜಟಿಲವಾಗಿದೆ. ನೆಗಡಿಯೆಂದರೇನೆಂದು ತಮಗೆ ಗೊತ್ತಿದೆಯೆಂದು ಜನಸಾಮಾನ್ಯರು ಭಾವಿಸಬಹುದು; ಆದರೆ ಸಂಶೋಧಕರು ಮಾತ್ರ ಅದು ತಮಗೆ ಗೊತ್ತಿದೆಯೆಂದು ಧೈರ್ಯದಿಂದ ಹೇಳಲಾರರು.

ನೆಗಡಿಯ ಸ್ವಭಾವದ ಬಗ್ಗೆ ಸಾಕಷ್ಟು ಗೊತ್ತಿತ್ತೆಂಬುದು ನಿಜ. ಅದು ಒಬ್ಬರಿಂದ ಇನ್ನೊಬ್ಬರಿಗೆ ದಾಟುತ್ತದೆ; ಅದು ಶಾಲಾವರ್ಷದ ಪ್ರಾರಂಭದಲ್ಲೊಮ್ಮೆ, ಚಳಿಗಾಲದ ಮೊದಲಲ್ಲೊಮ್ಮೆ ಮತ್ತು ವಸಂತಾರಂಭದಲ್ಲೊಮ್ಮೆ ಹೀಗೆ ಮೂರು ಸಲ ಸಾಮೂಹಿಕವಾಗಿ ಹಬ್ಬುತ್ತದೆ. ಆದರೆ ನೆಗಡಿಯನ್ನುಂಟುಮಾಡುವ ವೈರಸ್ ಅಥವಾ ವೈರಸ್‌ಗಳನ್ನು ಯಾರೂ ನೋಡಿದ್ದಿಲ್ಲ. ಈ ರೋಗ ವೈರಸ್ ಪ್ರಚೋದಿತವೆಂಬುದಕ್ಕೆ ಅಪ್ರತ್ಯಕ್ಷ ಪುರಾವೆಗಳು ಮಾತ್ರ ಇದ್ದವು. ಜರ್ಮನ್ ಸಂಶೋಧಕನೊಬ್ಬನು ನೆಗಡಿಯಾದವರ ಮೂಗಿನ ನೀರನ್ನು ತೆಗೆದುಕೊಂಡು ಫಿಲ್ಟರಿನಲ್ಲಿ ಜೀವಾಣುಗಳನ್ನು ಸೋಸಿ ತೆಗೆದು ಉಳಿದ ನೀರನ್ನು ಆರೋಗ್ಯದಲ್ಲಿದ್ದವರ ಮೂಗಿನೊಳಗೆ ಸಿಂಪಡಿಸಿದ್ದನು. ಕೂಡಲೆ ಅವರಿಗೆ ನೆಗಡಿಯಾಯಿತು. ಇದರಿಂದ ನೆಗಡಿಗೆ ಜೀವಾಣುಗಳಂತೂ ಕಾರಣವಲ್ಲ ಎಂದು ಅಂದಾಜಾಯಿತು.

ನೆಗಡಿ ಬಾರದಂತೆ ಪ್ರತಿಬಂಧಿಸುವುದರಲ್ಲಾಗಲಿ ಬಂದಾಗ ಗುಣಪಡಿಸುವುದರಲ್ಲಾಗಲಿ ಸಂಶೋಧಕರು ಏನೂ ಪ್ರಗತಿ ಹೊಂದಿರಲಿಲ್ಲ. ನೆಗಡಿಗೆ ಔಷಧಗಳೆಂದು ಹೆಸರಾಂತ ಯಾವುವೂ ಪರೀಕ್ಷಿಸಿದಾಗ ಸಫಲವೆನಿಸಿರಲಿಲ್ಲ. ಎಷ್ಟೋ ವೇಳೆ ಸಂಶೋಧಕರಿಗೆ ಅಜ್ಜಮ್ಮನ ಔಷಧಿಗಳಿಂದ ಉಪಯುಕ್ತ ಸೂಚನೆಗಳು ಸಿಗುವುದುಂಟು. ಆದರೆ ನೆಗಡಿಯ ವಿಷಯದಲ್ಲಿ ಹಾಗಾಗಲಿಲ್ಲ. ನೆಗಡಿಯಾದಾಗ ಧಾರಾಳ ನೀರು ಕುಡಿಯಬೇಕೆಂಬುದು ಅಜ್ಜಮ್ಮನ ಒಂದು ಸೂಚನೆ. 'ಮೀನಿಗೆ ಶೀನು ಬರುವುದನ್ನು ಯಾರೂ ಕಂಡಿಲ್ಲವೆಂಬುದೇ ಈ ಸೂಚನೆಗೆ ಆಧಾರವೆಂದು ತೋರುತ್ತದೆ' ಎನ್ನುತ್ತಾನೆ ಒಬ್ಬ ಸಂಶೋಧಕ. ಆಯಾಸದ ಮಾತೂ ಹಾಗೆಯೆ. ೫೬ ತಾಸುಗಳವರೆಗೆ ನಿದೆಗೆಟ್ಟವರಿಗೂ ಸಂಪೂರ್ಣ ವಿಶ್ರಾಂತಿಯಲ್ಲಿದ್ದ ಜನರಿಗೂ ಅಷ್ಟೇ ಬೇಗ ನೆಗಡಿ ತಗಲುವುದೆಂದು ಕಂಡುಬಂತು.

ಸಂಶೋಧಕರಿಗೆ ಬಂದ ಒಂದು ದೊಡ್ಡ ಕಷ್ಟವೆಂದರೆ ಪ್ರಯೋಗಶಾಲೆಯ ಅನೇಕ ಪ್ರಾಣಿಗಳಿಗೆ ಎಂದೂ ನೆಗಡಿಯೇ ಆಗದಿರುವುದು. ಅವರಿಗೆ ಗೊತ್ತಿರುವ ಮಟ್ಟಿಗೆ ಮಾನವನ ಈ ಶೀನುವ ಪೀಡೆಯು ಬೇರೆ ಒಂದೇ ಒಂದು ಪ್ರಾಣಿ ಜಾತಿಗೆ ತಗಲುತ್ತದೆ. ಅದು ಚಿಂಪಾಂಜಿ. ಚಿಂಪಾಂಜಿಗಳನ್ನು ದೊರಕಿಸುವುದು ವೆಚ್ಚದ ಬಾಬು; ಅವುಗಳನ್ನು ಹಿಡಿತದಲ್ಲಿಟ್ಟುಕೊಳ್ಳುವುದೂ ಸುಲಭವಲ್ಲ. ಈ ನಿರಾಶಾದಾಯಕ ಸನ್ನಿವೇಶದಲ್ಲಿ ಸರ್ ಕ್ರಿಸ್ಟೋಫರ್ ಆಂಡ್ರೂಸರು ಮಾನವ ಸ್ವಯಂಸೇವಕರನ್ನು ಉಪಯೋಗಿಸಲು ನಿರ್ಧರಿಸಬೇಕಾಯಿತು.

ಪೂರ್ವನಿರ್ಮಿತ ಕಟ್ಟಡಗಳನ್ನು ಚಿಕ್ಕ

ಚಿಕ್ಕ ಬಿಡಾರಗಳಾಗಿ ವಿಂಗಡಿಸಲಾಯಿತು. ಪತ್ರಿಕೆ ಮತ್ತು ರೇಡಿಯೋ ಮೂಲಕ ಸ್ವಯಂಸೇವಕರಿಗಾಗಿ ಜಾಹಿರಾತು ಮಾಡಲಾಯಿತು. ಸ್ವಯಂಸೇವಕರು ಒಂದೊಂದು ಬಿಡಾರದಲ್ಲಿ ಇಬ್ಬಿಬ್ಬರಂತೆ ಹತ್ತು ದಿನಗಳ ವರೆಗೆ ಏಕಾಂತವಾಸ ಮಾಡಬೇಕು; ಬಿಸಿ ಬಿಸಿ ಊಟವನ್ನು ಅವರ ಬಾಗಿಲಲ್ಲಿಡಲಾಗುವುದು; ದಿನಕ್ಕೊಂದು ಶೀಸೆ ಬೀರ್ ಕೊಡಲಾಗುವುದು; ಓದಲು ಪುಸ್ತಕ, ಒಂದು ರೇಡಿಯೋ ಇರುವುವು; ಮೇಲೆ ದಿನಕ್ಕೆ ಎರಡು ರೂಪಾಯಿ ಭತ್ತೆ. ಈ ಕರಾರುಗಳ ಮೇಲೆ ಈ ವರೆಗೆ ೨,೦೦೦ ಜನರು ಸ್ವಯಂಸೇವಕರಾಗಲು ಮುಂದೆ ಬಂದಿದ್ದಾರೆ. ಅವರಲ್ಲಿ ಪರೀಕ್ಷಾರ್ಥಿಗಳಾದ ಅಂಡರ್ ಗ್ರಾಜುಯೇಟರು, ಏಕಾಂತವನ್ನು ಬಯಸುವ ಲೇಖಕರು, ಸೋತ ಮಾತೆಯರು, ಕೆಲವೊಮ್ಮೆ ನವವಿವಾಹಿತ ದಂಪತಿಗಳು ಕೂಡ ಇದ್ದಾರೆ.

ಈ ಪುಕ್ಕಟೆ ಸೌಕರ್ಯಕ್ಕೆ ಪ್ರತಿಯಾಗಿ ಸ್ವಯಂಸೇವಕರು ಸಂಶೋಧನೆಯ "ಶಾಸ್ತ್ರ"ಕ್ಕೆ ಗುರಿಯಾಗಬೇಕು. ಮೊದಲೇ ನೆಗಡಿ ಹಿಡಿದುಕೊಂಡು ಅವರಲ್ಲಿ ಬಂದಿಲ್ಲವೆಂದು ಖಾತ್ರಿ ಮಾಡಿಕೊಳ್ಳಲೆಂದು ಮೊದಲು ನಾಲ್ಕು ದಿನ ಅವರನ್ನು "ಲಕ್ಷ"ದಲ್ಲಿಡಲಾಗುತ್ತಿತ್ತು. ಈ ಹಿಂದಿನ ಪರಿಶೀಲನೆಗಳಿಂದ ನೆಗಡಿಯು ತಗಲಿದ ನಂತರ ಒಂದರಿಂದ ಮೂರು ದಿನಗಳೊಳಗೆ ಅದು ವ್ಯಕ್ತಾವಸ್ಥೆಗೆ ಬರುತ್ತದೆಂದು ಸೂಚಿತವಾಗಿತ್ತು. (ಉದಾಹರಣೆಗೆ ಧ್ರುವಪ್ರದೇಶಗಳ ಪಟ್ಟಣಗಳಲ್ಲಿ ಹೊಸತಾಗಿ ಹಡಗುಗಳು ಬಂದ ಮೂರು ದಿನಗಳಲ್ಲಿ ನೆಗಡಿಯ ಓಡುಗು ಪ್ರಾರಂಭವಾಗುತ್ತದೆ.)

ಬಂದ ಐದನೇ ದಿವಸ ಸ್ಯಾಲಿಸ್‌ಬರಿಯ ಸ್ವಯಂಸೇವಕರ ಮೂಗುಗಳಿಗೆ ನೆಗಡಿಯಾದವರ ಮೂಗುಗಳಿಂದ ತೆಗೆದ ನೀರಿನ ಬಿಂದುಗಳನ್ನು ಬಿಡಲಾಗುತ್ತಿತ್ತು. ಬಿಂದುಗಳನ್ನು ತೆಗೆದುಕೊಂಡ ನಂತರ ಸುಮಾರು ಮೂರರಲ್ಲೊಬ್ಬನಿಗೆ ನೆಗಡಿ ಉಲ್ಬಣಿಸುತ್ತಿತ್ತು. ಎಲ್ಲರಿಗೂ ಯಾಕೆ ಹಾಗಾಗುತ್ತಿರಲಿಲ್ಲ? ಬಹುಶಃ ಅವನ ನೈಸರ್ಗಿಕ ತಾಳಿಕೆಯ ಶಕ್ತಿ ರೋಗವನ್ನು ಹೊಡೆದಟ್ಟುತ್ತಿರಬೇಕು. ಸರ್ ಕ್ರಿಸ್ಟೋಫರ್ ಹೇಳಿದರು: "ನಮ್ಮ ನೈಸರ್ಗಿಕ ತಾಳಿಕೆಯ ಶಕ್ತಿ ಸರಿಯಾಗಿಲ್ಲದಾಗ ಬಲು ಚಿಕ್ಕ ಪ್ರಮಾಣದಲ್ಲಿ ವೈರಸ್ ಒಳಸೇರುವುದೇ ನೆಗಡಿ ತಾಗುವುದರ ಮೂಲವೆಂದು ಬಲವಾದ ಸಂಶಯವಿದೆ."

ಹತ್ತು ವರ್ಷಗಳು ಕಳೆದವು. ನೆಗಡಿ ತನ್ನ ಗುಟ್ಟನ್ನು ರಟ್ಟು ಮಾಡಲೇ ಇಲ್ಲ. ಅದು "ವಿಫಲ ನಿರಾಶಾದಾಯಕ ಕಾಲ" ಎನ್ನುತ್ತಾರೆ ಸರ್ ಕ್ರಿಸ್ಟೋಫರ್. ಆದರೂ ಕೆಲ ವೈದ್ಯಕೀಯ ತಥ್ಯಗಳು ಬೆಳಕಿಗೆ ಬಾರದಿರಲಿಲ್ಲ. ನೆಗಡಿಯೆಂಬುದು ಸ್ವತಃ ಬಹಳ ಮಟ್ಟಿಗೆ ನಿರುಪದ್ರವಿಯಾದ ಮೂರು ದಿನದ ಅವಸ್ಥೆಯಾಗಿದೆ: ಒಂದಿಷ್ಟು ಗಂಟಲು ಒಡೆಯುವುದು, ಇದ್ದರೆ ಸ್ವಲ್ಪ ತಲೆ ನೋವು ಮತ್ತು ಅನಿವಾರ್ಯವಾಗಿ ಮೂಗಿನಲ್ಲಿ ನೀರು ಸೋರುವುದು. ಸುಂಬಳ ಗಟ್ಟಿಯಾಗಿ ಹಳದಿ ಬಣ್ಣ ತಾಳಿತೆಂದರೆ, ನೆಗಡಿಯ ವೈರಸ್ಸು ಅಣಿಗೊಳಿಸಿದ ಮ್ಯೂಕಸ್ ಮೆಂಬ್ರೇನಿನ ಉಬ್ಬಿ ಉರಿಯುವ ಕ್ಷೇತ್ರದ ಮೇಲೆ ಜೀವಾಣುಗಳ ಪ್ರಭುತ್ವ ಪ್ರಾರಂಭವಾಗಿದೆಯೆಂದರ್ಥ. ಈ ಜೀವಾಣುಗಳು ಸದಾ ನಮ್ಮ ಮೂಗು ಗಂಟಲುಗಳಲ್ಲಿ ಇದ್ದೇ ಇರುತ್ತವೆ. ನಮ್ಮ ಗಂಟಲ ಮೇಲೆ, ಮೂಗುಗಳ ಪಟಲಗಳ ಮೇಲೆ ದಾಳಿ ಮಾಡಲು ಜೀವಾಣುಗಳಿಗೆ ವೈರಸ್ಸುಗಳು ದಾರಿ ಮಾಡಿಕೊಡುತ್ತವೆಂದು ಸಂಶೋಧಕರು ತೀರ್ಮಾನಿಸಿದರು.

ಇನ್ನೂ ಹಲ ಚಿಕ್ಕ ಪುಟ್ಟ ತಥ್ಯಗಳನ್ನೂ ಸಂಶೋಧಕರು ಗುರುತಿಸಿದರು. ನೆಗಡಿಯ ವೈರಸ್ಸು ಸೋಜಿಗವೆನಿಸುವಷ್ಟು ಚಿಕ್ಕದು–ಸಾಧಾರಣ ಜೀವಾಣುವಿನ ೧/೩೦೦ರಷ್ಟು ಗಾತ್ರ ಅದರದು ಎಂದು ಸ್ಪಷ್ಟವಾಯಿತು. ಪ್ರಯೋಗಶಾಲೆಯಲ್ಲಿ ೫೦ ಮಿಲಿ–ಮೈಕ್ರಾನ್ ವ್ಯಾಸದ, ಸೂಕ್ಷ್ಮದರ್ಶಕಕ್ಕೂ ಕಾಣಿಸದ ರಂಧ್ರಗಳು ಮಾತ್ರ ಇರುವ ಫಿಲ್ಟರ್ ಮೂಲಕ ಕೂಡ ಈ ವೈರಸ್ಸುಗಳು ದಾಟಿ ಹೋಗಬಲ್ಲವು. ಮೇಲಾಗಿ,

ಅವು ಬಲು ತಾಳಿಕೆಯುಳ್ಳವುಗಳು. ಅವುಗಳನ್ನು ಹಿಮಶೈತ್ಯಕ್ಕೊಳಪಡಿಸಿ ವರ್ಷಗಟ್ಟಳೆ ಹಾಗೇ ಇಟ್ಟರೂ ನೆಗಡಿಯನ್ನುಂಟುಮಾಡುವ ಶಕ್ತಿಯನ್ನು ಕಳೆದುಕೊಳ್ಳುವುದಿಲ್ಲ.

ಥಂಡಿಯಾದರೆ ನೆಗಡಿ ಬರುತ್ತದೆಂಬ ಸಾಮಾನ್ಯ ಅಭಿಪ್ರಾಯವನ್ನೂ ಸ್ಯಾಲಿಸ್‌ಬರಿ ಸಂಶೋಧಕರು ಪರೀಕ್ಷಿಸಿದರು. ಫೆಬ್ರುವರಿ ಹವೆಯಲ್ಲಿ ಅವರು ಸ್ವಯಂಸೇವಕರಿಗೆ ಬಿಸಿ ಬಿಸಿ ಸ್ನಾನ ಮಾಡಿಸಿ ಆಮೇಲೆ ಬರಿ ಸ್ನಾನಹ ಚಡ್ಡಿ ತೊಡಿಸಿ ತಣ್ಣೀರನ್ನು ಅವರ ಮೇಲೆ ಹೊಯಿಸಿ, ಹಲ್ಲು ಕಟಕಟಿಸುವ ವರೆಗೂ ಚಳಿ ಹವೆಯಲ್ಲಿ ನಿಲ್ಲಿಸಿದರು. ಬೇರೆ ಕೆಲವರಿಗೆ ಇಡೀ ದಿನ ಒದ್ದೆ ಕಾಲ್ಚೀಲ ತೊಟ್ಟುಕೊಳ್ಳಲು ಕೇಳಿಕೊಂಡರು. ಯಾರಿಗೂ ಮೂಗಿನೊಳಗೆ ವೈರಸ್‌ಯುಕ್ತ ಬಿಂದುಗಳನ್ನು ಹಾಕಿಹ ಹೊರತು ನೆಗಡಿಯಾಗಲಿಲ್ಲ.

ಇಷ್ಟೆಲ್ಲ ವಿಷಯಸಂಗ್ರಹ ಮಾಡಿ ನೆಗಡಿಯ ಹಿಂದೆಂದಿಗಿಂತ ಅತಿ ಪರಿಪೂರ್ಣವಾದ ಚಿತ್ರವನ್ನವರು ಜೋಡಿಸಿದರೂ ಸಂಶೋಧಕರಿಗೆ ಈ ವೈರಸ್ಸನ್ನು ಪ್ರಯೋಗ ನಲಿಕೆಯಲ್ಲಿ ಹಿಡಿದು ಹಾಕಿ ಅದರ ದುರಾಚಾರಗಳನ್ನೂ ದೌರ್ಬಲ್ಯಗಳನ್ನೂ ಪರೀಕ್ಷಿಸಲು ಮಾತ್ರ ಸಾಧ್ಯವಾಗಲಿಲ್ಲ.

ಮೊದಲನೇ ಸಮಸ್ಯೆಯೆಂದರೆ ನೆಗಡಿ ವೈರಸ್ಸಿಗೆ ಪ್ರಿಯವಾದ, ಅದು ಪ್ರಯೋಗ ನಲಿಕೆಯಲ್ಲಿ ತಿಂದು ಬೆಳೆಯಬಹುದಾದ ಆಹಾರವನ್ನು ಕಂಡು ಹಿಡಿಯಲು ಸಂಶೋಧಕರಿಗಾಗಲಿಲ್ಲ. ಈ ಬಗ್ಗೆ ಹತ್ತು ವರ್ಷಕ್ಕೂ ಹೆಚ್ಚು ಕಾಲ ಅವರು ತಲೆ ಕೆರೆದುಕೊಂಡರು. ಜೀವಾಣುಗಳು ಏನನ್ನೂ ತಿಂದು ಬದುಕುತ್ತವೆ. ವೈರಸ್ಸುಗಳಿಗೆ ಜೀವಂತ ಟಿಶ್ಯೂಗಳೇ ಬೇಕು. ಉದಾಹರಣೆಗೆ ಹಳದಿ ಜ್ವರ ಮತ್ತು ಇನ್‌ಫ್ಲುಯೆಂಜಾ ವೈರಸ್ಸುಗಳು ಕೋಳಿ ತತ್ತಿಯಲ್ಲಿರುವ ಬೆಳೆಯುತ್ತಿರುವ ಭ್ರೂಣಗಳ ಮೇಲೆ ಸಮೃದ್ಧಿ ಹೊಂದುತ್ತವೆ. ಆದರೆ ನೆಗಡಿ ವೈರಸ್ಸುಗಳು ಅದನ್ನು ತಿರಸ್ಕರಿಸುತ್ತವೆ. ಹಾಗಾದರೆ ಶಸ್ತ್ರಕ್ರಿಯೆಯಲ್ಲಿ ತೆಗೆದ ಮಾನವನ ಗಂಟಲ ಟಿಶ್ಯೂಗಳು ಅವುಗಳಿಗೆ ಸೇರಬಹುದೆ? ಅಲ್ಲಿಯೆ ತಾನೆ ಅವು ವಾಸಿಸುವುದು? ಆದರೆ ಅದೂ ಪ್ರಯೋಜನವಾಗಲಿಲ್ಲ. ಪುಪ್ಪುಸದ ಟಿಶ್ಯೂ, ಮೂಗಿನೊಳಗಿನ ಟಿಶ್ಯೂ? ಊಂಹುಂ.

ಈ ನಿರಾಶೆಯ ಸ್ಥಿತಿಯಲ್ಲಿ ಅಮೇರಿಕದ ಹರವಾರ್ಡ್ ವಿಶ್ವವಿದ್ಯಾಲಯದಿಂದ ಒಂದು ಬಿಸಿಬಿಸಿ ಸೂಚನೆ ಬಂತು. ಮುಂದೆ ನೋಬೆಲ್ ಬಹುಮಾನ ಪಡೆಯಲಿದ್ದ ಡಾ. ಜಾನ್ ಎಂಡರ್ಸರು ಮಂಗನ ಮೂತ್ರಪಿಂಡದಿಂದ ತೆಗೆದ ಟಿಶ್ಯೂ ಮೇಲೆ ಪೋಲಿಯೋ ರೋಗದ ವೈರಸ್ಸನ್ನು ಬೆಳಸುವುದರಲ್ಲಿ ಯಶಸ್ವಿಯಾಗಿದ್ದರು. ಸ್ಯಾಲಿಸ್‌ಬರಿಯ ಸಂಶೋಧಕರು ನೆಗಡಿ ವೈರಸ್ಸುಗಳಿಗೆ ಇದು ಇಷ್ಟವಾಗುತ್ತದೆಯೇ ಎಂದು ನೋಡಿದರು. ಮತ್ತೆ ದುರದೃಷ್ಟವೇ. ಆದರೆ ಮಾನವ ಭ್ರೂಣಗಳ ಮೂತ್ರಪಿಂಡಗಳಿಂದ ತೆಗೆದ ಟಿಶ್ಯೂವಾದರೂ ಅವುಗಳಿಗೆ ಮೆಚ್ಚೀತೇ ಎಂದೊಂದು ಯೋಚನೆ ಹೊಳೆಯಿತು. ಗರ್ಭಿಣಿಯರಿಗೆ ಗರ್ಭಪಾತ ಮಾಡಿಸಿದ ಭ್ರೂಣಗಳ ಟಿಶ್ಯೂಗಳಿಗಾಗಿ ಲಂಡನ್ನಿನ ಆಸ್ಪತ್ರೆಗಳಿಗೆ ಕರೆ ಹೋಯಿತು.

ಈ ಸಲ ನಿಜವಾಗಿ ದಾರಿ ಸಿಕ್ಕಿದಂತೆ ಕಂಡಿತು. ವೈರಸ್ಸುಗಳು ಮಾನವ ಭ್ರೂಣದ ಮೂತ್ರಪಿಂಡದ ಟಿಶ್ಯೂಗಳ ಮೇಲೆ ಬದುಕಿ ಬೆಳೆಯುವಂತೆ ತೋರಿತು. ಆದರೂ ಬೆಳವಣಿಗೆ ಮಂದವಾಗಿಯೆ ಇತ್ತು.

ಅಷ್ಟರಲ್ಲಿ ಒಂದು ಆಕಸ್ಮಿಕ ಘಟಿಸಿತು. ಮೂತ್ರಪಿಂಡದ ಟಿಶ್ಯುಗಳನ್ನು ಪೋಷಿಸಲು ನಂ. ೧೯೯ ಎಂಬ ಪೋಷಕ ಸಾರವನ್ನು ಅವುಗಳಿಗೆ ಕೊಡಲಾಗುತ್ತಿತ್ತು. ಅದರಲ್ಲಿ ವಿಟಮಿನ್‌ಗಳು, ಖನಿಜಗಳು, ಅಮಿನೋ ಆಮ್ಲಗಳು ಮತ್ತು ಸೋಡಾ ಬೈಕಾರ್ಬೊನೇಟ್ ಇದ್ದವು. ಆಗ (೧೯೫೯ ರಲ್ಲಿ) ಇನ್ನೂ ಸ್ವಲ್ಪವೂ ಅರ್ಥವಾಗದ ಕಾರಣಗಳಿಗಾಗಿ ನೆಗಡಿ ವೈರಸ್ಸುಗಳು ಅಭೂತ ಪೂರ್ವ ಉತ್ಸಾಹದಿಂದ ಬೆಳೆಯ ತೊಡಗಿದವು. ಅವು ಮೂತ್ರಪಿಂಡ ಟಿಶ್ಯೂಗಳನ್ನು ಆಕ್ರಮಿಸಿ ಧಕ್ಕೆಗೊಳಿಸಿದ್ದವೆಂದು

ಕೂಡ ಸೂಕ್ಷ್ಮದರ್ಶಕದಲ್ಲಿ ವ್ಯಕ್ತವಾಯಿತು. ನೆಗಡಿ ವೈರಸ್ಸನ್ನು ಪ್ರಯೋಗಶಾಲಾ ಪರೀಕ್ಷೆಗೊಳಪಡಿಸಲು ಅದು ನಾಂದಿಯಾಯಿತು.

ಪರೀಕ್ಷಿಸಿದಾಗ ಇದೆಲ್ಲ ಏಕಾಯಿತೆಂದು ತಿಳಿಯಿತು. ಯಾರದೋ ತಪ್ಪಿನಿಂದ ನಂ. ೧೯೯ ಪೋಷಣ ಸಾರದಲ್ಲಿ ಗೊತ್ತುಪಡಿಸಿದ ಪ್ರಮಾಣದ ಅರ್ಧಾಂಶ ಮಾತ್ರ ಸೋಡಾ ಬೈಕಾರ್ಬೊನೇಟ್ ಇತ್ತು. ಹೀಗೆ ಅದರ ಆಲ್ಕಲೈನ್ ಸ್ವಭಾವ ಕಡಿಮೆಯಾದುದೇ ವೈರಸ್ ವೃದ್ಧಿ ಹೊಂದಲು ದಾರಿ ಮಾಡಿ ಕೊಟ್ಟಿತ್ತು.

ಸಂಶೋಧಕ ತಂಡದ ತರುಣ ಸದಸ್ಯರಾದ ಡಾ. ಡೇವಿಡ್ ಟೈರೆಲ್ಲರು ತಮ್ಮ ಸಂತ ಮೂಗಿನ ಆಮ್ಲತ್ವವನ್ನು ಪರೀಕ್ಷಿಸಿದರು. ಅದೂ ನಂ. ೧೯೯ ರ ತಪ್ಪು ಮಿಶ್ರಣವೂ ಹೆಚ್ಚು ಕಡಿಮೆ ಒಂದೇ ಬಗೆಯಾಗಿದ್ದವು. ಅನಂತರ ಥರ್ಮಾಮೀಟರನ್ನು ಮೂಗಿನೊಳಗೆ ತೂರಿದರು. ಹೆಚ್ಚು ಕಡಿಮೆ ಯಾವಾಗಲೂ ಅಲ್ಲಿಯ ಉಷ್ಣತೆ ೯೧ ಅಂಶ ಫೆರೆನ್‌ಹೈಟ್‌ನಷ್ಟಿತ್ತು.

ನೆಗಡಿ ವೈರಸ್ಸಿಗೆ ಯಾವ ಆಹಾರ ಸೇರುತ್ತದೆ, ಮತ್ತು ಯಾವ ಉಷ್ಣತಾಮಾನದಲ್ಲಿ ಅದು ತುಂಬಾ ಚೆನ್ನಾಗಿ ಬೆಳೆಯುತ್ತದೆ ಎಂದು ಈಗ ಗೊತ್ತಾಯಿತು. ಕಟ್ಟಕಡೆಗೊಮ್ಮೆ ಮಾನವ ಕುಲದ ಪೀಡೆ ಪ್ರಯೋಗಶಾಲೆಯಲ್ಲಿ ಸಿಕ್ಕಿಬಿದ್ದಿತು. ನಲಿಕೆಯಿಂದ ನಲಿಕೆಗೆ ೨೦ ಅಥವಾ ಅದಕ್ಕೂ ಹೆಚ್ಚು ಸಲ ಬದಲಾಯಿಸಿದರೂ ನಿರಾಬಾಧವಾಗಿ ಬೆಳವಣಿಗೆ ಸಾಗಿತು. ಈ ನಲಿಕೆಗಳಿಂದ ತೆಗೆದ ರಸವು ಮಾನವ ಸ್ವಯಂಸೇವಕರಲ್ಲಿ ನೆಗಡಿಯನ್ನುಂಟುಮಾಡಿತು.

ಇದೆಲ್ಲದರ ಅರ್ಥ ? ಯಾವುದೇ ರೋಗಕ್ಕೆ ಪ್ರತಿಬಂಧಕ ಚುಚ್ಚು ಮದ್ದು ಹುಡುಕಬೇಕಾದರೆ ಪ್ರಥಮತಃ ಅದರ ವೈರಸ್ ಅಥವಾ ಜೀವಾಣುಗಳನ್ನು ಪ್ರಯೋಗಶಾಲೆಯಲ್ಲಿ ಬೆಳೆಯಲು ಸಾಧ್ಯವಾಗಬೇಕು, ಧಾರಾಳವಾಗಿ ಬೆಳೆಯಲು ಸಾಧ್ಯವಾಗಬೇಕು. ಅನಂತರ ಆ ವೈರಸ್ಸನ್ನು ಕೊಂದು (ಡಾ. ಸಾಕರ ಪೋಲಿಯೊ ಚುಚ್ಚು ಮದ್ದಿನ ಹಾಗೆ) ಅಥವಾ ದುರ್ಬಲಗೊಳಿಸಿ ಮನುಷ್ಯರ ಮೇಲೆ ಪ್ರಯೋಗಿಸಲು ಧೈರ್ಯ ಮಾಡಬೇಕು.

ಇದಕ್ಕೆ ಇನ್ನೂ ಕಾಲ ಬಂದಿಲ್ಲ. ಮೊದಲು ನೆಗಡಿಕಾರಕ ವೈರಸ್ಸುಗಳಲ್ಲಿ ಜಾತಿಗಳೆಷ್ಟು ಎಂದು ತಿಳಿಯಬೇಕು. ಈ ವರೆಗೆ ಒಂಭತ್ತು ಜಾತಿಗಳನ್ನು ಗುರುತಿಸಿದ್ದಾಗಿದೆ. ಹೆಚ್ಚಿನ ನೆಗಡಿಗಳೆಲ್ಲಮೂರು ನಾಲ್ಕು ಜಾತಿಗಳಿಂದಲೇ ಆಗುತ್ತವೆಂದೂ ಅವುಗಳನ್ನೆಲ್ಲ ಒಂದೇ ಚುಚ್ಚುಮದ್ದಿನಲ್ಲಿ ಒಳಪಡಿಸಬಹುದೆಂದೂ ಆಶಿಸಲಾಗಿದೆ.

ಈ ಘಟನೆಗಳು ಸ್ಯಾಲಿಸ್‌ಬರಿಯಲ್ಲಿ ಘಟಿಸುತ್ತಿದ್ದಾಗಲೇ ಲಂಡನ್ನಿನ ಉತ್ತರದಲ್ಲಿ, ಮಿಲ್ ಗುಡ್ಡದ ಇನ್ನೊಂದು ಪ್ರಯೋಗಶಾಲೆಯಲ್ಲಿ ಇತರ ಮಹತ್ವದ ಕೆಲಸ ಸಾಗಿತ್ತು. ಅಲ್ಲಿ ಡಾ. ಅಲಿಕ್ ಐಜಾಕರೆಂಬ ತರುಣ ಸಂಶೋಧಕರು ಮಾನವ ಶರೀರವು ವೈರಸ್ಸಿನಿಂದ ಆಕ್ರಮಿಸಲ್ಪಟ್ಟೊಡನೆ ಅದನ್ನೆದುರಿಸಲು ಪ್ರತಿಬಂಧಕ ಪ್ರೋಟೀನ್ ದ್ರವ್ಯವೊಂದನ್ನು ಉತ್ಪಾದಿಸುತ್ತದೆಂದು ಕಂಡುಹಿಡಿದರು. ಅದು ವೈರಸ್ಸಿನ ಅಭಿವೃದ್ಧಿಗೆ ಆತಂಕವೊಡ್ಡುವುದರಿಂದ ಅದಕ್ಕೆ ಅವರು "ಇಂಟರ್‌ಫೆರಾನ್" ಎಂದು ಹೆಸರಿಟ್ಟರು. ಇದನ್ನು ಶರೀರವು ದೊಡ್ಡ ಪ್ರಮಾಣದಲ್ಲಿ ಸ್ರವಿಸುವುದಿಲ್ಲ. ರಕ್ತದಲ್ಲಿ ಆಕ್ರಮಣವನ್ನು ಎದುರಿಸಲು ರೋಗಾಣುನಿರೋಧಕ ಆಂಟಿಬಾಡಿ ದ್ರವ್ಯ ಶೇಖರವಾಗುವವರೆಗೆ ಕೋಟೆಯ ಬಾಗಿಲು ಕಾಯಲು ಬೇಕಾಗುವಷ್ಟು ಮಾತ್ರ ಇಂಟರ್‌ಫೆರಾನ್ ಉತ್ಪತ್ತಿಯಾಗುತ್ತದೆ. ಆದರೆ ಸಾಕಷ್ಟು ಪ್ರಮಾಣದಲ್ಲಿ ಇಂಟರ್‌ಫೆರಾನ್ ಉತ್ಪತ್ತಿಯಾದರೆ ಆಂಟಿಬಾಡಿಗಳ ಸಹಾಯವಿಲ್ಲದೆ ವೈರಸ್ ಆಕ್ರಮಣವನ್ನು ತಡೆಯಬಹುದಲ್ಲವೆ? ಆಗ ಬಲುಗಾಲದಿಂದ ಬಯಸಿದ ನೆಗಡಿ ನಿರೋಧಕ ಗುಳಿಗೆಯೆಂಬ ಮಾಯಾಮೃಗ ಕೈಗೆ ಸಿಕ್ಕಿದಂತಾದೀತಲ್ಲವೆ? ಇವೆರಡೂ ಪ್ರಶ್ನೆಗಳಿಗೆ ಹೌದೆಂಬ ಉತ್ತರ ದೊರೆಯುವ ಸಂಭವ ಬಹಳವಾಗಿದೆ.

ರಸಾಯನ ಶಾಸ್ತ್ರಜ್ಞರ ತಂಡಗಳು ವೈರಸ್ಸ

ನ್ನೆದುರಿಸಲು ಶರೀರದ ಕೋಶಗಳು ಹೊರಹೊಮ್ಮಿಸುವ ಈ ಮಾಯಕದ ಪದಾರ್ಥವನ್ನು ಪ್ರತ್ಯೇಕಿಸಲು ಯತ್ನಿಸಿದಾಗ ಅದೊಂದು ಬಿಳಿ ಪುಡಿಯೆಂದು ಸಿದ್ಧವಾಯಿತು. ದೊರೆತ ಅಲ್ಪಾಂಶ ದ್ರವ್ಯವನ್ನು ಪ್ರಾಣಿಗಳ ಮೇಲೆ ಪ್ರಯೋಗಿಸಿದರು. ಘಾತಕವಾದ ನಿದ್ರಾರೋಗ ವೈರಸ್‌ಗಳಿಂದ ಗ್ರಸ್ತವಾದ ಇಲಿಗಳಿಗೆ ಇಂಟರ್‌ಫೆರಾನ್ ಕೊಟ್ಟಾಗ ಅವು ತತ್‌ಕ್ಷಣ ಚೇತರಿಸಿಕೊಂಡವು. ವೈರಸ್-ನ್ಯುಮೋನಿಯಾ ಮೊದಲಾದ ಜಾಡ್ಯಗಳಲ್ಲೂ ಹೀಗೇ ಆಯಿತು. ಪ್ರಯೋಗಶಾಲೆಯಲ್ಲಂತೂ ನೆಗಡಿಯ ವೈರಸ್ಸನ್ನೊಳಗೊಂಡು ಈ ವರೆಗೆ ಪರೀಕ್ಷೆಗೊಳಗಾದ ಎಲ್ಲ ಜಾತಿಯ ವೈರಸ್ಸುಗಳ ಮೇಲೂ ಇಂಟರ್‌ಫೆರಾನ್ ಫಲಕಾರಿಯಾಗಿದೆ.

ನೆಗಡಿ ಸಮಸ್ಯೆಯ ಅಂಶಗಳೆಲ್ಲ ಬಿಡಿಸಲ್ಪಟ್ಟಿರುವುದರಿಂದ ಅದನ್ನು ಓಡಿಸುವ ಕಾಲ ಹತ್ತಿರವೇ ಇರಬಹುದು. ಸರ್ ಕ್ರಿಸ್ಟೋಫರ್ ಆಂಡ್ರೂಸ್ ಹೇಳುತ್ತಾರೆ: "ನಾವು ಸರಿಯಾದ ದಾರಿ ಹಿಡಿದಿದ್ದೇವೆಂದು ನಮಗೀಗ ಅನಿಸುತ್ತಿದೆ." *

Condensed from Today's Health and translated and reprinted by permission of the Readers Digest Association Ltd. (Indian Edition— January 1962).



ಮಗುವಿನ ಮಾತು

ಪುಟ್ಟಮಗು— (ತಾಯಿಯೊಡನೆ) ದನದಿಂದ ಹಾಲು ಹೇಗೆ ಬರುತ್ತದಮ್ಮ?

ತಾಯಿ— (ಸರಿಯಾಗಿ ಉತ್ತರ ಹೇಳಲು ತಿಳಿಯದೆ) ನಿನಗೆ ಕಣ್ಣೀರು ಯಾವ ರೀತಿಯಲ್ಲಿ ಬರುತ್ತದೋ ಹಾಗೆ! ತಿಳಿಯಿತೇ? ಎಂದು ಮಗುವಿಗೇ ಸವಾಲು ಹಾಕಿದಳು.

ಮಗು— ಹಾಗಾದರೆ ದನ ಹಾಲು ಕೊಡಬೇಕಾದರೆ ಅದಕ್ಕೆ ಹೊಡೆಯಬೇಕೇನಮ್ಮಾ?"

—ಬಿ. ಸಚ್ಚಿದಾನಂದ ಹೆಗಡೆ

* *

ಸಮುದ್ರ ದಂಡೆಯ ಹತ್ತಿರ ಕುಳಿತ ತಾಯಿ ತನ್ನ ಸಣ್ಣ ಮಗುವಿಗೆ "ಮಗೂ ನೀನು ಹಾಗೆ ಉಸುಕನ್ನು ಜನರ ಕಡೆಗೆ ತೂರಬಾರದು. ಅವರ ಕಣ್ಣಲ್ಲಿ ಉಸುಕು ಹೋಯಿತೆಂದರೆ, ಅವರಿಗೆ ತ್ರಾಸಾಗುತ್ತದೆ. ನಿನಗೆ ಉಸುಕು ತೂರಲೇ ಬೇಕೆನಿಸಿದರೆ, ನಿಮ್ಮಪ್ಪನ ಕಣ್ಣುಗಳಿಗೆ ತೂರು" ಎಂದಳು. —ಪಿ. ಜಿ. ಪ್ಯಾಟಿ

* *

"ಮಗು, ಸುಳ್ಳು ಹೇಳುವುದು ಬಲು ಕೆಟ್ಟದ್ದು. ಯಾವಾಗಲೂ ನಿಜವನ್ನೇ ಹೇಳಬೇಕು. ನಾನು ನಿನ್ನಷ್ಟಿದ್ದಾಗ ಎಂದೂ ಸುಳ್ಳು ಹೇಳುತ್ತಿರಲಿಲ್ಲ"

"ಹೌದೇ! ಹಾಗಾದರೆ, ಅಪ್ಪಾ ನೀವು ಎಷ್ಟು ವರ್ಷದವರಾದಮೇಲೆ ಸುಳ್ಳು ಹೇಳಲು ಆರಂಭಿಸಿದಿರಿ?"

ಕಾಜು ಸೊಟ್ಟೆ ಎಣ್ಣೆ ಅಮೂಲ್ಯವಾಗಿದೆ

ಪ್ರೊ. ಎಸ್. ಐ. ಪಾಟೀಲ, ಎಂ. ಎಸ್‌ಸಿ.

ನೀವು ಮೆಚ್ಚಿ ತಿನ್ನುವ ಕಾಜು (ಗೋಡಂಬಿ-ಗೇರುಬೀಜ)ವಿನ ನಿರ್ಯಾತದಿಂದ ಭಾರತವು ದೊಡ್ಡ ಪ್ರಮಾಣದಲ್ಲಿ ವಿದೇಶವಿನಿಮಯ ಗಳಿಸುತ್ತದೆಂದು ಬಲ್ಲಿರಿ. ಆದರೆ ಘಾಟನ್ನು ಬೀರುವ ಅದರ ಸೊಟ್ಟೆ(ಚಿಪ್ಪು)ಯೂ ಅಮೂಲ್ಯ ಪದಾರ್ಥವೆಂದೂ ವರ್ಷಕ್ಕೆ ಅದರ ಎಣ್ಣೆಯ ನಿರ್ಯಾತ (ರಫ್ತು)ದಿಂದ ರೂ. ೬೦ ಲಕ್ಷಗಳು ದೊರೆಯುತ್ತವೆಂದೂ ಎಲ್ಲರಿಗೂ ಗೊತ್ತಿರಲಿಕ್ಕಿಲ್ಲ. ಅದಕ್ಕೂ ಹೆಚ್ಚಾಗಿ ಇಂಥದೇ ಪದಾರ್ಥಗಳನ್ನು ಪ್ರಯೋಗಶಾಲೆಯಲ್ಲಿ ತಯಾರಿಸಲು ಪಾಶ್ಚಾತ್ಯ ರಾಷ್ಟ್ರಗಳು ಬಹಳ ಪ್ರಯತ್ನಪಡುತ್ತಿವೆ ಎಂಬುದು ಆಶ್ಚರ್ಯಕರವಾದರೂ ನಿಜ ಸಂಗತಿ

ಭಾರತವು ವರ್ಷಕ್ಕೆ ೬,೨೨೦ ಟನ್ ಕಾಜು ಎಣ್ಣೆ ತಯಾರಿಸುತ್ತದೆ. ಅದರಲ್ಲಿ ೩,೫೦೦ ಟನ್ ವಿದೇಶಗಳಿಗೆ ಹೋಗುತ್ತದೆ. ಮೈಸೂರು, ಕೇರಳ, ಆಂಧ್ರ ಪ್ರದೇಶಗಳಲ್ಲೇ ಇದರ ಬಹುಭಾಗ ಉತ್ಪಾದನೆಯಾಗುತ್ತದೆ.

೧೮೫೭ ರಲ್ಲಿ ಸ್ಟಾಡ್ಲರನು ಈಥರ್ ಎಂಬ ಪ್ರವಾಹಿಯೊಡನೆ ಕಾಜು ಸೊಟ್ಟೆಗಳನ್ನು ಕುದಿಸಿ ಮೊಟ್ಟಮೊದಲು ಎಣ್ಣೆ ತೆಗೆದಂದಿನಿಂದ ಅನೇಕ ವಿಜ್ಞಾನಿಗಳು ಅದರ ಬಗ್ಗೆ ಸಂಶೋಧನೆ ನಡೆಸಿದರು. ರುಹೇಮನ್, ಪಿಳ್ಳೆ, ಎನ್. ಎಂ. ಪಟೇಲ, ಪ್ರೊ. ಡಾವ್ಸನರನ್ನು ಹೆಸರಿಸಬಹುದು. ತಿನಲು ಬಾರದ ಚರ್ಮಕ್ಕೆ ತಗಲಿದರೆ ಉರಿಯುವ, ಕಪ್ಪು ಬಣ್ಣದ ಈ ಎಣ್ಣೆಯಲ್ಲಿರುವ ರಾಸಾಯನಿಕ ದ್ರವ್ಯಗಳನ್ನು ಪೃಥಕ್ಕರಿಸಿ ಅವುಗಳ ಉಪಯೋಗವನ್ನು ತೋರಿಸಿ, ಅದಕ್ಕೆ ಮಹತ್ವ ತಂದುಕೊಟ್ಟವರು ಕೊಲಂಬಿಯ ವಿಶ್ವವಿದ್ಯಾಲಯದ ಪ್ರೊ. ಡಾವ್ಸನ್ ಮತ್ತು ಅವರ

ಪ್ರೊ. ಎಸ್. ಐ. ಪಾಟೀಲರು ಕರ್ನಾಟಕ ವಿಶ್ವವಿದ್ಯಾಲಯದ ಎಂ. ಎಸ್‌ಸಿ. ಪದವೀಧರರಿದ್ದು ೧೯೫೯ ರಲ್ಲಿ ಪ್ರಥಮ ವರ್ಗದಲ್ಲಿ ಪ್ರಥಮ ಸ್ಥಾನ ಪಡೆದು ಆ ಪದವಿ ಸಂಪಾದಿಸಿದವರು. ಸಾವಯವ ರಸಾಯನ ಶಾಸ್ತ್ರ ಅವರ ವಿಷಯವಾಗಿದೆ. ಈಗ ಅವರು ದಾವಣಗೆರೆಯ ಡಿ. ಆರ್. ಎಂ. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಕಾಜು ಸೊಟ್ಟೆ ಎಣ್ಣೆಯಲ್ಲಿ ಅವರು ಮಹತ್ವದ ಸಂಶೋಧನೆಗಳನ್ನು ಮಾಡಿರುವರು.

ಸಹೋದ್ಯೋಗಿಗಳು.

ಕಾಜು ಸೊಟ್ಟೆ ಎಣ್ಣೆಯಲ್ಲಿ ಸೇಕಡಾ ೧೦ ಪಾಲು ಕಾರ್ಡೋಲ್ ಮತ್ತು ೯೦ ಪಾಲು ಅನಾಕಾರ್ಡಿಕ್ ಆಮ್ಲ ಇರುತ್ತವೆ. ಊರ್ಧ್ವಪಾತನ (distillation) ಕ್ರಿಯೆಗೊಳಪಡಿಸಿದರೆ ಕಪ್ಪು ಬಣ್ಣದ ಈ ಅಗ್ಗ ಬೆಲೆಯ ಎಣ್ಣೆಯಿಂದ "ಕಾರ್ಡೆನಾಲ್" ಎಂಬ ತಿಳಿಹಳದಿ ಬಣ್ಣದ ಅಂದವಾದ ಪ್ರವಾಹಿ ಸಿಗುತ್ತದೆಂದು ವಿಜ್ಞಾನಿಗಳು ಕಂಡರು. ಇದೂ ಬಲು ಅಮೂಲ್ಯ ರಾಸಾಯನಿಕ.

ಈ ಮೂರೂ ಪದಾರ್ಥಗಳ ರಾಸಾಯನಿಕ ಶ್ರೇಣಿಯು ($C_{15}H_{27}$) ಅಪೂರ್ಣವಾಗಿದೆ. ಆದ್ದರಿಂದ ಉಷ್ಣತೆಗೊಳಪಟ್ಟರೆ ವಾಯುಶೋಷಣಕ್ರಿಯೆ ಪರಿಣಮಿಸಿ ಅವುಗಳಿಂದ ಘನ ಪದಾರ್ಥಗಳು ತಯಾರಾಗುತ್ತವೆ. ವಿಜ್ಞಾನಿಗಳು ರಾಸಾಯನಿಕ ಕ್ರಿಯೆಗಳನ್ನು ಪ್ರಯೋಗಿಸಿ ಇತರ ರಾಸಾಯನಿಕಗಳೊಡನೆ ಸಂಯೋಗಿಸಿ ಇವುಗಳಿಂದ ಅಸಂಖ್ಯ ಹೊಸ ಉಪಯುಕ್ತ ವಸ್ತುಗಳನ್ನು ಉತ್ಪಾದಿಸಿದ್ದಾರೆ. ಔಡಲೆಣ್ಣೆ,

ಅಗಸೆ ಎಣ್ಣೆ, ಕುಸುಬಿ ಎಣ್ಣೆಗಳಿಂದ ತಯಾರಿಸಿದ ಆಮ್ಲಗಳು, ಫೋರ್ಮಾಲ್ ಡಿಹೈಡ್, ಪುರ್ಫುರಾಲ್, ಹೆಕ್ಸಾಮಿಥಿಲೀನ್ ಟೆಟ್ರಾಮೈನ್ ಮುಂತಾದವುಗಳನ್ನು ಈ ಕ್ರಿಯೆಯಲ್ಲಿ ಉಪಯೋಗಿಸಲಾಗುತ್ತದೆ.

ಕಾಜಿನ ಸೊಟೆ ಎಣ್ಣೆಯಿಂದ ನಿರ್ಮಿಸಲಾಗುತ್ತಿರುವ ಪದಾರ್ಥಗಳು ವೈವಿಧ್ಯಪೂರ್ಣವಾಗಿವೆ. ಅನೇಕ ತರದ ಬಣ್ಣ (ಪೇಯಿಂಟ್)ಗಳು ರೇಜಿನ್‌ಗಳು, ವಾರ್ನಿಶ್‌ಗಳು, ಬೆಡಗಿನ ಮೆರುಗೆಣ್ಣೆಗಳು ಇದನ್ನುಪಯೋಗಿಸಿ ತಯಾರಾಗುತ್ತವೆ. ಇವುಗಳ ಪ್ರಯೋಜನಗಳನ್ನು ಹೆಚ್ಚಿಗೆ ಹೇಳುವ ಅಗತ್ಯವೇ ಇಲ್ಲ. ಮರದ ಸಾಮಾನುಗಳು, ಗೋಡೆ, ಕಬ್ಬಿಣ ಮೊದಲಾದ ಲೋಹಗಳ ಹೊರಮೈಯನ್ನು ಇವು ರಕ್ಷಿಸುವುದರೊಡನೆ ಅವುಗಳ ಬಾಹ್ಯಾಲಂಕಾರವನ್ನೂ ಹೆಚ್ಚಿಸುತ್ತವೆ. ಮೇಲ್ಮೈಯನ್ನು ರಕ್ಷಿಸಿದರೆ ಎಲ್ಲವನ್ನೂ ರಕ್ಷಿಸಿದಂತೆಯೆ ಎಂದು ಇಂಗ್ಲೀಷ್ ನಾಣ್ಣುಡಿಯಿದೆ. ಇದಕ್ಕೆ ಕಾಜು ಸೊಟ್ಟೆ ಎಣ್ಣೆ ಬಹಳ ಸಹಾಯಕವಾಗಿದೆ.

ನೀರು, ಸಮುದ್ರದ ನೀರು, ಗಂಧಕಾಮ್ಲ, ಅಲ್ಕಲಿ ಮತ್ತು ಕ್ಷಾರಗಳ ದ್ರಾವಣ, ಟರ್ಪೆಂಟೈನ್, ಮದ್ಯಾರ್ಕ, ಪೆಟ್ರೋಲ್ ಮುಂತಾದವುಗಳಿಂದ ಕೆಡದಿರುವ ಬಣ್ಣಗಳಿಗೋಸ್ಕರ ಕಾಜು ಎಣ್ಣೆಯನ್ನೇ ಉಪಯೋಗಿಸುತ್ತಾರೆ. ನೆಯ್ಗೆ ಯಂತ್ರಗಳಲ್ಲಿರುವ ಬಾಬಿನ್, ಪ್ರಯೋಗಶಾಲೆಗಳಲ್ಲಿನ ಮೇಜುಗಳು, ಹಡಗು-ದೋಣಿಗಳು, ರೇಲುಕಂಬಿಗಳ ಕೆಳಗಿರುವ ಮರದ ತುಂಡುಗಳಿಗೆ ಇಂಥ ಬಣ್ಣಗಳನ್ನೆ ಹಚ್ಚುತ್ತಾರೆ. ನೀರು, ಪೆಟ್ರೋಲ್, ಟರ್ಪೆಂಟೈನ್, ಮದ್ಯಾರ್ಕ ಮುಂತಾದವುಗಳನ್ನು ಸಂಗ್ರಹಿಸಿಡುವ ಪಾತ್ರೆಗಳ ಅಂತರಾಚ್ಛಾದನಕ್ಕೂ ಈ ಬಣ್ಣಗಳನ್ನು ಹಚ್ಚಲಾಗುತ್ತದೆ. ಇವುಗಳನ್ನು ಹಚ್ಚಿದರೆ ಲೋಹಗಳು ಜಂಗು ತಿನ್ನುವುದಿಲ್ಲ, ಮರದ ಸಾಮಾನುಗಳು ಬೂಸರ ಅಥವಾ ಕ್ರಿಮಿಗಳ ಕಾಟದಿಂದ ನಾಶವಾಗುವುದಿಲ್ಲ.

ವ್ಯವಹಾರ ದೃಷ್ಟಿಯಿಂದ, ಟನ್ನಿಗೆ ರೂ. ೪೦೦ ರಿಂದ ೮೦೦ ವರೆಗೆ ಬೆಲೆಯಿರುವ ಕಾಜು ಸೊಟ್ಟೆ ಎಣ್ಣೆ ಅತಿ ಅಗ್ಗವಾದ ತೈಲಗಳಲ್ಲೊಂದೆಂಬುದು ಸಂಶೋಧಕರನ್ನು ಆಕರ್ಷಿಸಲು ಒಂದು ಕಾರಣವಾಗಿದೆ. ಸದ್ಯಕ್ಕೆ ಕಾಜು ಸುಲಿಯುವ ಕಾರ್ಖಾನೆಗಳಲ್ಲಿ, ಕಾಜುವನ್ನು ಹೊರತೆಗೆದ ಮೇಲೆ ಸೊಟ್ಟೆಗಳನ್ನು ಕಪ್ಪಾಗುವ ವರೆಗೆ ಕಾಯಿಸಿ ಈ ಎಣ್ಣೆ ಹೊರದೆಗೆಯುತ್ತಾರೆ. ಸೊಟ್ಟೆಯಲ್ಲಿ ಸೇಕಡಾ ೧೨ ರಿಂದ ೩೫ ವರೆಗೆ ಎಣ್ಣೆ ಇರುತ್ತದೆ. ಆದರೆ ಎಣ್ಣೆ ತೆಗೆಯಲು ಉಪಯೋಗಿಸುವ ಪದ್ಧತಿ ಅಷ್ಟು ಸರಿಯಾಗಿಲ್ಲವಾದ್ದರಿಂದ ಇದರಿಂದ ಸಿಗಬಹುದಾದಷ್ಟು ಎಣ್ಣೆ ಸಿಗುತ್ತಿಲ್ಲ. ಆಧುನಿಕ ಪದ್ಧತಿಗಳನ್ನುಪಯೋಗಿಸಿದರೆ ಭಾರತದಲ್ಲಿ ವರ್ಷಕ್ಕೆ ೩೩,೦೦೦ ಟನ್ ಎಣ್ಣೆ ತೆಗೆಯಬಹುದೆಂದು ಅಂದಾಜಿದೆ.

ಸದ್ಯಕ್ಕೆ ಅತಿ ಮಹತ್ವದ್ದಾದ ಕಾಜು ಸೊಟ್ಟೆ ಎಣ್ಣೆಯ ಗುತ್ತಿಗೆ ಭಾರತಕ್ಕೇ ಇದೆ. ಇದರ ಬಹುಭಾಗ ವಿದೇಶಗಳಿಗೆ ಹೋಗುತ್ತದೆ. ಆದರೆ ಇದರಿಂದ ಸಂತುಷ್ಟರಾಗಿ ಸುಮ್ಮನಿರುವಂತಿಲ್ಲ. ವೈಜ್ಞಾನಿಕ ಪ್ರಪಂಚದಲ್ಲಿ ಮುಂದುವರಿದ ವಿದೇಶಗಳು ಸಂಶೋಧನೆಯಿಂದ ಇದಕ್ಕೆ ಪ್ರತಿ ಪದಾರ್ಥವೊಂದನ್ನು ಕಂಡುಹಿಡಿಯಬಹುದು. ಆ ಮೇಲೆ ಅವು ನಮ್ಮಿಂದ ಈ ಎಣ್ಣೆ ಕೊಳ್ಳದಿರಬಹುದು. ಆದ್ದರಿಂದ ಕಾಜು ಸೊಟ್ಟೆ ಎಣ್ಣೆಯ ಉಪಯೋಗವನ್ನು ಸ್ವದೇಶಗಳಲ್ಲೇ ಹೆಚ್ಚಿಸಬೇಕೆಂದು ಭಾರತದ ವಿಜ್ಞಾನಿಗಳು ತುರುಸಿನಿಂದ ಪ್ರಯತ್ನಿಸುತ್ತಿದ್ದಾರೆ. ಭಾರತದಲ್ಲಿ ಕಾರ್ಬೋಲಿಕ್ ಆಮ್ಲದಂಥ ರಾಸಾಯನಿಕಗಳು ದೊಡ್ಡ ಪ್ರಮಾಣದಲ್ಲಿ ತಯಾರಾಗುತ್ತಿಲ್ಲ. ಆದರೆ ಅದನ್ನು ಹೋಲುವ ದ್ರವ್ಯಗಳುಳ್ಳ ಕಾಜು ಸೊಟ್ಟೆ ಎಣ್ಣೆ ತಯಾರಾಗುತ್ತಿರುವುದು ಸುದೈವವೇ. ಅದನ್ನು ಉಪಯೋಗಿಸಿಕೊಳ್ಳುವ ಮಾರ್ಗಗಳನ್ನು ಶೋಧಿಸಲು ಸಂಶೋಧನ ಮಂದಿರಗಳು ಯತ್ನಿಸುವುದಗತ್ಯ. ವೈಜ್ಞಾನಿಕ ಮತ್ತು ಔದ್ಯಮಿಕ ಸಂಶೋಧನ ಮಂಡಲದವರು ಹೈದರಾಬಾದಿನಲ್ಲಿ ನಡೆಸುತ್ತಿರುವ ಪ್ರಾದೇಶಿಕ ಸಂಶೋಧನ ಪ್ರಯೋಗಶಾಲೆಯು ಇಂಥ ಸಂಶೋಧನಗಳನ್ನು ನಡೆಸುತ್ತಿದೆ. ಪ್ರಸ್ತುತ ಲೇಖಕನು ಕಾಜು ಸೊಟ್ಟೆ ಎಣ್ಣೆಯ ರಾಸಾಯನಿಕ ಸಂಶೋಧನ ಕಾರ್ಯದಲ್ಲಿ ದುಡಿದಿದ್ದಾನೆಂದು ತಿಳಿಸಲು ಸಂತೋಷವಾಗುತ್ತದೆ. *

ವಿದೇಶಗಳಲ್ಲಿರುವ ನಮ್ಮ
ವಿದ್ಯಾರ್ಥಿಗಳ ಚರ್ಯೆ
ಆದರ್ಶವಾಗಿಲ್ಲ

ಬಿಳಿಯರ ದೃಷ್ಟಿಯಲ್ಲಿ

ಭಾರತೀಯ ವಿದ್ಯಾರ್ಥಿಗಳು

ಡಾ. ಪ್ರಭಾಕರ ಮಾಚವೆ

ಅಮೇರಿಕವೊಂದರಲ್ಲೆ ಸುಮಾರು ೩,೦೦೦ ಭಾರತೀಯ ವಿದ್ಯಾರ್ಥಿಗಳಿದ್ದಾರೆ. ಯುರೋಪ್ ಮತ್ತು ಅಮೇರಿಕಗಳಲ್ಲ ಉಚ್ಚಶಿಕ್ಷಣ ಪಡೆದ ಸುಮಾರು ೪,೦೦೦ ಭಾರತೀಯರು ಕೆಲಸಮಾಡುತ್ತಿದ್ದಾರೆ. ಇವರೆಲ್ಲ ಅಲ್ಲಿಯೆ ಸ್ಥಾಯಿಯಾಗಿದ್ದಾರೆ ಇಲ್ಲವೆ ಆಗುವ ಪ್ರಯತ್ನದಲ್ಲಿದ್ದಾರೆ. ಅವರಲ್ಲಿ ಹೆಚ್ಚಿನವರಿಗೆ ಭಾರತಕ್ಕೆ ಮರಳುವ ಇಚ್ಛೆ ಇಲ್ಲ. ಅವರಿಗೆ ಅವರದೇ ಆದ ಸಮಸ್ಯೆಗಳೂ ಇವೆ ಎನ್ನಿ.

ಭಾರತೀಯ ವಿದ್ಯಾರ್ಥಿಗಳಲ್ಲಿ ಮೂರು ಬಗೆಯನ್ನು ಹೇಳಬಹುದು. ಟೆಕ್ನಿಕಲ್ ಕೋ ಆಪರೇಶನ್ ಮಿಶನ್ ಅಥವಾ 'ಏ. ಆಯ್. ಸಿ.' ಗಳ ಆಧಾರದಿಂದ, ಕೆಲವೊಂದು ಫೌಂಡೇಶನ್ನುಗಳ ಸಹಾಯದಿಂದ ವಿದೇಶಗಳಿಗೆ ಹೋಗಿರುವವರು ಒಂದು ಬಗೆ. ಇವರಲ್ಲಿ ಹೆಚ್ಚಿನವರು ವೈಜ್ಞಾನಿಕ ಅಥವಾ ತಾಂತ್ರಿಕ ಶಿಕ್ಷಣ ಪಡೆಯಲು ಹೋಗುವವರಾಗಿದ್ದಾರೆ. ಇಂಥ ಒಬ್ಬ ಭಾರತೀಯ ವಿದ್ಯಾರ್ಥಿಯ ಮೋಜಿನ ಕಥೆಯೊಂದನ್ನು ಹೇಳುತ್ತಾರೆ. ಆತ "ಫುಲ್‌ಬ್ರಾಯಿಟ್" ಶಿಷ್ಯವೃತ್ತಿಯ ಕಚೇರಿಗೆ ಹೋಗಿ "ಸ್ವಾಮಿ, ನಿಮ್ಮಲ್ಲಿ 'ಫುಲ್‌ಬ್ರಾಯಿಟ್' ಶಿಷ್ಯವೃತ್ತಿ ಉಳಿದಿರದಿದ್ದರೆ ನನಗೆ 'ಹಾಫ್‌ಬ್ರಾಯಿಟ್' ಶಿಷ್ಯವೃತ್ತಿಯನ್ನಾದರೂ ಕೊಡಿಸಿ" ಎಂದನಂತೆ. ಈ ಶಿಷ್ಯವೃತ್ತಿಗಳು ಅನೇಕ ಬಗೆಯಾಗಿವೆ. ಕೆಲವು ಕೇವಲ ವಿದೇಶಗಳಲ್ಲಿ ಓದುವ ಖರ್ಚನ್ನಷ್ಟೆ ಕೊಡುತ್ತವೆ. ಕೆಲವು ಪ್ರವಾಸ ವೆಚ್ಚವನ್ನೂ ಜೊತೆಗೆ ಕೊಡುತ್ತವೆ. ಕೆಲವು ಬೇರೆ ಬೇರೆ ವಿಶ್ವವಿದ್ಯಾಲಯಗಳಲ್ಲಿ ರಿಸರ್ಚ್ ಅಸಿಸೆಂಟ್ ಅಥವಾ ಫೆಲೋಶಿಪ್‌ಗಳ ರೂಪದಲ್ಲಿ ಶಿಷ್ಯವೃತ್ತಿಯನ್ನೀಯುತ್ತವೆ. ಭಾರತೀಯ ವಿದ್ಯಾರ್ಥಿಗಳು ಈ ಎಲ್ಲ ಬಗೆಯ ಸಹಾಯವನ್ನೂ ಪಡೆಯುತ್ತಾರೆ. ಕಾರಣವೆಂದರೆ, ಭಾರತೀಯ ವಿದ್ಯಾರ್ಥಿ ತುಂಬ ಆಜ್ಞಾಧಾರಕನೂ ಸರಳನೂ ಪಾಪಭೀರುವೂ ತಂಟೆ-ಜಗಳ ಮಾಡದವನೂ ಪರಿಶ್ರಮಿಯೂ ಅಲ್ಪಸಂತುಷ್ಟನೂ ಆಗಿರುತ್ತಾನೆ. ಮತ್ತು ಕೆಲವು ವೈಜ್ಞಾನಿಕ ಕ್ಷೇತ್ರಗಳಲ್ಲಿ ಅವನ ಜ್ಞಾನವೂ ಚೆನ್ನಾಗಿರುತ್ತದೆ. ಆತನಿಗೆ ಇಂಗ್ಲೀಷು ಚೆನ್ನಾಗಿ ಬರುತ್ತದೆ. ಕೊರಿಯಾ, ಜಪಾನ್ ಅಥವಾ ಮಧ್ಯಪೂರ್ವದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಈ ಅನುಕೂಲವಿರುವುದಿಲ್ಲ.

ಮೊದಲನೆ ಬಗೆಯ ವಿದ್ಯಾರ್ಥಿ ವಿಶ್ವವಿದ್ಯಾಲಯದ ಕೇಂಪಸನಲ್ಲಿ ಒಂದು ಅಗ್ಗದ ಕೋಣೆ

"ಜ್ಞಾನೋದಯ" ದಿಂದ

ಯನ್ನು ಬಾಡಿಗೆಗೆ ಹಿಡಿಯುತ್ತಾನೆ. ಅಲ್ಲಿ ಅಡಿಗೆ ಮಾಡಿಕೊಳ್ಳುವ ಅನುಕೂಲವೂ ಇರುತ್ತದೆ. ಈ ಕೋಣೆಯಲ್ಲಿ ನಾಲ್ವರು ಪಟೇಲರೊ ನಾಲ್ವರು ರಾವ್‌ರೊ ನಾಲ್ವರು ಸೇನರೊ (ಬಹುಶಃ ಒಂದೇ ಭಾಷೆ ಅಥವಾ ಪ್ರದೇಶದವರೇ ಒಟ್ಟಾಗಿರುತ್ತಾರೆ) ಒಟ್ಟಿಗಿರುತ್ತಾರೆ. ಅಡಿಗೆಯನ್ನು ತಾವೇ ಮಾಡಿಕೊಳ್ಳುತ್ತಾರೆ. ಹಗಲು ರಾತ್ರಿ ಲೈಬ್ರರಿಗೊ ಲೆಬೊರೇಟರಿಗೊ ಹೋಗಿ ಬಂದು ಮಾಡುತ್ತಿರುತ್ತಾರೆ. ಉಳಿದ ಸಮಯದಲ್ಲಿ ಓದು ಬರಹದ ಮಾತು ನಡೆಯುತ್ತದೆ. ಈ ಜನ ಬಿಡುವಿನ ಸಮಯದಲ್ಲಿ ಏನಾದರೂ ಕೆಲಸಮಾಡಿ ಹಣ ಸಂಪಾದಿಸಿ ಮನೆಗೆ ಕಳಿಸಿಕೊಡುತ್ತಾರೆ. ಹೋಳಿ, ದೀಪಾವಳಿಯಂಥ ಹಬ್ಬದ ದಿನಗಳಲ್ಲಿ ಇಂಡಿಯ ಅಸೋಸಿಯೇಶನ್ನಿನಲ್ಲಿ ಸಂಸ್ಕೃತಿಯ ಎರಡು ಮುಖ್ಯ ಅಂಗಗಳೆನಿಸುವ ಊಟ–ಸಂಗೀತ ಕಾರ್ಯಕ್ರಮಗಳನ್ನು ವಿದೇಶೀಯರಿಗಾಗಿ ಏರ್ಪಡಿಸುತ್ತಾರೆ. ಆಗೀಗ ಗಾಂಧಿ–ರವೀಂದ್ರ ಜಯಂತಿಗಳನ್ನಾಚರಿಸುತ್ತಾರೆ. ಕೆಲವು ಸಲ ಆ ವಿಷಯಕವಾದ ಚಿಕ್ಕಪುಟ್ಟ ಸಂಸ್ಥೆಗಳಲ್ಲಿ ಅಧಿಕಾರಸ್ಥಾನ ಪಡೆಯಲು ತಮ್ಮ ತಮ್ಮೊಳಗೆ ಬಡಿದಾಡುತ್ತಾರೆ.

ಎರಡನೆಯ ಬಗೆಯ ಭಾರತೀಯ ವಿದ್ಯಾರ್ಥಿಗಳದು ತೀರ ಬೇರೆ ರೀತಿ. ಇವರು ಅಭ್ಯಾಸಕ್ಕೆಂದು ಲಂಡನ್ ಅಥವಾ ಅಮೇರಿಕಗಳಿಗೆ ಹೋಗದೆ ತಮ್ಮ ಭಾಗ್ಯವನ್ನರಸಲು ಹೋಗುತ್ತಾರೆ. ಇಂಥ ಸಾಹಸಿಗರ ಸಂಖ್ಯೆಯೇನೂ ಕಡಿಮೆಯಿರುವುದಿಲ್ಲ. ಇವರು ಯಾರಿಂದಾದರೂ ಸಾಲ ಪಡೆದು ಹಡಗಿನಲ್ಲಿ ವಿದೇಶಕ್ಕೆ ಹೋಗಿ ಅಲ್ಲಿ ತಮ್ಮನ್ನು ವಿದ್ಯಾರ್ಥಿ ಪ್ರಪಂಚದಲ್ಲಿ ಸೇರಿಸಿಕೊಳ್ಳುತ್ತಾರೆ. ಮೊದಲೇ ಪತ್ರವ್ಯವಹಾರ ಮಾಡಿ ಯಾವುದಾದರೂ ವಿಶ್ವವಿದ್ಯಾಲಯದಲ್ಲಿ ರಿಸರ್ಚ್ ಅಸಿಸ್ಟೆಂಟ್ ಅಥವಾ ಅಂಥದೆ ಇನ್ನಾವುದಾದರೂ ಕೆಲಸವನ್ನು ದೊರಕಿಸಿಕೊಳ್ಳುವವರೂ ಇದ್ದಾರೆ. ವಿದೇಶಗಳಿಗೆ ಹೋದ ಮೇಲೆ ಅಲ್ಲಿ ದೈನ್ಯವೇ ಮೂರ್ತಿವೆತ್ತು ಬಂದವರಂತೆ ಬಾಯಿ ಬಾಯಿ ಬಿಡುತ್ತಾರೆ. "ನಾವು ಬಡದೇಶದವರು. ನಮ್ಮಲ್ಲಿ ಜಾತಿಭೇದ ಬಹಳ. ನಮ್ಮನ್ನು ಅಸ್ಪೃಶ್ಯರೆಂದು ತಿರಸ್ಕರಿಸಿ ನಮ್ಮನ್ನು ಅವ–ಮಾನವರಂತೆ ನಡೆಸಿಕೊಳ್ಳುವರಾದ್ದರಿಂದ ನಾವು ಇಲ್ಲಿಯೆ ಇರಬಯಸಿದ್ದೇವೆ," ಎಂದೆಲ್ಲ ಬಡಬಡಿಸುತ್ತಾರೆ. ಇನ್ನು ಕೆಲವರು ಏನಕೇನ ಪ್ರಕಾರೇಣ— ಮಕ್ಕಳನ್ನು ನೋಡಿಕೊಂಡು, ಬಚ್ಚಲು ಮನೆ ಮುಂತಾದವುಗಳನ್ನು ತೊಳೆದು, ಟ್ಯೂಶನ್–ಲೆಕ್ಚರ್‌ಗಳನ್ನು ಮಾಡಿ, ಮಾಂಸದ ಕಾರಖಾನೆಗಳಲ್ಲಿ ರಾತ್ರಿಯ ಪಹರೆದಾರರಾಗಿ, ವಿದೇಶೀ ಮಹಿಳೆಯರಿಗೆ ಭಾರತೀಯ ನೃತ್ಯ ಮತ್ತು ಯೋಗಗಳ ಪಾಠ ಹೇಳಿ ಹಣ ಸಂಪಾದಿಸುತ್ತಾರೆ. ಇವರು 'ಜೀಹಾಂ' ವೃತ್ತಿಯಲ್ಲಿ ನಿಪುಣರಿದ್ದು ಬಿಳಿಯರದೆಲ್ಲ ಚೆನ್ನ, ಭಾರತೀಯರದೆಲ್ಲ ಹೊಲಸು ಎಂಬ ಮನೋಭಾವದವರಾಗಿರುತ್ತಾರೆ.

ಮೂರನೆಯ ಬಗೆಯವರೆಂದರೆ ಶ್ರೀಮಂತರ ಮಕ್ಕಳು. ಇವರು ತಮ್ಮ 'ಕರಿಯರ್' ಅಥವಾ 'ಬಿಜಿನೆಸ್' ಗಳ ಅಭಿವೃದ್ಧಿ ಸಾಧಿಸಲೆಂದು ಹೋಗುತ್ತಾರೆ. ವಿದೇಶಗಳಲ್ಲಿ ಪಡೆಯಬೇಕಾದ ಶಿಕ್ಷಣದಲ್ಲಿ ಒಂದಿಷ್ಟನ್ನು ಮೊದಲೇ ಸ್ವದೇಶದ ಕ್ಲಬ್ಬುಗಳಲ್ಲೊ ಅಥವಾ ಅರ್ಧಾಂಗ್ಲ ಸೊಸಾಯಿಟಿಗಳಲ್ಲಿಯೊ ಪಡೆದಿರುತ್ತಾರೆ. ಹಡಗು ಅಥವಾ ವಿಮಾನಗಳ ಪ್ರವಾಸ ಮಾತ್ರದಿಂದಲೇ ಇವರ ವಿಧಿ—ನಿಷೇಧಗಳು ಕರಗತೊಡಗುತ್ತವೆ. ಎಲ್ಲರೂ—ಉಚ್ಚಕುಲದ ತರುಣ ತರುಣಿಯರು ಕೂಡ— ಊಟ-ಉಡಿಗೆ, ಮಾತು–ಕತೆ, ಎಲ್ಲವುಗಳಲ್ಲಿಯೂ ಆದಷ್ಟು ಬೇಗ ಪಕ್ಕಾ ಬಿಳಿಯರಾಗಲು ಪ್ರಯತ್ನಿಸುತ್ತಾರೆ. ವಿದೇಶೀ ನೃತ್ಯ, ವಿದೇಶಿ ಉಡುಪು, ಊಟ ಮುಂತಾದವೆಲ್ಲ ಇವರಿಗೆ ಅನಿವಾರ್ಯವಾಗಿಬಿಡುತ್ತವೆ. ಭಾರತೀಯರು ಕೃಪಣರು, ಪುರಾತನ ಕಾಲದವರು, ಪ್ರಗತಿ ಬಯಸದವರು ಎಂದು ಹೇಳಲು ಇವರು ಹಿಂದೆ ಮುಂದೆ ನೋಡುವುದಿಲ್ಲ. ಆದರೆ ಈ ಮಹಾಶಯರೇ ಮರಳಿ ಭಾರತಕ್ಕೆ ಬಂದಮೇಲೆ ವರದಕ್ಷಿಣೆ ತೆಗೆದುಕೊಳ್ಳಲು ಹಿಂಜರಿಯುವುದಿಲ್ಲ.

ಮುಹೂರ್ತ ನೋಡಿಯೇ ಕೆಲಸ ಆರಂಭಿಸುತ್ತಾರೆ. "ಅಹಾ! ಇಂಗ್ಲೆಂಡಿನಲ್ಲಿಯ ಆ ರೋಮಾಂಚಕ ದಿನಗಳು!" "ಅಹಾ, ಅಮೇರಿಕದಲ್ಲಿನ ಆ ಸ್ವರ್ಗತುಲ್ಯ ದಿನಗಳು!" ಎಂದು ನಿಟ್ಟುಸಿರು ಬಿಡುತ್ತಾರೆ. ವಿದೇಶದ ರುಚಿ ಹತ್ತಿದ ಇವರು ಪುನಃ ಪುನಃ ಅಲ್ಲಿಗೆ ಹೋಗಲು ನೆಪ ಹುಡುಕುತ್ತಿರುತ್ತಾರೆ. ಯಾವುದೊಂದು ಸಾಂಸ್ಕೃತಿಕ ಶಿಷ್ಟಮಂಡಳದ್ದೊ, ಪರಿಷತ್ತಿನದೊ ಸದಸ್ಯರಾಗಿ ಅಥವಾ ಹೀಗೆಯೆ ಇನ್ನಾವುದಾದರೂ ನೆವದಿಂದ ವಿದೇಶಕ್ಕೆ ಹೋಗಿ ಮದ್ಯ–ಮಾಂಸ–ವ್ಯಭಿಚಾರದ ಸುಖ ಪಡೆಯಲು ಹಂಬಲಿಸುತ್ತಿರುತ್ತಾರೆ. ಇವರ ವಿಚಾರಗಳೂ ಬದಲಾಗಿರುತ್ತವೆ: ಪಾಶ್ಚಿಮಾತ್ಯರಲ್ಲಿರುವ ಸ್ತ್ರೀ ಸ್ವಾತಂತ್ರ್ಯ ನಮ್ಮಲ್ಲಿ ಬಾರದೆ ನಮ್ಮ ದೇಶದ ಉದ್ಧಾರವಾಗದು; ಅಲ್ಲಿಯಂತೆಯೇ ನಮ್ಮಲ್ಲೂ (ಇಂಗ್ಲಿಷ್ ಅಥವಾ ರೋಮನ್) ಒಂದೇ ಭಾಷೆಯಾಗಬೇಕು; ಭಾರತೀಯರು ಗೋಮಾಂಸ ಭಕ್ಷಣ ಮಾಡತೊಡಗಿದರೆ ಸಕಲ ಸಮಸ್ಯೆಗಳ ನಿವಾರಣೆಯಾಗುವುದು; ಧೋತರ ಸೀರೆಗಳಂಥ ಅಪ್ರಗತಿಶೀಲ ಉಡುಪು ಈ ದೇಶದಲ್ಲಿರುವವರೆಗೆ ವಿಕಾಸವು ಸಾಧ್ಯವೇ ಇಲ್ಲ; ಡೇಟಿಂಗ್ ಪದ್ಧತಿಯನ್ನು ಶುರು ಮಾಡುವವರೆಗೂ ಭಾರತದಲ್ಲಿ ವಿದ್ಯಾರ್ಥಿಗಳ ಶಿಸ್ತುಗೇಡಿ ವರ್ತನೆ ನಿಲ್ಲದು; ಮದ್ಯಪಾನ ಪ್ರತಿಬಂಧ ನಿಷ್ಪ್ರಯೋಜಕವಾದದ್ದು, ಕಾಯದೆ ಎಂದಾದರೂ ಜನರ ನೀತಿಯನ್ನು ಸುಧಾರಿಸೀತೇ–ಇತ್ಯಾದಿ ಇತ್ಯಾದಿ.

ವಿವೇಕಾನಂದರ ಮಾತು ಅಂತಿರಲಿ, ಅರವಿಂದ ಘೋಷರ ಒಂದು ವಿಚಾರ ಹೇಳಬೇಕೆನ್ನಿಸುತ್ತದೆ. ಚಿಕ್ಕ ವಯಸ್ಸಿನಲ್ಲಿಯೆ ಅವರು ಐ. ಸಿ. ಎಸ್. ಗಾಗಿ ಇಂಗ್ಲೆಂಡಿಗೆ ಹೋದರು. ಅವರು ತುಂಬ ಮೇಧಾವಿ ವಿದ್ಯಾರ್ಥಿಗಳು. ತಿರುಗಿ ಬಂದೊಡನೆ ಅವರು ಮಾಡಿದ ಮೊಟ್ಟಮೊದಲನೆಯ ಕೆಲಸವೆಂದರೆ ವಿಲಾಯತಿ ಉಡುಪನ್ನು ಕಳಚಿ ಒಗೆದು ಧೋತರ ಉಟ್ಟುಕೊಂಡು ಶರ್ಟು ತೊಟ್ಟಿದ್ದು. ಸಂಸ್ಕೃತ ಪಂಡಿತರೊಬ್ಬರ ಬಳಿ ಪ್ರಾಚೀನ ವಿದ್ಯೆಯನ್ನು ಅಭ್ಯಸಿಸತೊಡಗಿದರು. ತುಂಬ ಸುಧಾರಣಾಪ್ರೇಮಿಯಾಗಿದ್ದ ಕೇಶವಚಂದ್ರ ಸೇನರು ಇಂಗ್ಲೆಂಡಿನಿಂದ ತಿರುಗಿ ಬಂದ ಬಳಿಕ ಕ್ರಿಶ್ಚನ್ನರ ಬಗ್ಗೆ ಅವರಿಗಾದ ಅಭಿಪ್ರಾಯವೇನು? ಗಾಂಧೀಜಿ ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ನೃತ್ಯ ಮತ್ತು ಫ್ರೆಂಚ ಕಲಿಯಲು ಯತ್ನಿಸಿದರು. ಆಮೇಲೆ ಬಿಳಿಯರ ಈ ಜೀವನಪದ್ಧತಿಯನ್ನು "ಪರಧರ್ಮೋ ಭಯಾವಹಃ" ಎಂದು ಬಿಟ್ಟುಬಿಟ್ಟರು. ಆದರೆ ಇಂಥ ಉದಾಹರಣೆಗಳು ಕಡಿಮೆ. ಹೆಚ್ಚಿನ ಧುರೀಣರು ವಿದೇಶಗಳಿಗೆ ಹೋಗಿ ಅಲ್ಲಿಯವರ ಜ್ಞಾನ, ವಿದ್ಯೆ, ರಾಜನೀತಿ ಮುಂತಾದವುಗಳ ಶ್ರೇಷ್ಠತೆಯಿಂದ ಪ್ರಭಾವಿತರಾದರು. ಆದರೆ ಇಂಥ ಅಪವಾದ ವ್ಯಕ್ತಿಗಳ ಮೇಲಿಂದ ಭಾರತೀಯ ವಿದ್ಯಾರ್ಥಿಗಳ ಬೆಲೆಕಟ್ಟುವುದು ಉಚಿತವಾಗದು.

ಭಾರತೀಯ ವಿದ್ಯಾರ್ಥಿಗಳ ಬಗ್ಗೆ ಅಮೇರಿಕೆದಲ್ಲಿ ನಾನು ಕೇಳಿದ ದೂರುಗಳನ್ನಿಲ್ಲಿ ಹೇಳುವೆ. ಒಂದಿಷ್ಟು ಉದಾಹರಣೆ, ಸತ್ಯ ಘಟನೆಗಳನ್ನಷ್ಟೆ ಹೇಳುತ್ತೇನೆ. ಆದರೆ ಇದರ ಮೇಲಿಂದ ವಿದೇಶಗಳಿಗೆ ಹೋಗುವ ಭಾರತೀಯ ವಿದ್ಯಾರ್ಥಿಗಳೆಲ್ಲ ಇಂಥವರೇ ಎಂದು ತಿಳಿಯಲಾಗದು.

ಇಂಡಿಯಾನಾದ ಬ್ಲೂಮಿಂಗಟನ್‌ನಲ್ಲಿ ವಿದೇಶೀ ವಿದ್ಯಾರ್ಥಿಗಳ ಮಾರ್ಗದರ್ಶಕನೊಬ್ಬ ಒಂದು ಕಥೆ ಹೇಳಿದ: ಭಾರತೀಯ ವಿದ್ಯಾರ್ಥಿಯೊಬ್ಬ ತುರ್ಕಸ್ತಾನದವಳೊ ಇನ್ನಾವ ದೇಶದವಳೊ ಆದ ಹುಡುಗಿಯಲ್ಲಿ ಅನುರಕ್ತನಾದ. ಆತ ಭಾರತಕ್ಕೆ ಮರಳಲು ಒಪ್ಪಲಿಲ್ಲ. ಭಾರತದಿಂದ ಹೊರಡುವ ಮೊದಲೇ ಅವನ ಲಗ್ನವಾಗಿತ್ತು. ಆ ಹೆಂಡತಿ ಅಳುತ್ತ ಕರೆಯುತ್ತ ಗಂಡನಿದ್ದಲ್ಲಿ ಬಂದಳು. ಬೇನೆ ಬಿದ್ದು ಸಾಯುವ ಸ್ಥಿತಿಗೆ ಮುಟ್ಟಿದಳು. ಆದರೆ ಈ ಭಾರತೀಯ ವಿದ್ಯಾರ್ಥಿ ಅವಳ ಬಗ್ಗೆ ತನ್ನಮೇಲಿದ್ದ ಹೊಣೆ ನಿರ್ವಹಿಸಲು ಸಿದ್ಧನಾಗಲಿಲ್ಲ: ಈ ವಿದ್ಯಾರ್ಥಿ ಅಭ್ಯಾಸದಲ್ಲಿ ಮಾತ್ರ ಚುರುಕಾಗಿದ್ದು ಯಾವಾ

ಗಲೂ ಮೇಲ್ತರಗತಿಯಲ್ಲಿ ಪಾಸಾಗುತ್ತಿದ್ದ.

ಕೆಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ನನಗೆ ಭೆಟ್ಟಿಯಾದೊಬ್ಬ ಭಾರತೀಯ ವಿದ್ಯಾರ್ಥಿ ಮೊದಲು ಸಾಯನ್ಸ್ ಡಿಗ್ರಿ ಪಡೆದ. ಭಾರತಕ್ಕೆ ಮರಳಿದ ಮೇಲೆ ಅವನಿಗೆ ಒಂದೂವರೆ ವರ್ಷದ ವರೆಗೂ ನೌಕರಿ ಸಿಗಲಿಲ್ಲ. ತಿರುಗಿ ಅಮೇರಿಕಕ್ಕೆ ಬಂದು ಕಾಮರ್ಸನಲ್ಲೊ ಮತ್ತಾವ ವಿಷಯ ದಲ್ಲೊ ಡಿಗ್ರಿ ಪಡೆದು ಈಗ ಅಲ್ಲಿಯೆ ಒಂದು ಕಂಪನಿಯಲ್ಲಿ ದುಡಿಯುತ್ತಿದ್ದಾನೆ. ಹೀಗೆ ಪುನಃ ಪುನಃ ವಿಷಯ ಬದಲಾಯಿಸಿ ಅಭ್ಯಾಸ ಮಾಡು ವವರು, ಯಾವುದೊಂದು ನೆಪದಿಂದ ಆದಷ್ಟು ಹೆಚ್ಚು ಕಾಲ ವಿದೇಶದಲ್ಲಿರಬಯಸುವವರು ಬಹಳ ಜನ ಇದ್ದಾರೆ.

ವಿಸ್‌ಕಾನ್ಸಿನ್‌ನಲ್ಲಿ ಒಬ್ಬ ಭಾರತೀಯ ವಿದ್ಯಾರ್ಥಿಗೂ ಅವನ ಪ್ರೊಫೆಸರರಿಗೂ ಭಾರತದ ಸ್ವಾಭಿಮಾನದ ಬಗ್ಗೆ ವಾದ-ವಿವಾದ ನಡೆಯಿತು. ಇದರಿಂದಾಗಿ ಆತ ನಪಾಸಾಗಬೇಕಾಯಿತು. ಆತ ವಿಷಯ ಬದಲಿಸಿಕೊಂಡು ಪರೀಕ್ಷೆಯಲ್ಲಿ ಉತ್ತಮ ನಂಬರುಗಳಿಸಿ ಪಾಸಾದ. ಆ ವಿದ್ಯಾರ್ಥಿ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ವಿಚಾರ ಸ್ವಾ-ತಂತ್ರ್ಯದ ಡಂಗುರ ಎಷ್ಟೇ ಜೋರಾಗಿ ಹೊಡೆ ಯಲಿ, ಇನ್ನು ಮುಂದೆ ಮಾತ್ರ ಮನದಲ್ಲಿರುವು ದನ್ನು ಸ್ಪಷ್ಟವಾಗಿ ಹೇಳುವುದಿಲ್ಲ ಎಂದು ಆಣೆ ಇಟ್ಟುಕೊಂಡ.

ಶಿಕಾಗೊನಲ್ಲಿ ಭಾರತೀಯ ವಿದ್ಯಾರ್ಥಿಯೊಬ್ಬ ನನಗೆ ಬಸ್ಸಿನಲ್ಲಿ ಭೆಟ್ಟಿಯಾದ. ಆತ ನನ್ನ ಖಾದಿ ಉಡುಪು, ಶೇರವಾನಿ, ಚುಡಿದಾರ್ ನೋಡಿ ಭಾರತೀಯ ಧುರೀಣರನ್ನೂ ಭಾರತದ ಸ್ವಾ-ತಂತ್ರ್ಯ, ಭಾರತದ ಚುನಾವಣೆಗಳನ್ನೂ ಜರೆದೇ ಜರೆದ. ಅದೂ ಎಲ್ಲ ಪ್ರವಾಸಿಕರ ಎದುರಿ ನಲ್ಲಿ, ಇಂಗ್ಲೀಷಿನಲ್ಲಿ. ನನಗೆ ತುಂಬ ಕೆಡಕೆನಿ ಸಿತು. ಆತ ಒಂಭತ್ತು ವರ್ಷಗಳಿಂದ ಅಲ್ಲಿಯೆ ವೈಜ್ಞಾನಿಕನಾಗಿದ್ದಾನೆ. ನಾನು ಕೇಳಿದೆ. "ನಿನಗೆ ಈ ಸರಕಾರ ಸೇರುವುದಿಲ್ಲವೆಂದ ಮೇಲೆ ನೀನು ಮತ್ತೇನನ್ನು ಬಯಸುವಿ ? ಕಮ್ಯುನಿಜಂನ್ನೆ ?" ಆತ ತಟ್ಟನೆ "ಇಲ್ಲ ಇಲ್ಲ" ಎಂದ. "ಮತ್ತೆ ?" ಎಂದು ನಾನು ಕೇಳಲು ಆತ ಉತ್ತರವನ್ನೆ ಕೊಡಲಿಲ್ಲ. ಇಂಥ ನಕಾರಾತ್ಮಕ ವೃತ್ತಿಯ ವಿದ್ಯಾರ್ಥಿಗಳೂ ಇದ್ದಾರೆ.

ಮಿಚಿಗಾನ್ ವಿಶ್ವವಿದ್ಯಾಲಯದಲ್ಲಿ ಭಾರ ತೀಯ ವಿದ್ಯಾರ್ಥಿಯೊಬ್ಬ ಸಿ. ಆಯ್. ಡಿ. ವಿಜ್ಞಾನದಲ್ಲಿ ತರಬೇತಿ ಪಡೆಯುತ್ತಿದ್ದಾನೆ. ತನಗೆ ಇದಕ್ಕಾಗಿಯೆ ಭಾರತದಲ್ಲಿ ನೌಕರಿ ಸಿಗು ತ್ತಿಲ್ಲ. ಇಂಥ ವಿಷಯವನ್ನು ವಿದೇಶದಲ್ಲೇಕೆ ಕಲಿಯಬೇಕು ಎಂದು ನನ್ನಲ್ಲಿ ಸಂದೇಹ ತಾಳು ತ್ತಾರೆ ಎಂದನಾತ.

ಭಾರತೀಯ ವಿದ್ಯಾರ್ಥಿಗಳ ಬಗ್ಗೆ ಇಂಥ ಅಭಿ ಪ್ರಾಯ ಮೂಡಿಸುವ ಅನೇಕಾನೇಕ ಉದಾಹ ರಣೆಗಳಿವೆ. ಈ ಜನ ತಮ್ಮ ದೇಶ, ಧರ್ಮ, ಸಂಸ್ಕೃತಿಗಳಿಗೆ ಬೇಸತ್ತಿದ್ದಾರೆ. ಅವುಗಳ ಬಗ್ಗೆ ಅವರಲ್ಲಿ ಆತ್ಮೀಯತೆಯಿಲ್ಲ. ಆದ್ದರಿಂದ ಈ ತರುಣರು ವಿದೇಶಗಳ ಸಾಂಸ್ಕೃತಿಕ ಶ್ರೇಷ್ಠತೆ, ಧಾರ್ಮಿಕ ವಿಶೇಷತೆಗಳನ್ನು ಸ್ವೀಕರಿಸಲು ಆತುರರಾಗಿದ್ದಾರೆ. ಭಾರತದ ಸರಕಾರೀ ಅಧಿ ಕಾರಿಗಳು, ಧುರೀಣರೆನಿಸುವವರು ವ್ಯರ್ಥವಾಗಿ ಇಂಥ ಮಹತ್ಕಾರ್ಯದಿಂದ ತಮ್ಮನ್ನು ವಂಚಿಸುತ್ತಿ ದ್ದಾರೆ, ಆತ್ಮೋದ್ಧಾರಕ್ಕೆ ಅನುವು ಕೊಡುವು ದಿಲ್ಲ ಎಂದು ಇವರ ಅಭಿಪ್ರಾಯ.

ಸಾಮಾನ್ಯವಾಗಿ ಧನ ಮತ್ತು ಕೆಲಸಗಳ ವಿಚಾರದಲ್ಲಿ ಭಾರತೀಯರ ಗುಣವಿಶೇಷವೆಂದರೆ, ಆಧ್ಯಾತ್ಮಿಕ ಅಪರಿಗ್ರಹ, ತ್ಯಾಗ, ನಿರ್ಮೋಹ ಎಂದೆಲ್ಲ ವಿದೇಶೀಯರು ತಿಳಿಯುತ್ತಾರೆ. ಆದರೆ ಭಾರತೀಯರಲ್ಲೂ ಪೈಪೈಗಾಗಿ ಮೋಹ ತುಂಬಿ ತುಳುಕುತ್ತಿದೆ. ಅದರಂತೆ ಬ್ರಹ್ಮಚರ್ಯ ಮತ್ತು ಸ್ತ್ರೀಪುರುಷರ ಪವಿತ್ರ ಸಂಬಂಧಗಳ ಮಾತೂ ಪುರಾಣದ ಬದನೇಕಾಯಿಯೆ ಸರಿ. ಯಾವ ಭಾರತೀಯ ವಿದ್ಯಾರ್ಥಿಯೂ ವಿದೇಶಿ ಸ್ತ್ರೀಯನ್ನು ಸಹಜ ರೀತಿಯಲ್ಲಿ ಭೆಟ್ಟಿಯಾಗಲಾರ. ಒಂದೇ ಅತಿಯಾಗಿ ಮುನ್ನುಗ್ಗುತ್ತಾರೆ ಇಲ್ಲವೆ ಮುದುಡಿ ಹಿಂದೆ ಸರಿಯುತ್ತಾರೆ. ಒಬ್ಬ ವಿದೇಶಿ ವಿದ್ಯಾ

ರ್ಥಿನಿಯಂತೂ "ಭಾರತೀಯ ವಿದ್ಯಾರ್ಥಿಗಳನ್ನು ನಂಬಲಾಗದು" ಎಂದು ಹೇಳಿದಳು.

ಇಂಥ ಮಾತುಗಳನ್ನೆಲ್ಲ ಕೇಳಿ ನನಗೆ ತುಂಬ ದುಃಖ ಮತ್ತು ಗ್ಲಾನಿಯೆನಿಸಿತು. ವಿದೇಶಗಳಲ್ಲಿ ತಮ್ಮ ಶ್ರೇಷ್ಠ ವರ್ಚಸ್ಸನ್ನು ಬೀರಿದ ವಿದ್ಯಾರ್ಥಿಗಳಿಲ್ಲವೆಂದಿಲ್ಲ. ಆದರೆ ಇವರು ತೀರ ಕಡಿಮೆ. ಹೆಚ್ಚಿನವರು ತಾವು ಭಾರತೀಯರು ಎಂದು ಹೇಳಿಕೊಳ್ಳಲೂ ನಾಚುತ್ತಾರೆ. ತಮ್ಮ ಭಾಷೆಯವರು, ತಮ್ಮ ಪ್ರಾಂತದವರು ಎಂಬ ಅಭಿಮಾನ ತಾಳುತ್ತಾರೆ. ತಮ್ಮ ತಮ್ಮಲ್ಲಿ ಜಗಳವಾಡುತ್ತಾರೆ. ಅವರ ಮಾತು-ಕತೆಗಳಿಂದ ಭಾರತದ ಬಗ್ಗೆ ನಿಜವಾದ ಕಲ್ಪನೆ ಎಂದಿಗೂ ಆಗುವಂತಿಲ್ಲ. ಒಬ್ಬ "ವಿನೋಬಾ ಒಬ್ಬ ಸಂತರು" ಎಂದರೆ ಇನ್ನೊಬ್ಬ "ಎಲ್ಲ ಪ್ರಚಾರ-ಅರ್ಥವಿಲ್ಲದ ಮಾತು" ಎನ್ನುತ್ತಾನೆ. ಒಬ್ಬ "ಭಾರತ ಬುದ್ಧ, ಗಾಂಧಿಯವರ ಅಹಿಂಸಾ ದೇಶ" ಎಂದರೆ ಮತ್ತೊಬ್ಬ "ಭಾರತದ ಸೈನ್ಯದ ವೆಚ್ಚ ನೂರಕ್ಕೆ ೪೦ ರಷ್ಟು"ಎನ್ನುತ್ತಾನೆ.

ಹೀಗೆ ಎಷ್ಟು ಭಾರತೀಯರೊ ಅಷ್ಟು ಅಭಿಪ್ರಾಯಗಳಿರುತ್ತವೆ. ಭಾರತೀಯರಲ್ಲಿ ಐಕ್ಯವಿಲ್ಲ, ಸರ್ವಸಮ್ಮತ ಧರ್ಮ ಅಥವಾ ನೈತಿಕ ಮೌಲ್ಯವಿಲ್ಲ ಎಂದೇ ಬಿಳಿಯರಿಗೆ ಅನಿಸುತ್ತದೆ.

ಭಾರತೀಯ ವಿದ್ಯಾರ್ಥಿನಿಯರ ವಿಚಾರವಾಗಿ ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಇವರು ವಿದ್ಯಾರ್ಥಿಗಳಿಗಿಂತಲೂ ಹೆಚ್ಚು ಸಂಯಮಶೀಲರಾಗಿ, ಪರಂಪರೆಯಂತೆ ನಡೆದುಕೊಳ್ಳುವವರಾಗಿರುತ್ತಾರೆ. ಹೆಚ್ಚಿನ ವಿದ್ಯಾರ್ಥಿನಿಯರು ವಿವಾಹಿತೆಯರಾಗಿರುತ್ತಾರೆ. ತಮ್ಮ ಮಕ್ಕಳ ಭವಿಷ್ಯದ ಸಲುವಾಗಿ ವಿದೇಶಗಳಲ್ಲಿಯೆ ವಾಸ್ತವ್ಯ ಹೂಡಬಯಸುತ್ತಾರೆ. ಇಲ್ಲವೆ ಹಗಲಿರುಳು ಮನೆಯ ನೆನಪಿನಿಂದ ತ್ರಸ್ತರಾದಂತವರಿರುತ್ತಾರೆ. ಸೀರೆ ಬಿಟ್ಟು ಸ್ಕರ್ಟ್ ತೊಟ್ಟು ಊಟ-ತಿನಿಸುಗಳಲ್ಲಿ ಪೂರ್ಣ ಬದಲಾವಣೆ ಮಾಡಿಕೊಂಡಿರುವವರನ್ನೂ ಕಂಡೆನೆನ್ನಿ. ಬಾಲ್ಯದಲ್ಲಿ ಬಿಗಿ ನಿಯಂತ್ರಣದಲ್ಲಿರುವವರೇ ಹೆಚ್ಚಾಗಿ ಇಲ್ಲಿ ಉಚ್ಛೃಂಖಲ ವೃತ್ತಿಯವರಾಗುತ್ತಾರೆ. ಆದರೆ ವಿದ್ಯಾರ್ಥಿಗಳಿಗಿಂತಲೂ ವಿದ್ಯಾರ್ಥಿನಿಯರ ಮೇಲೆ ಸಂಸ್ಕಾರದ, ಕುಟುಂಬದ ಪ್ರಭಾವ ಹೆಚ್ಚಾಗಿರುತ್ತದೆ.

ಒಟ್ಟಿನಲ್ಲಿ ಇದೊಂದು ಭೀಕರ ಸಮಸ್ಯೆಯೇ ಆಗಿದೆ. ಇದು ಕೇವಲ ಪೂರ್ವ–ಪಶ್ಚಿಮಗಳ ಸಂಪರ್ಕದ ಪ್ರಶ್ನೆಯಲ್ಲ. ನಮ್ಮ ರಾಷ್ಟ್ರದ ತರುಣ ತರುಣಿಯರು ಹೀಗೆ ರಾಷ್ಟ್ರಕ್ಕೆ ನಿರುಪಯೋಗಿಯಾಗುವುದನ್ನು ನಾವು ತಡೆಯಬೇಡವೆ?

ನಮ್ಮ ದೇಶದಲ್ಲಿ ನಿರುದ್ಯೋಗ ವ್ಯಾಪಕವಾಗಿದೆ. ಓದು-ಬರಹ ಬಲ್ಲವರೇ ಹೆಚ್ಚಾಗಿ ನಿರುದ್ಯೋಗಿಗಳಾಗಿದ್ದಾರೆ. ಸಾಕ್ಷರತಾ ಮತ್ತು ಶಿಕ್ಷಣ ಪದ್ಧತಿಯ ಸುಧಾರಣೆಗಳ ಯೋಜನೆಗಳು ತಯಾರಾಗುತ್ತಿವೆ. ಹೀಗಿರುವಾಗ ವಿದೇಶಗಳಲ್ಲಿ ನಮ್ಮ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ಖಾಯಮ್ಮಾಗಿ ವಾಸ್ತವ್ಯ ಮಾಡುವುದು, ನಮ್ಮ ದೇಶಕ್ಕೆ ತಿರುಗಿ ಬಂದು ಅವರು ತಮ್ಮ ಜ್ಞಾನದ ಲಾಭ ಮಾಡಿಕೊಡದಿರುವುದು ಎಲ್ಲಿಯ ವರೆಗೆ ನಡೆಯಬೇಕು?

ಯಾರು ಇದಕ್ಕೆಲ್ಲ ಹೊಣೆ? ಭಾರತೀಯ ಸಂಪ್ರದಾಯವೆ ಅಥವಾ ವಿದೇಶೀ ಶಿಕ್ಷಣವೆ? ನಾವೇ ಅಥವಾ ಬಿಳಿಯರ ದೃಷ್ಟಿಕೋನವೆ? *

ದೇಹದ ಚಿಕ್ಕಪುಟ್ಟ ಅನಾರೋಗ್ಯಗಳಿಗೂ ಚಿಕಿತ್ಸೆಯನ್ನು ಪಡೆಯಲಿಚ್ಛಿಸುವವರು ಶರೀರವನ್ನು ಸುಧಾರಿಸಿಕೊಳ್ಳುವುದಕ್ಕಿಂತ ಕೆಡಿಸಿಕೊಳ್ಳುತ್ತಾರೆ. ಅದರಂತೆ ಚಿಕ್ಕ ಪುಟ್ಟ ನೆವಗಳಿಗೂ ಸೇಡುತೀರಿಸಿಕೊಳ್ಳಲೆತ್ನಿಸುವವರು ತಮ್ಮ ಸ್ವಭಾವವನ್ನು ತಿದ್ದಿಕೊಳ್ಳುವ ಬದಲು ದುರ್ಬಲಗೊಳಿಸಿಕೊಳ್ಳುತ್ತಾರೆ.

—ಜೆ. ಮೇಸನ್

ಒಂದು

ರೂಪಕ ಕಥೆ

ಜರದ ಕಸೂತಿ

ಹಾ. ವೆಂ. ನಾಗೇಶ

ಚಿಂದಿಯನ್ನು ಉಟ್ಟುಕೊಂಡು ವರ್ಷಾರು ತಿಂಗಳ ಮಗುವೊಂದು ಅಂಬೆಗಾಲಿಡುತ್ತ ಒಳಗೆ ಬಂದಿತು. ಆ ಮಗುವಿನ ತಾಯಿ ಜರದ ಕಸೂತಿ ಹಾಕುತ್ತಿದ್ದಳು. ಬೆಲೆ ಬಾಳುವ ಕಾಶ್ಮೀರದ ಸಿಲ್ಕು, ಬಣ್ಣಬಣ್ಣದ ದಾರ, ಬೆಳ್ಳಿಯ ಬಂಗಾರದ ಎಳೆಗಳು, ನಡುನಡುವೆ ಮನಮೋಹಕವಾದ ಚಿತ್ರಗಳು. ತಾಜಮಹಲು, ಕುಣಿಯುವ ನವಿಲು, ಮಾವಿನ ಗೊಂಚಲು, ಹೂ, ಎಲೆ....ಸಾವಿರ ಸಾವಿರ. ಆಕೆಗೆ ಬೇರಾವುದರ ಧ್ಯಾನವೇ ಇರಲಿಲ್ಲ. ತಾನೇ ಸೃಷ್ಟಿಸಿದ ಅನುಪಮ ಸೌಂದರ್ಯದಲ್ಲಿ ತದೇಕಚಿತ್ತಳಾಕೆ. ತಾನೇ ಸೃಷ್ಟಿಸಿದ ಶಾರದೆಯಲ್ಲಿ ಮೋಹಗೊಂಡ ಬ್ರಹ್ಮನಂತೆ ತನ್ನ ಕೈಕುಸುರಿನ ಕಲಾಕೃತಿಯಲ್ಲಿ ಆಕೆ ಮೋಹಿತಳಾಗಿದ್ದಳು.

ಒಳಗೆ ಬಂದ ಮಗು ಆ ಕಣ್ಣು ಕೋರೈಸುವ ಜರದ ಅಂಗಿಯನ್ನು ನೋಡಿತು. ಅದರ ಕಣ್ಣು ಸೋತಿತು. ಬಾಯಿ ನೀರಿಟ್ಟಿತು. ತನ್ನ ತೊದಲು ಮಾತಿನಿಂದ ಆ ಕೂಸು ತಾಯಿಯನ್ನು ಕೇಳಿತು: "ಅಮ್ಮಾ ಈ ಅಂಗಿ ಯಾರಿಗೆ?"

ತಾಯಿ ನಿದ್ದೆಯಿಂದ ಎದ್ದಂತೆ ಎದ್ದಳು. ಎದುರಿಗಿದ್ದುದು ತನ್ನ ಪುಟ್ಟ ಮಗು. ಮಾಸಿದ ಹರಕು ಬಟ್ಟೆ. ಛೀ! ಎನಿಸಿತು ಆಕೆಗೆ. ಸಾಂತ್ವನ ಮಾಡುತ್ತ ಆಕೆ ಅಂದಳು:

"ಮತ್ತಾರಿಗೆ ಮಗು? ನಿನಗೆ! ಈ ಕಸೂತಿಯ ಅಂಗಿಯನ್ನುಟ್ಟರೆ ನೀನು ಎಷ್ಟು ಮುದ್ದಾಗಿ ಕಂಡೀಯೆ! ಓ! ದೊರೆಯ ಮಗ..ದೊರೆಯ ಮಗ... ಇರಮ್ಮ. ಇದಿನ್ನೂ ಅಪೂರ್ಣ; ಪೂರ್ಣವಾದಾಗ ತೊಟ್ಟುಕೊಂಡು ಮೆರೆಯುವಿಯಂತೆ.. ಸರದಾರರ ಚಿಣ್ಣನಂತೆ.. ಆಂ?"

ಮಗು ಹಿರಿಹಿರಿ ಹಿಗ್ಗಿತು. ಸಂತೋಷದಿಂದ ಕೇಕೆ ಹಾಕುತ್ತ ಅಲ್ಲಿಂದ ಹೊರಟುಹೋಯಿತು.

*

ಈಗ ಆ ಮಗು ಬಹಳ ಬೆಳೆದಿತ್ತು. ಆರೇಳು ವರ್ಷದ ಪ್ರಾಯ. ಕುಟ್ಟಿದೊಣ್ಣೆ (ಚಿನ್ನಿ-ದಾಂಡು) ಆಡುತ್ತಿದ್ದ ಮಗು ಜರದ ಅಂಗಿಯ ನೆನಪಾಗುತ್ತಲೇ ತಾಯಿಯತ್ತ ಧಾವಿಸಿ ಬಂದಿತು. ತಾಯಿ ಇನ್ನೂ ಕಸೂತಿ ಹಾಕುತ್ತಲೇ ಕುಳಿತಿದ್ದಳು. ತಾಜಮಹಲಿನ ಒಂದು ಪಕ್ಕದ ತೋಪು ಇನ್ನೂ ಪೂರ್ಣ ರೂಪುಗೊಂಡಿರಲಿಲ್ಲ. ಶತಪತ್ರಲೋಚನೆಯ ಪಕ್ಕಪುಕ್ಕಗಳಲ್ಲಿ ಬಣ್ಣಗಳಿನ್ನೂ ತುಂಬಿ ಬಂದಿರಲಿಲ್ಲ. ಮಾವುಗಳ ಗೊಂಚಲುಗಳಲ್ಲಿ ಇನ್ನೂ ಕೆಲವು ಹಣ್ಣುಗಳು ಬರಲಿದ್ದವು. ಹೂಗಳ ದಳಗಳಿನ್ನೂ ಪೂರ್ಣತಃ ತೆರೆದಿರಲಿಲ್ಲ. ಪುಷ್ಪಪಾತ್ರೆಗಳಿನ್ನೂ ತುಂಬಿಕೊಂಡಿರಲಿಲ್ಲ. ಎಲೆಗಳ ತೊಟ್ಟುಗಳು ಬಲಿಯಲು ಮತ್ತೂ ಸ್ವಲ್ಪ ಹೊತ್ತು ಬೇಕಿತ್ತು. ತಾಯಿ ಬೇಡಿ ಕಾಡುವ ಮಗುವನ್ನು ಹಾಗೂ ಹೀಗೂ ಸಂತೈಸಿ ಒಳಗೆ ಕಳುಹಿದಳು. ಅದು ಉಟ್ಟ



ಚಿಂದಿಯನ್ನು ನೋಡಿದಾಗಲೆಲ್ಲ ಆಕೆಯ ಹೆತ್ತ ಹೊಟ್ಟೆ ಕಸಿವಿಸಿಗೊಳ್ಳುತ್ತಿತ್ತು. ಆದರೆ ಕೈಯಲ್ಲಿದ್ದ ಜರದ ಕಸೂತಿಯನ್ನು ಕಂಡಾಗಲೆಲ್ಲ ನಾಳೆ ತನ್ನ ಮಗ ದೊರೆಯ ಮಗನಂತೆ ಕಂಡಾನಲ್ಲ! ಏಕೆ ಅವಸರ? ಎಂದು ಗಾಳಿಗೋಪುರ ಕಟ್ಟಿ ಅಲ್ಲೇ ಹಾಯಾಗಿ ಇದ್ದುಬಿಡುತ್ತಿದ್ದಳು. ಕಸೂತಿಯ ತಾಜಮಹಲು ತಿರುಗಿ ಒಪ್ಪುಗೊಳ್ಳುತ್ತಿತ್ತು. ನವಿಲಿಗೆ ಬಣ್ಣ ಬರುತ್ತಿತ್ತು.

*

ವರ್ಷಗಳೇ ಕಳೆದವು. ಅನೇಕ ನಾಳೆಗಳು ನಿನ್ನೆಗಳನ್ನು ಸೇರಿದವು..

ಹರಕನ್ನುಟ್ಟ ಹರೆಯುದವನೊಬ್ಬ ಕೆಲಸ-ಕಾಳು ಮುಗಿಸಿ ಒಳಗೆ ಬಂದ. ಮುದಿ ತಾಯಿ ತನ್ನ ಕೆಲಸದಲ್ಲಿ ಮಗ್ನಳಾಗಿದ್ದಳು. ಆತ ನಿಧಾನವಾಗಿ ತನ್ನ ತಾಯಿಯ ಸನಿಹದಲ್ಲೇ ಬಂದು ಕುಳಿತು ಮೆಲ್ಲಗೆ ಕೇಳಿದ:

"ತಾಯೀ, ಈ ಕಸೂತಿ ಎಂದಿಗೆ ಮುಗಿದೀತು? ಯಾಕೆ, ಈ ಗೀಳಿಂದ ನೀನು ಏಳಬಾರದೇನಮ್ಮ?"

ತಲ್ಲೀನಳಾಗಿದ್ದ ತಾಯಿ ಎಚ್ಚೆತ್ತಳು. ತನ್ನ ಪ್ರೀತಿಯ ಮಗ. ಆದರೆ ತನ್ನ ಎಣೆಯಿಲ್ಲದ ಕುಸುರಿ ಕೆಲಸಕ್ಕೆ ಗೀಳೆಂದು ಆತ ಕರೆದನೆಂದು ತುಸು ಅಸಮಾಧಾನ. ಕೊಂಚ ಸಿಡುಕಿನಿಂದಲೇ ಆಕೆ ಕೇಳಿದಳು:

"ಏಕೆ ಮಗು! ನಿನಗೆ ಈ ಜರದ ಕಸೂತಿ ಮನಸ್ಸಿಗೆ ಬಾರದೆ?"

ಮಗ ಹೇಳಿದ: "ಹಾಗಲ್ಲಮ್ಮ. ನನಗೆಂದೇ ನೀನು ಲೆಕ್ಕವಿಲ್ಲದಷ್ಟು ದಿನಗಳಿಂದ ದುಡಿಯುತ್ತಿದ್ದೀಯಾ. ಆದರೂ ಇನ್ನೂ ಮುಗಿದಿಲ್ಲ ನಿನ್ನ ತಾಜಮಹಲು, ಕುಣಿಯುವ ನವಿಲು, ಮಾವಿನ ಗೊಂಚಲು. ಕೊನೆಗೆ ಮುಗಿದೀತಾದರೂ ಎಂದು? ನಾನು ತೊಟ್ಟೇನಾದರೂ ಎಂದು?"

ಹೆತ್ತ ಕರುಳಿಗೆ ತಿರುಗಿ ಅದೇ ಕಸಿವಿಸಿ. ಹರಕು ಬಟ್ಟೆಯ ಮಗು. ತೊಡಲು ಏನಾದರೊಂದು ಸೈ. ಆದರೆ! ಆದರೆ... ಇನ್ನೊಂದಿಷ್ಟು ದಿನ ತಡೆದರೆ ಯಾರೂ ನೋಡದ, ಯಾರೂ

ಉಡದ, ಯಾರೂ ಬಿಡದ ಜರದ ಅಂಗಿ ತನ್ನ ಮಗ ತೊಟ್ಟಾನು; ದೊರೆಯ ಮಗನಂತೆ ಮೆರೆದಾನು-ಎಂದು ತನಗೆ ತಾನೇ ಸಮಾಧಾನ ಹೇಳಿಕೊಳ್ಳುತ್ತ ಎಳೆಗಳನ್ನು ಪುನಃ ಪೋಣಿಸಿದಳು...

*

ತಾಜಮಹಲೀಗ ಪೂರ್ತಿಯಾಗಿತ್ತು. ಇಕ್ಕಡೆಯ ತೋಪು ದಟ್ಟೈಸಿತ್ತು. ಮುಂದಿನ ಕೊಳ ನೀರು ತುಂಬಿ ನಿಂತಿತ್ತು. ನವಿಲು ಬಣ್ಣದ ಬೀಸಣಿಗೆ ಬಿಚ್ಚಿ ನರ್ತನಕ್ಕೆ ನಿಂತಿತು. ಮಾವು ಒತ್ತೊತ್ತಿ ನಿಂತಿತ್ತು. ಹೂಗಳು ಎಲ್ಲಾ ದಳಗಳನ್ನು ತೆರೆದುಕೊಂಡು ತುಂಬಿಗಳಿಗಾಗಿ ಕಾಯುತ್ತಿದ್ದವು. ಎಲೆಗಳು ಹಸುರೇರಿದ್ದವು.... ಒಂದು ಊನವೂ ಆ ಕುಸುರಿ ಕೆಲಸದಲ್ಲಿ ಇದ್ದಿಲ್ಲ. ಮುದಿತಾಯಿ ತನ್ನ ಕೈಗೆಲಸಕ್ಕೆ ತಾನೇ ಮಾರುಹೋದಳು. ಜರದ ಅಂಗಿ ಎಲ್ಲಾ ರೀತಿಯಿಂದ ತಯಾರಾಗಿತ್ತು. ಇನ್ನು ತನ್ನ ಮಗು ತೊಡುವುದೊಂದೇ ತಡ! ದೊರೆಯಂತೆ ಕಂಡಾನು ಆಗ— ನೂರಕ್ಕೆ ನೂರರಷ್ಟು! ಎಂದು ಅಂದುಕೊಳ್ಳುತ ಆಕೆ ಮಗನಿಗಾಗಿ ಕೂಗಿದಳು.

ಯಾರೂ ಓಗೊಡಲಿಲ್ಲ. ತಾಯಿ ಹೊರಗೋಡಿದಳು. ಯಾರೋ ಶವವೊಂದನ್ನು ಹೊರಸಾಗಿಸುತ್ತಿದ್ದರು. ತಾಯಿ ದಿಟ್ಟಿಸಿ ನೋಡಿದಳು. ಆ ಹೆಣ ಮತ್ತಾರದೂ ಆಗಿರಲಿಲ್ಲ. ಅದು ಸ್ವತಃ ತನ್ನ ಮಗನದು. ಹಣ್ಣುಹಣ್ಣು ಮುದುಕನಾಗಿ ಆತ ತೀರಿಕೊಂಡಿದ್ದ.

ಕಣ್ಣೀರಿಡುತ್ತ ಆಕೆ ತಾನು ವರ್ಷಾನುವರ್ಷ ಕುಳಿತು ಹೆಣೆದ ತನ್ನ ಆಸೆಯ ಆಕಾಂಕ್ಷೆಯ ಜರದ ಕಸೂತಿಯ ಅಂಗಿಯನ್ನು ಆ ಹೆಣದ ಮೇಲೇರಿಸಿದಳು.

*

ಮುಖವಿಕಾರವಾಗಿರುವ ಕುರೂಪಿಯೊಬ್ಬ ತಕ್ಕ ಹುಡುಗಿ ಸಿಗದಿದ್ದುದರಿಂದ ಅವಿವಾಹಿತನಾಗಿಯೇ ಇದ್ದ. ಹಲ ಕಾಲದ ನಂತರ ಒಬ್ಬ ಯುವತಿ ಅವನನ್ನು ವಿವಾಹವಾಗಲೊಪ್ಪಿದಳು. ಅವಳ ಇಚ್ಛೆಯನ್ನು ತಿಳಿದು ಅಚ್ಚರಿಗೊಂಡು ಕುರೂಪಿ ಅವಳನ್ನು ಕೇಳಿದ:

"ನನ್ನಂಥ ಕುರೂಪಿಯನ್ನು ನೀನು ಹೇಗೆ ಮೆಚ್ಚಿದೆ?"

"ಹಾಗೇನಿಲ್ಲ! ನನ್ನ ಕಣ್ಣಿಗೆ ನೀವು ಸುಂದರವಾಗಿಯೇ ಕಾಣುತ್ತೀರಿ"— ಆ ಯುವತಿ ಉತ್ತರಿಸಿದಳು.

ಕುರೂಪಿ ಚಿಂತಿತನಾಗಿ ಹೇಳಿದ: "ಹಾಗಾದರೆ ನಿನ್ನ ಕಣ್ಣಿನಲ್ಲೇ ಏನೋ ದೋಷವಿರಬೇಕು; ಕಣ್ಣು ಸರಿಯಾಗಿ ಕಾಣಿಸದವಳನ್ನು ನಾನು ಹೇಗೆ ಮದುವೆಯಾಗಲಿ?"

—ನಾಗೇಶರಾವ್

*   *   *

ಶಾ ರವರ 'ಕೆಂಡಿಡಾ' ಎಂಬ ನಾಟಕದಲ್ಲಿ ಕಾರ್ನಿಲಿಯಾ ಎಂಬ ನಟಿ ಅಭಿನಯಿಸಿದ್ದಳು. ನಾಟಕದ ಉದ್ಘಾಟನೆಯ ಮೊದಲ ದಿನ ಶಾರವರು ಕಾರ್ನಿಲಿಯಾಳ ಹೆಸರಿಗೆ ತಂತಿಯೊಂದನ್ನು ರವಾನಿಸಿದರು. "ಸರ್ವಶ್ರೇಷ್ಠ" ಎಂಬ ಒಂದೇ ಶಬ್ದವು ಅದರಲ್ಲಿತ್ತು.

ಕಾರ್ನಿಲಿಯಾಳೂ ಸಹ ಒಂದೇ ಶಬ್ದದ ಮರುತಂತಿ ಕಳಿಸಿದಳು. "ಅಯೋಗ್ಯ."

ಶಾ ರವರು ಮತ್ತೆ ತಂತಿ ಕಳಿಸಿದರು: "ನನ್ನ ಅಭಿಪ್ರಾಯ ನಾಟಕವನ್ನು ಕುರಿತಾಗಿತ್ತು."

"ನನ್ನದೂ ಸಹ" ಉತ್ತರ ಬಂತು.

—ಧ್ರುವಕುಮಾರ

ಆ ಕಾಲದಲ್ಲಿ ಸ್ತ್ರೀಸ್ವಾತಂತ್ರ್ಯ ಕಡಿಮೆಯಿತ್ತೆ ?

ಕಂತಿ ಪಂಪನನ್ನು ಸೋಲಿಸಿದಾಗ

ಕೃ. ನಾರಾಯಣರಾವ್

ಕನ್ನಡ ಸಾಹಿತ್ಯದಲ್ಲಿ ಅತ್ಯಂತ ಕೌತುಕದ ಸನ್ನಿವೇಶಗಳಲ್ಲಿ ಕಂತಿ-ಹಂಪರ ಸಮಸ್ಯೆಗಳೂ ಬರುತ್ತವೆ. ಕನ್ನಡ ನಾಡಿನ ಇತಿಹಾಸದಲ್ಲಿ ದ್ವಾರಸಮುದ್ರದ ಹೊಯ್ಸಳ ವಿಷ್ಣುವರ್ಧನನ ಕಾಲ ಸ್ವರ್ಣಯುಗವೆನಿಸುತ್ತದೆ. ಶಿಲ್ಪ, ಸಂಗೀತ, ನೃತ್ಯ, ಕಾವ್ಯಗಳೆಲ್ಲದರ ಪ್ರಚಂಡ ಪುನರುಜ್ಜೀವನದ ಈ ಕಾಲದಲ್ಲಿ, ಆಸ್ಥಾನದ ಮಹಾಕವಿಯೊಬ್ಬನ ಬುದ್ಧಿಶಕ್ತಿಯ ಮುಂದೆ ತನ್ನ ಬುದ್ಧಿಶಕ್ತಿಯನ್ನು ಸ್ಪರ್ಧೆಗೆ ನಿಲ್ಲಿಸಿ ವಿಜಯಿಯಾದ ಮಹಿಳೆ ಕಂತಿ.

೧೨ ನೇ ಶತಮಾನದ ಕನ್ನಡ ಕವಿಗಳಲ್ಲಿ ಶ್ರೇಷ್ಠಸ್ಥಾನ "ಪಂಪ ರಾಮಾಯಣ", "ಮಲ್ಲಿನಾಥ ಪುರಾಣ"ಗಳ ಕರ್ತೃ ಅಭಿನವ ಪಂಪನಿಗೆ ಸಲ್ಲುತ್ತದೆ. ಈ ಜೈನ ಕವಿ ವಿಷ್ಣುವರ್ಧನನ ಆಸ್ಥಾನದ ಕವಿಗಳರಸ. ಅವನ ಯೋಗ್ಯತೆಗೆ ತಕ್ಕಂತೆ ಅವನ ಅಹಂಕಾರವೂ ಉದ್ದಾಮ. ಕಂತಿಯೊಬ್ಬಳು ಮಾತ್ರ ಅವನಿಗೆ ಸೊಪ್ಪು ಹಾಕದವಳು. ಅವಳೂ ಕವಯಿತ್ರಿ. ಇಂದು ಅವಳಿಗೂ ಪಂಪನಿಗೂ ನಡೆದ ಸಮಸ್ಯಾತ್ಮಕ ಸಂಭಾಷಣೆಗಳ ಹೊರತು ಮತ್ತಾವ ಕಾವ್ಯವೂ ಅವಳ ಹೆಸರಲ್ಲಿ ಉಳಿದಿಲ್ಲವಾದರೂ ಅವಳ ಆಶುಕವಿತಾಶಕ್ತಿ ಜನಮನವನ್ನು ಎಷ್ಟು ಆಕರ್ಷಿಸಿತ್ತೆಂದರೆ ಹಲವು ಶತಮಾನಗಳ ನಂತರ "ರಾಜಾವಳಿ" ಕಥೆಯನ್ನು ಬರೆದ ದೇವಕವಿ ಕೂಡ ಅವಳನ್ನು ಕುರಿತು ಈ ಅದ್ಭುತ ಕಥೆಯೊಂದನ್ನು ಹೇಳುತ್ತಾನೆ:

ದೋರ ಸಮುದ್ರವೆಂಬ ಕೆರೆಯನ್ನು ಕಟ್ಟಿಸಿದ ದೋರರಾಯನು ಧರ್ಮಚಂದ್ರನೆಂಬ ಬ್ರಾಹ್ಮಣನನ್ನು ಮಂತ್ರಿಯಾಗಿ ಮಾಡಿಕೊಂಡು ಆಳುತ್ತಿದ್ದ. ಅವನ ಮಗನು ಉಪಾಧ್ಯಾಯನಾಗಿ ಛಂದೋಲಂಕಾರ ವ್ಯಾಕರಣ ಕಾವ್ಯಾದಿಗಳನ್ನು ಮಕ್ಕಳಿಗೆ ಪಾಠ ಹೇಳುತ್ತಿದ್ದ. ಮಂದಮತಿಗಳಾದ ಮಕ್ಕಳಿಗೆ ಬುದ್ಧಿಪ್ರಕಾಶಕ್ಕಾಗಿ ಅವನು ಒಂದು ಕುಡಿಕೆಯಲ್ಲಿ ಜ್ಯೋತಿಷ್ಮತಿಯೆಂಬ ತೈಲವನ್ನು ಮಾಡಿಟ್ಟಿದ್ದ. ಅದರ ಅರೆಬಿಂದುವನ್ನು ಕೊಟ್ಟರೆ ದಡ್ಡರು ಬುದ್ಧಿವಂತರಾಗುತ್ತಿದ್ದರು. ಕಂತಿಯೆಂಬ ಹುಡುಗಿ ಅದನ್ನರಿಯದೆ ಆ ತೈಲವೆಲ್ಲವನ್ನು ಒಮ್ಮೆಲೆ ಕುಡಿದುಬಿಟ್ಟಳು. ಒಡನೆ ಉರಿ ಹತ್ತಿತು. ಅವಳು ಬಾವಿಯಲ್ಲಿ ಬಿದ್ದಳು. ಅಲ್ಲಿ ಕಂಠಮಟ ನೀರಲ್ಲಿ ನಿಂತು ಜೀವವುಳಿಸಿಕೊಂಡಳು. ಅವಳ ಬಾಯಿಯಿಂದ ನಿರರ್ಗಳವಾಗಿ ಕವಿತೆ ಹೊರಹೊಮ್ಮುತ್ತಿತ್ತು. ಇದನ್ನು ಕೇಳಿ ವಿಸ್ಮಿತನಾದ ರಾಜ ಆಸ್ಥಾನ ಕವಿ ಅಭಿನವ ಪಂಪನನ್ನು ಕಳಿಸಿದ. ಪಂಪ ಕವಿ ಅವಳಿಗೆ ಸಾವಿರ ಪ್ರಶ್ನೆಗಳನ್ನು ಕೇಳಿದ. ಅವಳು ಅವಕ್ಕೆಲ್ಲ ಸಮರ್ಪಕ ಉತ್ತರ ಕೊಡಲಾಗಿ ಅವನು ಮೆಚ್ಚಿ ಅವಳನ್ನು ರಾಜಸಭೆಗೆ ಕರೆದೊಯ್ದ. ಅಲ್ಲವಳು "ಅಧಿಕ ಕವೀಶ್ವರಿಯಾಗಿರ್ದಳ್."

ಈ ಕೆಳಗೆ ಅಭಿನವ ಪಂಪ ಹಾಗೂ ಕವಯಿತ್ರಿ ಕಂತಿಗೆ ನಡೆದ ಸಮಸ್ಯಾ ರೂಪಕ ಪ್ರಶ್ನೋತ್ತರಗಳಲ್ಲಿ ಹಲವನ್ನು ಕೊಡುತ್ತೇನೆ. ಅವುಗಳಲ್ಲಿ ಹೆಚ್ಚಿನವು ಕಂದಪದ್ಯಗಳಲ್ಲಿವೆ.

ವಿಷ್ಣುವರ್ಧನನು ಜೈನರಾಜ. ಪಂಪನೂ ಜೈನನೇ. ಕಂತಿ ಕೂಡ. ಜೈನರ ಮುಖ್ಯ ತತ್ವ ಅಹಿಂಸೆ. ಹೀಗಿರುವಾಗ ಪಂಪನು ಕಂತಿಯ ಬುದ್ಧಿಶಕ್ತಿ ಹಾಗೂ ಜಿನಭಕ್ತಿಯನ್ನು ಪರೀಕ್ಷಿಸಲು ಒಂದು ಸಮಸ್ಯೆಯನ್ನು ನೀಡುತ್ತಾನೆ.

"ನನಿಗೆ ನಮಸ್ಕಾರ ಮಾಡೆ ಕೈವಲ್ಯ ಸುಖಂ"

ದೈವಕೃಪೆಯಿಂದ ಮಾತ್ರ ಕೈವಲ್ಯ ಸುಖವು ದೊರೆಯುವುದೆಂದು ವೇದಗಳೂ ಸಾರುತ್ತಿರುವಾಗ "ನನಿಗೆ ನಮಸ್ಕಾರ ಮಾಡೆ ಕೈವಲ್ಯ ಸುಖಂ" ಎಂದು ಪಂಡಿತನಾದ ಪಂಪನೂ ಹೇಳಿದರೆ ಕಂತಿ ಏನು ತಾನೆ ಮಾಡಿಯಾಳು? ಆದಾಗ್ಯೂ ತನ್ನ ಕವಿತಾಶಕ್ತಿಯಿಂದ ಅವಳು ಅದನ್ನು ಈ ರೀತಿ ಮಾರ್ಪಡಿಸಿ ಉಳಿದ ಪಾದಗಳನ್ನು ಪೂರೈಸುತ್ತಾಳೆ:

ಘನಮತಿಯಿನನುದಯುದೊಳಂ
ವಿನಯುದೆ ಫಲಪುಷ್ಪವೆರಸಿ ಭಕುತಿಯು
ಭರದಿಂ
ಮನಶುದ್ಧಿವಡೆದು ಪರಮ ಜಿ-
ನನಿಗೆ ನಮಸ್ಕಾರ ಮಾಡೆ ಕೈವಲ್ಯ
ಸುಖಂ

ನನಿಗೆ ಇದ್ದದ್ದು ಜನನಿಗೆ ಎಂದಾಯಿತವಳ ಚಾತುರಿಯಿಂದ!

ಪಂಪನು ಕಂತಿಗೆ ನೀಡಿದ ಇನ್ನೊಂದು ಕಠಿನವಾದ ಸಮಸ್ಯೆಯೆಂದರೆ "ಕಳ್ಳಂ ಕುಡಿವುದನು ಕಂಡೆ ಜೈನರ ಮನೆಯೊಳ್" ಎಂಬುದು. ಜೈನರು ಅಹಿಂಸಾವಾದಿಗಳಾಗಿ, ಪೇಯನಿಷೇಧಕರಾಗಿರುವಾಗ "ಜೈನರ ಮನೆಯಲ್ಲಿ ಕಳ್ಳಂ ಕುಡಿವುದನು ಕಂಡೆ" ಎನ್ನುತ್ತಾನೆ. ಆದರೆ ಕಂತಿ ಅದನ್ನು ಬೇರೆಯೆ ರೀತಿ ಮಾರ್ಪಡಿಸಿವಳು:

ಹೊಳ್ಳಿಸಿ ಗೋಡೆಯು ಕನ್ನವ-
ನೊಳ್ಳೆಯು ಕತ್ತಿಯುಲಿ ಕೊರೆದು
ನೆಲುವಿನ ಮೊಸರಂ
ಬೆಳ್ಳಿಯು ಬಟ್ಟಲೊಳಿಕ್ಕುತ
ಕಳ್ಳಂ ಕುಡಿವುದನು ಕಂಡೆ ಜೈನರ
ಮನೆಯೊಳ್

ಮತ್ತೊಂದು ಸವಾಲಿನಲ್ಲಿ ಪಂಪನು ಮಕ್ಕಳು ಪ್ರಶ್ನಿಸುವ ರೀತಿಯುಲ್ಲಿ ಮುದ್ದಾಗಿ ಹೇಳುತ್ತಾನೆ, ವೈಚಿತ್ರ್ಯವನ್ನು ಸೂಚಿಸುತ್ತಾ — "ಗಜವ..ಂ ಬಟ್ಟೆಯುಲಿ ಕಟ್ಟಿ ಪೊತ್ತರ್ ಪೆಗಲೊಳ್."

ಆದರೆ ಗಂಟು ಕಟ್ಟಿ ಹೊತ್ತುಕೊಂಡು ಹೋಗುವಷ್ಟು ಹಗುರಾದ ಪ್ರಾಣಿಯೇ ಆನೆ? ಕಂತಿ ತಾನೇ ಪಂಪನಿಗಿಂತಲೂ ಕಡಿಮೆಯವಳಲ್ಲ. ಆಕೆ ನೀಡಿದ್ದ ಉತ್ತರದ ವೈಖರಿ ನೋಡಿ—

ನಿಜರಾಜ್ಯದೊಳುತ್ಪತ್ತಿಯು
ನಿಜವುಂ ಕಾಣಲ್ಕೆ ಭೂಪ
ಮನವುಂ ಮಾಡಲ್
ಪ್ರಜವದೆ ಲೇಖಕಜನ ಕಾ-
ಗಜವುಂ ಬಟ್ಟೆಯುಲಿ ಕಟ್ಟಿ ಪೊತ್ತರ್
ಪೆಗಲೊಳ್

ಗಜವನ್ನು ಕಾಗಜವನ್ನಾಗಿ ಬದಲಿಸಿ ಅರ್ಥಗರ್ಭಿತವನ್ನಾಗಿ ಮಾಡಿ ಹೇಳಿದ ಕನ್ನಡತಿ ಹಾಗೂ ಕಬ್ಬಿಗಿತಿ ಕಂತಿ ಯಾವ ಕವಿ-ಮಣಿಗಳಿಗೆ ತಾನೇ ಕಡಿಮೆ?

ಇನ್ನೊಂದು ಸಮಸ್ಯೆಯುಲ್ಲಿ ಪಂಪನು ಮೆಚ್ಚು ದೊರೆಯು ಕೆಲಸವನ್ನು ವರ್ಣಿಸುವಂತೆ ಈ ರೀತಿ ಸವಾಲು ಹಾಕುತ್ತಾನೆ— "ನರಿರಾಗಕೆ ಮೆಚ್ಚಿ ಭೂಪ ಪದಕಮನಿತ್ತಂ."

ನರಿಯ ಕರ್ಕಶ ಧ್ವನಿಯನ್ನು ಕೇಳಿ ಬೇಸರಿಸುವ ನರರೂ ಸಹ ಪದಕವನ್ನು ಅದಕ್ಕೆ ಬಹುಮಾನ ನೀಡುವರೆಂದರೆ! ಆದರೆ ಕಂತಿಯ ಕವಿತೆಯ ಜಾಣ್ಮೆಯನ್ನು ನೋಡಿ—

ಸರಸಿಜಮುಖಿಯಾಸ್ಥಾನದೆ
ಕೊರಳಂ ಬೆರಳೊಂದು ಮಾಡಿ
ಪೊಗಳುತ ನೃಪನಂ
ಹರುಷದೆ ನುಡಿಸುವಳಾ ಕಿಂ-
ನರಿರಾಗಕೆ ಭೂಪ ಮೆಚ್ಚಿ ಪದಕ
ಮನಿತ್ತಂ

ಪರಮ ಪಂಡಿತನೆನಿಸಿದ ಪಂಪನು ಮೇಲ್ಕಂಡ ಉತ್ತರದಿಂದ ಹೃದಯದಲ್ಲಿ ತುಂಬ ಚಕಿತನಾಗಿ ಕಂತಿಯನ್ನು ರೇಗಿಸಲು ಮತ್ತೊಂದು ಏಟನ್ನು ಚಿನ್ನದ ಚಾಟಿಯಿಂದ ಹೊಡೆಯುತ್ತಾನೆ–"ಸತ್ತವಳೆದ್ದೋಡಿ ಪೋದಳೇನಿದು ಚಿತ್ರಂ."

ಕಂತಿಯು ಈ ವಿಚಿತ್ರದ ವಿಷಯವನ್ನೂ ಚಿತ್ರಿತ ಗೊಳಿಸುತ್ತಾಳೆ—

"ಅತ್ತೆಯ ಬೈಗಳ ಮಾತಿಂ
ದತ್ತಿಗೆಯ ದೌರ್ಜನ್ಯದಿಂ ಗಂಡನ ಪೆಟ್ಟಿಂ
ಮತ್ತೆ ಮುದಿಮಾವನಿಂ ಬೇ-
ಸತ್ತವಳೆದ್ದೋಡಿ ಪೋದಳೇನಿದು
ಚಿತ್ರಂ

ಎಷ್ಟಾದರೂ ಕಂತಿ ಹೆಂಗಸು. ಹೆಣ್ಣಿನ ಕಷ್ಟ ಸುಖದ ಸವಿಯು ಅವಳಿಗಿರದಿರುವುದೇ? ಮನೆ-ಮನೆಯ ಮಡದಿಯರ ಮಾರ್ಮಿಕತೆಯ ರುದನದ ಕೂಗು ಅವಳ ಅಂತರಾಳದಿಂದ ಮಧುರರೀತ್ಯಾ ಹೊರ ಬರದೇ? ಮೇಲ್ಕಂಡ ಪದ್ಯವು ನಿಜಕ್ಕೂ ಭಾರತದ ಬೇಸತ್ತ ಮಹಿಳೆಯರ ಒಂದು ರೂಪವನ್ನು ತೋರಿಸುತ್ತದೆ.

ಈ ವರೆಗೂ ಜಾಣ್ಮೆಯ ಮಾತಿನ ಮಳೆಯಿಂದ ಸೋತ ಪಂಪನು ಹೇಗಾದರೂ ಕಂತಿಯ ಕೈಯಿಂದ ಹೊಗಳಿಸಿಕೊಳ್ಳಲೇಬೇಕೆಂದು ತಾನು ಸತ್ತೆನೆಂಬ ಸುದ್ದಿಯನ್ನು ಊರಲ್ಲೆಲ್ಲಾ ಹಬ್ಬಿಸುತ್ತಾನೆ. ಎಷ್ಟಾದರೂ ಹೆಣ್ಣಿನ ಹೃದಯ ಬೆಣ್ಣೆಯಂತಲ್ಲವೆ? ಕಂತಿಯು ಪಂಪನ ಕೊನೆಯ ದರ್ಶನಕ್ಕೆಂದು ಅಳುತ್ತಾ ಬೀಳುತ್ತಾ ಬಂದು ಪಂಪನ ಶವದ ಮುಂದೆ ಕಣ್ಣೀರ್ಗರೆಯುತ್ತಾ ಹೇಳುತ್ತಾಳೆ-

ಕವಿರಾಯ ಕವಿ ಪಿತಾಮಹ
ಕವಿಕಂಠಾಭರಣ ಕವಿಶಿಖಾಮಣಿ
ಭಾಪು
ಕವಿಕುಲತಿಲಕಂ ಪಂಪಂಗೆ
ಕವಿಚಕ್ರೇಶಂಗೆ ಸಾವು ಸಮನಿಸಿತಕಟಾ

ಇನ್ನೇಕೆ ದೋರನೋಲಗ-
ಮಿನ್ನೇಕೆ ಕವಿತ್ವವಾದ ತರ್ಕಸಮುಸ್ಯಂ
ಇನ್ನೇಕೆ ಬಲ್ಲಿಚಾರಂ
ಚನ್ನಿಗಕವಿ ಪಂಪರಾಜನಳಿದ ಬಳಿಕ್ಕಂ

ಕಂತಿ ಅಳುತ್ತಿದ್ದಂತೆ ಪಂಪನು ಗೆದ್ದೆನೆಂಬ ಸಂತಸದಿಂದ ಮುಗುಳ್ನಗೆಯೊಂದಿಗೆ ಮೇಲೇಳುತ್ತಾ ಹೀಗೆ ಹೇಳುತ್ತಾನೆ—

"ಎಲೆ ಕಂತಿ! ಗೆದ್ದ ಪರಾರೀಗರಿದ ಪೆಯಾ? ಎನಿತಾದೊಡಂ ನೀ ಸ್ತ್ರೀ! ನಾನ್ ಪುರುಷನ್, ಪುರುಷರ್ಗಿಂ ಸ್ತ್ರೀಯರ್ಕಳ್ ಸಾಹಸ ಷಡ್ಗುಣರೆಂಬ ನೀತಿ ನಿನ್ನೊಳ್ ಸೋಲ್ತುದಲ್ತೆ! ಅಂತದರಿಂ ಸತ್ತವರ ಪೊಗಳುವುದುಂ ಇದ್ದವರ ಬಗಳವುದುಂ ನಿನ್ನ ಸಹಜ ಗುಣಮಾಯ್ತಲ್ತೆ?"

ಪಂಪನ ಅಣಕಿಸುವ ಅಭಿಮಾನದ ಮಾತಿಗೆ ಕಂತಿಯ ಛಲ-ಮಾತನ್ನು ಕೇಳಿ—

"ಪುರುಷರ್ಕಳ್ಗೀಂ ಪೆರ್ಮೆ ಪಂಪಾ? ತತ್ಪುರುಷ ಪುರುಷರಂ ಪೆತ್ತು, ಪೊತ್ತು, ಮತಿಗಲಿಸಿದಬ್ಬೆ ಸ್ತ್ರೀಯಲ್ತೆ!" ಎಂದು ದಿಟ್ಟತನದಿಂದ ಸಮರ್ಥಿಸುತ್ತಾಳೆ.

ಇಂತಹ ಕಂತಿಯ ಕವಿತಾಶಕ್ತಿಯನ್ನು ಕಂಡು, ಅದರ ಸವಿಯುಂಡು, ಕ್ರಿ. ಶ. ೧೫೬೦ ರಲ್ಲಿದ್ದ ಬಾಹುಬಲಿಯು ತನ್ನ ನಾಗಕುಮಾರ ಚರಿತ್ರೆಯಲ್ಲಿ ಕಂತಿಯನ್ನು ಕುರಿತು ಈ ರೀತಿ ಬರೆದಿರುವುದರಲ್ಲಿ ಅತಿಶಯೋಕ್ತಿಯೇನೂ ಇಲ್ಲ.

"ವಿಬುಧ ಜನಸ್ತುತ ಶ್ರೀ ವೀರ ಧೋರನ| ಸಭೆಗೆ ಮಂಗಳ ಲಕ್ಷ್ಮಿಯೆನಿಪ| ಶುಭಗುಣ ಚರಿತೆ ಕಂತಿಕೆಯರ ಪೊಗಳ್ವೆ ನಾಂ| ಅಭಿನವ ವಾಗ್ದೇವಿಯರ"

*

ಜೊಹಾನ್ಸ್‌ಬರ್ಗಿನ ಪ್ರೇಮವೀರ



ದಕ್ಷಿಣ ಆಫ್ರಿಕದ ವರ್ಣದ್ವೇಷಕ್ಕೆ
ಒಂದು ರೋಮಾಂಚಕ ಪ್ರೇಮಬಲಿ

ಶಿವಾಜಿ ಶಂಕರ ಕಾರ್ಲೇಕರ

೧೯೧೬ ರಲ್ಲಿ ಕಾರ್ಲೇಕರ ಸರ್ಕಸ್ಸು ಮದಾಗಾಸ್ಕರ ಮತ್ತು ಮಾರಿಶಸ್ ದ್ವೀಪಗಳಲ್ಲಿ ಕ್ಯಾಂಪು ಹಾಕಿತ್ತು. ಸಕ್ಕರೆಗಾಗಿ ಪ್ರಸಿದ್ಧವಾಗಿರುವ ಈ ದ್ವೀಪಗಳು ಸರ್ಕಸ್ಸಿಗೆ ವಿಪುಲ ಧನವನ್ನು ನೀಡಿ ಎಲ್ಲರ ಬಾಯಿ ಸಿಹಿ ಮಾಡಿದ್ದವು! ಮದಾಗಾಸ್ಕರ ಮತ್ತು ಮಾರಿಶಸ್ಸಿನ ಸುಖದ ಅನುಭವಗಳ ಸವಿನೆನಪುಗಳನ್ನು ಎಣಿಸುತ್ತ ಸರ್ಕಸ್ ಹಡಗಿನಿಂದ ದಕ್ಷಿಣ ಆಫ್ರಿಕೆಯತ್ತ ಸಾಗಿತು. ೧೦–೧೨ ದಿನದ ಪ್ರವಾಸವಿದ್ದುದರಿಂದ ಆಮೋದ ಪ್ರಮೋದಗಳ ಸುಗ್ಗಿಯೆ ಆಗ ನಡೆದಿತ್ತು. ಸರ್ಕಸ್ಸಿನ ವೃಂದವಾದಕರು ಕರ್ಣಮಧುರ ವಾದ್ಯಗಳಿಂದ ಎಲ್ಲರನ್ನು ರಂಜಿಸುತ್ತಿದ್ದರು. ೧೬ ವರ್ಷದ ಒಬ್ಬ ಆಂಗ್ಲ ಯುವತಿ ನೇತ್ರ ದೀಪಕ ಪೋಷಾಕನ್ನು ತೊಟ್ಟು ಕುಣಿಯುತ್ತಿದ್ದಳು.

ಆಕೆಯದು ಗೌರವರ್ಣ, ನೀಲಿಕಣ್ಣುಗಳು, ದುಂಡಗಾದ ಮುಖ; ಆರಕ್ತ ಓಷ್ಠದ್ವಯ, ಬಂಗಾರ ಬಣ್ಣದ ಕೇಶರಾಶಿ. ಅವಳ ನೋಟ ಕಣ್ಣಿಗೆ ಹಬ್ಬವಾಗಿತ್ತು, ಆಕೆ ಸರ್ಕಸ್ಸಿನಲ್ಲಿದ್ದ ಮುಷ್ಟಿಯೋಧ ಹ್ಯಾರಿ ಲಾರೆನ್ಸನ ಮಗಳು.

ಯಾರ್ಕ್‌ಶಾಯರಿನ (ಇಂಗ್ಲಂಡ್) ಹ್ಯಾರಿ ಸರ್ಕಸ್ ರಿಂಗಿನಲ್ಲಿ ನಿಂತು ಯಾರಾದರೂ ದಿಟ್ಟರಿದ್ದರೆ ಬರಬೇಕೆಂದು ಮುಷ್ಟಿಯುದ್ಧದ ಆಹ್ವಾನವೀಯುತ್ತಿದ್ದ.

೧೦-೧೨ ದಿನಗಳ ಪ್ರಯಾಣಾನಂತರ ಕಾರ್ಲೇಕರ ಸರ್ಕಸ್ಸಿನ ಹಡಗು ದಕ್ಷಿಣ ಆಫ್ರಿಕೆಯ ದರಬಾನ್ ಬಂದರಕ್ಕೆ ಬಂದಿತು. ದಕ್ಷಿಣ ಆಫ್ರಿಕೆಯಲ್ಲಿ ಇದು ಮೊದಲನೇ ಕ್ಯಾಂಪಾಗಿತ್ತು. ಅಲ್ಲಿಂದ ಸರ್ಕಸ್ಸು ಜೋಹಾನ್ಸ್‌ಬರ್ಗ್ ನಗರಕ್ಕೆ ಹೋಯಿತು.

ದಕ್ಷಿಣ ಆಫ್ರಿಕೆಯ ರಾಜಧಾನಿಯ ಜೋಹಾನ್ಸ್‌ಬರ್ಗಿನ ಸುತ್ತಮುತ್ತಲಿನ ಪ್ರದೇಶದಲ್ಲಿ ಅನೇಕ ವಜ್ರದ ಗಣಿಗಳಿವೆ. ಈ ಪಟ್ಟಣದಲ್ಲಿ ಬಿಳಿಯರ ಪ್ರಾಬಲ್ಯವಿತ್ತು. ನಿಗ್ರೋಜನರು ಸಾಕಷ್ಟಿದ್ದರೂ ಕಾಯದೆಯಿಂದ ಅವರನ್ನು ಬಹಳ ಹಿಂದೆ ಇಡಲಾಗಿತ್ತು. ಬಿಳಿಯರ ಹೋಟಲುಗಳಲ್ಲಿ ನಿಗ್ರೋಗಳಿಗೆ ಪ್ರವೇಶವಿರಲಿಲ್ಲ, ಇಷ್ಟೇ ಅಲ್ಲ, ಒಬ್ಬ ನಿಗ್ರೋ ಒಬ್ಬ ಬಿಳಿಯರ ಹುಡುಗಿಯ ಮಾನಭಂಗ ಮಾಡಿದರೆ ಅವನನ್ನು ಸಜೀವ ಸುಡಲಾಗುತ್ತಿತ್ತು. ಜೋಹಾನ್ಸ್‌ಬರ್ಗಿನ ವ್ಯಾಪಾರ ಬಲು ದೊಡ್ಡದು. ಆಗ ಇಲ್ಲಿ ಅನೇಕ ಹಿಂದೀ ವ್ಯಾಪಾರಿಗಳು ನೆಲೆಗೊಂಡು ಒಳ್ಳೇ ಮಾನ-ಮರ್ಯಾದೆಯ ಸ್ಥಾನವನ್ನು ಹೊಂದಿದ್ದರು.

ಕಾರ್ಲೇಕರ ಗ್ರ್ಯಾಂಡ್ ಸರ್ಕಸ್ಸಿನ ಭವ್ಯ ಡೇರೆಯಲ್ಲಿ ಸರ್ಕಸ್ ಪ್ರಯೋಗಗಳು ಪ್ರಾರಂಭವಾದವು ನೋಟಕರು ಹಿಂಡುಹಿಂಡಾಗಿ ಬರತೊಡಗಿದರು. ಬೇರೆ ಕಡೆಗಳಲ್ಲಿಯಂತೆ ಹ್ಯಾರಿ ಇಲ್ಲಿಯೂ ಮುಷ್ಟಿಯುದ್ಧಕ್ಕೆ ಆಹ್ವಾನವಿತ್ತ. ಮೊದಲೆರಡು ದಿನ ಯಾರೂ ಈ ಆಹ್ವಾನವನ್ನು ಸ್ವೀಕರಿಸಲಿಲ್ಲ. ಆದರೆ ನಾಲ್ಕನೇ ದಿನ ೨೦-೨೧ ವರ್ಷದ ಓರ್ವ ನಿಗ್ರೋ ತರುಣ ಈ ಆಹ್ವಾನವನ್ನು ಸ್ವೀಕರಿಸಿದ.

ಸುದೃಢಕಾಯನಾದ ಆ ಯುವಕ ಕಪ್ಪಾಗಿದ್ದರೂ ಸತೇಜನಾಗಿದ್ದ. ಇವನ ಹೆಸರು ಲುಯಿ ರಾಬರ್ಟ್. ಈತ ಜೋಹಾನ್ಸ್‌ಬರ್ಗಿನ ಬಳಿಯ ಒಂದು ಹಳ್ಳಿಯಲ್ಲಿ ಹುಟ್ಟಿದ್ದ. ಇವನ ತಾಯಿ ತಂದೆ ಒಬ್ಬ ಬಿಳಿಯನ ತೋಟದಲ್ಲಿ ಕೆಲಸಕ್ಕಿದ್ದರು. ತೋಟದ ಒಡೆಯ ದಯಾಳುವಾಗಿದ್ದ. ತನ್ನ ನೌಕರರನ್ನು ಸಹಾನುಭೂತಿಯಿಂದ ನೋಡಿಕೊಳ್ಳುತ್ತಿದ್ದ. ಲುಯಿ ಚಿಕ್ಕವನಿದ್ದಾಗಿನಿಂದಲೂ ಮೈಕೈ ತುಂಬಿ ಹೃಷ್ಟ ಪುಷ್ಟವಾಗಿ ಬೆಳೆದಿದ್ದನಾದ್ದರಿಂದ ತೋಟದ ಮಾಲಿಕ ಅವನನ್ನು ಬಲು ಪ್ರೀತಿಸುತ್ತಿದ್ದ. ಬಾಲ್ಯದಿಂದಲೇ ಒಂದು ಬಗೆಯ ಭೀಮಶಕ್ತಿ ಇವನಲ್ಲಿತ್ತು. ೧೬ ವರ್ಷದವನಾದಾಗ ಈತ ಕೊಬ್ಬಿದ ಕೋಣದಂತೆ ಕಾಣುತ್ತಿದ್ದ. ಆಗ ಒಂದು ಅದ್ಭುತ ಘಟನೆಯಾಯಿತು.

ಒಮ್ಮೆ ಲುಯಿಯನ್ನು ಜೊತೆಯಲ್ಲಿ ಕರೆದುಕೊಂಡು ಅವನ ಒಡೆಯ ಬೇಟೆಗೆ ಹೋದ. ಅಡವಿಯಲ್ಲಿ ನಡೆದಿರಲು ಒಮ್ಮಿಂದೊಮ್ಮೆಲೆ ಎದುರಿನ ಗಿಡಗಂಟೆಯೊಳಗಿಂದ ಒಂದು ಕಾಡುಹಂದಿ ವೇಗವಾಗಿ ಧಾವಿಸಿ ಒಡೆಯನು ಬಂದೂಕು ಹಾರಿಸುವ ಮೊದಲೇ ಅವನನ್ನು ನೂಕಿ ಉರುಳಿಸಿ ಅವನ ಎದೆಯ ಮೇಲೆ ಕೂತಿತು. ಇನ್ನೇನು ಕ್ಷಣಾರ್ಧದಲ್ಲಿ ತನ್ನ ಕೋರೆಯನ್ನು ತಿವಿದು ಬಿಳಿಯ ಒಡೆಯನನ್ನು ಅದು ಕೊಲ್ಲುತ್ತಿತ್ತು. ಅಷ್ಟರಲ್ಲಿ ಶರವೇಗದಿಂದ ಲುಯಿ ಹಂದಿಯ ಮೇಲೆ ಎರಗಿ ಅದರ ಹಿಂದಿನ ಕಾಲುಗಳನ್ನು ಹಿಡಿದು ಎತ್ತಿ ಗರಗರನೆ ತಿರುಗಿಸಿ ನಾಲ್ಕೈದು ಸಲ ನೆಲಕ್ಕಪ್ಪಳಿಸಿ ಚೆಲ್ಲಿದ. ಹಂದಿಯ ಮೈ ನುಗ್ಗುನುಗ್ಗಾಗಿ ಹೋಯಿತು. ಲುಯಿಯೆ ತನ್ನ ಪ್ರಾಣಗಳನ್ನುಳಿಸಿದನೆಂದು ಪ್ರೀತಿಯಿಂದ ಒಡೆಯನು ಉತ್ತಮ ಮುಷ್ಟಿಯೋಧನೊಬ್ಬನ ಹತ್ತಿರ ಲುಯಿಗೆ ಮುಷ್ಟಿಯುದ್ಧದ ಶಿಕ್ಷಣ ಕೊಡಿಸಿದ.

ಸರ್ಕಸ್ಸಿನ ಹ್ಯಾರಿಯೊಂದಿಗೆ ಲುಯಿ ಮುಷ್ಟಿಯುದ್ಧಕ್ಕೆ ಸನ್ನದ್ಧನಾದ. ಲುಯಿ ಜಟ್ಟಿಯ ಬಟ್ಟೆ ಧರಿಸಿ ರಿಂಗಿನೊಳಗೆ ಬಂದುದೇ ತಡ, ಪ್ರಚಂಡ ಜನ ಸಮುದಾಯವು ಕರತಾಡನದಿಂದ ಅವನನ್ನು ಸ್ವಾಗತಿಸಿತು. ಸ್ವತಃ ಹ್ಯಾರಿಯೂ ಅವನ ಮೈಕಟ್ಟನ್ನು ನೋಡಿ ದಂಗಾದ.

ಯುದ್ಧ ಸುರುವಾಯಿತು. ಮೊದಲ ಸುತ್ತಿನಲ್ಲಿ ಲುಯಿ ಲೀಲಯಾ ಹ್ಯಾರಿಯನ್ನು ಎತ್ತಿ ಒಗೆದ. ಆದರೆ ಎರಡನೆಯ ಸುತ್ತಿನಲ್ಲಿ ಮಾತ್ರ

ಹ್ಯಾರಿ ಅಷ್ಟು ಸಡಿಲಾಗಲಿಲ್ಲ. ಆದರೆ ಆಗಲೂ ಲುಯಿಗೇ ಯಶ ದೊರಕಿತು. ಮೂರನೆ ಮತ್ತು ಕೊನೆಯ ಸುತ್ತಿನಲ್ಲಿ ಹ್ಯಾರಿ ತನ್ನ ಸರ್ವಶಕ್ತಿ ನೈಪುಣ್ಯವನ್ನು ಪಣಕ್ಕಿಟ್ಟು ಹೋರಾಡಿದ. ಆದರೂ ಆತ ಪರಾಭೂತನಾಗಬೇಕಾಯಿತು. ಲುಯಿಯ ಹೊಡೆತದಿಂದ ಹ್ಯಾರಿ ಎಚ್ಚರದಪ್ಪಿ ಬಿದ್ದ.

ಪ್ರೇಕ್ಷಕರು ಲುಯಿಯ ಜಯಜಯಕಾರ ಮಾಡಿ ಡೇರೆಯನ್ನೇ ನಡುಗಿಸಿದರು. ಹ್ಯಾರಿಯನ್ನು ಎತ್ತಿ ಅವನ ಡೇರೆಯೊಳಗೆ ಒಯ್ಯಲಾಯಿತು. ತಂದೆಯ ಈ ಅವಸ್ಥೆಯನ್ನು ಕಂಡು ಮೇರಿ ಅಳತೊಡಗಿದಳು. ಲುಯಿ ಅವಳನ್ನು ಸಮಾಧಾನಪಡಿಸಿದ. ಆಕೆಯ ರೂಪರಾಶಿಯನ್ನು ಕಂಡು ಅವನು ಲುಬ್ಧನಾಗಿದ್ದ. ಅವಳ ಮೂರ್ತಿ ಅವನ ಎದೆಯಲ್ಲಿ ಕೊರೆದಂತೆ ಉಳಿಯಿತು.

ಬಹಳ ಹೊತ್ತು ಆರೈಕೆ ನಡೆಸಿದ ಮೇಲೆ ಹ್ಯಾರಿ ಎಚ್ಚರಾದ. ತನ್ನ ಆರೈಕೆ ಮಾಡುತ್ತಿರುವ ವ್ಯಕ್ತಿ ಮತ್ತಾರೂ ಆಗಿರದೆ ತನ್ನ ಪ್ರತಿಸ್ಪರ್ಧಿಯಾಗಿದ್ದ ಲುಯಿ ಎಂಬುದನ್ನು ಕಂಡಕೂಡಲೆ ಹ್ಯಾರಿ ಸಂತೋಷ ಭರದಿಂದ ಲುಯಿಯನ್ನು ಆಲಿಂಗಿಸಿದ.

ಅವರಿಬ್ಬರೂ ಬೇಗನೆ ಆಪ್ತ ಸ್ನೇಹಿತರಾದರು. ಲುಯಿಯ ಪ್ರಭಾವ ಮೇರಿಯ ಮೇಲೂ ಆಗಿತ್ತು. ಆಕೆ ಅವನನ್ನು ಪ್ರೀತಿಸಲಾರಂಭಿಸಿದಳು. ಅವನಿಗೂ ಅವಳಿಲ್ಲದೆ ಹೊತ್ತು ಹೋಗದಂತಾಯಿತು. ದಿನಾಲೂ ಡೇರೆಯಲ್ಲಿ ಇವರು ಪರಸ್ಪರರನ್ನು ಭೆಟ್ಟಿಯಾಗತೊಡಗಿದರು.

ದಕ್ಷಿಣ ಆಫ್ರಿಕೆಯಲ್ಲಿ ನಿಗ್ರೊ ಜನರು ಆಂಗ್ಲ ಯುವತಿಯೊಡನೆ ಯಾವುದೇ ಬಗೆಯ ಸಂಬಂಧ ಇಡುವುದೆಂದರೆ ಭಯಂಕರ ಅಪರಾಧವೆಂದು ತಿಳಿಯಲಾಗುತ್ತದೆ. ಇದನ್ನು ಹ್ಯಾರಿ ಅರಿತಿರಲಿಲ್ಲ. ಒಬ್ಬ ವೀರನೆಂದು ಆತ ಲುಯಿಯನ್ನು ಗೌರವಿಸುತ್ತಿದ್ದ. ಲುಯಿ ಮತ್ತು ಮೇರಿ ದಿನಾಲೂ ವಾಯುಸೇವನೆಗೆ ಹೋಗುತ್ತಿದ್ದರು. ಕೊನೆಗೆ ಮೇರಿ ಲುಯಿಗೆ ತನ್ನ ಸರ್ವಸ್ವವನ್ನರ್ಪಿಸಿದಳು.

ಲುಯಿ ಮತ್ತು ಮೇರಿಯರ ಪ್ರೇಮ ಸಂಬಂಧದ ಸುದ್ದಿ ಊರೆಲ್ಲ ಹಬ್ಬಿತು. ಬಿಳಿಯರ ಸಮಾಜ ರೊಚ್ಚಿಗೆದ್ದಿತು.

ಒಂದು ದಿನ ಲುಯಿ ಮತ್ತು ಮೇರಿ ಮೋಟಾರಿನಲ್ಲಿ ತಿರುಗಾಡಿ ಮರಳಿ ಡೇರೆಗೆ ಬಂದರು. ಡೇರೆಯಲ್ಲಿ ಅವರಿಬ್ಬರೂ ಕಾಲಿಡುವುದೇ ತಡ. ಬಿಳಿಯರೆಲ್ಲ ಡೇರೆಗೆ ಮುತ್ತಿಗೆ ಹಾಕಿದರು. ಮ್ಯಾನೇಜರ್ ಜೋಶಿಯವರಿಗೆ ಈ ಸುದ್ದಿ ತಿಳಿದೊಡನೆಯೆ ಅವರು ಗಾಬರಿಯಾದರು. ಅವರು ಕೂಡಲೆ ಪೋಲೀಸರ ಸಹಾಯ ಕೇಳಿದರು. ಬಿಳಿಯರು ಲುಯಿಯನ್ನು ತಮ್ಮ ವಶಕ್ಕೆ ಕೊಡಬೇಕೆಂದು ಕೇಳುತ್ತಿದ್ದರು. ಡೇರೆಯ ಸುತ್ತಲೆಲ್ಲ ತಗಡಿನ ಗಟ್ಟಿಯಾದ ಕಂಪೌಂಡ್ ಇತ್ತೆಂದೇ ಬಚಾವಾಯಿತು. ಈ ಕಂಪೌಂಡಿನ ಎಲ್ಲ ಬಾಗಿಲುಗಳನ್ನು ಮುಚ್ಚಲಾಯಿತು. ಆದರೂ ರೊಚ್ಚಿಗೆದ್ದ ಜನರು ಕಲ್ಲು, ಇಟ್ಟಿಗೆ ಮುಂತಾದವನ್ನು ಎಸೆಯತೊಡಗಿದರು. ಕೂಡಲೆ ಪೋಲೀಸ್ ಪಾರ್ಟಿ ಬಂದು ಜನರನ್ನು ದೂರ ಅಟ್ಟಿ ಲುಯಿಯನ್ನು ತಮ್ಮ ವಶಕ್ಕೆ ತೆಗೆದುಕೊಂಡಿತು.

ಅಲ್ಲಿಯ ಕಾನೂನಿನನ್ವಯ ಆಂಗ್ಲ ಮಹಿಳೆಯೊಂದಿಗೆ ಸಂಬಂಧ ಬೆಳೆಸಿದ್ದುದಕ್ಕಾಗಿ ಲುಯಿಯ ಮೇಲೆ ಮೊಕದ್ದಮೆ ಹಾಕಿದರು. ಲುಯಿಯ ಪರವಾಗಿ ಒಬ್ಬ ವಕೀಲನೂ ಸಿಗಲಿಲ್ಲ. ಅವನ ಬಿಳಿಯ ಒಡೆಯ ಎಷ್ಟು ಯತ್ನಿಸಿದರೂ ವ್ಯರ್ಥವಾಯಿತು. ಹ್ಯಾರಿಯಾದರೂ ಏನು ಮಾಡಬಲ್ಲ! ಮೇರಿಯ ದುಃಖದಿಂದ ಆತನೂ ದುಃಖ ಸಾಗರದಲ್ಲೇ ಮುಳುಗಿದ್ದ.

ನ್ಯಾಯದಾನ ಮಾಡಲಿದ್ದ ನ್ಯಾಯಾಧೀಶನೂ ಬಿಳಿಯನೇ ಆಗಿದ್ದ. ಮತ್ತು ಕರಿಯರನ್ನು ಕಂಡರೆ ಆಗದವನೇ ಇದ್ದ. ಆದ್ದರಿಂದ ಲುಯಿಯನ್ನು ಸಜೀವ ಸುಡಬೇಕೆಂದು ಶಿಕ್ಷೆ ವಿಧಿಸಿದ!

ಎಂದು ಲುಯಿಯನ್ನು ಸುಡಲಿದ್ದರೊ ಆ ದಿನ ಬೆಳಗಾಯಿತು. ಊರ ಹೊರಗಿನ ಒಂದು ಮರಕ್ಕೆ ಲುಯಿಯನ್ನು ಕಟ್ಟಿ ಅವನನ್ನು ಸುಡಲಿದ್ದರು. ಆ ಅಪೂರ್ವ ದೃಶ್ಯವನ್ನು ಮನಸಾರೆ ನೋಡಲು

ಬಿಳಿಯರು ಅಸಂಖ್ಯರಾಗಿ ಒಟ್ಟಾಗಿದ್ದರು. ಸ್ವಲ್ಪ ಹೊತ್ತಿನಲ್ಲೇ ಕಬ್ಬಿಣದ ಸರಪಳಿಗಳಿಂದ ಬಿಗಿದ ಲುಯಿಯನ್ನು ಗಾಡಿಯಲ್ಲಿ ತಂದರು. ಆತನನ್ನು ತರುತ್ತಿರುವಾಗ ಬೀದಿಯ ಹುಡುಗರು ಅವನ ಮೈಮೇಲೆ ಕಲ್ಲುಗಳನ್ನು ಒಗೆಯುತ್ತಿದ್ದರು. ಮರಣದ ಮೊದಲೆ ಅವನ ದೇಹಕ್ಕೆ ಗಾಯಗಳಾಗಿ ಅವನ ಮೈಯಿಂದ ಅಲ್ಲಲ್ಲಿ ರಕ್ತ ಧಾರೆಧಾರೆಯಾಗಿ ಸೋರುತ್ತಿತ್ತು.

ನಿರ್ದಿಷ್ಟಪಟ್ಟ ಮರಕ್ಕೆ ನಿಲ್ಲಿಸಿ ಅವನನ್ನು ಹಗ್ಗದಿಂದ ಬಿಗಿಯಾಗಿ ಕಟ್ಟಿದರು. 'ನಿನ್ನ ಕೊನೆಯ ಇಚ್ಛೆಯೇನು?' ಎಂದು ಕೇಳಿದರು. ಆತ ತುಟಿ ಬಿಚ್ಚಿ ಬರಿಯ 'ಮೇರಿ' ಎಂದಿಷ್ಟೇ ನುಡಿದ. ಕೂಡಲೆ ಅಲ್ಲಿದ್ದ ಬಿಳಿಯ ಅಧಿಕಾರಿ ಕೋಪೋದ್ರಿಕ್ತನಾಗಿ ಅವನ ಕಪೋಲಗಳಿಗೆ ರಪ್‌ರಪ್ ಎಂದು ಹೊಡೆದ. ಆ ಸ್ಥಿತಿಯಲ್ಲೂ ಲುಯಿ ಅತ್ತಿತ್ತ ನೋಡುತ್ತಲೇ ಇದ್ದ. ಯಾರನ್ನೋ ಶೋಧಿಸುವಂತಿತ್ತು ಆತ!

ಅವನ ಮೈಮೇಲೆ ಚಿಮಣಿ ಎಣ್ಣೆಯನ್ನು ಸುರಿದು ಕಡ್ಡಿ ಕೊರೆದು ಹಚ್ಚಿದರು. ಇಷ್ಟರಲ್ಲಿ ಜನಸಮುದಾಯದೊಳಗಿಂದ ಕೆದರು ಕೂದಲಿನ ಗೌರಕಾಯ ತರುಣಿಯೊಬ್ಬಳು ಓಡುತ್ತ ಮುಂದೆ ಬಂದಳು. ಅವಳ ಕೈಯಲ್ಲಿ ಪಿಸ್ತೂಲಿತ್ತು. ಆದ್ದರಿಂದ ಅವಳನ್ನು ತಡೆಯುವ ಧೈರ್ಯ ಯಾರಿಗೂ ಆಗಲಿಲ್ಲ. ಆಕೆ ಮೇರಿಯೇ ಇದ್ದಳು. ಓಡುತ್ತ ಲುಯಿಯ ಹತ್ತಿರ ಬಂದಳು. ಅವಳನ್ನು ಕಂಡೊಡನೆ ಲುಯಿಯ ಮೈಯಲ್ಲಿ ಸಹಸ್ರ ಆನೆಗಳ ಶಕ್ತಿ ಬಂತು. ಆತ ಬಿಗಿದ ಹಗ್ಗ ಹರಿದುಕೊಂಡು ಮೇರಿಯನ್ನು ಎದೆಗೊತ್ತಿ ಹಿಡಿದ. ಅವನ ಮೈ ಹೊತ್ತಿತ್ತು. ಈಗ ಮೇರಿಯ ಅರಿವೆಗೂ ಬೆಂಕಿ ಹತ್ತಿತು. ಕೂಡಲೆ ಲುಯಿ ಮೇರಿಯ ಕೈಯೊಳಗಿನ ಪಿಸ್ತೂಲು ಕಸಿದುಕೊಂಡು ಮೊದಲು ಮೇರಿಯ ಎದೆಗೆ, ಆಮೇಲೆ ತನ್ನ ಎದೆಗೆ ಗುಂಡು ಹಾಕಿಕೊಂಡು ತಮ್ಮಿಬ್ಬರ ಬಿಡುಗಡೆ ಮಾಡಿಕೊಂಡ. ಈ ಘಟನೆ ಎಷ್ಟು ವೇಗದಿಂದ ಆಯಿತೆಂದರೆ ಬೇರಾರಿಗೂ ನಡುವೆ ಬರಲು ಅವಕಾಶವೇ ಸಿಗಲಿಲ್ಲ. ಇಬ್ಬರ ಶವಗಳು ನೆಲಕ್ಕೆ ಬಿದ್ದವು.

ಇವತ್ತಿಗೂ ಜೋಹಾನ್ಸಬರ್ಗಿಗೆ ಹೋದರೆ ಪಟ್ಟಣದ ಹೊರಗಡೆ ಇರುವ ಚರ್ಚಿನ ಆವಾರದಲ್ಲಿ ಕ್ರಾಸ್ ಇರುವ ಗೋರಿಯೊಂದು ಕಾಣಸಿಗುವುದು. ಅದರ ಮೇಲೆ ಹೀಗೆ ಬರೆದಿದೆ:

"ತನ್ನ ಪ್ರಿಯಕರನಿಗಾಗಿ ಆತ್ಮ ಬಲಿದಾನ ಮಾಡಿದ ಮೇರಿ ಮತ್ತು ಅವಳ ಪ್ರಿಯಕರ ಲುಯಿ ರಾಬರ್ಟ್ ಇಲ್ಲಿ ಚಿರಕಾಲ ನಿದ್ರಿಸಿದ್ದಾರೆ!"



ಅಮೃತ ಬಿಂದುಗಳು

ದುರುದ್ದೇಶದಿಂದ ಸತ್ಯವನ್ನಾಡುವುದು ಅಸತ್ಯವನ್ನು ಹೇಳುವುದಕ್ಕಿಂತ ಹೀನವಾದುದು.
—ಬ್ಲೇಕ್

ಅನುಭವವೇ ಮಾನವನ ನಿಜವಾದ ಶಾಲೆ.
—ಬರ್ಕ್

ತೋಳನ ಸಾಧುತ್ವ, ಕುದುರೆಯ ಆರೋಗ್ಯ, ಹುಡುಗನ ಪ್ರೇಮ, ವೇಶ್ಯೆಯ ಏಕನಿಷ್ಠೆಯನ್ನು ನಂಬುವುದು ಮರುಳುತನ.
— ಶೇಕ್ಸ್‌ಪಿಯರ್

ಹಾವು ಮರಳಿ ಬಂತು!



ಸರ್ಪ ನಿಜವಾಗಿಯೂ
ಸೇಡು ತೀರಿಸುವ ಪ್ರಾಣಿಯೆ?

ಯೂಡ್ಲಿ ಲಾಟಿಮರ್

ನಾಗರಹಾವಿನಲ್ಲಿ ಸೇಡು ತೀರಿಸುವ ಪ್ರವೃತ್ತಿ ಬಲವತ್ತರವಾಗಿರುವುದೆಂದು ದೇಶದಾದ್ಯಂತ ನಂಬಿಕೆ ಇದೆ. ಇದನ್ನು ಪುಷ್ಟೀಕರಿಸಲು ಹಲವಾರು ದಂತಕಥೆಗಳೂ ಪ್ರಚಾರವಾಗಿವೆ. ಈ ನಂಬಿಕೆ ನಿಜವೆ? ನಿಜವಾಗಿಯೂ ನಾಗರಹಾವು ತನ್ನನ್ನು ಗಾಯಗೊಳಿಸಿದವನನ್ನು ಮತ್ತೆ ತಡೆದು ಕಚ್ಚಿ ಕೊಂದು ತನ್ನ ಸೇಡು ತೀರಿಸುವುದೆ? ಈ ಬಗ್ಗೆ ಖಂಡಿತವಾದ ಉತ್ತರವನ್ನು ನಾನು ಕೊಡಲಾರೆನಾದರೂ ನನ್ನ ಜೀವನದಲ್ಲಿಯೆ ನಡೆದ ಅಂತಹ ಒಂದು ಘಟನೆಯನ್ನು ನಿಮ್ಮ ಮುಂದಿರಿಸುವೆ

ಇದು ನಡೆದದ್ದು ಮೈಸೂರು ನಗರದ ಬಳಿ ಇರುವ ಗಣಿ ಕೆಲಸಗಾರರ ಕಾಲನಿಯೊಂದರಲ್ಲಿ. ಒಂಟಿ ಜನರ ಸಲುವಾಗಿ ಇರುವ ಕ್ವಾರ್ಟರಿನಲ್ಲಿ ನಾನು ಇರುತ್ತಿದ್ದೆ. ಮುಂದೆ ವರಾಂಡ, ಆಮೇಲೆ ಮಲಗುವ ಕೂಡುವ—ಏಕಮೇವ ಕೋಣೆ. ಅದರ ಹಿಂದಿನದು 'ಹೆಚ್ಚಿನ' ಕೋಣೆ- ಒಂದು ಬಗೆಯಲ್ಲಿ ಗೋದಾಮು. ಹೀಗಿದ್ದವು ನಮ್ಮ ಕ್ವಾರ್ಟರ್‌ಗಳು. ನಮ್ಮ ಕಟ್ಟಡದಲ್ಲಿ ನಾನು ಮತ್ತು ಬ್ರೌನ್ ಎಂಬಾತ ಹೀಗೆ ಇಬ್ಬರು ಬ್ರಹ್ಮಚಾರಿಗಳಿರುತ್ತಿದ್ದೆವು. ಹೆಚ್ಚಿನ ಕೋಣೆಯು ಹಿಂದೆ ಬಚ್ಚಲುಮನೆ. ಇಡೀ ಕಟ್ಟಡ ಚೌರಸಾಕಾರದ್ದು.

ಇಲ್ಲಿಂದ ಪೂರ್ವಕ್ಕೆ ಸುಮಾರು ಮೂವತ್ತು ಗಜ ದೂರದಲ್ಲಿ ಜನರಲ್ ಮ್ಯಾನೇಜರರ ಕ್ವಾರ್ಟರ್ಸ್ ಇದ್ದವು. ಇವು ನಮ್ಮದಕ್ಕಿಂತ ಹೆಚ್ಚು ಅನುಕೂಲವಾಗಿದ್ದವು. ಮ್ಯಾನೇಜರರ ಕ್ವಾರ್ಟರ್‌ಗಳಲ್ಲೆ ನಮ್ಮಿಬ್ಬರಿಗೂ ಊಟವಾಗುತ್ತಿತ್ತು. ಎರಡೂ ಕಟ್ಟಡಗಳ ನಡುವೆ ಎತ್ತರ ಹುಲ್ಲು, ಪೊದೆ ಬೆಳೆದಿತ್ತು. ನಡುವಿನಿಂದ ಒಂದು ಸಣ್ಣ ಕಾಲುದಾರಿ ಬಿದ್ದಿತ್ತು. ಅಲ್ಲಿಂದೇ ನಾವು ಹೋಗಿ ಬರುತ್ತಿದ್ದೆವು.

ಒಂದು ರವಿವಾರ ಮುಂಜಾವು ನಾವು ತುಸು ತಡಮಾಡಿ ಊಟಕ್ಕೆ ಹೊರಟಿದ್ದೆವು. ದಾರಿ ಇಬ್ಬರು ಹೋಗುವಷ್ಟು ಅಗಲವಲ್ಲ ಒಬ್ಬರ ಹಿಂದೆ ಇನ್ನೊಬ್ಬರು ಹೋಗಬೇಕು ಬ್ರೌನ್ ನನ್ನ ಹಿಂದೆ ಇದ್ದ. ಸಹಜ ಹಾದಿಯತ್ತ ನೋಡಿದೆ ಹಾದಿಯ ನಡುವೆಯೆ ಸುಮಾರು ಐದು ಅಡಿ ಉದ್ದದ ಒಂದು ಹಾವು ಸಾವಕಾಶ ನಮ್ಮತ್ತ ಬರುತ್ತಿತ್ತು. ನಾನು ಸನ್ನೆ ಮಾಡಿದೆ. ಇಬ್ಬರೂ ತಡೆದೆವು. ಅದು ಅಲ್ಲಿಯೆ ಹೊರಳಿ ಕಂಟಿಯಲ್ಲಿ ಮರೆಯಾಗುವುದೆಂದು ನಾನು ಭಾವಿಸಿದ್ದೆ. ಆದರೆ ಅದು ನಮ್ಮ ಕಡೆಗೇ ಬರತೊಡಗಿತು.

ನನ್ನ ಮೈಯಲ್ಲಿ ಮಿಂಚಿನ ಸಂಚಾರವಾಯಿತು. ಬ್ರೌನ್‌ಗೆ ಹೇಳಿದೆ: "ಈ ದಾರಿ ಹಾವಿನದೋ ಮನುಷ್ಯರಾದ ನಮ್ಮದೊ ಎನ್ನುವುದನ್ನು ಈಗ

"ಟೈಮ್ಸ್ ಆಫ್ ಇಂಡಿಯಾ" ದಿಂದ

ಅದಕ್ಕೆ ತೋರಿಸುವೆನು ನೋಡು." ನಗೆಗಾಗಿ ನುಡಿದದ್ದನ್ನು ನಿಜ ಮಾಡಬೇಕಿತ್ತಲ್ಲ. ಅದಕ್ಕೆ ಒಣ ಮಣ್ಣಿನ ಸಣ್ಣ ಗುಂಡು ಹೆಂಟೆಯನ್ನು ಎತ್ತಿ ಗುಲೇಲ್ (ರಬ್ಬರಿನ ಕವಣೆ) ದಿಂದ ಹಾವಿಗೆ ಗುರಿ ಇಟ್ಟು ಹೊಡೆದೆ. ಗುಲೇಲನ್ನು ನಾನು ಯಾವತ್ತೂ ಜೇಬಿನಲ್ಲಿ ಇಟ್ಟಿರುತ್ತೇನೆ. ನಾನು ಹೊಡೆದ ಏಟಿಗೆ ಹಾವು ರೊಚ್ಚಿಕೊಂಡು ಹೆಡೆ ತೆಗೆಯಿತು. ಆಗಲೆ ಇದು ನಾಗರ ಹಾವೆಂದು ನನಗೆ ಗೊತ್ತಾಯಿತು. ನಾನು ಹೆದರಿದೆ. ಹಾವು ಎಡಕ್ಕೆ ತಿರುಗಿ ಪೊದೆಯಲ್ಲಿ ಮರೆಯಾಯಿತು. ನನ್ನ ಕಾಲೇ ಕೀಳದಂತಾದವು. ನಾಗರ ಹಾವು ಸೇಡು ತೀರಿಸುತ್ತದೆಂದು ಹೇಳುವ ವಿಚಾರ ನನ್ನನ್ನು ಮೂಢನನ್ನಾಗಿ ಮಾಡಿತು.

ನಾನು ಭಯಭೀತನಾದದ್ದನ್ನು ಕಂಡು ಬ್ರೌನ್ ನನಗೆ ನಿಂತಲ್ಲಿಯೆ ನಿಲ್ಲಲಿಕ್ಕೆ ಹೇಳಿ ಈ ಪೊದೆ ಹುಲ್ಲನ್ನೆಲ್ಲ ಕಿತ್ತು ಸುಟ್ಟು ಹಾಕಿಸಲು ಹೇಳಿ ಬಂದ. ಆ ಕೆಲಸ ನಡೆದಾಗ ನಾವು ಶಾಂತರಾಗಿ ಊಟ ಮಾಡುತ್ತಿದ್ದೆವು. ಇಷ್ಟರಲ್ಲೇ ಯಾರಾದರೂ ಬಂದು ಹಾವು ಸಿಕ್ಕಿತೆಂದೂ ಅದನ್ನು ಕೊಂದೆವೆಂದೂ ಹೇಳುವರೆಂದು ನಾನು ಬಗೆದಿದ್ದೆ. ಆದರೆ ಹಾಗಾಗಲಿಲ್ಲ. ಊಟ ಮುಗಿಸಿ, ಸ್ವಲ್ಪ ಹೊತ್ತಿನ ಮೇಲೆ ಸುಟ್ಟ ಹುಲ್ಲು, ಕಂಟಿಯನ್ನು ನೋಡಿದೆವು. ಹುಲ್ಲು ಕಂಟಿಯೇನೊ ಹೋಗಿತ್ತು, ಆದರೆ ಹಾವಿನ ಸುಳಿವೆ ಇರಲಿಲ್ಲ.

ಮುಂದೆ ಆ ವಿಚಾರ ಬಿಟ್ಟು ನಿತ್ಯದಂತೆ ರವಿವಾರದ ಮನೋರಂಜನೆಗೆ ನಾವು ಅಣಿಯಾದೆವು. ಗುಲೇಲ್ ಮತ್ತು ಸಣ್ಣ ಕೋವಿ ತಕ್ಕೊಂಡು ಹಕ್ಕಿಗಳ ಶಿಕಾರಿಗೆ ನಡೆದೆವು. ಹೊರಡುವಾಗ ಗಾಳಿಯಿಂದ ಅದೇ ತಾನೆ ಸುಟ್ಟ ಪೊದೆಯ ಬೂದಿ ಮನೆಯಲ್ಲಿ ಹೋಗಬಾರದೆಂದು ಬಾಗಿಲುಗಳನ್ನು ಮುಚ್ಚಿ ಕೀಲಿ ಹಾಕಿಕೊಂಡೆವು.

ನಾವು ಮರಳಿ ಬಂದಾಗ ಹೊತ್ತು ಮುಳುಗಿತ್ತು. ನಾವಿನ್ನೂ ದೂರದಲ್ಲಿದ್ದಾಗಲೇ ಹೊರಬಾಗಿಲ ಬಳಿ ಕೆಲಸಗಾರರ ಒಂದು ಗುಂಪು ಕೂಡಿರುವುದು ಕಾಣಿಸಿತು. ಇದೇನೆಂದು ಮಿತ್ರನಿಗೆ ಕೇಳಿದಾಗ ಆತ "ಅವರು ಕೆಲಸದವರು. ವಾರದ ಚಿಮಣಿ ಎಣ್ಣೆ ಒಯ್ಯಲಿಕ್ಕೆ ಬಂದಿದ್ದಾರೆ" ಎಂದ.

ಸಮೀಪ ಬಂದು ನೋಡಿದಾಗ ಅವರ ಕೈಯಲ್ಲಿ ದೊಣ್ಣೆಗಳು ಕಾಣಿಸಿದವು. ಹಲವರು ಕಬ್ಬಿಣ ಸಲಾಕೆಗಳನ್ನೂ ತಂದಿದ್ದರು. ಅವರ ಚೀರಾಟ ಒದರಾಟ ಕೇಳಿ ನಾನು ನುಗ್ಗಿದೆ. ಜನರನ್ನು ಸರಿಸಿ ಒಳಹೊಕ್ಕು ನೋಡಿದಾಗ ಒಬ್ಬ ಕೋಲಿನಿಂದ ಹಾವಿನ ತಲೆಯನ್ನು ಒತ್ತಿದ್ದ. ಹಾವು ಬಿಡಿಸಿಕೊಳ್ಳಲು ಚಡಪಡಿಸುತ್ತಿತ್ತು. ಕೊನೆಗೆ ಹಾವು ಸತ್ತಿತು. ತೀರ ಹತ್ತಿರಕ್ಕೆ ಹೋಗಿ ನೋಡಿದೆ. ನಾನು ಆ ದಿನ ಗಾಯಗೊಳಿಸಿದ್ದ ಹಾವಿನಷ್ಟೇ ಇದಾದರೂ ಉದ್ದವಾಗಿತ್ತು.

ಸತ್ತ ಹಾವಿನ ಭಯವಿಲ್ಲೆಂದು ಎತ್ತಿನೋಡಿದಾಗ ಅದರ ಬೆನ್ನಲ್ಲಿ ಒಂದು ದುಡ್ಡಿನಷ್ಟು ಸಣ್ಣ ಗಾಯವಾದದ್ದೂ ಕಾಣಿಸಿತು. ಅದೇ ನಾಗರ ಹಾವು. ನನಗೆ ಖಾತ್ರಿ ಆಯಿತು. ಕೆಲಸದವರೇ ನನ್ನ ಪ್ರಾಣಾಂತಿಕ ಸಂಕಟವನ್ನು ತೊಡೆದಿದ್ದರು. ಆದರೂ ಹಾವಿನ ವಿಚಾರದಿಂದ ಈಗಲೂ ಮೈ ಜುಮ್ಮೆನ್ನುತ್ತಿತ್ತು. ಅದನ್ನು ಆಗಲೇ ಸುಡಬೇಕಿತ್ತು. ಇಲ್ಲವಾದರೆ ಅದರ ಸ್ನೇಹಿತ ಅದನ್ನು ಕಂಡು ಸೇಡು ತೀರಿಸಲು ಅಣಿಯಾಗುವ ಸಂಭವ!

ಆದರೆ ಈ ಹಾವು ಇವರ ಕೈಗೆ ಸಿಕ್ಕಿದ್ದು



ಹೇಗೆ? ಆಮೇಲೆ ಆ ವಿಷಯ ತಿಳಿಯಿತು. ಅದು ಹೀಗೆ ಪ್ರಾರಂಭವಾಯಿತು. ಮುರುಗೇಶನ್ ಎಂಬ ಕೆಲಸಗಾರ ಆ ದಿನದ ರೇಶನ್ ಒಯ್ಯುವವರಲ್ಲಿ ಮುಂದಿದ್ದ. ಆತ ಸಹಜವಾಗಿ ಅಲ್ಲಿದ್ದ ಕಂಬಕ್ಕೆ ಒರಗಿ ನಿಂತಿದ್ದ. ಈ ಕಂಬ ನನ್ನ ಬಾಗಿಲ ಮುಂದಿನ ವರಾಂಡದ ಚಪ್ಪರವನ್ನು ಎತ್ತಿಕೊಂಡು ನಿಂತಿತ್ತು. ನಾವು ಬರುವ ದಾರಿ ಕಾಯುತ್ತಾ ಆತ ನಿಂತಿದ್ದ. ವರಾಂಡದ ಮುಳ್ಳು ಪೊದೆಯ ಹತ್ತಿರದ ಮೂಲೆಯತ್ತ ಸಹಸಾ ಅವನ ದೃಷ್ಟಿ ಹೊರಳಿತು. ಸುಟ್ಟ ನೆಲವನ್ನು ದಾಟಿ ಗೋಡೆಗುಂಟ ಹಾವು ಹೊಟ್ಟೆ ಸರಿಸುತ್ತಿತ್ತು. ಅದು ಪ್ರವೇಶ ದ್ವಾರದ ಕಡೆಗೇ ಬರುತ್ತಿತ್ತು. ಅದು ಹಾಗೆ ಹೊಸತಿಲ ಮೇಲೂ ಬಂದು ಬಾಗಿಲ ಒಳಗಡೆ ಪ್ರವೇಶಿಸತೊಡಗಿತು. ಭೀತಿಯಿಂದ ಕಂಗಾಲಾದ ಮುರುಗೇಶ ಏವೆ ಇಕ್ಕದೆ ಅದನ್ನು ನೋಡತೊಡಗಿದ. ಅದು ಬಾಗಿಲಿಗೇ ಅಂಟಿಕೊಂಡಿರುವುದನ್ನು ನೋಡಿದವನೆ ಆತ ಒಬ್ಬ ಸ್ನೇಹಿತನಲ್ಲಿಗೆ ಹೋಗಿ ಒಂದು ಕೋಲನ್ನು ತಂದ. ಮುಂದೆ ಜನ ನೆರೆದರು.

ಹಾವು ನನ್ನ ಬಾಗಿಲಿಗೇ ಬಂದು ವಿಶ್ರಮಿಸಿದ್ದರಲ್ಲಿ ಕೇವಲ ಯೋಗಾಯೋಗ ಮಾತ್ರವಿರಬಹುದೆ? ಅದನ್ನು ಓದುಗರೇ ನಿರ್ಣಯಿಸಲಿ. ನನಗೆ ಮಾತ್ರ ಅದು ಯೋಗಾಯೋಗಕ್ಕಿಂತ ಏನೊ ಹೆಚ್ಚೇ ಇರಬೇಕು ಎನಿಸುತ್ತಿದೆ. ಅಂದಿನಿಂದ ನಾವು ಹಾವಿನ ಗೋಜಿಗೆ ಹೋಗಿಲ್ಲ! ★

ಹುಚ್ಚರ ಅದಲಾಬದಲಿ!


ಸಆದತ ಅಲಿ ಮಂಟೋ

ದೇಶದ ವಿಭಜನೆಯಾಗಿ ೨-೩ ವರ್ಷಗಳ ನಂತರ ಹಿಂದುಸ್ತಾನ ಮತ್ತು ಪಾಕಿಸ್ತಾನ ಸರಕಾರಗಳಿಗೆ ಇತರ ಸಾಮಾನ್ಯ ಕೈದಿಗಳಂತೆ ಹುಚ್ಚರ ಅದಲಾಬದಲಿಯನ್ನೂ ಮಾಡಿಕೊಳ್ಳಬೇಕೆಂಬ ವಿಚಾರ ಬಂತು.

ಇದು ಸರಿಯೆ ಅಥವಾ ತಪ್ಪಾಗಿತ್ತೆ ಎಂಬ ಮಾತು ಅಂತಿರಲಿ, ಎರಡೂ ಸರಕಾರಗಳ ಪ್ರತಿನಿಧಿಗಳ ಉಚ್ಚಮಟ್ಟದ ಸಭೆಗಳು ಸೇರಿ ಹುಚ್ಚರ ಅದಲಾಬದಲಿಗಾಗಿ ಒಂದು ದಿನ ನಿರ್ಧರಿಸಲ್ಪಟ್ಟಿತು. ಅಂದು ಪಾಕಿಸ್ತಾನದ ಹುಚ್ಚಾಸ್ಪತ್ರೆಗಳಲ್ಲಿರುವ ಹಿಂದು-ಶೀಖ ಹುಚ್ಚರನ್ನು ಹಿಂದುಸ್ತಾನಕ್ಕೂ ಹಿಂದುಸ್ತಾನದ ಹುಚ್ಚಾಸ್ಪತ್ರೆಗಳಲ್ಲಿರುವ ಮುಸಲ್ಮಾನ ಹುಚ್ಚರನ್ನು ಪಾಕಿಸ್ತಾನಕ್ಕೂ ಮರಳಿ ಕಳಿಸಿಕೊಡಬೇಕೆಂಬ ನಿರ್ಣಯವಾಯಿತು. ಯಾವ ಮುಸಲ್ಮಾನ ಹುಚ್ಚರ ಸಂಬಂಧಿಕರು ಹಿಂದುಸ್ತಾನದಲ್ಲಿದ್ದರೂ ಅಂಥ ಹುಚ್ಚರನ್ನು ಹಿಂದುಸ್ತಾನದಲ್ಲಿಯೆ ಇಡಲು ನಿರ್ಧರಿಸಲಾಗಿತ್ತು. ಉಳಿದವರನ್ನು ಪಾಕಿಸ್ತಾನಕ್ಕೆ ಕಳಿಸಿಕೊಡಲಾಯಿತು. ಪಾಕಿಸ್ತಾನದಲ್ಲಿಯ ಹೆಚ್ಚುಕಡಿಮೆ ಎಲ್ಲ ಹಿಂದು-ಶೀಖರು ಹಿಂದುಸ್ತಾನಕ್ಕೆ ಬಂದುಬಿಟ್ಟಿದ್ದರಾದ್ದರಿಂದ ಅಲ್ಲಿದ್ದ ಹಿಂದು ಶೀಖ ಹುಚ್ಚರ ವಿಚಾರದಲ್ಲಿ ಈ ಪ್ರಶ್ನೆ ಏಳಲೇ ಇಲ್ಲ. ಪಾಕಿಸ್ತಾನದಲ್ಲಿ ಇದ್ದುಬಿದ್ದೆಲ್ಲ ಹಿಂದು-ಶೀಖ ಹುಚ್ಚರು ಪೋಲೀಸರ ಕಾವಲಿನಲ್ಲಿ ಹಿಂದುಸ್ತಾನದ ಗಡಿಗೆ ತರಲ್ಪಟ್ಟು ಹಿಂದುಸ್ತಾನದ ಅಧಿಕಾರಿಗಳಿಗೆ ಒಪ್ಪಿಸಲ್ಪಟ್ಟರು.

ಹಿಂದುಸ್ತಾನದಲ್ಲಿ ಏನೇನು ನಡೆಯಿತೊ, ಆದರೆ ಲಾಹೋರಿನ ಹುಚ್ಚಾಸ್ಪತ್ರೆಯಲ್ಲಿ ಮಾತ್ರ ಈ ಅದಲಾಬದಲಿಯ ಸಮಾಚಾರ ಬಂದಾಗ ತುಂಬ ಮನೋರಂಜಕ ಸಂಗತಿಗಳು ಜರುಗತೊಡಗಿದವು. ಹನ್ನೆರಡು ವರ್ಷಗಳಿಂದಲೂ ಪ್ರತಿನಿತ್ಯ "ಜಮೀಂದಾರ" ಪತ್ರಿಕೆ ಓದುತ್ತಿದ ಮುಸಲ್ಮಾನ ಹುಚ್ಚನೊಬ್ಬನಿಗೆ ಅವನ ಹುಚ್ಚಮಿತ್ರನೊಬ್ಬ "ಮೌಲವಿ ಸಾಬ, ಈ ಪಾಕಿಸ್ತಾನ ಅಂದರೆ ಏನು?" ಎಂದು ಕೇಳಿದ. ಈತ ಅದಕ್ಕೆ ವಿಚಾರಮಾಡಿ ಉತ್ತರವಿತ್ತ. "ಪಾಕಿಸ್ತಾನವೆಂದರೆ ಹಿಂದುಸ್ತಾನದಲ್ಲಿ ರೇಝರುಗಳು ತಯಾರಾಗುವ ಸ್ಥಳ."

ಇನ್ನೊಂದು ದಿನ ಮುಸಲ್ಮಾನ ಹುಚ್ಚನೊಬ್ಬ "ಪಾಕಿಸ್ತಾನ ಜಿಂದಾಬಾದ" ಎಂದು ಎಷ್ಟು ಗಟ್ಟಿ



ಯಾಗಿ ಘೋಷಿಸಿದನೆಂದರೆ ಆ ಶಭಸಕ್ಕೆ ಕಾಲು ಜಾರಿ ಬಿದ್ದು ಮೂರ್ಛೆಹೋದ.



ಇನ್ನು ನಿಜವಾಗಿಯೂ ಹುಚ್ಚರಾಗಿರದ ಕೆಲವರೂ ಈ ಹುಚ್ಚರ ಗುಂಪಿನಲ್ಲಿದ್ದರು. ಮರಣ ಶಿಕ್ಷೆಯಿಂದ ತಪ್ಪಿಸಿಕೊಂಡುಳಿಯಲಿ ಎಂಬ ಕಾರಣದಿಂದ ಅವರ ಆಪ್ತೇಷ್ಟರು ಅಧಿಕಾರಿಗಳಿಗೆ ಲಂಚ ಕೊಟ್ಟು ಅವರನ್ನು ಹುಚ್ಚರೆಂದು ಸಾರಿ ಹುಚ್ಚಾಸ್ಪತ್ರೆಗಳಿಗೆ ಸೇರಿಸಲ್ಪಡುವಂತೆ ಮಾಡಿದ್ದರು. ಇವರಿಗೆ ಹಿಂದುಸ್ತಾನದ ವಿಭಜನೆಯೇಕಾಯಿತು, ಪಾಕಿಸ್ತಾನ ಎಂದರೇನು ಎಂದು ತುಸು ಮಟ್ಟಿಗೆ ಅರ್ಥವಾಗುತ್ತಿತ್ತು. ಮಹಮ್ಮದಲಿ ಜಿನ್ನಾ ಎಂಬವರಿಗೆ ಕಾಯದೆಅಜಂ ಎಂದು ಕರೆಯುತ್ತಾರೆ, ಅವರು ಮುಸಲ್ಮಾನರಿಗಾಗಿ ಪ್ರತ್ಯೇಕ ರಾಜ್ಯ ನಿರ್ಮಿಸಿದ್ದು ಅದಕ್ಕೆ ಪಾಕಿಸ್ತಾನವೆನ್ನುತ್ತಾರೆ ಎಂದು ಇವರಿಗೆ ಗೊತ್ತಿದ್ದರೂ ಪಾಕಿಸ್ತಾನ ಎಲ್ಲಿದೆ, ಅದರ ಸ್ಥಿತಿಗತಿ ಏನು ಎಂದು ಗೊತ್ತಿರಲಿಲ್ಲ. ಇದರಿಂದಾಗಿ ಇನ್ನೂ ಪೂರಿ ಬುದ್ಧಿಭ್ರಂಶವಾಗಿರದ ಹುಚ್ಚರೆಲ್ಲ ಒಂದು ಸಂದಿಗ್ಧಕ್ಕೆ ಸಿಲುಕಿಕೊಂಡಿದ್ದರು. "ನಾವಿರುವುದು ಪಾಕಿಸ್ತಾನದಲ್ಲೊ ಅಥವಾ ಹಿಂದುಸ್ತಾನದಲ್ಲೊ? ಹಿಂದುಸ್ತಾನದಲ್ಲಿ ಇದ್ದರೆ ಪಾಕಿಸ್ತಾನ ಎಲ್ಲಿದೆ? ಪಾಕಿಸ್ತಾನದಲ್ಲಿರುವುದಾದರೆ ಇಲ್ಲೆ ಇದ್ದರೂ ಕೆಲ ಕಾಲದ ಹಿಂದೆ ಅವರು ಹಿಂದುಸ್ತಾನದಲ್ಲಿ ಇದ್ದದ್ದು ಹೇಗೆ ?"

ಒಬ್ಬನಂತೂ ಹಿಂದುಸ್ತಾನ ಮತ್ತು ಪಾಕಿಸ್ತಾನಗಳ ಈ ಗದ್ದಲದಿಂದ ಇನ್ನಿಷ್ಟು ಹುಚ್ಚನಾಗಿ ಹೋದ ಒಂದು ದಿನ ಕಸಗುಡಿಸುತ್ತಿದ್ದಂತೆ ಆತ ಅದನ್ನು ಬಿಟ್ಟುಕೊಟ್ಟು ಒಂದು ಗಿಡವನ್ನೇರಿ ಕುಳಿತು ಹಿಂದುಸ್ತಾನ-ಪಾಕಿಸ್ತಾನಗಳ ಗಂಭೀರ ಸಮಸ್ಯೆಯ ಮೇಲೆ ಎರಡು ತಾಸುಗಳವರೆಗೆ ಒಂದೇ ಸವನೆ ಭಾಷಣ ಬಿಗಿದ. ಕೆಳಗಿಳಿ ಎಂದು ಸಿಪಾಯಿಗಳು ಹೇಳಿದಾಗ ಆತ ಇನ್ನಿಷ್ಟು ಮೇಲಕ್ಕೇರಿ "ನನಗೆ ಹಿಂದುಸ್ತಾನವೂ ಬೇಡ, ಪಾಕಿಸ್ತಾನವೂ ಬೇಡ. ನಾನಿದೇ ಗಿಡದ ಮೇಲಿರುತ್ತೇನೆ" ಎಂದ. ಮುಂದೆ ಎಷ್ಟೋ ಹೊತ್ತಿನ ಮೇಲೆ ಆತನ ಚಿತ್ತ ತುಸು ಶಾಂತವಾಗಿ ಆತ ಕೆಳಗಿಳಿದು ಬಂದು ತನ್ನ ಹಿಂದು ಶೀಖ ಮಿತ್ರರನ್ನಪ್ಪಿಕೊಂಡು ಅಳತೊಡಗಿದ. ತನ್ನ ಈ ಮಿತ್ರರೆಲ್ಲ ತನ್ನನ್ನು ಬಿಟ್ಟು ಇನ್ನು ಹಿಂದುಸ್ತಾನಕ್ಕೆ ಹೋಗುತ್ತಾರಲ್ಲ ಎಂಬ ಕಲ್ಪನೆಯಿಂದ ಆತನಿಗೆ ತುಂಬ ದುಃಖವಾಗಿತ್ತು.

ಎಂ. ಎಸ್‌ಸಿ. ಪಾಸಾಗಿ ರೇಡಿಯೊ ಇಂಜನಿಯರ್ ಆಗಿದ್ದ ಮುಸಲ್ಮಾನ ಹುಚ್ಚನೊಬ್ಬ ಯಾವಾಗಲೂ ಇತರರಿಂದ ಪ್ರತ್ಯೇಕವಾಗಿದ್ದು ತೋಟದಲ್ಲಿ ಅತ್ತಿತ್ತ ಶತಪಥ ಹಾಕುತ್ತ ಇರುತ್ತಿದ್ದ. ಹುಚ್ಚರ ಅದಲಾ-ಬದಲಿ ಸಮಾಚಾರ ತಿಳಿದಾಗ ಆತ ತನ್ನ ಅರಿವೆಗಳನ್ನೆಲ್ಲ ಕಳಚಿ ಒಬ್ಬ ದಫೇದಾರನ ಕೈಗೆ ಕೊಟ್ಟು ಬರೀಬತ್ತಲೇ ಶತಪಥ ಹಾಕಲಾರಂಭಿಸಿದ.

ಚಿನಿಯೋಟಿನ ಮುಸಲ್ಮಾನ ಹುಚ್ಚನೊಬ್ಬ (ಮೊದಲು ಆತ ಮುಸ್ಲಿಂ ಲೀಗಿನ ಸಕ್ರಿಯ ಸದಸ್ಯನಾಗಿದ್ದ) ನಿತ್ಯವೂ ೧೫-೧೬ ಸಲ ಸ್ನಾನ ಮಾಡುತ್ತಿದ್ದವನು ಸ್ನಾನ ಮಾಡುವುದನ್ನೇ ಬಿಟ್ಟುಬಿಟ್ಟ. ಈತನ ಹೆಸರು ಮುಹಮ್ಮದ ಅಲಿ ಎಂದಿತ್ತು. ಈತ ಒಂದು ದಿನ ತಾನೇ ಕಾಯದೆ ಅಜಂ ಮುಹಮ್ಮದಲಿ ಜಿನ್ನಾ ಎಂದು ಘೋಷಿಸಿದ. ಅದನ್ನು ಕಂಡು ಅದೇ ಕೋಣೆಯಲ್ಲಿದ್ದ ಶೀಖ ಹುಚ್ಚನೊಬ್ಬ ತಾನು ತಾರಾಸಿಂಗ್ ಎಂದು ಘೋಷಿಸಿದ. ಇಬ್ಬರಿಗೆ ಕೈ ಕೈ ಹತ್ತಿ ರಕ್ತಪಾತವಾದೀತೆಂಬ ಅಂಜಿಕೆಯಿಂದ ಅವರಿಬ್ಬರನ್ನೂ

ನಂತರ ಪ್ರತ್ಯೇಕ ಪ್ರತ್ಯೇಕ ಕೋಣೆಯಲ್ಲಿಟ್ಟರು. ಪ್ರೇಮ ವಿಫಲತೆಯಿಂದ ಹುಚ್ಚನಾದ ಲಾಹೋರಿನ ಒಬ್ಬ ತರುಣ ವಕೀಲನಿದ್ದ. ಅಮೃತಸರವು ಭಾರತದ ಪಾಲಿಗೆ ಹೋಗಿದೆ ಎಂದು ಕೇಳಿದಾಗ ಅವನಿಗೆ ತುಂಬ ದುಃಖವಾಯಿತು. ಅವನು ಪ್ರೀತಿಸಿದ್ದ ಹುಡುಗಿ ಅಮೃತಸರದವಳಾಗಿದ್ದಳು. ಆ ಹುಡುಗಿ ಇವನನ್ನು ತಿರಸ್ಕರಿಸಿದ್ದಳಾದರೂ ಇವನಿಗಿನ್ನೂ ಅವಳ ನೆನಪು ಅಳಿಸಿರಲಿಲ್ಲ. ಭಾರತವನ್ನು ವಿಭಜಿಸಿದ್ದರಿಂದ ತನ್ನ ಪ್ರಿಯತಮೆ ಹಿಂದುಸ್ತಾನದವಳಾಗಿಬಿಟ್ಟಳು, ತಾನು ಪಾಕಿಸ್ತಾನದಲ್ಲಿ ಉಳಿದುಬಿಟ್ಟೆ ಎನ್ನುತ್ತ ಈ ಹುಚ್ಚ ವಕೀಲ ಎಲ್ಲ ಹಿಂದು ಮುಸಲ್ಮಾನ ಧುರೀಣರನ್ನು ಮನಸ್ವಿ ಬಯ್ಯತೊಡಗಿದ. ಅದಲಾಬದಲಿಯಾದ ಬಳಿಕ ನಿನ್ನನ್ನು ಹಿಂದುಸ್ತಾನಕ್ಕೆ ಕಳಿಸುತ್ತಾರೆ. ಅಲ್ಲಿ ನಿನ್ನ ಪ್ರೇಯಸಿ ಇದ್ದಾಳೆ" ಎಂದು ಅವನ ಹುಚ್ಚು ಮಿತ್ರರು ಅವನನ್ನು ಸಮಾಧಾನಪಡಿಸಲೆತ್ನಿಸಿದ್ದು ಪ್ರಯೋಜನವಾಗಲಿಲ್ಲ. ಅಮೃತಸರಕ್ಕೆ ಹೋದರೆ ನನ್ನ ವಕೀಲಿ ನಡೆಯದು. ನಾನು ಲಾಹೋರಿನಲ್ಲೇ ಇರುತ್ತೇನೆ ಎನ್ನುತ್ತಿದ್ದ ವಕೀಲ.

ಯುರೋಪಿಯನ್ ವಾರ್ಡಿನಲ್ಲಿ ಇಬ್ಬರು ಆಂಗ್ಲೋ-ಇಂಡಿಯನ್ ಹುಚ್ಚರಿದ್ದರು. ಬ್ರಿಟಿಶರು ಹಿಂದುಸ್ತಾನಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಹೋದರು ಎಂದು ಕೇಳಿದಾಗ ಈ ಇಬ್ಬರಿಗೆ ಚಿಂತೆಯಾಯಿತು. ಇನ್ನು ತಮ್ಮ ಅವಸ್ಥೆಯೇನಾದೀತು ಎಂಬ ಗಂಭೀರ ವಿಚಾರ ಅವರ ತಲೆತಿನ್ನತೊಡಗಿತು. "ಯುರೋಪಿಯನ್ ವಾರ್ಡನ್ನು ಇಡುವರೇ ಕಿತ್ತೊಗೆಯುವರೇ? ಬ್ರೇಕ್‌ಫಾಸ್ಟ್ ಸಿಕ್ಕೀತೇ ಇಲ್ಲವೆ? ಡಬಲ್ ರೋಟಿ (ಬ್ರೆಡ್) ಬದಲು ನಾವಿನ್ನು ಬ್ಲಡಿ ಇಂಡಿಯನ್ ಚಪಾಟಿಯನ್ನು ತಿನ್ನಬೇಕಾದೀತೆ?" ಎಂಬ ವಿಚಾರದಿಂದ ಅವರು ತ್ರಸ್ತರಾದರು.

ಹದಿನೈದು ವರ್ಷಗಳಿಂದ ಹುಚ್ಚಾಸ್ಪತ್ರೆಯಲ್ಲಿ ಶೀಖನೊಬ್ಬನಿದ್ದ. ಆತ ಯಾವಾಗಲೂ "ಓ ಪಡ ದಿ ಗುಡಗುಡ ದಿ ಅನೆಕ್ಸ ದಿ ಬೇಧ್ಯಾನಾ ದಿ ಮುಂಗದಿ ದಾಲ ಆಫ್ ದಿ ಲಾಲಟೈನ್" ಎಂದು ಬಡಬಡಿಸುತ್ತಿದ್ದ. ಈತ ಹಗಲೂ ನಿದ್ರಿಸುತ್ತಿರಲಿಲ್ಲ, ರಾತ್ರಿಯೂ ನಿದ್ರಿಸುತ್ತಿರಲಿಲ್ಲ. ಹದಿನೈದು ವರ್ಷಗಳಲ್ಲಿ ಒಂದು ಕ್ಷಣಕೂಡ ಈತ ನಿದ್ದೆಮಾಡಿಲ್ಲ, ನೆಲದ ಮೇಲೆ ಅಡ್ಡಾಗಿಯೂ ಇಲ್ಲ, ಒಮ್ಮೊಮ್ಮೆ ಗೋಡೆಗೆ ಆತು ನಿಂತುಕೊಳ್ಳುತ್ತಾನೆ ಅಷ್ಟೆ ಎಂದು ಕಾವಲುಗಾರರು ಹೇಳುತ್ತಿದ್ದರು.

ಯಾವಾಗಲೂ ನಿಂತೇ ಇರುತ್ತಿದ್ದರಿಂದ ಇವನ ಕಾಲುಗಳು ಬಾತಿದ್ದವು. ಆದರೂ ಆತ ಅಡ್ಡಾಗುತ್ತಿರಲಿಲ್ಲ. ಹಿಂದುಸ್ತಾನ ಪಾಕಿಸ್ತಾನಗಳಲ್ಲಿಯ ಹುಚ್ಚರ ಅದಲಾಬದಲಿ ಚರ್ಚೆಯನ್ನಾತ ಲಕ್ಷ್ಯಗೊಟ್ಟು ಕೇಳುತ್ತಿದ್ದ. ನಿನ್ನ ಅಭಿಪ್ರಾಯವೇನು ಎಂದು ಯಾರಾದರೂ ಕೇಳಿದರೆ "ಓ ಪಡ ದೀ ಗುಡಗುಡ ದೀ ಅನೆಕ್ಸ ದೀ ಬೇಧ್ಯಾನಾದಿ ಮುಂಗದೀ ದಾಲ ಆಫ್ ದಿ ಪಾಕಿಸ್ತಾನ ಗವರ್ನಮೆಂಟ್" ಎಂದು ಗಂಭೀರವಾಗಿ ಉತ್ತರ ಕೊಡುತ್ತಿದ್ದ.

ಆ ಮೇಲೆ "ಆಫ್ ದಿ ಗವರ್ನಮೆಂಟ್" ಎನ್ನುವ ಬದಲು "ಆಫ್ ದಿ ಟೋಬಾಟೇಕ್ ಸಿಂಹ ಗವರ್ನಮೆಂಟ್" ಅನ್ನತೊಡಗಿದ. ಈಗ ಟೋಬಾಟೇಕ್‌ಸಿಂಹ ಎಲ್ಲಿದೆ ಎಂದು ಇತರ



ರನ್ನು ಕೇಳತೊಡಗಿದ. ಆದರೆ ಅದು ಹಿಂದುಸ್ತಾನದಲ್ಲಿದೆಯೆ ಪಾಕಿಸ್ತಾನದಲ್ಲಿದೆಯೆ ಎಂದು ಯಾರಿಗೂ ಗೊತ್ತಿರಲಿಲ್ಲ. ಈ ಪ್ರಶ್ನೆ ಬಂದಾಗ ಅವರು ಇನ್ನಷ್ಟು ಗೊಂದಲಕ್ಕೆ ಬೀಳುತ್ತಿದ್ದರು. ಮೊದಲು ಹಿಂದುಸ್ತಾನದಲ್ಲಿದ್ದ ಸಿಯಾಲಕೋಟ ಈಗ ಪಾಕಿಸ್ತಾನದಲ್ಲಿ ಬಂದಿದೆಯಂತೆ. ಈಗ ಪಾಕಿಸ್ತಾನದಲ್ಲಿರುವ ಲಾಹೋರ ನಾಳೆ ಹಿಂದುಸ್ತಾನಕ್ಕೆ ಹೋದರೆ? ಅಥವಾ ಇಡೀ ಹಿಂದುಸ್ತಾನವೇ ಪಾಕಿಸ್ತಾನವಾಗಿ ಬಿಟ್ಟರೆ? ಹಿಂದುಸ್ತಾನ ಮತ್ತು ಪಾಕಿಸ್ತಾನಗಳೆರಡೂ ಒಂದು ದಿನ ಇಲ್ಲವಾಗಿ ಹೋಗಲಿಕ್ಕಿಲ್ಲ ಎಂದು ಯಾರು ಆಣೆ ಮಾಡಿ ಹೇಳಬಲ್ಲರು ?

ಈ 'ಓ ಪಡ ದಿ' ಶೀಖ ಹುಚ್ಚನ ಗಡ್ಡ ಮತ್ತು ವಿರಳವಾದ ತಲೆಗೂದಲು ಒಂದಕ್ಕೊಂದು ಬೆರೆತು ಹೋಗಿ ಅವನ ಮುಖ ಉಗ್ರವಾಗಿ ಕಾಣಿಸುತ್ತಿತ್ತು. ಆದರೆ ಆತ ತುಂಬ ಶಾಂತ ಪ್ರಕೃತಿಯವ. ಈ ಹದಿನೈದು ವರ್ಷಗಳಲ್ಲಿ ಒಬ್ಬರೊಡನೆಯೂ ಜಗಳಾಡಿರಲಿಲ್ಲ. ಟೋಬಾಟೇಕಸಿಂಹದಲ್ಲಿ ಇವನದಿಷ್ಟು ಜಮೀನು ಇತ್ತು. ಒಮ್ಮೆಂದೊಮ್ಮೆ ಇವನ ತಲೆ ಕೆಡಲು ಸಂಬಂಧಿಕರು ಇವನನ್ನು ಸರಪಳಿಗಳಿಂದ ಬಂಧಿಸಿ ಹುಚ್ಚಾಸ್ಪತ್ರೆಗೆ ಸೇರಿಸಿದ್ದರು. ಈ ಸಂಬಂಧಿಕರು ತಿಂಗಳಿಗೊಮ್ಮೆ ಬಂದು ಇವನನ್ನು ಭೆಟ್ಟಿಯಾಗಿ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗುತ್ತಿದ್ದರು. ವರ್ಷಗಟ್ಟಳೆ ನಡೆದು ಬಂದ ಈ ಭೆಟ್ಟಿ ಪಾಕಿಸ್ತಾನ ಹಿಂದುಸ್ತಾನಗಳ ಗಡಿಬಿಡಿಯೇಳಲು ತಟ್ಟನೆ ನಿಂತುಹೋಯಿತು.

ಇವನ ಹೆಸರು ಬಿಶನಸಿಂಹ್. ಆದರೆ ಎಲ್ಲರೂ ಇವನನ್ನು ಟೋಬಾಟೇಕ್ ಸಿಂಹ ಎಂದೇ ಕರೆಯುತ್ತಿದ್ದರು. ಇವನಿಗೆ ದಿನ, ತಿಂಗಳು, ವರ್ಷ ಯಾವುದರ ಲೆಕ್ಕ ಹತ್ತುತ್ತಿರಲಿಲ್ಲವಾದರೂ ತನ್ನ ಸಂಬಂಧಿಕರು ಬರುವ ದಿನ ಮಾತ್ರ ಇವನಿಗೆ ಅದು ಹೇಗೊ ಸರಿಯಾಗಿ ಸ್ಮರಣೆಗೆ ಬರುತ್ತಿತ್ತು. ಆ ದಿನ ಅವನು ಮೈಗೆ ಸಾಬೂನು ತಿಕ್ಕಿ ತಿಕ್ಕಿ ಸ್ನಾನಮಾಡುತ್ತಿದ್ದ. ಕೂದಲಿಗೆ ಎಣ್ಣೆ ಹಚ್ಚಿ ಹಿಕ್ಕಿಕೊಳ್ಳುತ್ತಿದ್ದ. ತನ್ನ ಸ್ವಂತದ ಬಟ್ಟೆಗಳನ್ನು ಎಂದೂ ಹಾಕಿಕೊಳ್ಳದವ ಅಂದು ತೊಟ್ಟುಕೊಳ್ಳುತ್ತಿದ್ದ. ಸಂಬಂಧಿಕರು ಬಂದು ಮಾತನಾಡಿಸಿ ಏನನ್ನಾದರೂ ಕೇಳಿದಾಗ ಸುಮ್ಮನಿರುತ್ತಿದ್ದ ಇಲ್ಲವೆ "ಓ ಪಡ ದಿ ಗುಡಗುಡ ದಿ ಅನೆಕ್ಸ್ ದಿ ಬೇಧ್ಯಾನಾ ದಿ ದಾಲ ಆಫ್ ದಿ ಲಾಲಟೈನ್" ಎನ್ನುತ್ತಿದ್ದ.

ಟೋಬಾಟೇಕ ಸಿಂಹ ಈಗ ಎಲ್ಲಿದೆ ಎಂದು ಯಾರೂ ಅವನಿಗೆ ಹೇಳುತ್ತಿರಲಿಲ್ಲ. ಈಗ ಸಂಬಂಧಿಕರು ಭೆಟ್ಟಿಗೆ ಬರುವುದೂ ನಿಂತಿತ್ತು. ಅವರು ಬರುವ ದಿನವನ್ನು ತಪ್ಪದೆ ಸೂಚಿಸುತ್ತಿದ್ದ ಅವನ ಅಂತರ್ವಾಣಿ ಈಗ ಮಾಯವಾಗಿ ಬಿಟ್ಟಿತ್ತು. ಇವೆಲ್ಲವುಗಳಿಂದ ಈ ಹುಚ್ಚನ ವ್ಯಾಕುಲತೆ ದಿನದಿನವೂ ಹೆಚ್ಚುತ್ತ ಹೋಯಿತು. ತಿನ್ನಲು ಹಣ್ಣು ಮಿಠಾಯಿಗಳನ್ನು ತರುತ್ತಿದ್ದ ತನ್ನ ಸಂಬಂಧಿಕರು ಬರಬೇಕು, ಅವರು ಬಂದರೆ ಟೋಬಾಟೇಕ ಸಿಂಹ ಎಲ್ಲಿದೆ ಎಂದು ತಿಳಿಯುತ್ತಿತ್ತು ಎಂದಾತ ಯೋಚಿಸುತ್ತಿದ್ದ.

ತಾನೇ ದೇವರು ಎನ್ನುತ್ತಿದ್ದ ಹುಚ್ಚನೊಬ್ಬನೂ ಅಲ್ಲಿದ್ದ. ಬಿಶನಸಿಂಹ ಒಂದು ದಿನ ಅವನಿಗೆ "ಟೋಬಾಟೇಕ ಸಿಂಹ ಪಾಕಿಸ್ತಾನದಲ್ಲಿದೆಯೋ ಅಥವಾ ಹಿಂದುಸ್ತಾನದಲ್ಲಿದೆಯೋ" ಎಂದು ಕೇಳಿದ. ಆಗ ಆ ಹುಚ್ಚ (ತಾನು ದೇವರೆಂದುಕೊಳ್ಳುವವ) ಗಹಗಹಿಸಿ ನಕ್ಕು "ಅವೆರಡು ದೇಶದಲ್ಲಿಯೂ ಇಲ್ಲ. ಏಕೆಂದರೆ ನಾನಿನ್ನೂ ಆ ಬಗ್ಗೆ ಹುಕುಂ ಹೊರಡಿಸಿಲ್ಲ" ಎಂದ.

"ಬೇಗ ಅಪ್ಪಣೆ ಹೊರಡಿಸು ದೇವಾ, ಅಂದರೆ ನನ್ನ ಕಷ್ಟ ತಪ್ಪುವುದು" ಎಂದು ಬಿಶನ್‌ಸಿಂಹ ಈ ದೇವರನ್ನು ಬೇಡಿಕೊಂಡ. ಆದರೆ ಆ ದೇವರಿಗೆ ಇನ್ನು ಅನೇಕಾನೇಕ ಅಪ್ಪಣೆಗಳನ್ನು ಹೊರಡಿಸಬೇಕಾಗಿದ್ದುದರಿಂದ ಈ ಅಪ್ಪಣೆ ಹೊರಡಿಸುವುದಾಗಲಿಲ್ಲ. ಆಗ ಬಿಶನ್‌ಸಿಂಹ ರೊಚ್ಚಿಗೆದ್ದು ಅಬ್ಬರಿಸಿದ ! "ಓ ಪಡ ದಿ ಗುಡಗುಡ ದಿ ಅನೆಕ್ಸ ದಿ ಬೇಧ್ಯಾನಾ ದಿ ಮುಂಗದಿ ದಾಲ ಆಫ್ ವಾಹಿ ಗುರುಜಿ ದಿ ಖಾಲಸ್ ಆ್ಯಂಡ್ ವಾಹೆ ಗುರುಜಿ ದಿ

ಫತಹಾ ಜೋ ಬೋಲೆ ಸೊ ನಿಹಾಲಸತ್ ಶಿರಿ ಅಕಾಲ."

ಇದರ ಅರ್ಥ ಬಹುಶಃ ನೀನು ಮುಸಲ್ಮಾನರ ದೇವರು, ಶೀಖರ ದೇವರಾಗಿದ್ದರೆ ನನ್ನ ಪ್ರಾರ್ಥನೆಯನ್ನು ಮನ್ನಿಸುತ್ತಿದ್ದೆ ಎಂದಿದ್ದಿರಬೇಕು.

ಅದಲಾಬದಲಿಯ ಪದ್ಧತಿ ಮುಗಿದಿತ್ತು. ಅದಲು ಬದಲು ಮಾಡುವ ಹುಚ್ಚರ ಯಾದಿ ಪೂರ್ಣವಾಗಿತ್ತು. ಅದಲು ಬದಲು ಮಾಡುವ ದಿನ ನಿಶ್ಚಿತವಾಗಿತ್ತು.

ಥಂಡಿ ವಿಪರೀತವಾಗಿತ್ತು. ಲಾಹೋರಿನ ಹುಚ್ಚರಾಸ್ಪತ್ರೆಯಲ್ಲಿದ್ದ ಹಿಂದು-ಶೀಖ ಹುಚ್ಚರನ್ನು ತುಂಬಿಕೊಂಡು ಲಾರಿಗಳು ಪೋಲೀಸರ ಕಾವಲಿನಲ್ಲಿ ಹೊರಟವು. ಅಧಿಕಾರಿಗಳೂ ಜೊತೆಗಿದ್ದರು. ವಾಹಗಾ ಗಡಿಯಲ್ಲಿ ಎರಡೂ ಪಕ್ಷಗಳ ಸುಪರಿಂಟೆಂಡೆಂಟರು ಪರಸ್ಪರ ಕೈ ಕುಲುಕಿ ಅದಲು-ಬದಲಿನ ಕಾರ್ಯವನ್ನು ಆರಂಭಿಸಿದರು.

ಲಾರಿಗಳಿಂದ ಹುಚ್ಚರನ್ನು ಕೆಳಗಿಳಿಸಿ ಗಡಿಯಾಚೆಗಿನ ಅಧಿಕಾರಿಗೆ ಒಪ್ಪಿಸುವುದು ಬಲು ಕಠಿನ ಕೆಲಸವಾಗಿತ್ತು. ಕೆಲವರು ಲಾರಿಯಿಂದ ಇಳಿಯುತ್ತಲೇ ಇರಲಿಲ್ಲ. ಕೆಳಗಿಳಿದವರಲ್ಲಿ ಕೆಲವರು ಅತಿತ ಓಡಾಡುತ್ತಿದ್ದರು. ಬತ್ತಲೆಯಿದ್ದವರಿಗೆ ಬಟ್ಟೆ ತೊಡಸಿದರೆ ಅವರದನ್ನು ಹರಿದು ಹಾಕುತ್ತಿದ್ದರು. ಒಬ್ಬ ಹಾಡುತ್ತಿದ್ದ, ಇನ್ನೊಬ್ಬ ಬೈಯುತ್ತಿದ್ದ, ಮತ್ತೊಬ್ಬ ಜಗಳಾಡುತ್ತಿದ್ದ, ನಾಲ್ಕನೆಯವ ಅಳುತ್ತಿದ್ದ; ಕೋಲಾಹಲವೇ ನಡೆದಿತು. ಎಷ್ಟೋ ಹುಚ್ಚರಿಗೆ ಹೀಗೇಕೆ ತಮ್ಮನ್ನು ಬೇರೆಡೆಗೆ ಸಾಗಿಸುತ್ತಿದ್ದಾರೆಂಬ ಕಲ್ಪನೆಯಿರಲಿಲ್ಲ. ಅಲ್ಪಸ್ವಲ್ಪ ಅರಿವಿದ್ದವರಲ್ಲಿ ಕೆಲವರು "ಪಾಕಿಸ್ತಾನ ಜಿಂದಾಬಾದ" ಎಂದು ಘೋಷಿಸಿದರೆ ಕೆಲವರು "ಪಾಕಿಸ್ತಾನ ಮುರ್ದಾಬಾದ್" ಎಂದು ಘೋಷಿಸುತ್ತಿದ್ದರು. ಈ ಘೋಷಣೆ ಕೇಳಿ ಮು-



ಸಲ್ಮಾನ ಮತ್ತು ಶೀಖರು ರೊಚ್ಚಿಗೆದ್ದುದರಿಂದ ಎರಡು-ಮೂರು ಸಲ ಹೊಡದಾಟವಾಗುವುದನ್ನು ತಪ್ಪಿಸಲು ಸಾಕುಬೇಕಾಯಿತು.

ಬಿಶನ್ ಸಿಂಹನ ಪಾಳಿ ಬಂತು. ಗಡಿಯೀಚೆಯ ಅಧಿಕಾರಿ ಅವನ ಹೆಸರು ಬರೆದುಕೊಳ್ಳುತ್ತಿದ್ದಾಗ ಆತ ಕೇಳಿದ. "ಟೋಬಾಟೇಕ ಸಿಂಹ ಎಲ್ಲಿದೆ ?"

"ಪಾಕಿಸ್ತಾನದಲ್ಲಿ" ಎಂದ ಅಧಿಕಾರಿ.

ಅದನ್ನು ಕೇಳಿದೊಡನೆ ಬಿಶನ್ ಸಿಂಹ ಜಿಗಿದು ತನ್ನ ಸಂಗಡ ಬಂದಿದ್ದ ಹುಚ್ಚರ ಗುಂಪಿನಲ್ಲಿ ಹೋಗಿ ನಿಂತ. ಪಾಕಿಸ್ತಾನಿ ಸಿಪಾಯಿಗಳು ಅವನನ್ನು ಹಿಡಿದು ಗಡಿಯ ಕಡೆ ಒಯ್ಯತೊಡಗಲು ಆತ ಬರುವುದಿಲ್ಲವೆಂದ. "ಟೋಬಾ ಟೇಕ ಸಿಂಹ ಇಲ್ಲಿದೆ" ಎಂದು ಕೂಗುತ್ತಾ ಆತ "ಓ ಪಡದಿ ಗುಡಗುಡದಿ ಅನೆಕ್ಸ್ ದಿ ಬೇಧ್ಯಾನಾದಿ ಮುಂಗ ದಿ ದಾಲ ಆಫ್ ಟೋಬಾಟೇಕ ಸಿಂಹ ಆ್ಯಂಡ್ ಪಾಕಿಸ್ತಾನ" ಎಂದು ಒದರತೊಡಗಿದ.

ಈಗ ಟೋಬಾ ಟೇಕ ಸಿಂಹ ಹಿಂದುಸ್ತಾನಕ್ಕೆ ಹೋಗಿದೆ ಎಂದು ಆತನಿಗೆ ತಿಳಿ ಹೇಳಿದರು. ಹೋಗಿರದಿದ್ದರೆ ಕಳಿಸುತ್ತೇವೆ ಈಗಿಂದೀಗ ಎಂದರು. ಆದರೆ ಬಿಶನ್ ಸಿಂಹ ಕೇಳಲಿಲ್ಲ. ಅವನನು ಬಲಾತ್ಕಾರದಿಂದ ಎಳೆದೊಯ್ಯಲೆತ್ನಿಸಿದಾಗ ಆತ ತನ್ನನ್ನಿಲ್ಲಿಂದ ಯಾರೂ ಕದಲಿಸಲಾರರು ಎಂಬ ರೀವಿಯಲ್ಲಿ ಬಂದೆಡೆ ತನ್ನ ಬಾತ ಕಾಲುಗಳನ್ನು ಗಟ್ಟಿಯಾಗಿ ನೆಲಕ್ಯೂರಿ ನಿಂತ. ಪಾಪ! ಎಂದು ಅವನನ್ನು ಹಾಗೇಬಿಟ್ಟು, ಅಧಿಕಾರಿಗಳು ಉಳಿದ ಕೆಲಸವನ್ನು ಮುಂದೆ ಸಾಗಿಸಿದರು.

ಸೂರ್ಯೋದಯದ ಸುಮಾರಿಗೆ ನಿಶ್ಚಲನಾಗಿ ನಿಂತಿದ್ದ ಬಿಶನ್ ಸಿಂಹನ ಬಾಯಿಂದ ಒಂದು ಚೀತ್ಕಾರ ಹೊರಟಿತು. ಅಧಿಕಾರಿಗಳು ಓಡಿ ಬಂದರು. ೧೫ ವರ್ಷಗಳಿಂದ ಹಗಲು ರಾತ್ರಿ ನಿಂತೇ ಇರುತ್ತಿದ್ದ ಬಿಶನ್ ಸಿಂಹ ಈಗ ಮುಖ ಕೆಳಗಾಗಿ ಮಲಗಿದ್ದ. ಮುಳ್ಳುತಂತಿಯ ಬೇಲಿಯ ಈಚೆ ಹಿಂದುಸ್ತಾನವಿತ್ತು. ಆಚೆ ಅಂಥದೇ ಬೇಲಿಯ ಹಿಂದೆ ಪಾಕಿಸ್ತಾನವಿತ್ತು. ನಡುವೆ ಇದ್ದ ಯಾವ ಹೆಸರನ್ನೂ ಹೊಂದಿರದ ತುಂಡು ನೆಲದ ಮೇಲೆ ಟೋಬಾಟೇಕಸಿಂಹ ಬಿದ್ದಿದ್ದ. *



ದರಿದ್ರತಾ ಧೀರತಯಾ ವಿರಾಜತೇ ಕುರೂಪತಾ ಶೀಲತಯಾ ವಿರಾಜತೇ।
ಕುಭೋಜನಂ ಚೋಷ್ಣತಯಾ ವಿರಾಜತೇ ಕುವಸ್ತ್ರತಾ ಶುಭ್ರತಯಾ
ವಿರಾಜತೇ ॥

ಧೈರ್ಯವಿದ್ದರೆ ಬಡತನವೂ ಚೆನ್ನು; ಶೀಲವಿದ್ದರೆ ಕುರೂಪವೂ ಚೆನ್ನು; ಬಿಸಿಯಿದ್ದರೆ ಕದನ್ನವೂ ಚೆನ್ನು; ಶುಭ್ರವಿದ್ದರೆ ಹರಕುಬಟ್ಟೆಯೂ ಚೆನ್ನು.



ಅವನು ನವಮನ್ವಂತರಕ್ಕೆ
ತಳಪಾಯ ಹಾಕಿದನು

ಪಾವೆಂ



ಪ್ರತಿಭಾ ಪ್ರದೀಪ ವಾಲ್ಟೇರ್

೧೬೯೪ ನವಂಬರ ೨೧ ರಂದು ಪ್ಯಾರೀಸಿನ ಒಬ್ಬ ಅನುಕೂಲವಂತ ನೋಟರಿಯ ಮನೆಯಲ್ಲಿ ಒಂದು ಮಗು ಹುಟ್ಟಿತು. ಅದು ಹುಟ್ಟಿದ ತತ್‌ಕ್ಷಣ ತಾಯಿ ಸತ್ತಳು. ಹೆರಿಗೆಯನ್ನು ಮಾಡಿಸಿದ ದಾದಿ ಮಗುವಿಗೆ ಬಹಳವಾದರೆ ೨೪ ತಾಸು ಆಯುಸ್ಸಿದ್ದೀತೆಂದು ಹೇಳಿದಳು; ಅಷ್ಟು ದುರ್ಬಲ ಮತ್ತು ರೋಗಿಯಾಗಿ ಕಾಣುತ್ತಿತ್ತು ಆ ಮಗು. ಸಾಲದ್ದಕ್ಕೆ ಅದು ಅವಳು ಕಂಡ ಅತ್ಯಂತ ಕುರೂಪಿ ಶಿಶುಗಳಲ್ಲೊಂದಾಗಿತ್ತು.

ದಾದಿಯ ಭವಿಷ್ಯ ಸತ್ಯವಾಗಿದ್ದರೆ ಯುರೋಪಿನ ಇತಿಹಾಸ ಇಂದು ಬೇರೆಯೆ ತೆರನಾಗಿರುತ್ತಿತ್ತು. ಏಕೆಂದರೆ ಈ ಮಗುವೇ ಬೆಳೆದು ಮುಂದೆ ವಾಲ್ಟೇರ್ ಎಂಬ ಹೆಸರಿನಿಂದ ತತ್ಕಾಲೀನ ವಿಶ್ವದ ವಿಚಾರ ಪ್ರಪಂಚದಲ್ಲಿ ಕ್ರಾಂತಿಯನ್ನೆಬ್ಬಿಸಿತು. "ಪುಸ್ತಕಗಳು ಜಗತ್ತನ್ನಾಳುತ್ತವೆ" ಎಂದು ಹೇಳಿದ ವ್ಯಕ್ತಿ ಇವನೇ. ೨೪ ತಾಸಿನಲ್ಲಿ ಸಾಯುವಂತಿದ್ದ ಈತ ೮೪ ವರ್ಷ ಬದುಕಿ ೯೯ ಸಂಪುಟಗಳನ್ನು ತುಂಬುವಷ್ಟು ಗ್ರಂಥವನ್ನು ಬರೆದು ತನ್ನ ಆ ಹೇಳಿಕೆಯನ್ನು ನಿಜ ಮಾಡಿ ತೋರಿಸಿದ. ಆತ ಪ್ರತಿಪಾದಿಸಿದ ವಿಚಾರಗಳು ಮನುಷ್ಯರ ಮನಸ್ಸನ್ನು ಆಕ್ರಮಿಸಿದವು. ಅರಸರೂ ಚಕ್ರವರ್ತಿಗಳೂ ಅದರಿಂದ ಪ್ರಭಾವಿತರಾಗಿ ಅವನ ಶಿಷ್ಯರಾದರು. ಜನರ ಅಂಧಶ್ರದ್ಧೆಯ ಮೇಲೆ, ಅಧಿಕಾರಿಗಳ ದಬ್ಬಾಳಿಕೆಯ ಮೇಲೆ ಇವನು ಸುರಿಸಿದ ವಾಗ್ಬಾಣಗಳ ಪರಿಣಾಮವಾಗಿ ಆಗ ಯುರೋಪಿನಲ್ಲಿ ತ್ರಿಕಾಲ ಸತ್ಯವೆಂಬಂತೆ ರೂಢ ಮೂಲವಾಗಿದ್ದ ನಂಬಿಕೆಗಳು ಇಸ್ಪೇಟಿನ ಮನೆಗಳಂತೆ ನೆಲಸಮವಾದವು. ಆತ ಹುಟ್ಟಿದ ಒಂದು ಶತಮಾನದೊಳಗೆ ಮತ್ತು ಸತ್ತು ಹದಿನೈದು ವರ್ಷಗಳೊಳಗೆ ಫ್ರಾನ್ಸಿನಲ್ಲಿ ಮಹಾಕ್ರಾಂತಿಯಾಯಿತು. ರಕ್ತ ಪ್ರವಾಹದಲ್ಲಿ ನೂತನ ವಿಚಾರಗಳು ಯುರೋಪಿನ ಮೂಲೆ ಮೂಲೆಗಳಿಗೂ ತಲುಪಿದವು.

ವಾಲ್ಟೇರನನ್ನು ಹದಿನೆಂಟನೇ ಶತಮಾನದ

ನಿರ್ಮಾಪಕನೆಂದು ಕರೆಯಲಾಗುತ್ತದೆ. ಪ್ರಪಂಚದ ಇತಿಹಾಸದಲ್ಲೇ ಅವನಷ್ಟು ಬೌದ್ಧಿಕ ಚೈತನ್ಯಶೀಲ ವ್ಯಕ್ತಿ ಆಗಿಲ್ಲೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಅವನು ಕೇವಲ ಕ್ರಾಂತಿಕಾರಿಯಾಗಿದ್ದಿಲ್ಲ. ಅವನು ಬಹುಶಃ ತನ್ನ ಕಾಲದ ಅತಿ ದೊಡ್ಡ ವಿದ್ವಾಂಸನೂ ಆಗಿದ್ದ. ಆ ವರೆಗೆ ಪ್ರಪಂಚದಲ್ಲಿ ಲಭ್ಯವಾಗಿದ್ದ ಎಲ್ಲ ಜ್ಞಾನವನ್ನಾತ ಅರಗಿಸಿಕೊಂಡಿದ್ದ. ಇದಕ್ಕೆ ಅತ್ಯಂತ ಹರಿತವಾದ ನಾಲಗೆಯ ಮತ್ತು ಅತ್ಯಂತ ಪರಿಣಾಮಕರ ಲೇಖನ ಶಕ್ತಿಯ ನೆರವು ದೊರೆತಿತ್ತು. ಎಡಬಿಡದೆ ಪರಿಶ್ರಮ, ಯಾರಿಗೂ ಬಾಗದ ನಿರ್ಭಯತೆ ಇವುಗಳೊಂದಿಗೆ ಅವನು ರಾಜಕೀಯ ನಿರಂಕುಶತೆ ಮತ್ತು ಧಾರ್ಮಿಕ ದಬ್ಬಾಳಿಕೆಗಳೊಂದಿಗೆ ನೂರಾರು ಹೋರಾಟಗಳನ್ನು ಹೂಡಿದ. ಇದರಲ್ಲಾತ ಸೆರೆಮನೆ ಕಾಣಬೇಕಾಯಿತು; ದೇಶತ್ಯಾಗ ಮಾಡಬೇಕಾಯಿತು. ಅವನ ಪುಸ್ತಕಗಳನ್ನು ಸರಕಾರಗಳು ಮುಟ್ಟುಗೋಲು ಹಾಕಿದವು. ಆದರೂ ಅವನ ಪ್ರಭಾವ ದಿನದಿನಕ್ಕೆ ಬೆಳೆಯಿತು. ತನ್ನ ಜೀವಮಾನದಲ್ಲಿ ವಾಲ್ಟೇರನಷ್ಟು ಪ್ರಭಾವಶಾಲಿಯಾದ ಲೇಖಕ ಹಿಂದೆ ಹುಟ್ಟಿರಲಿಲ್ಲ. ಮುಂದೆ ಹುಟ್ಟಲಿಲ್ಲ.

ವಾಲ್ಟೇರ್ ಎಂಬುದು ಅವನ ನಾಮಕರಣದ ಹೆಸರಲ್ಲ, ಲೇಖನಿನಾಮ. ನಿಜ ಹೆಸರು ಫ್ರಾಂಚೋಸ್ ಮಾರಿ ಅರೋವೆಟ್ ಎಂದಿತ್ತು. ಅಕ್ಷರಗಳ ಗುರುತು ಹತ್ತಿದಂದಿನಿಂದ ಅವನು ಪುಸ್ತಕಗಳ ಹುಚ್ಚನಾದ. ೧೨ ನೇ ವಯಸ್ಸಿನಲ್ಲಿ ಇತರರು ಚಿಣಿಫಣಿ ಆಡುತ್ತಿರುವಾಗ ಈತ ಪಂಡಿತರೊಡನೆ ತತ್ವಜ್ಞಾನ ಚರ್ಚೆಮಾಡುತ್ತಿದ್ದ. ೧೭ ನೇ ವಯಸ್ಸಿನಲ್ಲಿ ಈತ ಸಾಹಿತಿಯಾಗ ಬಯಸಿ ಕವಿತೆಗಳನ್ನು ಪ್ರಕಟಿಸತೊಡಗಿದ್ದನ್ನು ನೋಡಿ ಅವನ ವ್ಯವಹಾರವೇತ್ತನಾದ ತಂದೆ, "ನನಗಿಬ್ಬರು ಮೂರ್ಖರು ಮಕ್ಕಳಾಗಿದ್ದಾರೆ. ಒಬ್ಬ ಗದ್ಯ ಮೂರ್ಖ ಇನ್ನೊಬ್ಬ ಪದ್ಯ ಮೂರ್ಖ" ಎಂದು ಉದ್ಗಾರವೆತ್ತಬೇಕಾಯಿತು. ಏಕೆಂದರೆ ಹಿರಿಯ ಮಗ ಆಗಲೇ ಗದ್ಯ ಲೇಖನ ಪ್ರಾರಂಭಿಸಿದ್ದ. ಇಬ್ಬರೂ ಉಪವಾಸ ಸಾಯುವರೆಂದು ಅಪ್ಪ ಅರೋವೆಟನ ದೃಢಾಭಿಪ್ರಾಯವಾಗಿತ್ತು. ಆದರೆ ವಾಲ್ಟೇರ್ ತನ್ನ ಗ್ರಂಥಗಳಿಂದ ಅಪಾರ ಸಂಪತ್ತನ್ನು ಗಳಿಸಿ ತಂದೆಯ ಊಹೆಯನ್ನು ಸುಳ್ಳುಗಳೆಯಲಿದ್ದ.

ಅವನನ್ನು ದಾರಿಗೆ ಹಚ್ಚಲೆಂದು ಹಾಲಂಡಿನಲ್ಲಿನ ಫ್ರೆಂಚ್ ರಾಯಭಾರಗೃಹಕ್ಕೆ ನೌಕರನಾಗಿ ಕಳಿಸಲಾಯಿತು. ಅಲ್ಲಿ ಬಡಕಲು ಮೈಯ ಈ ಕುರೂಪಿ ಯುವಕ ನೂರಾರು ಪ್ರೇಮ ಪ್ರಕರಣಗಳಲ್ಲಿ ತೊಡಕಿಕೊಂಡಿದ್ದಲ್ಲದೆ ಒಬ್ಬ ಹುಡುಗಿಯನ್ನು ಹಾರಿಸಿಕೊಂಡು ಹೋಗಲೆಳಸಿದ್ದು ಹೊರಬಿದ್ದು, ಅವನನ್ನು ಮರಳಿ ಪ್ಯಾರೀಸಿಗೆ ಕಳಿಸಲಾಯಿತು. ವಾಲ್ಟೇರನಿಗೆ ಅಂದಿನಿಂದಲೂ ಪ್ರೇಯಸಿಯರ ಕೊರತೆ ಬೀಳಲಿಲ್ಲವೆಂಬುದು ಬುದ್ಧಿವೈಭವದ ಮುಂದೆ ರೂಪವನ್ನು ಕಡೆಗಣಿಸುವ ಮಹಿಳೆಯರಿದ್ದಾರೆಂಬುದನ್ನು ತೋರಿಸುತ್ತದೆ.

ಪ್ಯಾರೀಸಿಗೆ ಮರಳಿದ ತರುಣ ಅರೋವೆಟನು ಕೂಡಲೆ ತನ್ನ ಚೂಟಿಯಾದ ವಾಗ್ಬಾಣಗಳಿಂದ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸಿದನು. ಹೊಸ ಬಾಲರಾಜನ ಸಂರಕ್ಷಕನು ಅರಮನೆಯ ವೆಚ್ಚ ಕಡಿಮೆ ಮಾಡಲು ಕುದುರೆಗಳನ್ನು ಮಾರಿದನೆಂದು ತಿಳಿದು ಬಂದಾಗ ಅರೋವೆಟನು ಲಘುವಾಗಿ, "ರಾಜ ಪರಿವಾರದಲ್ಲಿ ಸೇರಿಕೊಂಡ ಕತ್ತೆಗಳಲ್ಲಿ ಅರೆವಾಸಿಯಷ್ಟನ್ನು ದಾಟಿಸಿದರೆ ಇನ್ನಷ್ಟು ಖರ್ಚು ಉಳಿದೀತು" ಎಂದನು. ಇಂಥ ಅಸಂಖ್ಯ ನಗೆಮಾತುಗಳ ವಾರ್ತೆ ಕೇಳಿ ರಾಜರಕ್ಷಕನು ಕೆರಳಿ ಅವನನ್ನು ಪ್ರಸಿದ್ಧ ಫ್ರೆಂಚ ಸೆರೆಮನೆಯಾದ ಬ್ಯಾಸ್ಟಿಲ್‌ಗೆ ವಿಚಾರಣೆಯಿಲ್ಲದೆ ಕಳಿಸಿದನು ಅಲ್ಲಿಂದ ಬಿಡುಗಡೆ ಹೊಂದಬೇಕಾದರೆ ಹನ್ನೊಂದು ತಿಂಗಳು ಕಳೆದಿದ್ದವು. ಅವನ ಆರೋಗ್ಯ ಪೂರಾ ಕೆಟ್ಟಿತ್ತು. ಅವನ ಹೆಸರು "ವಾಲ್ಟೇರ್" ಎಂದು ಬದಲಾಗಿತ್ತು. ಆದರೆ ಅವನ ಸ್ವಭಾವ ಬದಲಾಗಿರಲಿಲ್ಲ.

ವಾಲ್ಟೇರ್ ೨೪ ವಯಸ್ಸಿನಲ್ಲಿದ್ದಾಗ ಅವನ "ಈಡಿಪೆ" ನಾಟಕ ಪ್ಯಾರೀಸಿನ ನಾಟಕ ಗೃಹದಲ್ಲಿ ಅಪ್ರತಿಮ ಯಶಸ್ಸನ್ನು ಪಡೆಯಿತು. ಅದರ ಹಿಂದೆ ಬಂದ ಅನೇಕ ನಾಟಕಗಳು ವಾಲ್ಟೇರನನ್ನು ತನ್ನ ಕಾಲದ ಅತಿ ಪ್ರಸಿದ್ಧ ಸಾಹಿತಿಯನ್ನಾಗಿ ಮಾಡಿದವು. ಅವುಗಳಿಂದ ಲಕ್ಷಾಂತರ ಧನ ಸಂಪಾದನೆಯಾಯಿತು. ಈ ಹಣವನ್ನಾತ ಬುದ್ಧಿವಂತಿಕೆಯಿಂದ ವಿನಿಯೋಗಿಸಿ ಅಪರಿಮಿತ ಲಾಭಗಳಿಸಿ ಸಾಹಿತಿಗಳೂ ವ್ಯವಹಾರ ಚತುರರಾಗಿರಬಲ್ಲರೆಂದು ತೋರಿಸಿದನು.

ಈ ನಾಟಕಗಳು ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದವು ಮತ್ತು ಅಧಿಕಾರಿಗಳನ್ನೂ ಪಾದ್ರಿಗಳನ್ನೂ ಕೋಪಾನಲದಲ್ಲಿ ಬೇಯಿಸಿದವು. "ಮೂಢ ಜನ ಬಗೆದಂತೆ ನಮ್ಮ ಪಾದ್ರಿಗಳಿಲ್ಲ। ನಮ್ಮ ಮೌಢ್ಯವೆ ಅವರ ಪಾಂಡಿತ್ಯವೆಲ್ಲ!" ಇಂಥ ಪಂಕ್ತಿಗಳು ಯಾವ ಪಾದ್ರಿಯನ್ನು ಕೆರಳಿಸವು? ವಾಲ್ಟೇರ್ ಜನರನ್ನು ನೀತಿಭ್ರಷ್ಟತೆಗೊಯ್ಯುತ್ತಾನೆಂದು ಅಧಿಕಾರಿಗಳು ಅವನ ನಾಟಕಗಳ ಮಧ್ಯೆ ಪೋಲೀಸರನ್ನು ಕಳಿಸಿ ಅವುಗಳನ್ನು ನಿಲ್ಲಿಸುತ್ತಿದ್ದರು. ಅದರಿಂದ ಅವನ ಜನಪ್ರಿಯತೆ ಮತ್ತಷ್ಟು ಹೆಚ್ಚಿತು. ಕೊನೆಗೊಂದು ದಿನ ವಾಲ್ಟೇರನನ್ನು ಒಂದು ಸಂತೋಷಕೂಟದಲ್ಲಿ ಹೀನಾಯಿಸಲು ಯತ್ನಿಸಿ ಅವನ ವಾಗ್ಬಾಣಕ್ಕೆ ತುತ್ತಾಗಿ ಅವಮಾನಗೊಂಡ ಕೆವೆಲಿಯರ್ ಡಿ ರೋಹನ್ ಎಂಬ ಸರದಾರ ಅವನನ್ನು ರಾತ್ರಿ ತನ್ನ ಆಳುಗಳಿಂದ ಹೊಡೆಸಿದನು. ಮರುದಿನ ವಾಲ್ಟೇರ್ ನೇರವಾಗಿ ರೋಹನ್ನನನ್ನು ದ್ವಂದ್ವಯುದ್ಧಕ್ಕೆ ಆಹ್ವಾನಿಸಿದನು. ಆತ ಯುದ್ಧ ಮಾಡುವ ಬದಲು ತನ್ನ ಮಿತ್ರ ಪೋಲೀಸ್ ಮಂತ್ರಿಗೆ ಹೇಳಿ ವಾಲ್ಟೇರನನ್ನು ಎರಡನೇ ಬಾರಿ ಬ್ಯಾಸ್ಟಿಲ್ ಸೆರೆಮನೆಗಟ್ಟಿದನು.

ದೇಶ ಬಿಟ್ಟು ಹೋಗಬೇಕೆಂಬ ಕರಾರಿನಿಂದ ಬಿಡುಗಡೆ ಹೊಂದಿದ ವಾಲ್ಟೇರನಿಗೆ ಈಗ ಇಂಗ್ಲಂಡ್ ಆಶ್ರಯವಾಯಿತು. ಇಂಗ್ಲಂಡಿನಲ್ಲಿದ್ದ ವೈಯಕ್ತಿಕ ಸ್ವಾತಂತ್ರ್ಯವನ್ನು ನೋಡಿ ವಾಲ್ಟೇರ್ ಮುಗ್ಧನಾದ. ಇಲ್ಲಿ ಸ್ವಿಫ್ಟನಂಥ ಕಟು ಲೇಖನಿಯ ಸಾಹಿತಿಗಳು ನಿರ್ಭಯವಾಗಿ ಬೇಕಾದುದನ್ನು ಬರೆಯುತ್ತಿದ್ದರು. ಇಂಗ್ಲಿಷ್ ಸಾಹಿತ್ಯ, ಇಂಗ್ಲೀಷ್ ವಿಜ್ಞಾನ ಎಲ್ಲವೂ ವಾಲ್ಟೇರನನ್ನು ಮೆಚ್ಚಿಸಿದವು. ತನ್ನೀ ಮೆಚ್ಚಿಕೆಯನ್ನು ಅವನು "ಇಂಗ್ಲೀಷರನ್ನು ಕುರಿತು ಪತ್ರಗಳು" ಎಂಬ ಗ್ರಂಥದಲ್ಲಿ ವ್ಯಕ್ತಪಡಿಸಿ ಫ್ರಾನ್ಸಿನಲ್ಲೂ ಅಂಥದೇ ರಾಜ್ಯಪದ್ಧತಿಯನ್ನು ಪ್ರತಿಪಾದಿಸಿದನು. ಇದನ್ನು ಫ್ರಾನ್ಸಿನಲ್ಲಿ ಮುದ್ರಿಸುವ ಧೈರ್ಯ ಯಾರಿಗೂ ಇಲ್ಲದಿದ್ದರೂ ಅದರ ಹಸ್ತಪ್ರತಿಗಳ ಚಲಾವಣೆಯಿಂದಲೇ ಆ ದೇಶದಲ್ಲೊಂದು ವಿಚಾರಕ್ರಾಂತಿಯಾಯಿತು.

ಮೂರು ವರ್ಷಗಳ ನಂತರ, ೧೭೨೯ ರಲ್ಲಿ ವಾಲ್ಟೇರನಿಗೆ ಮರಳಲು ಅನುಮತಿ ದೊರೆಯಿತು. ಈಗಾತ ತುಂಬ ಶ್ರೀಮಂತನಾಗಿದ್ದ. ಅವನು ಲೆಕ್ಕವಿಲ್ಲದಷ್ಟು ಹಣಗಳಿಸಿದನು ಮತ್ತು ಹೆಚ್ಚು ಹೆಚ್ಚು ಔದಾರ್ಯದಿಂದ ವೆಚ್ಚ ಮಾಡಿದನು. ವಾಲ್ಟೇರ್ ಹೀಗೆ ಐದುವರ್ಷಕಾಲ ಸುಖವಿನೋದಗಳಲ್ಲಿ ಕಳೆದಿದ್ದನಷ್ಟೇ, ಯಾರೋ ಒಬ್ಬ ಪ್ರಕಾಶಕ ಅವನ "ಇಂಗ್ಲೀಷರನ್ನು ಕುರಿತು ಪತ್ರಗಳು" ಅನ್ನು ಅವನಿಗರಿಯದಂತೆ ಪ್ರಕಟಿಸಿದನು. ಕೂಡಲೆ ಸರಕಾರ ಅದನ್ನು "ಅನೀತಿಕರ, ಅಧರ್ಮಕರ" ಗ್ರಂಥವೆಂದು ಬಹಿರಂಗವಾಗಿ ಸುಡಲಾಜ್ಞಾಪಿಸಿತು. ಇನ್ನು ಪ್ಯಾರೀಸಿನಲ್ಲಿ ನಿಂತರೆ ಉಳಿಗಾಲವಿಲ್ಲೆಂದು ವಾಲ್ಟೇರ್ ಬುದ್ಧಿವಂತರ ಹಾಗೆ ಕಾಲಿಗೆ ಬುದ್ಧಿ ಹೇಳಿದನು.

ಸಂಗಡಲೇ ಇನ್ನೊಬ್ಬನ ಹೆಂಡತಿಯನ್ನು ಓಡಿಸಿಕೊಂಡು ಹೋದನು. ಅವಳ ಹೆಸರು ಮಾರ್ಕಿಸ್ ಡು ಚಟೆಲೆಟ್ ಎಂದು. ಅವಳ ಗಂಡ ಮುಪ್ಪಿನ ಸೈನ್ಯಾಧಿಕಾರಿ. ಅವಳೋ ಸ್ವತಃ ಬುದ್ಧಿಶಾಲಿ ಮತ್ತು ವಿದ್ವಾಂಸಳು. ಅವಳನ್ನು ವಾಲ್ಟೇರ್ ತನ್ನ ಅನುಪಮ ಶೈಲಿಯಲ್ಲಿ "ಹೆಣ್ಣಾಗಿ ಹುಟ್ಟುವ ತಪ್ಪು ಮಾಡಿದ ಮಹಾಪುರುಷ" ಎಂದು ಪ್ರಶಂಸಿಸಿದ್ದ. ಇಪ್ಪತ್ತೆಂಟು ವಯಸ್ಸಿನ ತರುಣಿ ಅವಳು ಆಗಲೆ ನಲು-

ವತ್ತು ದಾಟಿದ್ದ ವಾಲ್ಟೇರನಿಗೆ ಮರುಳಾಗಿದ್ದರೆ ಅದು ಅವನ ಪ್ರತಿಭೆಯ ದೆಸೆಯಿಂದ. ಸಿರೇ ಎಂಬಲ್ಲಿರುವ ಅರಮನೆಯಲ್ಲಿ ಈ ಪ್ರೇಮಿಗಳು ಅತ್ಯಂತ ಕಠಿನವಾದ ವೈಜ್ಞಾನಿಕ ಗ್ರಂಥಗಳನ್ನು ಜೊತೆಯಾಗಿ ಅಭ್ಯಸಿಸಿದರು. ವಾಲ್ಟೇರ್ ಅಲ್ಲಿದ್ದಾಗ ಫ್ರಾನ್ಸಿನ ಬೌದ್ಧಿಕ ಕೇಂದ್ರ ಪ್ಯಾರೀಸಿನಿಂದ ಸಿರೇಗೆ ವರ್ಗಾಯಿಸಲ್ಪಟ್ಟಿತೆನ್ನಬಹುದು. ಶಿಷ್ಯರೂ ಪ್ರಶಂಸಕರೂ ಸಾಹಿತಿಗಳೂ ವಿಚಾರಿಗಳೂ ಮಹಾಪುರುಷನ ಸಲುವಾಗಿ ಅಲ್ಲಿಗೇ ಬರುತ್ತಿದ್ದರು. ವಾಲ್ಟೇರನ ಔದಾರ್ಯ ಕಟ್ಟೆಯೊಡೆದು ಹರಿಯುತ್ತಿತ್ತು.

ಹದಿನಾರು ವರ್ಷಗಳ ಈ ಅನಧಿಕೃತ ಪ್ರೇಮದ ಅವಧಿಯೇ ವಾಲ್ಟೇರನ ಜೀವನದ ಅತ್ಯಂತ ಸಫಲ ಅವಧಿಯೂ ಆಗಿತ್ತು. ಆಗಲೇ ಕ್ಯಾಂಡಿಡೆ, ಮೈಕ್ರೊಮೆಗಾಸ್ ಮೊದಲಾದ ಮನೋರಂಜಕವಾದ ಕಾದಂಬರಿಗಳ ಮೂಲಕ ಅವನು ತನ್ನ ತತ್ವಜ್ಞಾನವನ್ನು ನಗೆಮಾತುಗಳಿಂದ ಪ್ರಚಾರ ಪಡಿಸಿದ್ದು. ಅಸಂಖ್ಯ ವಿಚಾರ ಪ್ರಚೋದಕ ಲೇಖಕಗಳನ್ನು ಬರೆದದ್ದು. ಅವನ ಪ್ರೇಯಸಿ ಅವನಿಗೆ ಬಂದ ವಿಪತ್ತುಗಳನ್ನು ನಿವಾರಿಸಲು, ಅವನ ಹಗೆಗಾರರನ್ನು ಗೆಳೆಯರಾಗಿ ಪರಿವರ್ತಿಸಲು ನೆರವಾದಳು. ಸರದಾರರ ಮನೆಗಳಲ್ಲಿ ಅವನಿಗೆ ಗೌರವದ ಸ್ಥಳಗಳನ್ನು ದೊರಕಿಸಿಕೊಟ್ಟಳು. ಅವನೋ ಅವಳನ್ನೇ ನೆಚ್ಚಿ ಇತರ ಸ್ತ್ರೀಯರನ್ನು ನಿಷ್ಪಾಪ ಭಾವದಿಂದ ನೋಡಲು ಕಲಿತ.

ಅವನಿಗೀಗ ಯುರೋಪಿನಲ್ಲೆಲ್ಲ ಪ್ರಸಿದ್ಧಿ ದೊರೆತಿತ್ತು. ಲೆಕ್ಕವಿಲ್ಲದಷ್ಟು ಜನ ಅವನೊಡನೆ ಖಾಸಗಿ ಕಷ್ಟಗಳಿಂದ ಹಿಡಿದು ಧಾರ್ಮಿಕ ಸಮಸ್ಯೆಗಳ ವರೆಗೆ, ಮಿಲಿಟರಿ ವಿಚಾರಗಳಿಂದಾರಂಭಿಸಿ ವಿಜ್ಞಾನ ಸಮಸ್ಯೆಗಳ ವರೆಗೆ ಸಕಲ ವಿಚಾರಗಳ ಬಗ್ಗೆ ಪತ್ರವ್ಯವಹಾರ ನಡೆಸಿದ್ದರು. ಜೀವಮಾನದಲ್ಲಾತ ಬರೆದ ೧೦,೦೦೦ ಪತ್ರಗಳನ್ನು ಪಡೆದವರಲ್ಲಿ ರಾಜರು, ರಾಜಕುಮಾರರು, ಸರದಾರರು ಇದ್ದರು. ರಶಿಯದ ಚಕ್ರವರ್ತಿನಿ ಕೆಥರೀನ್, ಡೆನ್ಮಾರ್ಕಿನ ರಾಜ ಏಳನೇ ಕ್ರಿಶ್ಚನ್, ಸ್ವೀಡನ್ನಿನ ಮೂರನೇ ಗುಸ್ತೇವ್, ಪ್ರಶಿಯದ ಯುವರಾಜ ಫ್ರೆಡ್ರಿಕ್ ಅವನ ಭಕ್ತವೃಂದದಲ್ಲಿ ಸೇರಿದ್ದರು. ಅವನ ವಿಚಾರಗಳಿಂದ ಪ್ರಭಾವಿತರಾಗಿ ಅವರು ತಮ್ಮ ರಾಜ್ಯಗಳಲ್ಲಿ ಸುಧಾರಣೆಗಳನ್ನು ಮಾಡುವುದಾಗಿ ಬರೆಯುತ್ತಿದ್ದರು. ಪ್ರಶಿಯದ ರಾಜಕುಮಾರ ಫ್ರೆಡ್ರಿಕ್ ನಂತೂ ತನ್ನಲ್ಲಿಗೆ ವಾಲ್ಟೇರನನ್ನು ಕರೆಸಿಕೊಳ್ಳಲಾರದೆ ತಾನೇ ಅವನ ದರ್ಶನಕ್ಕಾಗಿ ವೇಷ ಮರೆಸಿಕೊಂಡು ಬಂದು ಹೋದನು.

ಆ ಮೇಲೆ ಅಕ್ರಮ ಪ್ರೇಮದ ಫಲ ಅವನ ಮೇಲೆ ಭೀಕರ ರೀತಿಯಲ್ಲಿ ಎರಗಿತು. ಅವನ ಪ್ರೇಯಸಿಯನ್ನು ಇನ್ನೊಬ್ಬ ತರುಣ ಪ್ರೇಮಿಕ ಆಕರ್ಷಿಸಿದ. ಸೇಂಟ್-ಲ್ಯಾಂಬರ್ಟನ ಬಾಹುಪಾಶದಲ್ಲಿರುವ ಅವಳನ್ನು ಒಂದು ದಿನ ವಾಲ್ಟೇರ್ ಕಣ್ಣಾರೆ ಕಂಡ. ಕ್ರೋಧೋನ್ಮಾದದಿಂದ ಕೂಗಾಡಿದ. ಅನಂತರ ತತ್ವಜ್ಞಾನವನ್ನು ಜ್ಞಾಪಿಸಿಕೊಂಡು ಅವಳನ್ನು ಕ್ಷಮಿಸಿದ. ಆದರೆ ತನ್ನ ಹೊಸ ಪ್ರೇಮಿಕನಿಂದ ಗರ್ಭಧಾರಣೆ ಮಾಡಿದ್ದ ಅವಳು ಹೆರಿಗೆಯ ಬೇನೆಯಲ್ಲಿ ಇಹಲೋಕವನ್ನು ತ್ಯಜಿಸಿದಳು. ವಾಲ್ಟೇರ್ ಪ್ರಥಮ ಬಾರಿ ನಿಜವಾದ ದುಃಖವೇನೆಂಬುದನ್ನು ಕಂಡ.

ಪ್ರೇಯಸಿಯನ್ನು ಕಳೆದುಕೊಂಡು, ಪೋಲೀಸರಿಂದಲೂ ಅಧಿಕಾರಿಗಳಿಂದಲೂ ಸದಾ ಪೀಡಿತನಾಗಿ ಊರಿಂದೂರಿಗೆ ತಲೆ ಮರೆಸಿಕೊಂಡು ಓಡಾಡಿ ಸಾಕಾಗಿ, ವಾಲ್ಟೇರ್ ಮಾತೃಭೂಮಿಯನ್ನು ತ್ಯಜಿಸಲು ನಿರ್ಧರಿಸಿದನು. ಪ್ರಶಿಯದ ರಾಜ ಫ್ರೆಡ್ರಿಕ್ ತನ್ನ "ಗುರು"ವನ್ನು ಆದರದಿಂದ ಬರಮಾಡಿಕೊಂಡನು. ಈತನ ಮೇಲೆ ವಾಲ್ಟೇರ್‌ಗೆ ಆದರವಿತ್ತು. ಆತ ಯುವರಾಜನಿದ್ದಾಗ ವಾಲ್ಟೇರನ ವಿಚಾರಗಳನ್ನು ಜಾರಿಗೆ ತರುವುದಾಗಿ ಮಾತು ಕೊಟ್ಟಿದ್ದ. ಆದರೆ ದೂರದ ಬೆಟ್ಟ ನುಣ್ಣಗೆ ಎಂದು ತಿಳಿಯಲು ವಾಲ್ಟೇರನಿಗೆ ಬಹಳ ಕಾಲ ಹಿಡಿಯಲಿಲ್ಲ. ಅವನು ಪ್ರಶಿಯದ ಹಿಂದಿನ ರಾಜರಂತೆ ನಿರಂಕುಶ, ಯುದ್ಧಪ್ರಿಯ ಎಂದರಿತ ಮೇಲೆ ವಾಲ್ಟೇರನ ನಾಲಗೆ ಅವನ

ಮೇಲೂ ತನ್ನ "ನಗೆಯಿಂದ ಕೊಲ್ಲುವ" ಬಾಣಗಳನ್ನು ಬಿಡತೊಡಗಿತು. ಫ್ರೆಡ್ರಿಕ್ ಕೋಪಗೊಂಡು ಪ್ರತೀಕಾರಕ್ಕಣಿಯಾದ. ವಾಲ್ಟೇರನಿಗೆ ಮತ್ತೆ ಪಲಾಯನವೇ ಗತಿಯಾಯಿತು.

ಅವನು ಸ್ವಿಜರ್ಲಂಡಿಗೆ ಓಡಿದ. ಸ್ವತಂತ್ರ ಗಣರಾಜ್ಯವಾದ ಈ ದೇಶದಲ್ಲಿ ನಿಶ್ಚಿಂತೆಯಿಂದಿರಬಹುದೆಂಬ ನಿರೀಕ್ಷೆ ಸತ್ಯವಾಗಲಿಲ್ಲ. ಕೆಥೋಲಿಕ್ ಪಾದ್ರಿಗಳ ಬದಲು ಪ್ರೊಟೆಸ್ಟೆಂಟ್ ಪಾಸ್ತರರು ಅವನ ವಿರುದ್ಧ ಪಾಖಂಡನೆಂಬ ಪ್ರಚಾರ ಪ್ರಾರಂಭಿಸಿದರು. ಎಲ್ಲ ಬಗೆಯ ಅಂಧಶ್ರದ್ಧೆ, ಎಲ್ಲ ಬಗೆಯ ದಬ್ಬಾಳಿಕೆಗಳ ಮೇಲೂ ಯುದ್ಧ ಸಾರಿದ್ದ ವಾಲ್ಟೇರನಿಗೆ ಯಾವ ದೇಶವೂ ಸುರಕ್ಷಿತವಾಗಿರಲಿಲ್ಲ. ಅದಕ್ಕಾಗಿ ೫೯ ವಯಸ್ಸಿನ ಈ ವೃದ್ಧ ತತ್ವಜ್ಞಾನಿ ಸ್ವಿಜರ್ಲಂಡ್-ಫ್ರೆಂಚ್ ಗಡಿಭಾಗದಲ್ಲೊಂದು ಮನೆ ಕೊಂಡ. ವಿಪತ್ತು ಬಂದರೆ ಕೆಲವೇ ನಿಮಿಷಗಳಲ್ಲಿ ಗಡಿಯಾಚೆ ಆಶ್ರಯ ಪಡೆಯಬಹುದಲ್ಲ ಎಂದು.

ಫರ್ನಿ ಎಂಬಲ್ಲಿನ ಈ ಗಡಿ ದುರ್ಗದಿಂದ ವಾಲ್ಟೇರ್ ತನ್ನ ಯುದ್ಧವನ್ನು ಮುಂದೆ ಸಾಗಿಸಿದ. ಅವನು ಎಂದಿಗಿಂತಲೂ ಉದಾರಿಯಾಗಿ ಬಂದ ಮಿತ್ರರಿಗೆಲ್ಲ ಆತಿಥ್ಯ ಮಾಡಿದ. ಯಾರು ಮೂರು ದಿನ ನಿಂತರು, ಯಾರು ಮೂರು ತಿಂಗಳು. "ದೇವಾ, ನನ್ನ ಮಿತ್ರರಿಂದ ನನ್ನನ್ನು ಕಾಪಾಡು. ನನ್ನ ಶತ್ರುಗಳನ್ನು ನಾನೇ ನೋಡಿಕೊಳ್ಳುವೆ" ಎಂದು ತಮಾಷೆಯಾಗಿ ಹೇಳುವಷ್ಟು ಅವನ ಸುತ್ತ ಭಕ್ತಗಣ ಸೇರಿತು.

ತನ್ನ ಮನೆಯ ಸುತ್ತ ಆತ ಒಳ್ಳೇ ತೋಟವನ್ನು ನಿರ್ಮಿಸಿದ. ಅದರಲ್ಲಿ ಹಣ್ಣು ತರಕಾರಿಗಳು ಲಾಭದಾಯಕವಾಗಿ ಉತ್ಪತ್ತಿಯಾಗುತ್ತಿದ್ದವು. ಸರಕಾರಗಳ ಕ್ರೋಧದಿಂದ ಪೀಡಿತರಾಗಿ ಆಶ್ರಯ ಬೇಡಿದವರಿಗೆ ಬಿಡಾರಗಳನ್ನು ಕಟ್ಟಿಸಿಕೊಟ್ಟ. ಬಡ ನಿರುದ್ಯೋಗಿಗಳಿಗಾಗಿ ಮನೆ ಕೈಗಾರಿಕೆಗಳನ್ನು ಸ್ಥಾಪಿಸಿ ಪ್ರೋತ್ಸಾಹವಿತ್ತ.

ಆದರೆ ಸಮಸ್ತ ಸೌಭಾಗ್ಯವಿದ್ದರೂ ಅವನಿಗೆ ಶಾಂತಿಯಿರಲಿಲ್ಲ. ಅಜ್ಞಾನ, ಅಂಧಶ್ರದ್ಧೆ, ದಬ್ಬಾಳಿಕೆಗಳಿದ್ದಷ್ಟು ಕಾಲ ಶಾಂತಿ ಅವನಿಗೆಲ್ಲಿ? ಅವನ ಜೀವಮಾನದ ಅತಿ ಉದಾತ್ತವಾದ ಹೋರಾಟ ೧೭೬೨ ರಲ್ಲಿ, ಅವನ ೬೬ ನೇ ವಯಸ್ಸಿನಲ್ಲಿ ಪ್ರಾರಂಭವಾಯಿತು. ಫ್ರಾನ್ಸಿನ ಟಾಲೋಸ್ ಎಂಬಲ್ಲಿ ಕೆಥೋಲಿಕ ಧರ್ಮಾಂಧರು ೪,೦೦೦ ಜನ 'ಪಾಖಂಡ'ರನ್ನು ಕೊಂದು ಪುಣ್ಯ ಸಂಪಾದಿಸಿದರು. ಈ ಸಮಯದಲ್ಲಿ ಒಬ್ಬ ಪ್ರೊಟೆಸ್ಟೆಂಟ್ ತರುಣ ಆತ್ಮಹತ್ಯೆ ಮಾಡಿಕೊಂಡಿದ್ದ. ಅವನು ಕೆಥೋಲಿಕ್ ಪಂಥದಲ್ಲಿ ಆಸಕ್ತಿ ತೋರಿದ್ದರಿಂದ ಅವನನ್ನು ಅವನ ವೃದ್ಧ ತಂದೆ ಜೀನ್ ಕಲಾಸನೇ ಕೊಂದಿರಬೇಕೆಂದು ಕೆಥೋಲಿಕ ಧರ್ಮಾಂಧರು ಸಂದೇಹ ತಾಳಿದರು. ಅವನನ್ನು ಹಿಡಿದು ಚಿತ್ರಹಿಂಸೆಗೊಳಪಡಿಸಿ ಕೊನೆಗೆ ವಿಚಾರಣೆಯ ನಾಟಕ ಹೂಡಿ ಗಲ್ಲಿಗೇರಿಸಿದರು.

ಇದನ್ನು ಕೇಳಿ ವಾಲ್ಟೇರನ ಮೈ ಉರಿಯಿತು. ಅವನ ಲೇಖನಿ ಬೆಂಕಿಯನ್ನೇ ಕಾರಿತು. ಮೂರು ವರ್ಷ ಕಾಲ ಅವನು ನಿದ್ದೆ ಕಾಣಲಿಲ್ಲ, ನಗಲಿಲ್ಲ. ಇಂಥ ಅನ್ಯಾಯವಾಗುತ್ತಿರುವಾಗ ನಗುವುದು ಪಾಪ ಎಂದಾತ ಘೋಷಿಸಿದ. ಕ್ರಿಮಿನಲ್ ನ್ಯಾಯದಾನದಲ್ಲಿ ನಡೆಯುವ ಒಳಸಂಚು, ನ್ಯಾಯಾಧೀಶರ ಪಕ್ಷಪಾತ, ವಕೀಲರ ದುರ್ವ್ಯಾಪಾರ, ಕಾಯದೆಗಳ ಸಂದಿಗ್ಧತೆ ಇವೆಲ್ಲವುಗಳ ಮೇಲೆ ಅವನು ಬರೆದ ಲೇಖಗಳು ಎಷ್ಟು ಮರ್ಮಾಂತಿಕವಾಗಿದ್ದವೆಂದರೆ ಇಡೀ ಯುರೋಪು ಎದ್ದು ಕುಳಿತಿತು. ಜನಾಭಿಪ್ರಾಯವನ್ನು ಕಡೆಗಣಿಸಲಾರದೆ ರಾಜನು ಕಲಾಸ್ ಪ್ರಕರಣದ ಪುನರ್ವಿಚಾರಣೆಗ ಆಜ್ಞೆ ಹೊರಡಿಸಬೇಕಾಯಿತು. ಅದರಲ್ಲಿ ಕಲಾಸ್ ಮಾತ್ರವಲ್ಲ ಇತರ ಅನೇಕರೂ ನಿರಪರಾಧಿಗಳೆಂದು ಸಿದ್ಧವಾಯಿತು. ೮೦೦ ವರ್ಷಗಳಿಂದ ಇದ್ದ ಕ್ರಿಮಿನಲ್ ಕಾಯದೆಗಳ ಪುನರ್ವಿಮರ್ಶೆಯಾಗಬೇಕೆಂದು ಆಣತಿ ಹೊರಟಿತು. ಒಬ್ಬ ಮುದುಕನ ಕೋಪ ಇಷ್ಟೆಲ್ಲವನ್ನು ಸಾಧಿಸಿತು.

ಇದರ ನಂತರ ಅನ್ಯಾಯಕ್ಕೊಳಗಾದ ಜನರು

ತಂಡತಂಡವಾಗಿ ವಾಲ್ಟೇರನ ಸಹಾಯವನ್ನು ಯಾಚಿಸತೊಡಗಿದರು. ವಾಲ್ಟೇರ್ ತನುಮನಧನಗಳಿಂದ ಅವರಿಗೆ ನೆರವಾದ. ನ್ಯಾಯದ ಹೆಸರಲ್ಲಿ ನಡೆಯುವ ರಾಕ್ಷಸೀ ಕೃತ್ಯಗಳನ್ನು ಆತ ಎಡೆಬಿಡದೆ ಬೆಳಕಿಗೆ ತಂದ. ವಿಶೇಷವಾಗಿ ಧಾರ್ಮಿಕ ನಾಯಕರ ಕುಕೃತ್ಯಗಳ ಮೇಲೆ ಅವನ ಆಕ್ಷೇಪವಿತ್ತು. ಧರ್ಮಾಧಿಕಾರಿಗಳು ಬೇಕಾದವರ ಮೇಲೆ ಪಾಖಂಡತನದ ಆರೋಪ ಹೊರಿಸಿ, ಅವರನ್ನು ಚಿತ್ರಹಿಂಸೆಗೊಳಪಡಿಸಿ, ವಿಚಾರಿಸಿ, ಗಲ್ಲಿಗೇರಿಸಬಲ್ಲವರಾಗಿದ್ದರು. ಅವರ ವಿರುದ್ಧ ವಾಲ್ಟೇರ್ ಸರಳ ಧಾರ್ಮಿಕ ಘೋಷಣೆಯನ್ನು ಪ್ರಚಾರಪಡಿಸಿದ. "ಪಾಪ ಬೇರೆ, ಕಾಯದೆಭಂಗ ಬೇರೆ. ಪಾಪಿಗಳನ್ನು ದೇವರು ಶಿಕ್ಷಿಸಲಿ. ಕಾಯದೆ ಮುರಿದವರನ್ನು ಮಾತ್ರ ರಾಜದಂಡ ದಂಡಿಸಲಿ. ಧರ್ಮಾಧಿಕಾರಿಗಳು ರಾಜಶಕ್ತಿಯಿಂದ ದೂರವಿರಲಿ! ಅವರು ಆತ್ಮದ ವಿಚಾರವನ್ನು ಮರೆತು ಈ ಜಂಜಾಟದಲ್ಲೇಕೆ ಕೈಹಾಕುತ್ತಾರೆ?"

ವಾಲ್ಟೇರ್ ನಿರೀಶ್ವರವಾದಿಯಲ್ಲ. ವಿಶ್ವದ ಅದ್ಭುತವನ್ನು ನೋಡಿದರೆ ಅದರ ಕರ್ತನೊಬ್ಬ ನಿರಲೇಬೇಕೆಂದು ವ್ಯಕ್ತವಾಗುತ್ತದೆಂದು ಅವನು ಹೇಳಿದ್ದಾನೆ. ಆದರೆ ಆ ಪರಮೇಶ್ವರನ ಕಾಯದೆಗಳು ಶಾಶ್ವತವೂ ಅನುಲ್ಲಂಘ್ಯವೂ ಆಗಿವೆ. ಆದ್ದರಿಂದಾತ ನಮ್ಮ ಪ್ರಾರ್ಥನೆಗೆ ಮರುಳಾಗಿ ಇಷ್ಟಸಿದ್ಧಿ ಕೊಡುತ್ತಾನೆಂದಾಗಲಿ, ಪಾಪಿಗಳನ್ನು ಕ್ಷಮಿಸುವನೆಂದಾಗಲಿ ತಿಳಿಯುವುದು ಭ್ರಮೆ— ಎಂದಷ್ಟೇ ವಾಲ್ಟೇರನ ವಾದ. ಧರ್ಮಗುರುಗಳಿಗೆ ಇದು ರುಚಿಸಲಿಲ್ಲ. ತಮ್ಮ ಮಧ್ಯಸ್ತಿಕೆಯಿಂದ ಪಾಪವು ಪುಣ್ಯವಾಗಬಲ್ಲದು, ಪುಣ್ಯ ಪಾಪವಾದೀತು ಎಂದಲ್ಲವೇ ಅವರ ನಿಯಮ? ವಾಲ್ಟೇರ್ ಈ ಕಲ್ಪನೆಯನ್ನೇ ಜೀವಮಾನವೆಲ್ಲ ತಿರಸ್ಕಾರಪೂರ್ವಕವಾಗಿ ಗೇಲಿ ಮಾಡಿದ್ದ, ತನ್ನ ಜೀವಮಾನ ಮುಗಿಯುವುದರೊಳಗಾಗಿ ಧರ್ಮಗುರುಗಳನ್ನು ಮೂರ್ಖಶಿರೋಮಣಿಗಳೆಂದು ತೋರಿಸಿಕೊಡುವುದರಲ್ಲಾತ ಯಶಸ್ವಿಯಾಗಿದ್ದ.

೧೭೭೭ ರಲ್ಲಿ ಕೊನೆಗೆ ವಾಲ್ಟೇರನಿಗೆ ತನ್ನ ಪ್ಯಾರೀಸನ್ನು ಕಾಣಬೇಕೆಂಬ ಅದಮ್ಯ ಆಕಾಂಕ್ಷೆ ಹುಟ್ಟಿತು. ಪ್ಯಾರಿಸ್ ಅವನನ್ನು ಎರಡೂ ಕೈಗಳಿಂದ ಬರಮಾಡಿಕೊಂಡಿತು. ಈ ವರೆಗೆ ಅವನನ್ನು ಹತ್ತಿರ ಬರಗೊಡದಿದ್ದ ರಾಷ್ಟ್ರೀಯ ಅಕಾದಮಿ ಅವನಿಗೆ ಗೌರವ ಪದವಿ ಸಲ್ಲಿಸಿತು. ಅವನ ಹೊಸ ನಾಟಕವನ್ನು ನೋಡಲು ಕಿಕ್ಕಿರಿದ ಪ್ರೇಕ್ಷಕವೃಂದದ ಚಪ್ಪಾಳೆಗಳ ನಡುವೆ ನಾಟಕದ ಮಾತುಗಳು ಯಾರಿಗೂ ಕೇಳಿಸಲಿಲ್ಲ. ಇರುಳೆಲ್ಲ ಕುಳಿತು ವಾಲ್ಟೇರ್ ಈ ಗೌರವವನು ಸ್ವೀಕರಿಸಿದ. ಆಯಾಸದಿಂದ ಜರ್ಜರಿತನಾಗಿ ಹೋಗಿ ಮಲಗಿದ ಅವನು ಮತ್ತೆ ಏಳಲಿಲ್ಲ. ಐದು ತಿಂಗಳು ಹಾಗೆಯೆ ನಡೆದು ೧೭೭೮ ಮೆ ಯಲ್ಲಿ ಕಾಲವಾದ. "ದೇವರನ್ನು ನಂಬಿ, ಮಿತ್ರರನ್ನು ಪ್ರೀತಿಸಿ, ಶತ್ರುಗಳನ್ನು ದ್ವೇಷಿಸದೆ, ಅಂಧಶ್ರದ್ಧೆಯನ್ನು ಧಿಕ್ಕರಿಸಿ ಸಾಯುತ್ತಿದ್ದೇನೆ-" ಎಂಬ ಅವನ ಕೊನೆ ಮಾತನ್ನು ಕಾರ್ಯದರ್ಶಿ ಬರೆದುಕೊಂಡ.

ಧರ್ಮಾಧಿಕಾರಿಗಳು ಚರ್ಚಿನಲ್ಲಿ ಅವನ ದಫನಕ್ಕೊಪ್ಪದ್ದರಿಂದ ಅವನ ಮಿತ್ರರು ಹೆಣವನ್ನು ಗುಟ್ಟಾಗಿ ನಗರದ ಹೊರಗೆ ಸಾಗಿಸಿ ಗೌರವಪೂರ್ವಕ ಹುಗಿದರು. ಹದಿನೈದು ವರ್ಷಗಳ ನಂತರ ೧೭೯೧ ರಲ್ಲಿ ರಾಜ್ಯಕ್ರಾಂತಿಯ ರಕ್ತಯಜ್ಞದ ನಡುವೆ ಲಕ್ಷಗಟ್ಟಳೆ ಜನ ಮೆರವಣಿಗೆಯಿಂದ ವಾಲ್ಟೇರನ ಅವಶೇಷಗಳನ್ನು ಪ್ಯಾರೀಸಿನೊಳಗೆ ತಂದು, ಅವನನ್ನು ಎರಡು ಬಾರಿ ತನ್ನೊಳಗಿಟ್ಟುಕೊಂಡಿದ್ದ, ಈಗ ಕ್ರಾಂತಿಯೋಧರು ನೆಲಸಮ ಮಾಡಿದ್ದ, ಬ್ಯಾಸ್ಟಿಲ್ ಸೆರೆಮನೆಯ ಸ್ಥಾನದಲ್ಲಿ ಪುನರ್ದಫನ ಮಾಡಿದರು. ಅವನ ಸಮಾಧಿಯ ಮೇಲೆ ಮೂರೇ ಶಬ್ದಗಳನ್ನು ಕೆತ್ತಲಾಗಿದೆ:

"ಇಲ್ಲಿ ವಾಲ್ಟೇರ್ ಮಲಗಿದ್ದಾನೆ."

ಇದಕ್ಕಿಂತ ಹೆಚ್ಚಿನ ಪರಿಚಯ ಬೇಕಾಗಿದ್ದಿಲ್ಲ.

*

ನಾನು ಡೆನ್ಮಾರ್ಕ್ ಕಂಡೆ!

ವಿ. ಎನ್. ಕುಲಕರ್ಣಿ

ಟೆಲಿಫೋನ್ ಗಂಟೆಯಿಂದ ಎಚ್ಚರಾದೆ. "ಕ್ಷಮಿಸಿ ಮಿ. ಕುಲಕರ್ಣಿ-ಪಂಡಿತ, ನಾನು ರೇಡಿಯೋ ಸ್ಟೇಶನ್ನಿನಿಂದ ಮಾತಾಡುತ್ತಿದ್ದೇನೆ. ನಮ್ಮ ಒಂದು ಕಾರ್ಯಕ್ರಮಕ್ಕಾಗಿ ನಿಮ್ಮನ್ನು ಭೆಟ್ಟಿಯಾಗಬೇಕಾಗಿದೆ. ಹತ್ತು ಗಂಟೆಗೆ ರೇಡಿಯೋ ಸ್ಟೇಶನ್ನಿಗೆ ಬರಬಲ್ಲಿರಾ? ನಮಸ್ಕಾರ."

ಹ‍ಂ ಎಂದೆ. ಆದರೆ ನಾನು ಬಂದದ್ದು ಈ ರೇಡಿಯೋ ಸ್ಟೇಶನ್ನಿಗೆಂತು ಗೊತ್ತಾಯಿತು? ನಾನು ಕೋಪೆನ್‌ಹೆಗೆನ್‌ಗೆ ಬಂದದ್ದು ನಿನ್ನೆ ಸಾಯಂಕಾಲ ಏಳು ಗಂಟೆಗೆ. ಬಂದು ಹೊಟೆಲಿನಲ್ಲಿ ಬ್ಯಾಗ್ ಇಟ್ಟು ಮಧ್ಯರಾತ್ರಿಯವರೆಗೂ ದೀಪಗಳಿಂದ ಝುಗಝುಗಿಸುವ ನಗರದಲ್ಲಿ ಅಡ್ಡಾಡುತ್ತಿದ್ದೆ. ಮೂರು ನಾಲ್ಕು ಕೆಫೆಗಳು, ನೃತ್ಯಗೃಹಗಳು, ಮನೋರಂಜನೆಯ ಸ್ಥಳಗಳಲ್ಲಿ ಸ್ವಲ್ಪ ಸ್ವಲ್ಪ ಕಾಲವನ್ನು ಕಳೆದೆ. ಆದರೆ ನಾನು ಯಾರು, ಎಲ್ಲಿಯವನು ಎಂಬ ಬಗ್ಗೆ ಎಲ್ಲಿಯೂ ಚಕಾರಶಬ್ದ ಮಾತಾಡಲಿಲ್ಲ. ಹೀಗಿದ್ದೂ ಬೆಳಗಾಗುವುದರಲ್ಲಿ ನನಗೆ ರೇಡಿಯೋದ ಆಮಂತ್ರಣ ಸಿದ್ಧವಾಗಿತ್ತು.



ಕ್ರಿಶ್ಚಿಯನ್ಸ್‌ಬರ್ಗ್ ಕ್ಯಾಸಲ್

ಸ್ನಾನ ಉಪಾಹಾರ ಮುಗಿಸಿಕೊಂಡು ಟ್ಯಾಕ್ಸಿಯಿಂದ ಸರಿಯಾಗಿ ೧೦ ಗಂಟೆಗೆ ರೇಡಿಯೋ ಸ್ಟೇಶನ್ನಿಗೆ ಹೋದೆ. ಬಾಗಿಲಲ್ಲೇ ೨೫ ರ ಆಕರ್ಷಕ ತರುಣಿಯೊಬ್ಬಳು ನನ್ನ ದಾರಿ ಕಾಯುತ್ತಿದ್ದಳು.

"ಕ್ಷಮಿಸಿ ಮಿ. ಕುಲಕರ್ಣಿ—ಪಂಡಿತ. ಥ್ಯಾಂಕ್ಯು ವೇರೀ ಮಚ್" ಮುಂತಾಗಿ ಡ್ಯಾನಿಶ್ ಶಿಷ್ಟಾಚಾರದಂತೆ ಸ್ವಾಗತಿಸುತ್ತ ನನ್ನನ್ನು ಆಕೆ ಸ್ಟುಡಿಯೋದೊಳಗೆ ಕರೆದೊಯ್ದಳು.

"ಈಗ ನಿಮ್ಮ ಭೆಟ್ಟಿಯ ಒಂದು ಚಿಕ್ಕ ತಾಲೀಮು ಮಾಡುವಾ" ಎಂದಳು.

"ನಾನು ಇಲ್ಲಿ ನಿನ್ನೆಯೆ ಬಂದೆ. ಇನ್ನೂ ನಿಮ್ಮ ರಾಜಧಾನಿ ಕೋಪೆನ್‌ಹೆಗೆನನ್ನು ನಾನು ಪೂರ್ತಿ ನೋಡಲೂ ಇಲ್ಲ..."

"ಆಗಲಿ. ಹಾಗಾದರೆ ನಾವು ಬೇರೆ ಎನಾದರೂ ಹರಟುವಾ."

ಭಾರತದ ವಿಕಾಸ ಯೋಜನೆಗಳು ಇತ್ಯಾ

" ಕಿರ್ಲೋಸ್ಕರ " ದಿಂದ



ಫ್ರೆಡ್ರಿಕ್ ಕಿರ್ಕ್ ಚರ್ಚ್

ಸಂಖ್ಯೆ, ಅನ್ನಪ್ರಶ್ನೆ, ರಾಜಕಾರಣ ಮುಂತಾದ ಹಲವಾರು ಸಂಗತಿಗಳ ಬಗ್ಗೆ ಅವಳು ಕೇಳಿದಳು. ಮುನ್ನಾದಿನದ ರಾತ್ರೆ ನಾನು ಕಂಡ ಒಂದು ಮನೋರಂಜಕ ಸಂಗತಿಯನ್ನು ನಾನು ಹೇಳಿದೆ.

"ದೊಡ್ಡ ನೃತ್ಯಗೃಹವೊಂದರಲ್ಲಿ ನನ್ನ ಎದುರಿನ ಟೇಬಲ್ಲಿಗೇ ಒಂದು ಡ್ಯಾನಿಶ್ ಕುಟುಂಬ ಕೂತಿತ್ತು. ಅವರು ಒಂದೂವರೆ ತಾಸಿನಲ್ಲಿ ಮೂರು ಸಲ ಉಂಡರು. ಅವರೊಡನೆ ಒಬ್ಬ ಸುಂದರ ತರುಣಿ ಇದ್ದಳು. ಅವಳೊಂದಿಗೆ ನರ್ತಿಸಬೇಕೆನಿಸಿತು ನನಗೆ..." ನಾನು ಹೇಳತೊಡಗಿದೆ.

"ಮತ್ತೆ ಯಾಕೆ ಕುಣಿಯಲಿಲ್ಲ ?"

"ಆದರೆ ಆಕೆಯ ಊಟವೇ ಮುಗಿಯುತ್ತಿದ್ದಿಲ್ಲ. ಮುಖ್ಯ ಊಟ ಮುಗಿಯಿತು. ಆ ಮೇಲೆ ಬೇರೆ ಬೇರೆ ಪದಾರ್ಥಗಳು ಬಂದವು. ಆ ಮೇಲೆ ಆಯಿಸ್ಕ್ರೀಮ್. ಆ ಮೇಲೆ......ಒಟ್ಟಿನಲ್ಲಿ ಹೇಳುವುದಾದರೆ ನೀವು ತಿನಸುಬಾಕರು."

"ಕಡೆಗೆ ಕುಣಿದಿರೊ ಇಲ್ಲವೊ ?"

"ನಿಜ ಹೇಳಲೋ ? ಅವಳ ಬಕಾಸುರನಂಥ ಊಟ ನೋಡಿ ನನಗೆ ಅವಳ ಬಗ್ಗೆ ಬೇಸರವೆನಿಸಿತು. ಮೇಲಾಗಿ ಇಷ್ಟು ತಿಂದಮೇಲೆ ಹೊಟ್ಟೆ ಭಾರವಾಗದಿರದು. ಜಡವಾದ ಹೊಟ್ಟೆಯಿಂದ ಇವಳು ಕುಣಿಯಬೇಕು ಹೇಗೆ? ಸುಂದರಿಯರು ಇಷ್ಟು ತಿನ್ನುವುದು ಸರಿಯಲ್ಲ ಎಂದು ಮನದಲ್ಲೇ ಮೆಲುಕುಹಾಕುತ್ತ ನಾನು ನೃತ್ಯಗೃಹ ಬಿಟ್ಟೆ."

"ನೀವು ಹಾಗೆ ಮಾಡಬಾರದಿತ್ತು. ಅದು ಅವಳ ನರ್ತನದ ಪೂರ್ವತಯಾರಿಯಾಗಿತ್ತು. ಗಾಡಿಗೆ ಪೆಟ್ರೋಲ್ ಹಾಕುತ್ತಿದ್ದರವರು. ಅಂತೂ ನಾವು ಬಹಳ ತಿನ್ನುತ್ತೇವೆಂದು ನೀವು ಬಹುಬೇಗ ಕಂಡುಹಿಡಿದಿರಿ. ನೀವು ಇನ್ನೊಂದೆರಡು ತಾಸು ಅಲ್ಲಿಯೆ ಕೂತಿದ್ದರೆ ಅವಳು ಮತ್ತೂ ತಿನ್ನುವುದನ್ನು ನೀವು ನೋಡಬಹುದಿತ್ತು. ಬಹುಶಃ ನೀವೂ ಅವರಲ್ಲಿ ಸೇರಬಹುದಿತ್ತು."

ಕೆಲ ಹೊತ್ತಿನಲ್ಲೇ ವಿಶಾಲವಾದ ಹಾಗೂ ಎಲ್ಲ ಬಗೆಯ ಉಪಕರಣಗಳಿಂದೊಡಗೂಡಿದ ಆ ರೇಡಿಯೊ ಡೆನ್ಮಾರ್ಕ್ ಸ್ಟೇಶನನ್ನು ನನಗೆ ತೋರಿಸಿದಳು. ನೋಡುತ್ತ ನಡೆದಾಗಲೇ ನಡುವೆ ಕಾಫಿ ಮತ್ತು ಕೇಕ್ಸ್ ಆಯಿತು. ಆಮೇಲೆ ನಾವು ಪುನಃ ಮೊದಲನೇ ಸ್ಟುಡಿಯೋಕ್ಕೆ ಬಂದೆವು. ನಮ್ಮ ಮಾತುಗಳನ್ನು ಟೇಪ್ ರಿಕಾರ್ಡ ಮಾಡಲಾಗಿತ್ತು. ಅದನ್ನು ನಾವು ಕೇಳಿದೆವು.

"ಪೂರ್ವ ತಯಾರಿ ಇಲ್ಲದೇ ನಡೆದ ಈ ಸಂವಾದಗಳು ಅಂದವಾಗಿವೆ. ಇಂದು ರಾತ್ರಿ ನಾವು ಪ್ರಸಾರ ಮಾಡಲಿದ್ದೇವೆ. ನಿಮ್ಮ ಒಪ್ಪಿಗೆ ಇದೆಯಷ್ಟೇ" ಎಂದಳು.

"ತಿನಸುಬಾಕರು ಅಂತ ನಾನು ಅಂದದ್ದನ್ನು ಕಟ್ ಮಾಡಿರಿ."

"ಅದೇ ಇದರೊಳಗಿನ ಅತಿ ಮನೋಹರ ಭಾಗ. ಅದಿರಲಿ. ರಾತ್ರಿ ಏನಾದರೂ ಕಾರ್ಯಕ್ರಮವಿಟ್ಟುಕೊಂಡಿದ್ದೀರಾ? ಡ್ಯಾನಿಶ್ ಬ್ಯಾಲೆ ನೃತ್ಯ ನೋಡುತ್ತೀರಾ?"

"ಅದನ್ನು ನೋಡಲೇಬೇಕೆಂದು ನಿರ್ಣಯ ಮಾಡಿಕೊಂಡೇ ನಾನಿಲ್ಲಿಗೆ ಬಂದೆ."

ಎಲ್ಲಿಗೋ ಫೋನ್ ಮಾಡಿ, "ನಿಮ್ಮ ಹೊಟೆ

ಲಿಗೆ ಮಧ್ಯಾಹ್ನ ಎರಡು ಬ್ಯಾಲೆ ಟಿಕೀಟು ಬರಬಹುದು" ಎಂದು ಹೇಳಿದಳು.

ಮಾತಾಡುವಾಗ ಬಾಯಲ್ಲಿ ಎರಡೂ ಗಲ್ಲಗಳಲ್ಲಿ ಎರಡು ನೆಲ್ಲಿಕಾಯಿ ಇಟ್ಟುಕೊಂಡಂತೆ ಈ ಜನರ ಉಚ್ಚಾರದ ರೀತಿ. ಆಭಾರಗಳಿಗೆ ಮಿತಿಯೆ ಇಲ್ಲ.

ಸಹಕಾರೀ ಸಂಸ್ಥೆಗಳ ಕಾರ್ಯಪದ್ಧತಿಯನ್ನು ನೋಡುವುದರಲ್ಲಿ ಮಧ್ಯಾಹ್ನ ಕಳೆದೆ. ಹಾಂಬುರ್ಗಿನ ಸಹಕಾರೀ ಸ್ನೇಹಿತರು, "ಶ್ವಾಸೋಚ್ಛ್ವಾಸವನ್ನಷ್ಟು ಬಿಟ್ಟರೆ ಎಲ್ಲವೂ ಸಹಕಾರ್ಯದಿಂದ ನಡೆಯುತ್ತಿದೆ ಇಲ್ಲಿ. ನಾಲ್ಕಾರು ಜನರು ಪ್ರವಾಸಕ್ಕೆ ಹೊರಟರೆ ಅದಕ್ಕಾಗಿಯೂ ಒಂದು ಸಹಕಾರೀ ಸಂಸ್ಥೆ ಸ್ಥಾಪಿಸಲಿಕ್ಕೆ ಸಾಧ್ಯವೊ ಎಂದು ವಿಚಾರಿಸುತ್ತೇವೆ ನಾವು" ಎಂದು ಹೇಳುತ್ತಿದ್ದರು.

ಡೆನ್ಮಾರ್ಕಿನ ಒಟ್ಟು ಜನಸಂಖ್ಯೆ ೪೫,೦೦೦,೦೦. ಅಲ್ಲಿದ್ದ ಹಾಲಿನ ಸಹಕಾರೀ ಸಂಘಗಳ ಸಂಖ್ಯೆ ೧,೪೦೦. ಇವೆಲ್ಲವುಗಳದೂ ಒಂದು ಫೆಡರೇಶನ್. ಈ ಫೆಡರೇಶನ್ನಿನಲ್ಲಿ ತಜ್ಞರ ಕನಿಷ್ಠ ೪೦–೫೦ ಸಮಿತಿಗಳಿವೆ. ಉದಾ: ಅಂಕಿಸಂಖ್ಯೆಗಳ ಸಮಿತಿ, ಹಾಲಿನ ಬೆಲೆಯ ಸಮಿತಿ, ಬೆಣ್ಣೆ ನಿರ್ಯಾತಬೋರ್ಡು, ದನಗಳ ರೋಗ ಚಿಕಿತ್ಸೆಯ ಬೋರ್ಡು, ಗೃಹಿಣಿಯರಿಗೆ ಸಲಹೆ ನೀಡುವ ಶಾಖೆ—ಇತ್ಯಾದಿ ಇತ್ಯಾದಿ.

ಕೋಳಿಗಳ ತತ್ತಿ ಉತ್ಪಾದನೆ ಮತ್ತು ಮಾರಾಟ ಮಾಡುವ ೧,೩೦೦ ಸಹಕಾರಿ ಮಂಡಳಿಗಳಿವೆ. ಮಾಂಸಮಾರಾಟ, ದನಗಳ ಕೊಳ್ಳುವ ಮಾರುವ ಸಂಸ್ಥೆಗಳು, ಮೀನುಗಾರಿಕೆ, ಕಟ್ಟಡ ಕಟ್ಟಿಸುವುದು, ಬ್ಯಾಂಕುಗಳು, ಕಿರಾಣೀ ಸಾಮಾನಿನ ಹೋಲ್‌ಸೇಲ್ ಹಾಗೂ ರಿಟೇಲ್ ಮಾರಾಟದ ಅಂಗಡಿಗಳು–ಮುಂತಾದ ಪ್ರತಿ ಒಂದಕ್ಕೂ ಸಹಸ್ರಾರು ಸಹಕಾರಿ ಸಂಸ್ಥೆಗಳು ಡೆನ್ಮಾರ್ಕಿನಲ್ಲಿವೆ. ಸಹಕಾರಿದವಾಖಾನೆ, ಪ್ರಕಾಶನ ಸಂಸ್ಥೆಗಳು, ವಿಮಾಕಂಪನಿಗಳು ಮುಂತಾದವೂ ಇವೆ. ಇತ್ತೀಚೆಗೆ ಬಟ್ಟೆ ಒಗೆಯಲು ಅಗಸರ ಸಹಕಾರಿ ಸಂಸ್ಥೆಗಳೂ ಆಗಿವೆ. ಎಷ್ಟೆಷ್ಟು ಜನರಿಂದ ಒಂದೊಂದು ಸಹಕಾರಿ ಸಂಸ್ಥೆಯಾಗಿದೆ ಎಂದು ಕೇಳುವುದಕ್ಕಿಂತ ಪ್ರತಿ ಒಬ್ಬನು ಎಷ್ಟೆಷ್ಟು ಸಹಕಾರಿ ಸಂಸ್ಥೆಗಳೊಂದಿಗೆ ಸಂಬಂಧವಿಟ್ಟುಕೊಂಡಿದ್ದಾನೆಂದು ಕೇಳಬೇಕಾಗುತ್ತದೆ.

"ಪ್ರತಿ ಒಬ್ಬನು ಮೂರು-ನಾಲ್ಕು ಸಂಸ್ಥೆಗಳೊಂದಿಗಂತೂ ಸಂಬಂಧವಿಟ್ಟುಕೊಂಡಿರುತ್ತಾನೆ" ಎಂದು ಫೇಡರೇಶನ್ನಿನ ಒಬ್ಬ ಅಧಿಕಾರಿ ಹೇಳಿದರು.

೧೮೮೦ ರಿಂದ ಈ ಸಹಕಾರೀ ಚಳವಳಿಯು ಒಂದು ಅವಶ್ಯಕತೆಯೆಂದು ಪ್ರಾರಂಭವಾಯಿತು. ಕಾಯಿದೆಯಿಂದಲ್ಲ ಎಂಬುದು ಇದರ ವೈಶಿಷ್ಟ್ಯ! ಮೊದಲು ಸಹಕಾರ್ಯ ರೂಢಿಯಲ್ಲಿ ಬಂತು. ಆ ಮೇಲೆ ಅದರ ಕಾಯಿದೆಯಾಯಿತು. ಇಲ್ಲಿ ಕಾಳಿನ ಬೆಲೆ ಇಳಿದದ್ದರಿಂದ ಧಾನ್ಯ ಉತ್ಪಾದನೆಯ ಒಕ್ಕಲುತನವು ಕುಗ್ಗಿತು. ಬೆಣ್ಣೆ, ತತ್ತಿ, ಮಾಂಸ ಇವಕ್ಕೆ ಪರದೇಶದಲ್ಲಿ ಚೆನ್ನಾಗಿ ಬೇಡಿಕೆ ಇತ್ತು. ಅದಕ್ಕೆ ಅವನ್ನೇ ಹೆಚ್ಚು ಉತ್ಪಾದಿಸಬೇಕಾಯಿತು. ಇದು ಒಂಟಿಯಾಗಿ ಸಾಧಿಸಲು ಬರುವಂತಿದ್ದಿಲ್ಲ. ಅದಕ್ಕೆ ಸಹಕಾರ ಬೇಕಾಯಿತು.



ಮೀನು ಹಿಡಿಯುವ ಚಿಕ್ಕ ದೋಣಿಗಳು

೧೮೮೨ ರಿಂದ ೯೦ ರ ವರೆಗೆ ಕೇವಲ ಎಂಟು ವರ್ಷಗಳಲ್ಲೇ ೭೦೦ ಸಹಕಾರಿ ಹಾಲಿನ ಯೋಜನೆಗಳು ಸ್ಥಾಪಿತವಾದವು. ಮುಂದೆ ಉಳಿದ ಕ್ಷೇತ್ರಗಳೂ ಇದೇ ಮಾದರಿಯನ್ನನುಸರಿಸಿದವು.

ಇದೇ ಕಾಲಕ್ಕೆ ಪ್ರೌಢಶಿಕ್ಷಣ ಪ್ರಚಾರವೂ ನಡೆದಿತ್ತು. ಗ್ರುಂಟ್‌ವಿಗ್ ಎಂಬ ಧರ್ಮಗುರುವು ೧೮೩೦ ರಿಂದ ಈ ಚಳವಳಿಯನ್ನು ಪ್ರಾರಂಭಿಸಿದ್ದ. ಡೆನ್ಮಾರ್ಕ್ ಎಂಬ ಶಬ್ದದ ಅರ್ಥ 'ಡೇನ್ ಜನರ ಹೊಲ' ಎಂದು. ಆದ್ದರಿಂದ ಪ್ರತಿ ಡೇನ್ ಒಕ್ಕಲಿಗ ಸುಜ್ಞನಾದ ಹೊರತು ಈ ಚಿಕ್ಕ ರಾಷ್ಟ್ರದ ಬೆಳವಣಿಗೆ ಸಾಧ್ಯವಿಲ್ಲೆಂದು ಅರಿತ ಗ್ರುಂಟ್‌ವಿಗ್. ಆಗಲೆ ಪ್ರೌಢರಾಗಿದ್ದ ಒಕ್ಕಲಿಗರಿಗೆ ಏನನ್ನು ಮತ್ತು ಹೇಗೆ ಕಲಿಸಬೇಕು? ಶಾಲೆ-ಕಾಲೇಜುಗಳಂತೂ ಇವರಿಗೆ ಉಪಯೋಗವಿಲ್ಲದವು. ವಿಚಾರಪೂರ್ವಕ ಯೋಜನೆಯನ್ನು ಸಿದ್ಧಪಡಿಸಿ ಗ್ರುಂಟ್‌ವಿಗ್ ಪ್ರೌಢಶಿಕ್ಷಣ ಶಾಲೆಗಳನ್ನು ಸ್ಥಾಪಿಸಬೇಕೆಂದು ೧೮೪೪ ರಲ್ಲಿ ನಿರ್ಣಯಿಸಿ ಅದರಂತೆ ಮೊದಲನೇ ಶಾಲೆಯನ್ನು ತೆರೆದ.

ಎಲ್ಲ ಪ್ರೌಢರಿಗೂ ಈ ಶಾಲೆಯಲ್ಲಿ ಪ್ರವೇಶವಿದೆ. ಸಾಮಾನ್ಯವಾಗಿ ನಾಲ್ಕೈದು ತಿಂಗಳ ಶಿಕ್ಷಣಕ್ರಮವಿದು. ಆ ಕಾಲಾವಧಿಯಲ್ಲಿ ಶಾಲೆಯಲ್ಲೇ ಉಳಿದುಕೊಳ್ಳುವ ವ್ಯವಸ್ಥೆ ಇರುತ್ತದೆ. ಮೊದಲು ಏನಾದರೂ ಶಿಕ್ಷಣವಾಗಿರಲೇಬೇಕೆಂಬ ಯಾವ ನಿರ್ಬಂಧವೂ ಪ್ರವೇಶಕ್ಕೆ ಅಡ್ಡಿ ಮಾಡುತ್ತಿಲ್ಲ. ಶಾಲೆ ಬಿಟ್ಟಾಗ ಯಾವುದೇ ಬಗೆಯ ಡಿಗ್ರಿ ಅಥವಾ ಡಿಪ್ಲೊಮಾ ಕೊಡಲಾಗುವುದಿಲ್ಲ. ತನ್ನ ಸಾಮಾನ್ಯ ಜ್ಞಾನ ಹಾಗೂ ವ್ಯಕ್ತಿತ್ವದ ಬೆಳವಣಿಗೆ ಮಾಡಿಕೊಳ್ಳಲೆಂದೇ ಈ ಶಾಲೆಗಳಿಗೆ ಹೋಗುವುದಿರುತ್ತದೆ. ತರುಣರು, ವೃದ್ಧರು, ಎಲ್ಲ ವ್ಯವಸಾಯದವರೂ ಈ ಸಂಸ್ಥೆಗಳಿಗೆ ಬರುತ್ತಾರೆ. ಚರ್ಚಿಸುತ್ತಾರೆ. ತಮ್ಮತಮ್ಮ ಕ್ಷೇತ್ರಗಳ ಜ್ಞಾನದ ಕೊಡತಗೊಳ್ಳುವಿಕೆ ನಡೆಯುತ್ತದೆ.

ಇಂಥ ಶಾಲೆಗಳಲ್ಲಿ ಅನೇಕ ಕಡೆಗೆ ಭಾಷಣ ಮಾಡಬೇಕಾದ್ದರಿಂದ ನನಗೆ ಅವುಗಳ ಕಾರ್ಯಕಲಾಪಗಳನ್ನು ಸೂಕ್ಷ್ಮವಾಗಿ ಅವಲೋಕಿಸಲು ಸಾಧ್ಯವಾಯಿತು.

ಸಹಕಾರೀ ಯೋಜನೆ ಸಫಲವಾಗಲು ಪ್ರೌಢಶಿಕ್ಷಣವೇ ಕಾರಣ ಎಂದು ಅಧಿಕಾರಿಗಳು ನನಗೆ ಹೇಳಿದರು. ಅಸಂಸ್ಕೃತ, ಅಜ್ಞಾನಿ ಅಥವಾ ಸ್ವಾರ್ಥಿ ಜನ ಯಾವ ಸಹಕಾರೀ ಯೋಜನೆಯನ್ನೂ ಸಫಲಗೊಳಿಸಲಾರರೆಂದು ಅವರ ಮತ.

ಗ್ರುಂಟ್‌ವಿಗ್‌ನ ಶಿಷ್ಯ ಕಿರ್ಸ್ಟನ್ ಕೋಲ್ಡ್ ಎಂಬಾತ ಈ ಚಳವಳಿಯನ್ನು ಮುಂದೆ ಭರದಿಂದ ಸಾಗಿಸಿದ. ಬರಬರುತ್ತ ಸ್ವೀಡನ್, ಫಿನ್‌ಲ್ಯಾಂಡ್, ನಾರ್ವೇ ಮುಂತಾದ ಸ್ಕ್ಯಾಂಡಿನೇವಿಯನ್ ರಾಷ್ಟ್ರಗಳಲ್ಲೂ ಜರ್ಮನಿಯಲ್ಲೂ ಈ ಚಳವಳಿಯ ಪ್ರಚಾರ ಸಾಕಷ್ಟು ಹೆಚ್ಚಿತು.

ಪ್ರೌಢ ಶಿಕ್ಷಣದ ಪದ್ಧತಿಯು ಆಧುನಿಕ ಜಗತ್ತಿಗೆ ಡೆನ್ಮಾರ್ಕಿನ ಅಮೂಲ್ಯ ಕೊಡುಗೆಯಾಗಿದೆ. ಗ್ರುಂಟ್‌ವಿಗ್‌ನನ್ನು ನವಯುಗಪ್ರವರ್ತಕನೆಂದು ಕರೆಯಲಾಗುತ್ತದೆ.

ಸಂಜೆ ಹೊಟೆಲಿಗೆ ತಿರುಗಿ ಬರುತ್ತಲೇ ಎರಡು ಬ್ಯಾಲೆ ತಿಕೀಟುಗಳು ನನ್ನ ಕೈಗೆ ಬಂದವು. ಎರಡು ಎರಡೂವರೆ ಗಂಟೆಯೊಳಗಾಗಿ ಕಾರ್ಯಕ್ರಮ ಪ್ರಾರಂಭವಾಗಲಿತ್ತು. ಯುರೋಪಿನ ಪದ್ಧತಿಯ ಮೇರೆಗೆ ಜೊತೆಯಲ್ಲಿ ಒಬ್ಬ ಸ್ತ್ರೀಯನ್ನು—ಪತ್ನಿ, ಪ್ರೇಯಸಿ, ತಾಯಿ, ತಂಗಿ ಯಾರೂ ಇರಬಹುದು-ಒಯ್ಯುವುದಗತ್ಯವಿತ್ತು. ನಾನು ಅತಿಥಿಯಾಗಿ ನೃತ್ಯಕ್ಕೆ ಬರಲಿದ್ದೇನೆಂದು ರಾಯಲ್ ಥೇಟರಿನ ವ್ಯವಸ್ಥಾಪಕರಿಗೆ ಗೊತ್ತಿತ್ತು. ಸ್ವಾಗತಕ್ಕಾಗಿ ಆತ ಬಾಗಿಲಿಗೆ ಬಂದಾಗ ಎರಡು ತಿಕೇಟು ಕೊಟ್ಟರೂ ನಾನು ಒಬ್ಬನೇ ಹೋದರೆ ನನ್ನನ್ನು ಬೆಪ್ಪನೆಂದು ಆತ ತಿಳಿಯಬಹುದಿತ್ತು. ಬ್ಯಾಲೆ ನೃತ್ಯ ನೋಡಲಿಕ್ಕೆ ಸಿಗುತ್ತದೆಂದು ಆನಂದವಾಗುವುದಕ್ಕಿಂತ ಜೊತೆಗಾರ್ತಿ ಎಲ್ಲಿಂದ ತರಲೆಂಬ ಚಿಂತೆಯೆ ನನ್ನಲ್ಲಿ ಪ್ರಬಲವಾಯಿತು.

ಕೂಡಲೇ ನನಗೊಂದು ವಿಚಾರ ಹೊಳೆಯಿತು. ನಾನು ಕರೆ ಸೂಟು ತೊಟ್ಟು ಪ್ರಮುಖ ಪೇಟೆಗೆ ಹೋದೆ. ಕೆಲಹೊತ್ತಿನಲ್ಲೇ ಸೌಂದ-

ರ್ಯ ಪ್ರಸಾಧನಗಳ ಅಂಗಡಿಯೊಂದು ಕಾಣಿಸಿತು. ಒಳಗೆ ಮೂವರೇ ತರುಣ ಮಾರಾಟಗಾರ್ತಿಯರಿದ್ದರು. ಗ್ರಾಹಕರಿರಲಿಲ್ಲ. ಪ್ರವೇಶಿಸಿದೆ.

ಆಗತ ಸ್ವಾಗತ ಮುಗಿಸಿ ನಾನು ತಿಕೀಟುಗಳನ್ನು ಅವರೆದುರು ಇಟ್ಟೆ. ನನಗೆ ಥೇಟರಿನ ವಿಳಾಸ ಗೊತ್ತಿರಲಿಕ್ಕಿಲ್ಲೆಂದು ಒಬ್ಬಳು ಇಂಗ್ರೇಜಿಯಲ್ಲಿ ವಿವರಿಸಿ ಹೇಳಿದಳು. ಅಂದು ರಾಜಕುಟುಂಬದವರೂ ನೃತ್ಯ ನೋಡಲು ಬರಲಿದ್ದು ಅವರ ಸ್ಥಳದ ಹತ್ತಿರವೇ ನನ್ನ ಸ್ಥಳವಿತ್ತೆಂದೂ ಅವರು ಹೇಳಿದರು. ನನ್ನನ್ನು ಆ ಮೂವರೂ ಆದರದಿಂದ ನೋಡತೊಡಗಿದರು.

ಆಗ ನಾನು, "ಮಾಹಿತಿ ತಿಳಿಸಿದ್ದಕ್ಕಾಗಿ ತುಂಬ ಧನ್ಯವಾದಗಳು. ನಾನು ಹೊಸಬ. ನನಗೆ ಯಾರ ಗುರುತೂ ಇಲ್ಲ. ಒಂದು ತಿಕೀಟು ವ್ಯರ್ಥವಾಗಬಹುದು. ನಿಮ್ಮಲ್ಲಿ ಒಬ್ಬರು ನನ್ನೊಡನೆ ಬಂದರೆ ನನಗೆ ತುಂಬ ಸಂತೋಷವಾಗುವುದು" ಎಂದೆ.

ಅವರು ಆಶ್ಚರ್ಯದಿಂದ ತಮ್ಮತಮ್ಮೊಳಗೇ ಟಕಮಕ ನೋಡತೊಡಗಿದರು. ಕೊನೆಗೆ ಒಬ್ಬಳು, "ನಿಮ್ಮ ಅಡ್ಡಿ ಇಲ್ಲವಾದರೆ ನಮ್ಮಲ್ಲಿ ಒಬ್ಬಳು ನೃತ್ಯ ಸುರುವಾಗಲು ಹತ್ತು ನಿಮಿಷಗಳಿರುವಾಗ ಥೇಟರಿಗೆ ಬರುತ್ತಾಳೆ. ಯಾಕಂದರೆ ಮನೆಗೆ ಹೋಗಿ ಬಟ್ಟೆ ಬದಲಿಸಿ ಬರಬೇಕಾದರೆ ಅಷ್ಟು ಸಮಯ ಬೇಕು" ಎಂದು ಹೇಳಿದಳು.

ಧನ್ಯವಾದಗಳನ್ನರ್ಪಿಸಿ ನಾನು ಹೊರಬಂದೆ.

ಸ್ವಲ್ಪ ಹೊತ್ತಾದ ಮೇಲೆ ನಾನು ಥೇಟರ ಬಾಗಿಲಲ್ಲಿ ನಿಂತು ಬರುವವರನ್ನು ನೋಡತೊಡಗಿದೆ. ವೇಷ ಬದಲಿಸಿ ಬರಲಿದ್ದ ನನ್ನ ಜೊತೆಗಾರ್ತಿಯನ್ನು ನಾನು ಗುರುತಿಸುವೆನೊ ಇಲ್ಲವೊ ಎಂದು ಚಿಂತಿಸುತ್ತಿರುವಾಗಲೇ ಒಬ್ಬ ಸುಂದರ ತರುಣಿ ಹಸ್ತಾಂದೋಲನಕ್ಕಾಗಿ ನನ್ನತ್ತ ಕೈ ಚಾಚಿದಳು

ಹಾವಸೆಯ ಬಣ್ಣದ ಬತ್ತಲೆ ತೋಳುಗಳು. ಉದ್ದ ಫ್ರಾಕ್. ಅವಳ ಸೌಂದರ್ಯ ಇಮ್ಮಡಿಯಾಗಿ ತೋರುತ್ತಿತ್ತು. ಮೊಳಕೈ ವರೆಗೇರಿಸಿದ ಶುಭ್ರ ಕೈಚೀಲಗಳು. ಅವಳ ಹೆಸರು ಲಿಝಬೆಥ್ ಹಾನ್ಸಸನ್. ನಾವು ಮೆತ್ತಗಿನ ಖುರ್ಚಿಗಳಲ್ಲಿ ಕೂತೆವು. ನಮ್ಮಿಬ್ಬರಿಗೂ ಬಹುದಿನಗಳಿಂದ ಪರಿಚಯವಿದ್ದಂತೆ ಲಿಝಬೆಥ್ ನನ್ನ ಕಿವಿಯಲ್ಲಿ ಹೇಳಿದಳು: "ಡೆನ್ಮಾರ್ಕಿನ ರಾಜಮನೆತನ ಬಹು ಜನಪ್ರಿಯವಾಗಿದೆ."

"ಹಾಗೆ ಕೇಳಿದ್ದೇನೆ."

"ಅವರು ಎಲ್ಲರೊಂದಿಗೆ ಕೂಡಿಕೊಂಡು ಹೋಗುತ್ತಾರೆ. ರಾಜರಾದ ಫ್ರೆಡರಿಕರು ಹಳ್ಳಿಯ ರೈತನೊಡನೆಯೂ ಹೊಲದಲ್ಲಿ ನಿಂತು ಮಾತಾಡುತ್ತಾರೆ. ರಾಣಿ ಇಂಗ್ರಿಡ್‌ರು ಸಾಮಾನ್ಯ ಮಹಿಳೆಯಂತೆ ಒಬ್ಬಳೇ ಮಾರ್ಕೆಟ್ಟಿಗೆ ಹೋಗುತ್ತಾರೆ. ಮೂವರೂ ರಾಜಕನ್ಯೆಯರು ಸಾಮಾನ್ಯರಂತೆ ಶಾಲೆ-ಕಾಲೇಜುಗಳಿಗೆ ಹೋಗುತ್ತಾರೆ."

ಲಿಝಬೆಥ್ ಹೇಳುತ್ತಿರುವಾಗಲೇ ನಮ್ಮ ಹತ್ತಿರದ ಕಾದಿಟ್ಟ ಖುರ್ಚಿಗಳಲ್ಲಿ ರಾಜಪರಿವಾರ ಬಂದು ಕೂತಿತು. ಎರಡು ನಿಮಿಷಗಳಲ್ಲೇ ಬ್ಯಾಲೆ ನೃತ್ಯ-ನಾಟಕ ಸುರುವಾಯಿತು. ಕಾಲ್ಬೆರಳಗಳ ಮೇಲೇ ತಮ್ಮ ಭಾರವನ್ನು ತೂಗಿಸಿ ಹಿಡಿದು ಗಂಧರ್ವ ಅಪ್ಸರೆಯರೆ ನಮ್ಮ ಮುಂದೆ ನರ್ತಿಸತೊಡಗಿದಂತೆನಿಸಿತು. ನಮ್ಮೆದುರು ಸ್ವಪ್ನನಗರವೊಂದು ನಿರ್ಮಿತವಾದಂತಿತ್ತು. ನರ್ತಕ-ನರ್ತಕಿಯರು ತಮ್ಮ ಪದನ್ಯಾಸ ಮತ್ತು ಅಭಿನಯ ಕೌಶಲ್ಯದಿಂದ ನಮ್ಮನ್ನು ದಂಗುಗೊಳಿಸುತ್ತಿದ್ದರು. ನರ್ತಕರನ್ನು ನೋಡಿದಾಗ ಒಮ್ಮೊಮ್ಮೆ ಅವರು ಮಾನಸ ಸರೋವರದ ಹಂಸಗಳಿರಬಹುದೋ ಎನಿಸುತ್ತಿತ್ತು. ಮತ್ತೊಮ್ಮೆ ಚಂದ್ರರಶ್ಮಿಗಳೇ ಆಟವಾಡುತ್ತಿರುವಂತೆ ಭಾಸವಾಗುತ್ತಿತ್ತು. ಇನ್ನೊಮ್ಮೆ ಉತ್ತರ ಧ್ರುವದ ಹಿಮದೇವಿಯರು ಮತ್ತು ಅವರ ಪ್ರಿಯಕರರ ರಸಕ್ರೀಡೆಯಿದೆನಿಸುತ್ತಿತ್ತು.

ನೃತ್ಯ ಪ್ರಯೋಗವು ಮುಗಿದಾಗ ಹಸಿದ ಹೊಟ್ಟೆಯ ಅರಿವಾಯಿತು. ಮೇಲಾಗಿ ಪಾಶ್ಚಾತ್ಯ ಪದ್ಧತಿಯ ಮೇರೆಗೆ ಲಿಝಬೆಥಳಿಗೆ ಆತಿಥ್ಯ ನಡೆ-

ಸುವುದಗತ್ಯವಾಗಿತ್ತು. ನಾವು ಒಂದು ಒಳ್ಳೇ ಉಪಹಾರಗೃಹವನ್ನು ಪ್ರವೇಶಿಸಿದೆವು.

"ಗಡಿಬಿಡಿಯಲ್ಲಿ ಸ್ವಲ್ಪ ತಿಂದು ಬಂದಿದ್ದೆ ನಾನು. ನೀವು ಉಪವಾಸವೇ ಬಂದಿದ್ದೀರಲ್ಲ?" ಎಂದಳು ಆಕೆ. ಹೌದೆಂದು ಹೇಳಿ ಎರಡು ಊಟ ಹಾಗೂ ಪೇಯಗಳನ್ನು ಆಯ್ದು ಹೇಳಲು ಅವಳನ್ನೇ ನಾನು ಕೇಳಿಕೊಂಡೆ.

ಮೆನೂ ನೋಡಿ ಆಕೆ ಊಟ ಹೇಳಿದಳು. ಆ ಊಟ ನಮ್ಮಲ್ಲಿ ಆರು ಜನರಿಗಾದರೂ ಸಾಲಬಹುದು. ನನ್ನ ಪಾಲಿನ ಅರ್ಧ ಊಟ ಉಳಿದೇ ಬಿಟ್ಟಿತು. ಲಿಝುಬೆಥ್ ಮಾತ್ರ ನನ್ನಂತೆ ಅನ್ನದ ಮೇಲೆ ಸೊಕ್ಕು ತೋರಿಸಲಿಲ್ಲ.

"ಈ ರೀತಿ ನೀವು ಉಣತೊಡಗಿದರೆ ಡೆನ್ಮಾರ್ಕಿನ ಜನರು ನಿಮ್ಮ ಬಗ್ಗೆ ತಪ್ಪಾಗಿ ತಿಳಿದುಕೊಂಡಾರು. ಎಚ್ಚರಿಕೆ" ಎಂದು ನಗುನಗುತ್ತ ಹೇಳಿದಳು.

"ನನಗೆ ತಿಳಿಯಲಿಲ್ಲ" ನಾನಂದೆ.

"ಸಾಕಷ್ಟು ತಿನ್ನದವನು ಬೇನೆಯವನೆಂದು ನಾವು ತಿಳಿಯುತ್ತೇವೆ." ಮುಖ್ಯ ಊಟ, ಚೀಸ್‌ಗಳು, ಕ್ರೀಂ ಸಹಿತ ಕೇಕುಗಳು ಬರತೊಡಗಿದವು. ಡ್ಯಾನಿಶ್ ಊಟದ ಸವಿಯನ್ನಾಕೆ ಬಣ್ಣಿಸತೊಡಗಿದಳು. ಆಗ್ರಹಮಾಡತೊಡಗಿದಳು. "ತಪ್ಪು ತಿಳಿಯದಿದ್ದರೆ ಒಂದು ಮಾತು ಕೇಳುವೆ" ಎಂದಳು.

"ಅಗತ್ಯವಾಗಿ."

"ನಿಮ್ಮಲ್ಲಿ ಬರಗಾಲದಿಂದ ಆಗಾಗ ಜನರು ಸಾಯುತ್ತಾರೆಂದು ನಾವು ಪತ್ರಿಕೆಯಲ್ಲಿ ಓದುತ್ತೇವೆ. ಹಸಿವಿನಿಂದ ಜನರು ಸಾಯುತ್ತಾರೆ ಎಂಬುದು ನಮಗೆ ಕಲ್ಪನೆ ಮಾಡಲಿಕ್ಕೂ ಬಾರದು. ಮೇಲಾಗಿ ನಿಮ್ಮ ರಾಜಕೀಯ ಮುಂದಾಳುಗಳು ಬೇಕಂತೇ ಉಪವಾಸ ಮಾಡುತ್ತಾರಂತೆ. ಇದು ನಿಜವೆ?"

ನಾನು ಹೌದೆಂದಾಗ ಆಕೆ ನಗಲಾರಂಭಿಸಿದಳು.

"ಪಂಡಿತರೆ, ನಮ್ಮಲ್ಲಿ ಯಾರಾದರೂ ಒಂದೇ ಒಂದು ದಿನ ಉಪವಾಸವಿದ್ದು ತೋರಿಸಿದರೆ ಆತನಿಗೆ ನೋಬೆಲ್ ಬಹುಮಾನ ಸಿಗಬಹುದು. ಟಿವೊಲಿ ಗಾರ್ಡನ್ನಿನಲ್ಲಿ ನಾವು ಅವನ ಪ್ರತಿಮೆ ನಿಲ್ಲಿಸಬಹುದು" ಎಂದಾಕೆ ತುಂಟ ನಗೆ ನಕ್ಕಳು.

ಸಾಮಾಜಿಕ ಕಲ್ಯಾಣ ಹಾಗೂ ಸ್ಥೈರ್ಯ ಇವುಗಳಿಗಾಗಿ ಇಲ್ಲಿ ಎಷ್ಟು ಉತ್ತಮ ಯೋಜನೆಗಳಿವೆಯೆಂದರೆ ಹುಟ್ಟಿನಿಂದ ಸಾವಿನ ವರೆಗೆ ಯಾವ ಡೇನನಿಗೂ ಎಂದಿಗೂ ಏನೂ ಕಡಿಮೆ ಬೀಳದು. ಸಾವಿರ ರೂಪಾಯಿ ಸಂಬಳದ ಕುಟುಂಬಚಾಲಕನ ಕೆಲಸ ಹೋಯಿತೆಂದು ಇಟ್ಟುಕೊಳ್ಳಿ. ಆಗ ಆತನಿಗೆ ಹೊಸ ಕೆಲಸ ಸಿಗುವ ವರೆಗೆ ಅರ್ಧದಷ್ಟು ಸಂಬಳ ಸಿಗುತ್ತ ಹೋಗುವುದು. ಅನಾಥರು, ವಿಧವೆಯರು ಮತ್ತು ನಿರಾಧಾರ ವೃದ್ಧರು ಇವರ ಉಪಜೀವಿಕೆಗಾಗಿಯೂ ಒಳ್ಳೇ ವ್ಯವಸ್ಥೆ ಮಾಡಲಾಗಿದೆ. ಈ ಜನರಿಗೆ ಹಸಿವೆಯೆಂದರೇನೆಂಬುದು ಗೊತ್ತೇ ಇಲ್ಲವೆಂದು ತೋರುತ್ತದೆ. ಯಾಕೆಂದರೆ ಹಸಿವೆಯಾಗುವ ಮೊದಲು ಉದರ ಭರಣ ಮಾಡುತ್ತಾರಿವರು.

ಇಲ್ಲಿಯ ಜನರು ಪುಷ್ಟ ಮೈಕಟ್ಟಿನವರು. ಬೊಜ್ಜು ಬೆಳೆಯಬಾರದೆಂದು ಸ್ತ್ರೀಯರು ಸ್ವಲ್ಪಾಪರೂ ಕಾಳಜಿ ಮಾಡುತ್ತಾರೆ. ಆದರೆ ಪುರುಷರ ಲಂಬೋದರತ್ವವು ಎಲ್ಲೆಲ್ಲೂ ಕಾಣುವ ಸಾಮಾನ್ಯ ದೃಶ್ಯ. ಆದ್ದರಿಂದ ಯಾವನಾದರೂ ತೆಳ್ಳನ್ನ ಮೈಯ ಪರದೇಶದ ಪ್ರವಾಸಿ ಇಲ್ಲಿ ಬಂದರೆ ಎಲ್ಲರ ಕೌತುಕದ ವಿಷಯವಾಗುತ್ತಾನೆ.

ಮೈ ಹೇಗೆ ಇಳಿಸಬೇಕೆಂಬ ಬಗ್ಗೆ ಬರೆದ ಪುಸ್ತಕಗಳಿಗಿಲ್ಲಿ ಒಳ್ಳೇ ಪೇಟೆ ಇದೆ. ಲಿಝುಬೆಥ್ ಒಂದು ಮೋಜಿನ ಕತೆ ಹೇಳಿದಳು. ಒಮ್ಮೆ ಒಬ್ಬ ಅಮೇರಿಕನ್ ಡಾಕ್ಟರರು ಮೈ ಇಳಿಸಿಕೊಳ್ಳುವ ವಿಧಾನ ಕಲಿಸಲು ಇಲ್ಲಿ ಬಂದು ಒಳ್ಳೆ ಪ್ರತಿಷ್ಠೆ ಸಂಪಾದಿಸಿ ಇಲ್ಲಿಯೆ ಒಬ್ಬಳನ್ನು ಪ್ರೀತಿಸಿ ಲಗ್ನವಾಗಿ ಕೊನೆಗೆ ತಾವೇ ಮೈ ಬೆಳೆಸಲಾರಂಭಿಸಿದರಂತೆ. [illegible] ವ್ಯವಸಾಯ [illegible] ಕುಗ್ಗಿ ಅವರಿಬ್ಬರೂ ಹೇಳದೇ ಕೇಳದೇ ಅಮೇರಿ

ಕೆಗೆ ಪಲಾಯನ ಮಾಡಿದರಂತೆ.

ಡೆನ್ಮಾರ್ಕಿಗೆ ನಾನು ಮೂರು ಸಲ ಹೋಗಿ ಬಂದಿದ್ದೇನೆ. ಅವರ ಪ್ರೇಮಾದರಗಳನ್ನು ಪ್ರತಿ ಸಲವೂ ಹೆಚ್ಚೆಚ್ಚೇ ಅನುಭವಿಸಿದ್ದೇನೆ. ಅವರ ಇನ್ನಿತರ ಸ್ವಭಾವ ವೈಶಿಷ್ಟ್ಯಗಳನ್ನೂ ನೋಡಿದ್ದೇನೆ. ದೇಶಾಭಿಮಾನ ಅವರ ಉಜ್ವಲ ಭಾವನೆ.

ಎರಡನೇ ಸಲ ಹೋದಾಗ ಹಾಂಬುರ್ಗಿನಿಂದ ಉಗಿಬಂಡಿಯಲ್ಲಿ ಹೊರಟಿದ್ದೆ. ಡಬ್ಬಿಯಲ್ಲಿ ಹಲವು ತರುಣರು, ಒಬ್ಬ ಮಧ್ಯವಯಸ್ಸಿನ ಮಹಿಳೆ. ಅವರು ಒಕ್ಕಲುತನ ಸಂಘವೊಂದರ ನಿಮಂತ್ರಣದ ಮೇರೆಗೆ ಹೊರಟಿದ್ದರು. ನಮ್ಮ ಹರಟೆಗಳು ಮುಂದುವರೆದವು. ಆ ಮಹಿಳೆ ಟಿಕ್ಕೆನ್ನಲಿಲ್ಲ. ನಾನೇ ಜರ್ಮನ್ ಭಾಷೆಯಲ್ಲಿ ಮಾತಾಡಿಸಲೆತ್ನಿಸಿದಾಗ ಆಕೆ ಇಂಗ್ರೇಜಿಯಲ್ಲಿ ಅಷ್ಟುಕಷ್ಟೇ ಉತ್ತರ ಕೊಟ್ಟಳು.

ಮುಂದೆ ಹಡಗಿನ ಪ್ರಯಾಣ ಸುರುವಾಯಿತು. ಡೆಕ್ ಮೇಲೆ ನನ್ನೊಬ್ಬನನ್ನೇ ಸಂಧಿಸಿ ಆಕೆ ಹೇಳಿದಳು: "ಕ್ಷಮಿಸಿ. ಆಗ ನಾನು ಬಿಚ್ಚು ಮನಸ್ಸಿನಿಂದ ಮಾತಾಡಲಿಲ್ಲ. ಜರ್ಮನ್ ನನಗೆ ಚೆನ್ನಾಗಿ ಬರುತ್ತದೆ. ಸಾಮಾನ್ಯವಾಗಿ ಯಾವ ಡೇನನಿಗಾದರೂ ಬರುತ್ತದೆ. ಆದರೆ ಆ ಭಾಷೆಯಲ್ಲಿ ಮಾತಾಡುವುದಿಲ್ಲೆಂದು ಪಣ ತೊಟ್ಟಿದ್ದೇನೆ."

" ಯಾಕೆ ? "

"ಈ ಜರ್ಮನ್ನರು ವಿನಾಕಾರಣ ನಮ್ಮಮೇಲೆ ಅನೇಕ ಸಲ ಆಕ್ರಮಣ ಮಾಡಿದ್ದಾರೆ. ಕಳೆದ ಮಹಾಯುದ್ಧದ ಅನುಭವಗಳನ್ನು ನಾನು ಸ್ವತಃ ಕಂಡುಂಡಿದ್ದೇನೆ. ಅಂದಿನಿಂದ ಅವರ ಬಗ್ಗೆ ಮನಸ್ಸು ಕಹಿಯಾಗಿದೆ. ಆಗಲೇ ನಾನು ನಿಶ್ಚಯಿಸಿದ್ದು. ಇದು ಎಂಥ ಬಾಲಿಶತನವೆಂದು ನೀವೆನ್ನಬಹುದು. ಆದರಿದು ಅವರವರ ಭಾವನೆಯ ಪ್ರಶ್ನೆ. ಮೇಲೆ ತೋರಿಸದಿದ್ದರೂ ನಮ್ಮಲ್ಲಿ ಪ್ರತಿ ಒಬ್ಬರಿಗೂ ಜರ್ಮನರ ಬಗ್ಗೆ ಹೀಗೇ ಅನ್ನಿಸುತ್ತದೆ."

ಅವಳ ಮಾತು ಸರಿ ಇರಬಹುದಾದರೂ ಈ ತಪ್ಪು ಭಾವನೆಯು ಈಗ ತಣ್ಣಗಾಗುತ್ತಾ ನಡೆದಿದೆ.

ಅವಳ ಹೆಸರು ಮಿಸ್ ಅನಿತಾ ಜೋಹಾನ್ಸನ್. ಆಕೆ ಸ್ವಭಾವತಃ ಬಿಚ್ಚು ಮನಸ್ಸಿನವಳು. ಇನ್ನೊಬ್ಬರಿಗೆ ನೆರವಾಗಬೇಕೆನ್ನುವವಳು. ದೊಡ್ಡ ಹಾಸ್ಪಿಟಲ್ಲೊಂದರಲ್ಲಿ ಆಕೆ ಪರಿಚಾರಿಕೆ. ರಜಾ ದಿನಗಳಲ್ಲಿ ಇಟಲಿಯ ಪ್ರವಾಸ ಮಾಡಿ ಸ್ವದೇಶಕ್ಕೆ ಮರಳುತ್ತಿದ್ದಳೀಕೆ.

ಊಟಕ್ಕೆ ಕೂತಾಗ ಅವಳೆಂದಳು: "ನನ್ನ ಎರಡು ಕೋಣೆಗಳಿವೆ. ನೀವು ಬೇಕಾದಷ್ಟು ದಿನ ನನ್ನಲ್ಲಿರಬಹುದು. ಸುಮ್ಮನೆ ವ್ಯರ್ಥವೇಕೆ ಹೋಟೆಲಿನಲ್ಲಿ ಹಣ ವೆಚ್ಚಮಾಡುತ್ತೀರಿ?"

ಏನೋ ಕಾರಣದಿಂದ ನಾನು ಅವಳ ಮನೆಯಲ್ಲಿ ಉಳಿಯಲಿಲ್ಲ. ಆದರೂ ಅವಳ ಪರಿಚಯದವರಿದ್ದುದರಿಂದ ಅವಳ ಪರಿಚಯದ ಉಪಯೋಗ ನನಗೆ ಚೆನ್ನಾಗಾಯಿತು.

ಓಂಬುಡ್ಸ್‌ಮಾಂಡ ಎಂಬುದು ಡ್ಯಾನಿಶ್ ರಾಜ್ಯ ವ್ಯವಸ್ಥೆಯ ಒಂದು ಅತುಲನೀಯ ವೈಶಿಷ್ಟ್ಯ.

ಮಿಸ್ ಜೋಹಾನ್ಸನಳ ಪರಿಚಯದಿಂದ ಈ ವ್ಯವಸ್ಥೆಯ ಕಾರ್ಯಪದ್ಧತಿಯನ್ನು ತಿಳಿಯಬೇಕೆಂಬ ನನ್ನ ಆಸೆ ಸಫಲವಾಯಿತು.

ಯಾವುದೋ ಕಾರಣದಿಂದ ರಾಜ್ಯದ ನಿತ್ಯದ ಕೆಲಸಗಳಲ್ಲಿ ತಪ್ಪುಗಳು ನಡೆಯುತ್ತವೆ. ಇವನ್ನು ಕಂಡುಹಿಡಿಯಲು ಒಬ್ಬಾನೊಬ್ಬ ಓಂಬುಡ್ಸ್‌ಮಾಂಡನನ್ನು ನೇಮಿಸಲಾಗುತ್ತದೆ. ಈ 'ಪ್ರಮಾದ ನಿರೀಕ್ಷಕ'ರಿಗೆ ನ್ಯಾಯಾಲಯ ಮೊದಲಾದ ಒಂದೆರಡು ಸ್ಥಳಗಳನ್ನು ಬಿಟ್ಟರೆ ಎಲ್ಲಿಯೂ ಪ್ರವೇಶವಿರುತ್ತದೆ. ಯಾವ ಬೇಕಾದ ಕಚೇರಿಯ ಕಾಗದ ಪತ್ರಗಳನ್ನು ತಪಾಸು ಮಾಡಿ ಬೇಕಾದ ಅಧಿಕಾರಿಗೆ ಪ್ರಶ್ನೆಗಳನ್ನು ಕೇಳಬಹುದು. ಕಚೇರಿಯ ಕೆಲಸ ಬೇಗವಾಗುವುದಿಲ್ಲೆಂದು ಕಂಡೊಡನೆಯೆ ನಾಗರಿಕರು ಓಂಬುಡ್ಸ್‌ಮಾಂಡರನ್ನು ಕಾಣುತ್ತಾರೆ. ತಕರಾರು ಬಾಯಿಂದ ಹೇಳಿದರೂ ಸಾಕು. ಒಂದುವೇಳೆ ಯಾವ ತಕರಾರು ಬರದಿದ್ದರೂ ಈ 'ಪ್ರಮಾದನಿರೀಕ್ಷಕ ಯಾರ ಮೇಲಾದರೂ ಅನ್ಯಾಯವಾಗುವುದು ಕಂಡುಬಂದರೆ ಅದನ್ನು ತಡೆಯುತ್ತಾನೆ. ಇವನ ನೇಮಕವು ಸರ

ಕಾರದಿಂದೇ ಆಗುವುದರಿಂದ ಮತ್ತು ಸರಕಾರವೇ ಇವನನ್ನು ತೆಗೆಯಬಹುದಾದ್ದರಿಂದ ಇವನು ತನ್ನ ಕೆಲಸವನ್ನು ನಿರ್ಭೀತಿಯಿಂದ ನಡೆಸುತ್ತಾನೆ. ಮೊದಲೇ ದೋಷರಹಿತವಾಗಿದ್ದ ಇಲ್ಲಿಯ ಆಡಳಿತ ಈಗ ಇದರಿಂದ ಇನ್ನಷ್ಟು ಕಾರ್ಯಕ್ಷಮವಾಗಿದೆ.

ಈ ಜನರು ತಿಂದುಂಡು ಸುಖವಾಗಿದ್ದಾರೆ. ಕೋಟ್ಯಧೀಶರು ಕಡಿಮೆ ಇದ್ದರೂ ಭಿಕ್ಷಾಧೀಶರು ಒಬ್ಬರೂ ಇಲ್ಲ. ಕೆಲವರು ಲಕ್ಷಾಧೀಶರಾದರೆ ಎಲ್ಲರೂ ಸಹಸ್ರಾಧೀಶರು. ಸಾಮಾಜಿಕ ಮತ್ತು ಆರ್ಥಿಕ ಸಾಮ್ಯವಾದವನ್ನು ಪ್ರಜಾರಾಜ್ಯದ ಮಾದರಿಯಿಂದ ಪ್ರತ್ಯಕ್ಷ ವ್ಯವಹಾರದಲ್ಲಿ ತರುವುದರಲ್ಲಿ ಡೆನ್ಮಾರ್ಕ್ ಸಂಪಾದಿಸಿರುವ ಯಶಸ್ಸು ಸ್ಪೃಹಣೀಯವಾಗಿದೆ.

ಕೋಪನ್‌ಹೆಗನ್ ಸ್ಟೇಶನ್ನಿನಲ್ಲಿ ಒಮ್ಮೆ ನಾನು ಹೋಗುವಾಗಲೇ ರೇಲ್ವೆಗಾಡಿ ಬಿಟ್ಟಿತು. ನಾನು ಓಡಿದೆ. ಗಾಡಿ ನಿಂತಿತು. ನಾನು ಬಿದ್ದೆನೆಂದು ಭಾವಿಸಿ ಯಾರೊ ಸರಪಳಿ ಎಳೆದಿದ್ದರು. ಅಧಿಕಾರಿ ನನ್ನ ಪಾಸ್‌ಪೋರ್ಟನ್ನಿಸಿದುಕೊಂಡ. ಆಗ ಸರಪಳಿ ಎಳೆದಾತನೂ ಮುಂದೆ ಬಂದ. ಅಧಿಕಾರಿ ಮೃದು ಸ್ವರದಲ್ಲಿ "ಇನ್ನರ್ಧ ಗಂಟೆಯಲ್ಲೇ ಇನ್ನೊಂದು ಗಾಡಿ ಇದೆ. ನೀವು ಅದರಿಂದ ಹೋಗಬಾರದೇ" ಎಂದ. ನಾನು ಒಪ್ಪಿದೆ. ಅವನೊಂದಿಗೇ ಅವನ ಕಚೇರಿಗೆ ಹೋದೆ.

"ಕೆಲ ವರ್ಷಗಳ ಹಿಂದೆ ನಮ್ಮ ಕೂಳುಬಾಕತನವನ್ನ ರೇಡಿಯೋದಲ್ಲಿ ಟೀಕಿಸಿದ ಕುಲಕರ್ಣಿ ನೀವೇ ಏನು?" ಅಧಿಕಾರಿ ಕೇಳಿದರು.


"ಹೌದು" ಎಂದೆ ನಾನು.

"ನಮ್ಮ ಮನೆಯಲ್ಲಿ ಎಲ್ಲರಿಗೂ ನಿಮ್ಮ ವಿಷಯ ಗೊತ್ತಿದೆ. ನಿಮ್ಮ ಬಿಚ್ಚುಮನಸ್ಸಿನ ಭಾಷಣ ನಮಗೆ ಹಿಡಿಸಿತು. ನಿಮ್ಮ ಟೀಕೆಗೆ ಗುರಿಯಾದ ಕೂಳುಬಾಕ ಕುಟುಂಬವೆಂದರೆ ನಾವೇ. ನಮ್ಮ ವೈಶಿಷ್ಟ್ಯಗಳು ಇನ್ನೂ ಇವೆ. ನಿಮ್ಮ ಟೀಕೆ ಕೇಳಿ ನನ್ನ ಮಗಳು ಮನಸಾರೆ ನಕ್ಕಳು. ನಮ್ಮಲ್ಲಿ ಹೀಯರು ಚಿರೂಟು ಸೇದುತ್ತಾರೆನ್ನುವುದನು ನೀವು ಕಂಡಿಲ್ಲವೇನೊ!"

"ಹೌದು. ಈಗೀಗ ನೋಡುತ್ತಿದ್ದೇನೆ."

"ನೀವು ಚೆನ್ನಾಗಿ ಮಾತಾಡುತ್ತೀರಿ. ಲೇಖಕರೂ ಇದ್ದೀರಿ. ನಮಗೆ ಅಭಿಮಾನವೆನಿಸುವ ಕೆಲ ಸಂಗತಿಗಳನ್ನು ಹೇಳುತ್ತೇನೆ. ಜ್ಞಾಪಕದಲ್ಲಿಡಿ. ನಮ್ಮ ಬಿಯರಿನಂಥ ಬೀರ್ ಬೇರೆಡೆಯಿಲ್ಲ. ನಮ್ಮ ಬೆಣ್ಣೆಯಂಥ ಬೆಣ್ಣೆ ಇಲ್ಲ. ನಮ್ಮಷ್ಟು ಉತ್ಕೃಷ್ಟ ಪ್ರಜಾರಾಜ್ಯ ಬೇರೆಡೆ ಇಲ್ಲ. ನಮ್ಮ ರಾಜಮನೆತನ ಅದ್ವಿತೀಯ. ಹಾನ್ಸ್ ಕ್ರಿಶ್ಚಿಯಾನ್ ಆಂಡರಸನ್‌ನಂಥ ಪರಿಕಥಾ ಲೇಖಕ ಬೇರೆಡೆ ಇಲ್ಲ. ಸುಮಾರು ನೂರು ಭಾಷೆಗಳಲ್ಲಿ ಅವನ ಕತೆಗಳು ಅನುವಾದವಾಗಿವೆ. ಪ್ರೌಢ ಶಿಕ್ಷಣ, ಸಹಕಾರ, ಬ್ಯಾಲೆ ನೃತ್ಯ ಮುಂತಾದವುಗಳ ಬಗ್ಗೆ ನೀವು ಸಾಕಷ್ಟು ಕೇಳಿರಲೇ ಬೇಕು. ನೋಬೆಲ್ ಪಾರಿತೋಷಕ ವಿಜೇತರಾದ ನಮ್ಮ ಪ್ರೊ ಬೊಹರರು ಪರಮಾಣುಸಂಶೋಧನೆಯನ್ನು ಎಂದೋ ಮಾಡಿದ್ದರು. . . .ಹೇಳುವಂತಹದು ತುಂಬ ಇದೆ. ಬೇಕಾದರೆ ನಾವು ಅದೇ ನೃತ್ಯಗೃಹದಲ್ಲಿ ಹರಟೆ ಹೊಡೆಯುತ್ತ ಕೂಡುವಾ ಅಂದರೆ ಹಿಂದೆ ನಿಂತುಹೋಗಿರುವ ನನ್ನ ಮಗಳೊಂದಿಗೆ ನೀವು ಮಾಡಬೇಕೆಂದಿದ್ದ ನೃತ್ಯವನ್ನೂ ಮಾಡಲಿಕ್ಕಾದೀತು."

ಅವರು ಟೆಲಿಫೋನ್ ನಂಬರ ತಿರುವಿ, "ಬ್ರಿಸ್ತಾ, ರೇಡಿಯೊದಲ್ಲಿ ನಿನ್ನ ಟೀಕೆ ಮಾಡಿದ್ದ ಕುಲಕರ್ಣಿ ಇಲ್ಲಿ ನನ್ನ ಹತ್ತಿರ ಕೂತಿದ್ದಾರೆ. ನಮ್ಮ ಅವರ ಭೆಟ್ಟಿಯ ಕಾರ್ಯಕ್ರಮವನ್ನು ನೀವೇ ಮಾತಾಡಿ ನಿಶ್ಚಯಿಸಿರಿ...ಇದೊ ಕುಲಕರ್ಣಿ ಮಾತಾಡುತ್ತಾರೆ" ಎಂದು ರಿಸೀವರ್ ನನ್ನ ಕೈಗೆ ಕೊಟ್ಟರು. ಅಶಾಂತ ಮನಃಸ್ಥಿತಿಯಲ್ಲಿ ನಾನು ಹೇಗೊ ಮಾತಾಡುತ್ತಿರುವಾಗಲೇ ಭೀಮಾಕಾರದ ವೇಟರ್ ಕೇಕ್, ಬ್ರೆಡ್ ಚೀಸ್‌ಗಳ ತಟ್ಟೆಗಳನ್ನೂ ಪೇಯ ಪದಾರ್ಥಗಳನ್ನೂ ಹಿಡಿದುಕೊಂಡು ಒಳಗೆ ಬಂದ. *



ಗಾಬರಿಯಿಂದ ಸರ್ಜನ್ನರು ರೋಗಿಯ ಕಾಟನ ಬಳಿ ಬಂದು, "ಕ್ಷಮಿಸಿರಿ, ನಿಮ್ಮ ಹೊಟ್ಟೆಯನ್ನು ಮತ್ತೆ ತೆರೆಯಬೇಕಾಗಿದೆ. ಒಂದು ದೊಡ್ಡ ತಪ್ಪಾಗಿಬಿಟ್ಟಿದೆ" ಎಂದರು.

"ಖಂಡಿತಾ ಸಾಧ್ಯವಿಲ್ಲ, ಏನು, ಆಟ ನಡೆಸಿದ್ದೀರಾ?" ರೋಗಿ ಅಬ್ಬರಿಸಿದ.

"ದಯವಿಟ್ಟು. ನೀವು ಹಟ ಹೂಡಿದರೆ ಅನಾಹುತವೇ ಸೈ. ಮೊನ್ನೆ ನಿಮ್ಮ ಹೊಟ್ಟೆ ಆಪರೇಶನ್ ಮುಗಿಸಿ ಹೊಲಿಯುವಾಗ ನಮ್ಮ ಕತ್ತರಿಯೊಂದು ಒಳಗೇ ಉಳಿದು ಹೋಗಿದೆ," ಡಾಕ್ಟರರು ತಬ್ಬಿಬ್ಬಾಗಿ ಪ್ರಾರ್ಥಿಸಿದರು.

ರೋಗಿ ನಕ್ಕ. "ಇಷ್ಟೇ ತಾನೆ? ತಕ್ಕೊಳ್ಳಿ ಈ ಐದು ರೂಪಾಯಿ. ಬೇರೊಂದು ಕತ್ತರಿ ಕೊಂಡುಕೊಳ್ಳಿ."

*

ಕಿವಿ ಮಂದವಾದ ಶ್ರೀಮಂತ ವೃದ್ಧನೊಬ್ಬನು ಶ್ರವಣಯಂತ್ರ ದುರಸ್ತಿ ಮಾಡಿಸಿಕೊಳ್ಳಲು ಬಂದಿದ್ದನು. ಯಂತ್ರದಂಗಡಿಯವನು ಶ್ರೀಮಂತನನ್ನು ಸ್ತುತಿಸುತ್ತ, "ನಿಮಗೀಗ ಸರಿಯಾಗಿ ಕೇಳಿಸುವುದರಿಂದ ನಿಮ್ಮ ಬಂಧುಗಳಿಗೆ ತುಂಬ ಸಂತೋಷವಾಗಿರಬೇಕು" ಎಂದ.

ಮುದುಕ ಕಣ್ಣು ಮಿಟುಕಿಸುತ್ತ ಹೇಳಿದ: "ನಿಜ ಕೇಳಿದರೆ ನಾನು ಈ ಯಂತ್ರ ಕೊಂಡದ್ದನ್ನು ಇನ್ನೂ ನನ್ನ ಬಂಧುಗಳಿಗೆ ಹೇಳೇ ಇಲ್ಲ. ಆದ್ದರಿಂದ ತುಂಬ ಸ್ವಾರಸ್ಯ ವಿಷಯಗಳನ್ನು ಕೇಳುತ್ತಿದ್ದೇನೆ. ಮತ್ತು ಈಗಾಗಲೇ ಎರಡು ಸಲ ನನ್ನ ಉಯಿಲನ್ನು ಬದಲಾಯಿಸಿದ್ದೇನೆ."

*

ಇಬ್ಬರು ಹುಡುಗರು ಕತ್ತಲೆಯಲ್ಲಿ ಹೊರಟಿದ್ದರು. ಒಬ್ಬನ ಕೈಲಿ ಹೊಸ ಟಾರ್ಚ್‌ಲೈಟ್ ಇತ್ತು. ಅತ ಸ್ವಿಚ್ ಒತ್ತಿ ಆಕಾಶದತ್ತ ಅದನ್ನು ತಿರುಗಿಸಿದಾಗ ಬೆಳಕಿನ ಕಂಬವೊಂದು ನಿಂತಂತಾಗುತ್ತಿತ್ತು. ಹೀಗೆ ಕಂಬ ಮಾಡಿ ಅವನು ಗೆಳೆಯನಿಗೆ ಹೇಳಿದ: "ಲೇ ಆ ಕಂಬ ಹತ್ತಿ ಮೇಲೆ ಹೋದೀ ಅಂದರೆ ನಿನಗೆ ಐದು ರೂಪಾಯಿ ಕೊಡುವೆ!"

"ಹೋಗದೆ ಏನು ಮಹಾ?" ಎಂದ ಗೆಳೆಯ. "ಆದರೆ ನೀನು ಭಾರೀ ಕೊರಳು ಕೊಯ್ಯ. ನಾನು ಅರ್ಧ ಹತ್ತಿದಾಗ ನೀನು ಅದನ್ನ ತೆಗೆದು ಬಿಟ್ಟರೆ?

*

ಜೀವನೋಪಾಯವಿಲ್ಲದೆ ಎಕ್ಸ್ಟ್ರಾ ನಟನಾಗಿ ಸೇರಿದ ತರುಣನೊಬ್ಬನಿಗೆ ಡೈರೆಕ್ಟರರು ಸಿಂಹದೊಡನೆ ಪಂಜರದಲ್ಲಿ ಮಲಗಲು ಹೇಳಿದರು.

ಅಳ್ಳೆದೆಯ ತರುಣ,

"ನಾವೊಲ್ಲೆ. ಈಗಲೇ ನನ್ನ ರಾಜೀನಾಮೆ ತೆಗೆದುಕೊಳ್ಳಿ" ಎಂದ ನಡುಗುತ್ತ.

"ಅಯ್ಯೋ! ಯಾಕೆ ಹೆದರುತ್ತೀ? ಈ ಸಿಂಹ ಏನೂ ಮಾಡುವುದಿಲ್ಲ. ಅದು ಹಾಲಿನ ಮೇಲೇ ಬೆಳೆದ ಸಿಂಹ."

"ಇರಬಹುದು" ಎಂದ ತರುಣ. "ನಾನೂ ಹಾಲಿನ ಮೇಲೇ ಬೆಳೆದಿದ್ದು; ಈಗ ಮಾಂಸ ತಿನ್ನಲು ಕಲಿತಿದ್ದೇನಲ್ಲ."

*

ಜಿಪುಣ ಶಿಖಾಮಣಿಗೆ ಲಾಟರಿಯಲ್ಲಿ ೬೦,೦೦೦ ರೂಪಾಯಿ ಬಹುಮಾನ ಬಂದಿತ್ತು. ಆದರೆ ಅವನ ಮಿತ್ರರು ಅವ

H 6—12

ನಿಗೆ ಅಭಿನಂದನೆ ಸಲ್ಲಿಸಲು ಹೋದಾಗ ಅವನು ಹುಳಿಮುಖ ಮಾಡಿ ಕುಳಿತಿದ್ದ.

ಸ್ನೇಹಿತರು ಕೇಳಿದರು:

"ನಿನಗೆ ಬಹುಮಾನ ಬಂದದ್ದಕ್ಕೆ ಸಂತೋಷವಾಗುವುದಿಲ್ಲವೆ?"

ಜಿಪುಣ ಶಿಖಾಮಣಿ ಉತ್ತರವಿತ್ತ: "ಸಂತೋಷವಾಗಲೇಬೇಕು. ಆದರೆ ಎರಡು ಟಿಕೇಟು ಕೊಂಡು ಮೂರ್ಖನಾದೆನಲ್ಲಾ ಅಂತ!"

*

ಬೇಗ ಮಲಗಿ ಬೇಗ ಏಳುವವರು ಅವರು, ತಡಮಾಡಿ ಮಲಗಿ ತಡಮಾಡಿ ಏಳುವವರು ಅವರ ನೆರೆಯವರು.

ಒಂದು ದಿನ ಬೆಳಗ್ಗೆ ಈಚೆ ಮನೆಯವನು ಎದ್ದು ಗೇಟಿನ ಬಾಗಿಲು ತೆರೆಯುತ್ತಿರುವಾಗ್ಗೆ ನೆರೆಮನೆಯಾತ ಒಂದು ಚಿಕ್ಕ ಕ್ಯಾನಿನಲ್ಲಿ ಎಣ್ಣೆ ತಂದು ಕೊಟ್ಟು, "ಮಹಾಸ್ವಾಮಿ, ಆ ಗೇಟಿನ ಕಿರಿಚುವ ಕೀಲಿಗೆ ಸ್ವಲ್ಪ ಹಾಕಿ. ಅಂದರೆ ದಿನಾ ಬೆಳಗ್ಗೆ ಆರು ಗಂಟೆಗೆ ನಮ್ಮ ಸಕ್ಕರೆ ನಿದ್ದೆ ಭಂಗವಾಗುವುದು ನಿಂತೀತು" ಎಂದ.

ಈಚೆ ಮನೆಯವ ಆ ಕ್ಯಾನನ್ನು ಅವನಿಗೇ ತಿರುಗಿ ಕೊಟ್ಟು ಶಾಂತವಾಗಿ ಹೇಳಿದ: "ಛೆ ಛೇ? ಅದನ್ನ ನೀವೇ ಇಟ್ಟುಕೊಳ್ಳಿ. ದಿನಾ ರಾತ್ರಿ ಹನ್ನೊಂದು ಗಂಟೆಗೆ ನಿಮ್ಮ ಹೆಂಡತಿ ಹಾಡಲಾರಂಭಿಸುತ್ತಾಳಲ್ಲ, ಆಗ ಅವಳ ಗಂಟಲಿಗೆ ಸ್ವಲ್ಪ ಹಾಕಿದರೆ ಬೇಗ ಮಲಗುವ ನಮಗೆ ತುಂಬ ಉಪಕಾರ."

*

ಆತ ಹೋಟೆಲಿನಲ್ಲಿ ರೂಮು ಹಿಡಿದು ಒಳಗೆ ಪ್ರವೇಶಿಸುತ್ತಿದ್ದಾಗ ರೂಮಿನ ಎದುರಿಗೆ ತೂಗಹಾಕಿದ್ದ ಬೋರ್ಡು ನೋಡಿದ. ಅದರಲ್ಲಿ ಹೀಗಿತ್ತು:

"ದಯವಿಟ್ಟು ಕಾಲೊರಸಿಕೊಳ್ಳಿ."

ಒಂದೇ ದಿನದಲ್ಲಿ ಅವನು ರೂಮು ಖಾಲಿ ಮಾಡಿ ಹೊರಟ. ರೂಮಿನಿಂದ ಹೊರಬರುತ್ತ ಸಾಮಾನು ಇಳಿಸಿ ಆ ಬೋರ್ಡಿನಲ್ಲಿ ಮೇಲ್ಗಡೆ ಈ ಶಬ್ದಗಳನ್ನು ಸೇರಿಸಿದ:

"ಹೊರಗೆ ಹೋಗುವಾಗ—"

*

"ಅಮ್ಮಾ, ನನಗೊಬ್ಬ ಪುಟ್ಟ ತಂಗಿ ಯಾವಾಗ ಸಿಗುತ್ತಾಳಮ್ಮಾ" ಎಂದ ನಾಲ್ಕು ವರ್ಷದ ಮಗ ದೈನ್ಯದಿಂದ.

"ಯಾಕೆ ಮಗೂ, ನಿನಗೆ ತಂಗಿಯ ಆಸೆ?" ಎಂದಳಾ ತಾಯಿ.

"ಬೆಕ್ಕಿನ ಮರಿಗಳನ್ನು ಕಾಡಿಸಿ ಕಾಡಿಸಿ ಬೇಸರ ಬರುತ್ತದಮ್ಮ."

*

"ಸಚ್ಚಾರಿತ್ರ ಸಂಘ"ದ ಮೂವರು ಸದಸ್ಯರು ಮಾನವನ ದೌರ್ಬಲ್ಯಗಳ ಬಗ್ಗೆ ಮಾತಾಡುತ್ತಿದ್ದರು.

ಒಬ್ಬ ಹೇಳಿದ: "ಸ್ವತಃ ನಾನೂ ಪೂರ್ತಿ ನಿರ್ದೋಷಿಯೆನ್ನಲು ಬಾರದು. ಚಿಕ್ಕಂದಿನಲ್ಲೇ ನನಗೆ ಅಸಹ್ಯ ಶಬ್ದ ಉಪಯೋಗಿಸುವ ದುರಭ್ಯಾಸ ಅಂಟಿಕೊಂಡಿತ್ತು. ಈಗ ಕೂಡ ಒಮ್ಮೊಮ್ಮೆ—"

ಎರಡನೆಯವ ಅಂದ: "ನನ್ನ ದೌರ್ಬಲ್ಯವೆಂದರೆ ಮದ್ಯಪಾನ. ಈಗ ನಾನು ಮದ್ಯಪರಿತ್ಯಾಗ ಮಾಡಿದ್ದೇನನ್ನಿ. ಆದರೂ ಒಮ್ಮೊಮ್ಮೆ ನನ್ನ ಆತ್ಮಸಂಯಮವನ್ನೂ ಮೀರಿ—"

ಮೂರನೆಯವ ನುಡಿದ: "ನನ್ನ ದೌರ್ಬಲ್ಯವೆಂದರೆ ಕುತ್ಸಿತ ಹರಟೆ. ನಿಜ ಕೇಳಿದರೆ ಯಾವಾಗ ಇಲ್ಲಿಂದ ಹೊರಬಿದ್ದೇನು ಎಂದು ನನ್ನ ಮನ ಚಡಪಡಿಸುತ್ತಿದೆ."



ಇದಕ್ಕಿಂತ ಎತ್ತರ ಜಲಪಾತಗಳಿರಬಹುದು
ಆದರೆ ಇದರ ಕಥೆ ಬೇರೆಯೆ

ಭವ್ಯ ಜಲಪಾತ ನಯಾಗರಾ

ಗಂಗಾಧರ

ಜಗತ್ತಿನ ಅತಿ ಭವ್ಯ ನೈಸರ್ಗಿಕ ದೃಶ್ಯಗಳಲ್ಲಿ ಉತ್ತರ ಅಮೇರಿಕದ ನಯಾಗರಾ ಜಲಪಾತವೂ ಒಂದು. ಅವನ್ನು ಕಂಡ ಪ್ರಪ್ರಥಮ ಯುರೋಪಿಯನ್ ಲುಯಿ ಹೆನ್‌ಪಿನ್ ಎಂಬಾತ. ಕೆಥೋಲಿಕ್ ಪಾದ್ರಿಯಾದ ಹೆನ್‌ಪಿನ್ ಮೂಲನಿವಾಸಿಗಳಿಂದ ಅರಣ್ಯ ಮಧ್ಯದಲ್ಲಿ ಭಾರಿ ಜಲಪಾತವೊಂದಿದೆಯೆಂಬ ಸುದ್ದಿ ಕೇಳಿ ೧೬೭೮ ರಲ್ಲಿ ಲಾಸ್ಕಾಲ್ ಎಂಬ ಸಂಶೋಧಕನೊಡನೆ ಅದನ್ನು ಹುಡುಕುತ್ತ ಸಾಗಿದ. ಜಲಪಾತವು ದೃಷ್ಟಿಗೆ ಬಿದ್ದಾಗ ಅವನು ಸಂಪೂರ್ಣವಾಗಿ ಮುಗ್ಧನಾಗಿ ಹೋದ. ಹೃದಯದಲ್ಲಿ ಭಾವನಾಪ್ರವಾಹ ಉಕ್ಕಿ ಹರಿದು ಅವನು ಒಡನೆಯೆ ಮೊಣಕಾಲೂರಿ ಪರಮಾತನಿಗೆ ಪ್ರಾರ್ಥನೆ ಸಲ್ಲಿಸಿದನಂತೆ.

ನಯಾಗರಾ ಜಲಪಾತವನ್ನು ಕಂಡವರಿಗೆ ಅವರು ಆಸ್ತಿಕರಾಗಿದ್ದರೆ ಪರಮಾತ್ಮನ ಲೀಲೆಯ ಪ್ರತ್ಯಕ್ಷ ಪ್ರಮಾಣದಿಂದ ಭಕ್ತಿ ಉಕ್ಕೇರುವುದು ಸಹಜವೇ. ನಯಾಗರಾ ಜಗತ್ತಿನ ಅತಿ ಎತ್ತರ ಜಲಪಾತವೇನೂ ಅಲ್ಲ. ಜೋಗದ ಎತ್ತರದ ಮುಂದೆ ನಯಾಗರಾದ್ದು ಏನೂ ಅಲ್ಲ. ಆದರೆ ಖಂಡಿತವಾಗಿಯೂ ನಯಾಗರಾ ಪ್ರಪಂಚದ ಅತಿ ಭವ್ಯ ಜಲಪಾತವೆಂದೊಪ್ಪಲೇಬೇಕು. ಅಮೇರಿಕದ ಸಂಯುಕ್ತ ಸಂಸ್ಥಾನ ಮತ್ತು ಕೆನಡಾ ದೇಶದ ನಡುವೆ ಗಡಿಭಾಗದಲ್ಲಿ ಹರಿಯುವ ನಯಾಗರಾ ನದಿ ಉತ್ತರ ಅಮೇರಿಕದ ಮಧ್ಯಭಾಗದ

ನೀರನ್ನೆಲ್ಲ ತನ್ನಲ್ಲಿ ಸೆಳೆದುಕೊಂಡು ಉದ್ದಾಮವಾಗಿ ಹರಿಯುತ್ತದೆ. ಸಮುದ್ರ ಸದೃಶವಾದ ನಾಲ್ಕು ಸರೋವರಗಳಿಂದ ಉಕ್ಕಿ ಹರಿಯುವ ನೀರಿನೊಡನೆ ಅದು ಮುಂದೆ ೩೬ ಮೈಲು ಅಂತರದಲ್ಲಿ ೩೨೬ ಅಡಿಯಷ್ಟು ಕಡಿದಾದ ಇಳುಕಲಿನಲ್ಲಿಳಿದು ಧಾವಿಸುತ್ತ ಕೊನೆಗೆ ಒಮ್ಮೆಲೆ ೧೬೧ಅಡಿ ಕೆಳಗಿರುವ ಪ್ರಪಾತಕ್ಕೆ ೩,೬೦೦ ಅಡಿ ಅಗಲದ ಧಾರೆಯಲ್ಲಿ ಧುಮ್ಮಿಕ್ಕುತ್ತದೆ. ಅಲ್ಲಿಂದ ಅದು ಅನೇಕ ಅತಿ ಅಪಾಯಕಾರಿ ಅರ್ಬಿಗಳನ್ನು ಮಾಡುತ್ತ ರೌದ್ರಾವೇಶದಿಂದ ಒಂಟಾರಿಯೋ ಸರೋವರವನ್ನು ಪ್ರವೇಶಿಸುತ್ತದೆ.

ಸಿಂಹಗರ್ಜನೆಗೆ ಸಮಾನವಾಗಿ ಭೋರ್ಗರೆಯುತ್ತ ಸೆಕೆಂಡಿಗೆ ೮,೨೫,೦೦೦ ಗ್ಯಾಲನ್ ನೀರು ಧುಮುಕುವ ನಯಾಗರಾ ಜಲಪಾತದ ಭವ್ಯತೆ ಅದರ ವಿಶಾಲವಾದ ಆಕೃತಿಯಲ್ಲಿದೆ. ಪ್ರಪಾತದ ಬಳಿ ನದಿ ಎರಡು ಕವಲಾಗಿ ಒಡೆದು ನಡುವೆ "ಆಡಿನ ನಡುಗಡ್ಡೆ" ಎಂಬ ಚಿಕ್ಕ ದ್ವೀಪವನ್ನು ಮಾಡುತ್ತದೆ. ಸಂಯುಕ್ತ ಸಂಸ್ಥಾನಕ್ಕೆ ಸೇರಿದ ಕವಲು ೧,೦೦೦ ಅಡಿ ಅಗಲವಾಗಿ ೧೬೭ ಅಡಿ ಕೆಳಗೆ ನೆಗದರೆ ಕೆನಡಾಕ್ಕೆ ಸೇರಿದ ಕವಲು, ೨,೬೦೦ ಅಡಿ ಅಗಲವಾಗಿ ಕುದುರೆನಾಲಿನಾಕಾರದಲ್ಲಿ ೧೫೮ ಅಡಿ ಧುಮುಕುತ್ತದೆ.

ಪಾದ್ರಿ ಹೆನ್‌ಪಿನ್ ನಯಾಗರಾ ಜಲಪಾತವನ್ನು ಕಂಡುಹಿಡಿದ ನಲುವತ್ತು ವರ್ಷಗಳಲ್ಲೇ ಅದರ ಹೆಸರು ಅಮೇರಿಕದ ತುಂಬ ಹಬ್ಬಿತು. ಜನರು ಕುದುರೆಯ ಮೇಲೂ ಬಂಡಿಗಳಲ್ಲೂ ಅದನ್ನು ಕಾಣಲು ಬರತೊಡಗಿದರು. ಮುಂದಿನ ನೂರು ವರ್ಷಗಳಲ್ಲಿ ಅದು ಅಮೇರಿಕದ ಅತಿ ದೊಡ್ಡ "ಪ್ರವಾಸಿಕರ ಆಕರ್ಷಣೆ"ಯಾಗಿ ಹೋಯಿತು. ಹಾಥಾರ್ನ್, ಕೂಪರ್ ರಂಥ ಸಾಹಿತಿಗಳು ಅದನ್ನು ಹೊಗಳಿದರು. ಚಿತ್ರಕಾರರು ನಯಾಗರಾ ಜಲಪಾತದ ಬಗೆಬಗೆಯ ರೂಪುಗಳನ್ನು ಕುಂಚ-ವರ್ಣಗಳಿಂದ ಸೆರೆ ಹಿಡಿಯಲು ಯತ್ನಿಸಿದರು. ಪ್ರೇಮಿಗಳೂ ನವವಿವಾಹಿತರೂ ಪ್ರಣಯ ವಿಹಾರಕ್ಕಾಗಿ ಅಲ್ಲಿ ಬರತೊಡಗಿದರು. ಕಳೆದ ಶತಮಾನದ ಮಧ್ಯದಷ್ಟು ಹೊತ್ತಿಗೆ ಜಗತ್ತಿನ ಮೂಲೆ ಮೂಲೆಗಳಿಂದ ವರ್ಷಕ್ಕೆ ೬೦,೦೦೦ ಪ್ರವಾಸಿಕರು ನಯಾಗರಾ ದರ್ಶನ ಪಡೆಯಲು ಬರುತ್ತಿದ್ದರು. ಕೆನಡಾದ ಗ್ರೇಟ್ ವೆಸ್ಟರ್ನ್ ರೇಲ್ವೆಯವರು ನದಿಯ ಮೇಲ್ಗಡೆ ಕೊರಕಲನ್ನು ದಾಟಲು ಸೇತುವೆ ಕಟ್ಟಿದರು. ಮೂವತ್ತು ವರ್ಷಗಳ ನಂತರ ಮಿಚಿಗಾನ್ ರೇಲ್ವೆ ಕಂಪೆನಿ ಮತ್ತೊಂದು ಸೇತುವೆ ಕಟ್ಟಿ ತನ್ನ ಗಾಡಿಗಳನ್ನು ನದಿಯ ಮೇಲ್ಭಾಗದಲ್ಲಿ ಐದು ನಿಮಿಷ ನಿಲ್ಲಿಸಿ ಪ್ರವಾಸಿಕರಿಗೆ ನಯಾಗರಾ ದೇವಿಯ ಭೀಮ ಸೌಂದರ್ಯವನ್ನು ಸವಿಯುವ ಅವಕಾಶವೊದಗಿಸಿತು. ಇಂದು ನಯಾಗರಾ ಸಂದರ್ಶಕರ ಸಂಖ್ಯೆ ವಾರ್ಷಿಕ ೩೦ ಲಕ್ಷಕ್ಕೂ ಹೆಚ್ಚಾಗಿದೆ.



ನಯಾಗರಾ ಜಲಪಾತದ ನೀರು ಸದಾ ಶುಭ್ರವಾಗಿರುವುದು ಅದರ ಸೌಂದರ್ಯವನ್ನು ಹೆಚ್ಚಿಸಿದೆ. ಪ್ರಪಾತದಲ್ಲುರುಳಿದ ನೀರು ತುಂತುರು-ತುಂತುರಾಗಿ ಮೇಲೆ ಚಿಮ್ಮಿ ಕೆಲವೊಮ್ಮೆ ಜಲಪಾತದ ನೆತ್ತಿಯ ವರೆಗೂ ತಲುಪಿ ಹಾಲಿನ ಇಬ್ಬನಿ ಕಂಬದಂತೆ ಕಾಣುತ್ತದೆ. ಸೂರ್ಯಕಿರಣ ಈ ಹನಿಗಳಿಂದ ವಿಭಕ್ತವಾಗಿ ನಯಾಗರಾದಲ್ಲಿ ಮೋಡವಿಲ್ಲದ ದಿನಗಳಲ್ಲೆಲ್ಲ ಶಾಶ್ವತವಾದ ಕಾಮನಬಿಲ್ಲು ಇರುತ್ತದೆ. ಜಲಪಾತದ ಎರಡೂ ಪಾರ್ಶ್ವಗಳಲ್ಲಿರುವ ಭೂಮಿಯನ್ನು ಉಭಯ ಸರಕಾರಗಳು ಕೊಂಡು ಮನೋಹರವಾದ ಉ-ದ್ಯಾನಗಳನ್ನೂ ವಿಹಾರಸ್ಥಾನಗಳನ್ನೂ ನಿರ್ಮಿಸಿ ಆಗಂತುಕರಿಗೆ ಸುಖ-ಸೌಕರ್ಯಗಳನ್ನೊದಗಿಸಿವೆ.

ನಯಾಗರಾದ ಉಗ್ರ ಸ್ವರೂಪವು ದುಸ್ಸಾಹಸಿಗಳನ್ನು ಯಾವಾಗಲೂ ಆಕರ್ಷಿಸಿದೆ. ಜಲಪಾತದ ಮೇಲ್ಭಾಗದ ನದಿಯ ಇಳುಕಲಾದ ಪ್ರವಾಹದಲ್ಲಿ ಈಸುವವರೂ ದೋಣಿ ಸವಾರರೂ ಕೆಳಗೂ ಮೇಲೂ ಸಾಗುವುದು ಬಲು ಸಾಧಾರಣ ಸಾಹಸವೆನಿಸುತ್ತದೆ. ಕೆಲವರು ಪ್ರಪಾತದ ತೀರ ಹತ್ತಿರದ ವರೆಗೆ ಸಾಗಿ ಅದರ ತುಂತುರುಗಳ ಪ್ರೋಕ್ಷಣೆಯನ್ನೂ ಪಡೆಯುತ್ತಾರೆ. ನದಿಯ ನಡುವೆ ಒಂದು ಅಪಾಯ ಸೂಚಕ ಕಂಬವನ್ನು ನಡಲಾಗಿದೆ. ಅದನ್ನು ದಾಟಿ ಕೆಳಗೆ ಹೋದ ಮೇಲೆ ಹಿಂದೆ ಬರುವುದು ಅಸಾಧ್ಯಪ್ರಾಯವಾಗುತ್ತದೆ. ಅಲ್ಲಿ ಅಷ್ಟು ಸೆಳವು.

ನಯಾಗರಾದ ಮೇಲ್ಗಡೆ ಕಂಗೆಡಿಸುವ ಸ್ಟಂಟುಗಳನ್ನು ಆಡಿ ತೋರಿಸಿದವರಿದ್ದಾರೆ. ೧೮೫೯ ರಲ್ಲಿ ನಯಾಗರಾದ ಸಂಯುಕ್ತ ಸಂಸ್ಥಾನಕ್ಕೆ ಸೇರಿದ ಪ್ರವಾಹದ ಮೇಲ್ಗಡೆ ೧,೧೦೦ ಅಡಿ ಅಗಲದ ಕೊರಕಲಿಗೆ ಅಡ್ಡಲಾಗಿ ತಂತಿ ಹಗ್ಗವನ್ನು ಬಿಗಿದು ಬ್ಲಾಂಡಿನ್ ಎಂಬ ಫ್ರೆಂಚ್ ಡೊಂಬನು ಅನೇಕ ಸಲ ಅದರ ಮೇಲೆ ನಡೆದು ಹೋದನು. ಕಾಲು ಜಾರಿದರೆ ೧೬೦ ಅಡಿ ಕೆಳಗೆ ಬಿದ್ದು ಹೇಳಹೆಸರಿಲ್ಲದಂತಾಗಬೇಕಾದೀತೆಂಬುದನ್ನು ಲೆಕ್ಕಿಸದೆ ಅವನು ತಂತಿಯ ನಟ್ಟನಡುವೆ ಒಂದು ಮೇಜು ಹಾಕಿ ಕುರ್ಚಿಯಲ್ಲಿ ಕುಳಿತು ಸ್ಟೌ ಹಚ್ಚಿ ಕಾಫಿ ಮಾಡಿ ಕುಡಿದನು! ೫೦ ವರ್ಷಗಳ ನಂತರ ಮರಿಯಾ ಸ್ಪೆಲ್ಟರಿನಿ ಎಂಬ ಇಟಾಲಿಯನ್ ಮಹಿಳೆ ಕಾಲುಗಳೆರಡನ್ನೂ ಎರಡು ಬುಟ್ಟಿಗಳಲ್ಲಿರಿಸಿ ಕಟ್ಟಿಕೊಂಡು ಬುಟ್ಟಿಗಳ ಸಮೇತ ನಯಾಗರಾ ಪ್ರಪಾತದ ಮೇಲ್ಗಡೆ ಬಿಗಿದ ತಂತಿಯ ಮೇಲೆ ನಡೆದು ಹೋಗಿ ಹೆಂಗಸರು ಕಡಿಮೆಯವರಲ್ಲವೆಂದು ತೋರಿಸಿಕೊಟ್ಟಳು. ಇವೆಲ್ಲವುಗಳಿಗಿಂತಲೂ ಭಯಂಕರವಾದ ಸಾಹಸವೆಂದರೆ ತಂತಿಯ ಮೇಲೆ ಅರ್ಧ ದಾರಿ ನಡೆದುಬಂದು ೧೬೦ ಅಡಿ ಕೆಳಗಿರುವ ಪ್ರವಾಹಕ್ಕೆ ಧುಮುಕಿದ ಸ್ಟೆನರ್ ಬಲ್ಲಿನಿ ಎಂಬ ಇನ್ನೊಬ್ಬ ಇಟಾಲಿಯನ್ನನ ಕೃತ್ಯ. ಆತ ಇದನ್ನು ಮೂರು ಸಲ ಮಾಡಿ ತೋರಿಸಿದ. ಮೂರನೇ ಸಲ ಅವನು ಹೆಚ್ಚು ಕಡಿಮೆ ಸತ್ತು ಸತ್ತು ಬದುಕಿದ. ಆಮೇಲೆ ಈ ಕೃತ್ಯವನ್ನಾತ ಮರಳಿ ಮಾಡಲಿಲ್ಲ.

ಜಲಪಾತದ ಮೇಲಿಂದ ನೀರಿನೊಡನೆ ಕೆಳಗೆ ಜಿಗಿಯುವುದು ಇನ್ನೊಂದು ಸ್ಟಂಟ್. ಅದು ಸುರುವಾದದ್ದು ಬೇರೊಂದು ರೀತಿಯಲ್ಲಿ. ೧೮೨೭ ರಲ್ಲಿ ಒಂದು ದೋಣಿಯಲ್ಲಿ ನಾನಾತರದ ಪ್ರಾಣಿಗಳನ್ನು ತುಂಬಿ ಅದನ್ನು ಪ್ರವಾಹದ ಗುಂಟ ತೇಲಿ ಬಿಡಲಾಯಿತು. ದೋಣಿ ಮೊದಲು ಸಾವಕಾಶವಾಗಿ, ಆಮೇಲೆ ಹೆಚ್ಚು ಹೆಚ್ಚು ರಭಸದಿಂದ ಸಾಗುತ್ತ ಪ್ರಪಾತದ ಅಂಚನ್ನು ದಾಟಿ ಕೆಳಗುರುಳಿ ಜಲರಾಶಿಯಲ್ಲಿ ಕಣ್ಮರೆಯಾಗಿ ಹೋಯಿತು.

ಈ ಕ್ರೂರ ಆಟದ ಕಲ್ಪನೆಯನ್ನು ಬಹುಶಃ ಅದರ ಸಂಘಟಕರು ಈ ಪ್ರಾಂತದ ಸೆನೆಕಾ ಎಂಬ ಮೂಲ ನಿವಾಸಿ ಪಂಗಡದಿಂದ ಕಲಿತಿರಬೇಕು. ಈ ಪಂಗಡದವರು ಪ್ರತಿ ವರ್ಷ ಜಲಪಾತದ ದೇವತೆಗೆ ಒಂದು ಬಲಿ ಕೊಡುತ್ತಿದ್ದರಂತೆ. ನಿರ್ದಿಷ್ಟ ತಿಥಿಯಂದು ಸುಂದರಿಯಾದ ಷೋಡಶಿಯೊಬ್ಬಳನ್ನು ಆರಿಸಿ ವಿಧಿವತ್ತಾಗಿ ಪೂಜೆಗಳನ್ನು ನೆರವೇರಿಸಿ ಪುಷ್ಪಮಾಲ್ಯಗಳನ್ನು

ಒಂದು ದೋಣಿಯಲ್ಲಿ ತುಂಬಿ ಅದರಲ್ಲಿ ಅವಳನ್ನು ನಗ್ನವೇಷದಲ್ಲಿ ಕುಳ್ಳಿರಿಸಿ ಪ್ರಪಾತದಲ್ಲಿ ತೇಲಿಬಿಡುತ್ತಿದ್ದರು. ಹೀಗೆ ಬಲಿಯಾದ ತರುಣಿಯರ ಆತ್ಮಗಳು ಪ್ರಪಾತದ ಕೆಳಗೆ ಮಂಜಾಗಿ ತೇಲುತ್ತಿರುತ್ತವೆಂದು ಪ್ರತೀತಿಯಿತ್ತು. ಅವರಿಗೆ "ಮಂಜಿನ ಮಡದಿ" ಯರೆಂದು ಹೆಸರುಬದ್ದಿದೆ.

ಈ ಮಂಜಿನ ಮಡದಿಯರ ಬಲಿ ಇಂದಿಲ್ಲವಾದರೂ ನಯಾಗರಾ ಪ್ರಪಾತ ನಿರಂತರವಾಗಿ ನರಬಲಿಗಳನ್ನು ಪಡೆಯುತ್ತಲೇ ಇದೆ. ಅನೇಕರಿಗೆ ಅದು ಆತ್ಮಹತ್ಯೆ ಮತ್ತು ಪ್ರಸಿದ್ಧಿಯನ್ನು ಏಕಕಾಲದಲ್ಲಿ ಸಾಧಿಸುವ ಅವಕಾಶವೊದಗಿಸುತ್ತದೆ. ಅನೇಕ ಜನರು ಅಪಘಾತಗಳಿಗೊಳಗಾಗಿ ಪ್ರಾಣ ಕಳೆದುಕೊಳ್ಳುತ್ತಾರೆ. ತಿಂಗಳಿಗೊಬ್ಬರಾದರೂ ನಯಾಗರಾ ಜಲಪಾತಕ್ಕೆ ಆಹುತಿಯಾಗದಿರುವುದು ವಿರಳ.


ಇಂದು ಜನಪ್ರಿಯವಾದ ಜಗಿಯುವ ಸ್ಟಂಟು "ಪೀಪಾಯಿ ಕೃತ್ಯ". ಇದನ್ನು ಪ್ರಾರಂಭಿಸಿದವಳು ಅನ್ನಾ ಟೇಲರ್ ಎಂಬ ದಷ್ಟಪುಷ್ಟಕಾಯದ ಹೆಂಗಸು. ಶಾಲಾ ಮಾಸ್ತರಿಣಿಯಾಗಿದ್ದ ಅವಳು ೧೯೦೧ ರಲ್ಲಿ ಒಂದು ಉಕ್ಕಿನ ಪೀಪಾಯಿಯೊಳಗೆ ಕುಳಿತು ಪ್ರವಾಹದಲ್ಲಿ ತನ್ನನ್ನು ತೇಲಬಿಡಿಸಿಕೊಂಡು ಕುದುರೆ ನಾಲಿನ ಜಲಪಾತದಲ್ಲಿ ಕೆಳಗೆ ಧುಮುಕಿದಳು. ಈ ಹುಚ್ಚು ಸವಾರಿಯ ನಂತರ ಅವಳನ್ನು ಪ್ರಪಾತದ ಕೆಳಗಿನಿಂದ ಪಾರುಮಾಡಿದಾಗ ಅವಳಿಗೆ ತುಂಬ ಆಘಾತವಾಗಿತ್ತಾದರೂ ಅವಳು ಸಾಯಲಿಲ್ಲ. ಅವಳಿಗೆ "ಮಂಜಿನ ಮಡದಿ" ಎಂಬ ಬಿರುದು ಬಂತು. ಅವಳನ್ನನುಸರಿಸಿ ಇಂದಿನ ವರೆಗೆ ಕನಿಷ್ಠ ಏಳು ಜನರಾದರೂ ಪೀಪಾಯಿಗಳಲ್ಲಿ ಕೆಳಗೆ ಹಾರಿದ್ದಾರೆ. ಅವರಲ್ಲಿ ಬದುಕಿದವರು ನಾಲ್ಕು ಜನ ಮಾತ್ರ. ೧೯೧೧ ರಲ್ಲಿ ಅದನ್ನು ಕೈಕೊಂಡ ಬಾಬಿ ಲೀಚನೆಂಬ ಇಂಗ್ಲೀಷನು ಕೈಕಾಲು ಮುರಿದುಕೊಂಡು ಆರು ತಿಂಗಳು ಆಸ್ಪತ್ರೆಯಲ್ಲಿ ಕಳೆದನು. ಅದೇ ವರ್ಷ ಗ್ರೀಸಿನ ಜಾರ್ಜ್ ಸ್ಟಥಾಕಿಸನು ಕೆಳಗೆ ಧುಮುಕಿದ ಮೇಲೆ ೧೪ ತಾಸುಗಳ ವರೆಗೂ ಪೀಪಾಯಿ ಪ್ರಪಾತದ ಬುಡದ ನೀರ ಸುಳಿಯಲ್ಲಿ ಮುಳುಗಿದ್ದುದರಿಂದ ಉಸಿರುಕಟ್ಟಿ ಪ್ರಾಣ ತೆತ್ತ. ೧೯೨೮ ರಲ್ಲಿ ಜೀನ್ ಲಾಸಿಯರನೆಂಬ ಫ್ರೆಂಚನು ರಬ್ಬರಿನ ದೊಡ್ಡ ಚೆಂಡಿನಲ್ಲಿ ಕುಳಿತು ಕೆಳಗೆ ಜಗಿದು ಏನೂ ನೋಯದೆ ಬದುಕಿ ಬಂದನು.

ಜಲಪಾತದಲ್ಲಿ ಕೆಳಗೆ ಬಿದ್ದವರು ಕೆಳಗಿನ ಬಂಡೆಗಲ್ಲುಗಳಿಗೆ ಅಪ್ಪಳಿಸಿ ಚೂರುಚೂರಾಗಿ ಗುಳುಗುಳಿಸುವ ನೀರಿನೊಡನೆ ಮುಳುಗೇಳುತ್ತಾ ನಾಲ್ಕು ದಿನಗಳ ನಂತರ ಕೆಳಗಡೆ "ಮಂಜಿನ ಮಡದಿ ಕಡವು" ಎಂಬಲ್ಲಿ ಬಂದು ಬೀಳುತ್ತಾರೆ. ಅಷ್ಟು ಭೀಕರವಾಗಿದೆ ನಯಾಗರಾದ ಪ್ರಪಾತ.

ಕಳೆದ ಶತಮಾನದಲ್ಲಿ ಭೂಗರ್ಭಶಾಸ್ತ್ರಿಗಳು "ಕುದುರೆ ನಾಲಿನ ಜಲಪಾತ" ಕೆಲ ವರ್ಷಗಳಲ್ಲಿ ತನ್ನಿಂದ ತಾನೇ ನಿರ್ನಾಮವಾಗುತ್ತದೆಂದು ನಂಬಿದ್ದರು. ಆಗ ಅದು ತಾನು ಧುಮುಕುವ ದಿನ್ನೆಯ ಮುಖವನ್ನು ವರ್ಷಕ್ಕೆ ಐದಡಿಯಂತೆ ಕೊರೆಯುತ್ತಲಿತ್ತು. ಆದರೆ ಇಗ ಕೊರೆಯುವಿಕೆ ತೀರ ಕಡಿಮೆಯಾಗಿರುವುದರಿಂದ ಆ ಭಯವಿಲ್ಲೆಂದು ಕೇಳಿ ನಯಾಗರಾದ ಆಚೀಚೆಗಿನ ಜನ ಸಮಾಧಾನದ ನಿಟ್ಟುಸಿರು ಬಿಡುತ್ತಿದ್ದಾರೆ. ಏಕೆಂದರೆ ನಯಾಗರಾ ನೋಡಬರುವ ಪ್ರವಾಸಿಗಳಿಂದಲೇ ಅವರ ಹೊಟ್ಟೆ ತುಂಬುತ್ತದೆ. ✱

ನಿರವದ್ಯಾನಿ ಪದ್ಯಾನಿ ಯದ್ಯನಾಥ್ಯಸ್ಯ ಕಾ ಕ್ಷತಿಃ
ಭಿಕ್ಷುಕಕ್ಷವಿನಿಕ್ಷಿಪ್ತಃ ಕಿಮಿಕ್ಷುರ್ನೀರಸೋ ಭವೇತ್

ಸುಂದರವಾದ ಪದ್ಯಗಳನ್ನು ರಚಿಸಿದಾತನು ಬಡವನಾದರೇನು ತಪ್ಪು? ಭಿಕ್ಷುಕನ ಜೋಳಿಗೆಯಲ್ಲಿದೆಯೆಂದಾಕ್ಷಣ ಕಬ್ಬಿಗನ ಸವಿ ಕುಂದೇ?



ಆಶಾದೇವಿಯ ಅನುಮತಿ

ಎನ್. ಆರ್. ದೇವಭಾನಕ

"ಭಾಷಣ ಹೇಗೆ ಬರುತ್ತಿದೆ, ಅಪ್ಪಾ? ಸಂಜೆಯ ತಿರುಗಾಟಕ್ಕೆ ಹೋಗುವುದಿಲ್ಲವೆ?" ನ್ಯಾಯಾಧೀಶ ಚಕ್ರವರ್ತಿಯವರ ಕೋಣೆಯೊಳಗೆ ಬರಬರುತ್ತ ಹೇಮಂತ ಕೇಳಿದ.

"ಹೋಗಬೇಕು" ಎಂದರು ನಾಯಾಧೀಶರು ನಿಟ್ಟುಸುರುಬಿಡುತ್ತ. "ಭಾಷಣಗಳಲ್ಲಿ ಆರಂಭದ ಮತ್ತು ಕೊನೆಯ ಮಾತುಗಳೇ ತಲೆತಿನ್ನುತ್ತವೆ ಅವೊಮ್ಮೆ ಸರಿಯಾದವು ಎಂದರೆ ಮುಖ್ಯ ಭಾಗ. ಸಹಜವಾಗಿ ಬಂದುಬಿಡುತ್ತದೆ. ಮತ್ತೆ ವಿಜ್ಞಾನ ಸಂಘದ ಸಭಾಸದರು ತುಂಬ ಚಿಕಿತ್ಸಕ ದೃಷ್ಟಿಯವರಿರುತ್ತಾರೆ."

ತಂದೆಯ ಮೇಜಿನ ಮೇಲೆ ಕುಳಿತುಕೊಂಡ ಹೇಮಂತ. "ನನಗೂ ನಿಮ್ಮಂತೆ ಭೂಗೋಲ ಶಾಸ್ತ್ರದಲ್ಲಿ ಆಸ್ಥೆಯಿದ್ದಿದ್ದರೆ ಚೆನ್ನಾಗುತ್ತಿತ್ತು. ಆದರೆ ನನ್ನ ತಲೆಗೆ ಅದು ಹೋಗುವುದೇ ಇಲ್ಲ." ಅವನ ತುಟಿಯಲ್ಲಿ ನಗು ಮಿಂಚಿತು. ಆತ "ಈ ಒಂದೇ ಮನೆಯಲ್ಲೀಗ ಎರಡು ಅಧ್ಯಕ್ಷೀಯ ಭಾಷಣಗಳು ಬರೆಯಲ್ಪಡುತ್ತಿವೆ ಎಂಬುದು ಎಂಥ ಮೋಜಿನ ಮತ್ತು ಯೋಗಾಯೋಗದ ಮಾತು! ಅಮ್ಮ ತನ್ನ ಭಾಷಣದ ವಿಚಾರದಲ್ಲಿ ತುಂಬ ಉದ್ವಿಗ್ನಳಾಗಿಬಿಟ್ಟಿದ್ದಾಳೆ" ಎಂದ.

"ಅಂದರೆ ಅವಳಿಗೆ ಸಮಾಜ ಸುಧಾರಣಾ ಸಂ-

ಘದ ಪತ್ರ ಬಂತೇ?"

"ಇಲ್ಲ. ಆದರೆ ಅದು ಖಂಡಿತ ಬರುತ್ತದೆಂದು ಅಮ್ಮ ನಂಬಿದ್ದಾಳೆ. ಅಪ್ಪಾ, ನಿಮ್ಮ ಕೆಲಸಕ್ಕೇನಾದರೂ ನನ್ನಿಂದ ಆತಂಕವಾಗುತ್ತಿಲ್ಲವಷ್ಟೆ?" ಹೇಮಂತ ತುಸು ಗಾಬರಿಯಿಂದಲೇ ಕೇಳಿದ.

"ಹೌದು. ಆದರೆ ನಿನ್ನನ್ನು ನೋಡಿದರೆ ಏನೋ ಹೇಳಬೇಕೆಂದಿರುವಿ ಎಂದು ಕಾಣುತ್ತದೆ. ಹೇಳಿಬಿಡು. ಒಂದು ಕೆಲವು ನಿಮಿಷಗಳ ವರೆಗ. . . ."

"ನಾನೇ–ಅಂ–ನಾನೇ ಪ್ರ–ಸ್ತಾಪಿಸುವ ವರೆಗೆ ನನ್ನ ಲ–ಲಗ್ನದ ಮಾತು ಎತ್ತುವುದಿಲ್ಲವೆಂದು ನೀವು ಹೇಳಿದ್ದಿರಲ್ಲವೆ?"

"ಹೌದು. ಮತ್ತೆ ನಾನು ಆ ಮಾತನ್ನಾದರೂ ಎಲ್ಲಿ ಎತ್ತಿದ್ದೇನೆ? ನಮ್ಮ ಮನೆಯಲ್ಲಿನ ಯಾರ ಲಗ್ನದ ವಿಚಾರವೂ ನನ್ನ ತಲೆಯಲ್ಲಿ ಬಂದಿಲ್ಲ. ಆದರೂ ಅಂದಹಾಗೆ, ನಮ್ಮ ಮನೆಯವಳಂತೆಯೆ ಇರುವ ವಿಮಲೆಯ ಲಗ್ನದ ಅಥವಾ ಭವಿಷ್ಯದ ಬಗ್ಗೆ ಇತ್ತೀಚೆಗೆ ಸ್ವಲ್ಪ ಯೋಚಿಸಿದ್ದುಂಟು. ಆದರೆ ನಿನ್ನ ಮಟ್ಟಿಗ ಹೇಳುವುದಾದರೆ ಇನ್ನೂ ಎರಡು ವರ್ಷ ಕಳೆಯಲಿ, ನಿನಗೆ ಇಪ್ಪತ್ತೈದಾಗಿ ನೀನು—"

"ಹೌದು ಹೌದು." ಹೇಮಂತ ನಡುವೆಯೇ ಹೂಂಗುಟ್ಟಿ ಮೇಜಿನ ಮೇಲಿಂದ ಕಂಪಾಸ್ ಪೆಟ್ಟಿಗೆಯನ್ನು ಸುಳ್ಳೇ ತೆರೆದು ಮುಚ್ಚಿ ಮಾಡತೊಡಗಿದ.

"ನಿನ್ನ ಅಮ್ಮನ ಅವಸರವಿರಬೇಕು ಇದು. ಸೊಸೆಯ ಮೇಲೆ ಅಧಿಕಾರ ಚಲಾಯಿಸುವ ಹಂಬಲ ಪ್ರತಿಯೊಬ್ಬ ಸ್ತ್ರೀಗೂ ಇದ್ದೇ ಇರುತ್ತದೆ. ಆದರೆ ನೀನು ಕಾಳಜಿ ಮಾಡಬೇಡ. ನಿನ್ನ ಅಮ್ಮನನ್ನು ನಾನು ಸಮಾಧಾನ ಮಾಡುತ್ತೇನೆ ಆಯಿತೆ? ಇನ್ನು ನನ್ನ ಕೆಲಸ ಮಾಡಲು ಅವಕಾಶಕೊಡು."

"ಆದರೆ ಅಪ್ಪಾ, ನೀವಂದ ಹಾಗಿಲ್ಲ. ಅಮ್ಮನ ಅವಸರವೇನೂ ಇಲ್ಲ ಇದರಲ್ಲಿ. ನಾನು–ಅಂದರೆ–ನಾನು–ನಾನು ಲಗ್ನವಾಗಲು ನೀವು ಒಪ್ಪಿಗೆ ಕೊಡುತ್ತೀರಾ ಎಂದು ಕೇಳಿದೆ."

"ಲಗ್ನಕ್ಕೆ ಒಪ್ಪಿಗ? ಯಾರ ಲಗ್ನ? ನಿನ್ನದೆ?" ಆಶ್ಚರ್ಯದಿಂದ ಚಕ್ರವರ್ತಿ ಕೇಳಿದರು.

"ಹೌದಪ್ಪಾ."

"ಅಂ! ಏನಿದು ಆಕಸ್ಮಾತ್ ಸುದ್ದಿ? ನೀನು ಲಗ್ನವಾಗಲು ಹಾತೊರೆಯುತ್ತಿರುವಿ ಎಂದು ನನಗೆ ತಿಳಿದಿರಲಿಲ್ಲ. ಈ ನಿನ್ನ ಆತುರವನ್ನು ಕೆರಳಿಸಿದವರು ಯಾರು? ಆ ಹುಡುಗಿಯ ಹೆಸರೇನು?"

"ಆಕಸ್ಮಾತ್ತೇನೂ ಅಲ್ಲ ಅಪ್ಪಾ. ಆ ಹುಡುಗಿಯ ಹೆಸರು–ಅವಳು ನಮ್ಮ–ವಿ–ವಿಮಲೆ."

"ಅಂ!" ಅರ್ಥವಾಗದವರಂತೆ ಚಕ್ರವರ್ತಿ ಉದ್ಗಾರ ತೆಗೆದರು.

"ಹೌದು. ನಿಮಗೆ ಒಪ್ಪಿಗೆ ತಾನೇ? ನೀವವಳನ್ನು ತುಂಬ ಪ್ರೀತಿಸುತ್ತೀರಿ ಎಂದು ಬಲ್ಲೆ ನಾನು."

"ಹೌದು. ಆದರೆ ನಿನ್ನ–ಅವಳ ಸಂಬಂಧದಲ್ಲಿ ಇಂಥ ವಿಚಾರ ಮಾಡಿರಲಿಲ್ಲ. ಯಾಕೊ–ಇರಲಿ. ಅವಳೇನೆನ್ನುತ್ತಾಳೆ? ಅವಳನ್ನು ಕೇಳಿದ್ದೀಯಾ?"

"ಅವಳ ಒಪ್ಪಿಗೆ ಇದೆ ಎಂದು ತಿಳಿದಿದ್ದೇನೆ."

"ಹುಂ. ಆದರೆ ನಿನ್ನ ಅಮ್ಮನ ವಿಚಾರವೇನು? ಈ ಸುದ್ದಿ ಕೇಳಿ ಅವಳಿಗೆ ಆಶ್ಚರ್ಯವಾಗುವುದು ಖಂಡಿತ. ಅವಳಿಗೆ ಆಶ್ಚರ್ಯದ ಮಾತು ಎಂದರೆ ಆಗುವುದಿಲ್ಲವೆಂದು ನೀನು ಬಲ್ಲೆ."

"ಆದರೆ ಇದೇ ಈಗ ಅವಳನ್ನು ಸಮಾಧಾನಪಡಿಸಬಲ್ಲೆ ಎಂದು ನೀವು ಹೇಳಿದಿರಲ್ಲ, ಅಪ್ಪಾ."

"ಓ! ಈ ಮಾತಿನ ಬಗ್ಗಲ್ಲ ಹಾಗೆ ಹೇಳಿದ್ದು. ನಿನ್ನ ಲಗ್ನದ ವಿಚಾರ ಮುಂದೂಡುವಂತೆ ಅವಳನ್ನೊಪ್ಪಿಸಬಹುದು ಎಂದು ನನ್ನ ಅಭಿಪ್ರಾಯವಾಗಿತ್ತು. ಆದರೆ ಈಗ—ಇರಲಿ ಆ ಮಾತು. ನಾವು ತುಂಬ ಜಾಗರೂಕತೆಯಿಂದ ಹೆಜ್ಜೆಯಿಡಬೇಕು ಮಗು. ನೀನೆ ಅವಳ ಹತ್ತಿರ ಇಂದು ರಾತ್ರಿ ಪ್ರಸ್ತಾಪಮಾಡು. ನನ್ನ ಹತ್ತಿರ ಮಾತಾಡಿದ್ದನ್ನು ಹೇಳಬೇಡ. ಆ ಮೇಲೆ ನೋಡೋಣವಂತೆ. ಆಯಿತೆ? ಇನ್ನು ಹೋಗು. ಭಾಷಣ ಬರೆಯುವ ಕೆಲಸವಿದೆ ನನಗೆ."

ಶಾಲಾಮಾಸ್ತರ ತಂದೆ ಸತ್ತಾಗ ವಿಮಲೆಗಿನ್ನೂ ಬರಿ ಎಂಟು ವರ್ಷ. ಅವಳ ಈ ಚಿಕ್ಕ


ಶುಭ್ರವಾದ
ಒಗೆಗೆ
ನಿರಾಲಾ
ಬಾರ್
ಸಾಬೂನ್
Nirala
ತುಂಗಭದ್ರಾ ಇಂಡಸ್ಟ್ರೀಸ್ ಲಿಮಿಟೆಡ್, ಕರ್ನೂಲ್.

ವಯಸ್ಸಿನಲ್ಲಿ ಅವಳ ಮೇಲೆರಗಿದ್ದ ಭೀಕರ ವಿಪತ್ತುಗಳಲ್ಲಿ ಇದು ಎರಡನೆಯದಾಗಿತ್ತು. ಆರು ತಿಂಗಳ ಹಿಂದೆಯೆ ಅವಳ ಪುಟ್ಟ ಗಂಡ ತೀರಿ ಹೋಗಿ ಅವಳಿಗೆ ವೈಧವ್ಯವನ್ನು ತಂದೊಡ್ಡಿದ್ದ. ಅನಾಥಳಾದ ವಿಮಲೆಯ ತಾಯಿ ವಿನಯಬಾಲಾ ಒಂದು ವರ್ಷ ಕಾಲವನ್ನು ಹಾಗೂ ಹೀಗೂ ಕಳೆಯುವಷ್ಟರಲ್ಲಿ ಅವರಿಗೆ ಸುದೈವದಿಂದ ತರುಣರೂ ಪ್ರಸಿದ್ಧಿಗೆ ಬರುತ್ತಿದ್ದವರೂ ಆದ ಬ್ಯಾರಿಸ್ಟರ್ ಚಕ್ರವರ್ತಿಯವರಲ್ಲಿ ಆಶ್ರಯ ಸಿಕ್ಕಿತ್ತು. ವಿನಯಬಾಲಾ ತನ್ನ ವಿನಯ ಮತ್ತು ಕಾರ್ಯ ತತ್ಪರತೆಯಿಂದ ಚಕ್ರವರ್ತಿ ಹಾಗೂ ಅವರ ಪತ್ನಿ ಆಶಾದೇವಿಯರ ಕೃಪೆಗೆ ಪಾತ್ರರಾಗಿ ಮನೆಯವರಂತೆಯೆ ಆಗಿಬಿಟ್ಟಿದ್ದಳು. ವಿಮಲೆ ಚಕ್ರವರ್ತಿಯವರನ್ನು ಕಕ್ಕಾ ಎಂದೂ ಆಶಾದೇವಿಯನ್ನು ಕಕ್ಕೀ ಎಂದೂ ಕರೆಯತೊಡಗಿದ್ದಳು. ಈಗ ಚಕ್ರವರ್ತಿ ಡಾಕ್ಕಾದಲ್ಲಿ ನ್ಯಾಯಾಧೀಶರಾಗಿದ್ದರು. ಆಶಾದೇವಿ ಮಹಿಳಾ ಚಳವಳಿಯ ಧುರೀಣಳಾಗಿದ್ದರು. ಮಗ ಹೇಮಂತ ಕಾಯದೆ ಓದುತ್ತಿದ್ದ.

*

ಅಂದು ರಾತ್ರಿ ಭೋಜನಾನಂತರ ಮಾಳಿಗೆಯ ಕಟಾಂಜನದಲ್ಲಿ ನ್ಯಾಯಾಧೀಶರು ಹೆಂಡತಿಗೆ "ನೀನು ಅಧ್ಯಕ್ಷಳಾಗುವುದು ಖಂಡಿತ ಎಂದು ಹೇಮಂತ ಹೇಳುತ್ತಾನೆ" ಎಂದರು.

"ಹೌದು. ಅದು ನಿಶ್ಚಯವಾದಂತೆಯೆ. ಔಪಚಾರಿಕ ಆಮಂತ್ರಣ ಬರುವುದನ್ನೆ ಕಾಯುತ್ತಿದ್ದೇನೆ" ಆಶಾದೇವಿ ಹೇಳಿದರು.

"ಆ ಬಗ್ಗೆ ಪತ್ರಿಕೆಗಳಲ್ಲಿ ಒಂದಿಷ್ಟು ಪತ್ರವ್ಯವಹಾರ ನಡೆದಿತ್ತಲ್ಲ! ಯಾರೊ ಶ್ರೀಮತಿ ಬ್ಯಾನರ್ಜಿಯವರ ಪರವಾಗಿ ಪ್ರಚಾರ ಮಾಡುತ್ತಿರಬೇಕು."

"ಹೌದು. ಅವರಿಗೆ ಮನಸ್ಸಿದ್ದರೆ ಆ ಐ.ಸಿ.ಎಸ್. ಕಲೆಕ್ಟರನ ಹೆಂಡತಿಯನ್ನೆ ಅಧ್ಯಕ್ಷೆ ಎಂದು ಆರಿಸಿಕೊಳ್ಳಲಿ. ನಾನೇನೂ ಈ ಗೌರವಕ್ಕಾಗಿ ಹಪಾಪಿಸಿ ಕುಳಿತಿಲ್ಲ. ಅವರು ತಮ್ಮನ್ನು ನಗೆಗೇಡು ಮಾಡಿಕೊಳ್ಳಬಯಸಿದರೆ ನಾನೇನು ಮಾಡಲಿ?"

"ಅವಳು ನಿನ್ನಂತೆ ಪದವೀಧರಳಲ್ಲ. ನಿನ್ನಂತೆ ಒಳ್ಳೆಯ ಭಾಷಣ ಮಾಡಲಾರಳು ನಿಜ. ಆದರೆ ಒಬ್ಬಾತ ಅವಳು ತುಂಬ ಪ್ರವಾಸ ಮಾಡಿದ್ದಾಳೆ ಎಂದೆಲ್ಲ . . ."

"ಹಣವಿದ್ದರೆ ಯಾವ ಹುಚ್ಚನಾದರೂ ಪ್ರವಾಸ ಮಾಡಬಲ್ಲ."

"ಆದರೆ ಅವರು ತಮ್ಮ ಮಗಳನ್ನು ಪರಜಾತಿಯವನಿಗೆ ಕೊಟ್ಟು ಲಗ್ನ ಮಾಡಿದ್ದಾರಲ್ಲ."

"ಹೌದು. ಅದನ್ನೆ ಒಂದು ದೊಡ್ಡ ವಿಶೇಷವೆಂದು ಡಂಗುರ ಹೊಡೆದರು. ಆ ಗಿಳಿಮೂಗಿನ ಹುಡುಗಿಗೆ ಯಾವ ಬ್ರಾಹ್ಮಣ ವರನೂ ಸಿಗದಾಗ ಅವರ ಸಮಾಜ ಸುಧಾರಣೆಯ ಪ್ರೀತಿ ಉಕ್ಕಿ ಬಂದಿತು."

"ಅದೇನೇ ಇರಲಿ. ಆ ವಿಷಯದಲ್ಲಿ ಮಾತ್ರ ಅವಳು ನಿನಗಿಂತಲೂ ಮುಂದಿದ್ದಾಳೆ. ಪ್ರಗತಿಪರ ಸ್ತ್ರೀ ಮಾಲಿಕೆಯಲ್ಲಿ ಸೇರಲು ಅವಳು ಅಂತರ್ಜಾತೀಯ ವಿವಾಹವನ್ನು ತನ್ನ ಮನೆಯಲ್ಲಿ ನೆರವೇರಿಸಿದ್ದಾಳೆ. ಪುನರ್ವಿವಾಹವನ್ನು ಮಾಡಿಕೊಂಡಿದ್ದಾಳೆ. ಒಂದು ಮಾತು ನಿಜ. ನೀನು ಪುನರ್ವಿವಾಹವಾಗಲು ಅಡ್ಡಿಯಾದವನು ನಾನೇ ಎಂದು ಮಾತ್ರ. . . ."

"ಛಿ! ಎಂಥ ಮಾತಾಡುತ್ತೀರಿ?" ಆಶಾದೇವಿ ಹೇಳಿದಳು. ಅವಳಿಗೆ ಬೇಸರವಾದರೂ ಗಂಡನ ಮಾತಿನಲ್ಲಿಯ ವಿನೋದ ಹೊಳೆಯದಿರಲಿಲ್ಲ. ಅವಳು ತುಟಿಗಳಲ್ಲಿ ಮಿಂಚಿದ ನಗುವನ್ನು ತಡೆದುಕೊಂಡು "ಒಂದಿಷ್ಟು ಗಂಭೀರರಾಗಿ ನೋಡೋಣ. ಹೇಮಂತನ ಬಗ್ಗೆ ಮಾತಾಡತಕ್ಕದ್ದಿದೆ" ಎಂದಳು.

"ಏನಾಗಿದೆ ಅವನಿಗೆ?"

"ಮತ್ತೇನಿಲ್ಲ. ಮದುವೆಯ ಹುಚ್ಚು ಹಿಡಿದಿದೆ."

"ಸೊಸೆಯನ್ನು ಬಯಸಿದವಳು ನೀನೇ ಅಲ್ಲವೆ?"

"ಹೌದು. ಆದರೆ ಆತ ವಿಮಲೆಯನ್ನು ಲಗ್ನವಾಗುತ್ತೇನೆನ್ನುತ್ತಾನೆ."

"ಹೀಗೇನು? ಎಲಾ ಕಳ್ಳ!"

"ಎಂಥ ಹುಚ್ಚು ಮಾತು ಇದು ಅಲ್ಲವೆ?"

"ಬಿಸಿ ರಕ್ತ ಹಾಗೆ ಮಾಡಿಸುತ್ತದೆ. ಆದರೆ ಹುಚ್ಚು ಮಾತು ಎಂದೆಯಲ್ಲ; ಯಾಕೆ? ನಾವೇನೂ ಸಂನ್ಯಾಸಿಯಾಗೆಂದು ಅವನಿಗೆ ಹೇಳಲು ಸಾಧ್ಯವಿಲ್ಲ ತಾನೆ?"

"ಹುಡುಗಾಟಿಕೆ ಮಾಡಬೇಡಿ. ಅವನು ಇನ್ನೂ ಒಳ್ಳೆಯ ಸಂಬಂಧ ಹೊಂದಬೇಕು ಎಂದು ನಾನನ್ನುತ್ತೇನೆ. ಬ್ಯಾರಿಸ್ಟರ್ ಚಟರ್ಜಿಯವರ ಹೆಂಡತಿ ತನ್ನ ಮಗಳ ಬಗ್ಗೆ ಪ್ರಸ್ತಾಪವೆತ್ತಿದಂತೆ ಮಾಡಿದ್ದಾಳೆ. ನಾವು ಬಯಸಿದರೆ ಬೇಕಷ್ಟು ದೊಡ್ಡ ವರ ಸಂಬಂಧ ಸಾಧ್ಯವಾದೀತು. ಆದರೆ ಹೇಮಂತನಿಗೆ ನಿಮ್ಮಂತೆಯೆ ಮಹತ್ವಾಕಾಂಕ್ಷೆ ಎಂಬುದೇ ಇಲ್ಲ."

"ಯಾಕೆ? ನಾನು ಮಾಡಿಕೊಂಡ ಹೆಂಡತಿಯೇನೂ ಕಡಿಮೆಯವಳಲ್ಲವಲ್ಲ. ನನ್ನಷ್ಟೆ ಒಳ್ಳೆಯ ಹೆಂಡತಿ ಆತನಿಗೆ ಸಿಕ್ಕರೆ.."

"ಹೊಗಳಿ ಮಾತು ಮರೆಸಲೆತ್ನಿಸಬೇಡಿ."

"ವಿಮಲೆ ಶ್ರೀಮಂತಳಲ್ಲ ಎನ್ನುತ್ತಿ ತಾನೆ! ಆದರೆ ನೀನೇ ಅವಳನ್ನು ಬೆಳೆಸಿರುವಿ. ಅವಳು ಕಾಲೇಜಿಗೆ ಹೋದಾಗ ಅವಳ ತಾಯಿಗಿಂತಲೂ ಹೆಚ್ಚು ಅಭಿಮಾನಪಟ್ಟುಕೊಂಡವಳು ನೀನು. ಹೇಮಂತ ಮಾಡಿದ್ದೇನೂ ಮಹಾಪರಾಧವಲ್ಲ. ಮಿಶನ್ ಸ್ಕೂಲಿನ ಯಾವಳಾದರೂ ಬಣ್ಣದ ಬೊಂಬೆಯನ್ನು ಆತ ಕಟ್ಟಿಕೊಂಡು ಬಂದಿದ್ದರೆ ——"

ಆಶಾದೇವಿಗೆ ಏನು ಹೇಳಬೇಕೊ ತಿಳಿಯಲಿಲ್ಲ. ಅವಳು "ವಿಮಲೆಯನ್ನು ನಾನು ಪ್ರೀತಿಸುವುದೇನೊ ನಿಜ. ಆದರೆ ಹೇಮಂತ ಅವಳನ್ನು ಲಗ್ನವಾಗುವುದು ಸಾಧ್ಯವಿಲ್ಲ. ಅವನಿಗಾಗಿ ಇನ್ನೂ ಒಳ್ಳೆಯ ಸಂಬಂಧ ಬರಬೇಕು. ಈ ಮಾತನ್ನು ಅವನಿಗೆ ಹೇಳಿದ್ದೇನೆ. ನಿಮಗೂ ಹೇಳಿದ್ದೇನೆ. ಇನ್ನುಮೇಲೆ ಅವನಿಷ್ಟ. ಮಗನ ಲಗ್ನದಲ್ಲಿ ತಾಯಿ ಇರಲೇಬೇಕು ಎನ್ನುವ ಕಾಲವೇನೂ ಇದಲ್ಲವಲ್ಲ."

"ಅದರಂತೆ ತಂದೆಯ ಅಗತ್ಯ ಕೂಡ ಉಳಿದಿಲ್ಲ. ಹೋಗಲಿ ಬಿಡು ಈಗ ಸದ್ಯಕ್ಕೆ ಆ ಮಾತು. ಈ ದೂರದರ್ಶಕದಲ್ಲಿ ಶನಿಗ್ರಹವನ್ನು ನೋಡು. ಎಷ್ಟು ಚೆನ್ನಾಗಿ ಕಾಣಿಸುತ್ತಾನೆ. ಒಂಭತ್ತು ಚಂದ್ರಗಳಿಂದ ಕೂಡಿದ ಆ ಗ್ರಹದಲ್ಲಿ ಪ್ರಣಯ ವಿಲಾಸಕ್ಕೆ ತುಂಬ ಕಳೆ ಬರಬಹುದು ಅಲ್ಲವೆ?"

*

ದಿನಗಳು ಉರುಳಿದಂತೆ ಚಕ್ರವರ್ತಿಯವರ ಮನೆಯ ವಾತಾವರಣ ಬಿಸಿಯಾಗುತ್ತ ನಡೆಯಿತು. ಮಗನ ವ್ಯವಹಾರವೊಂದು ಕಡೆ ಆಶಾದೇವಿಯನ್ನು ಪೀಡಿಸುತ್ತಿದ್ದರೆ ಇನ್ನೊಂದು ಕಡೆ ಅಧ್ಯಕ್ಷ ಪದದ ಆಮಂತ್ರಣ ಇನ್ನೂ ಬಾರದಿದ್ದುದು ಅವಳಿಗೆ ತಾಪವನ್ನುಂಟುಮಾಡುತ್ತಿತ್ತು. ಶ್ರೀಮತಿ ಬ್ಯಾನರ್ಜಿಯವರ ಪರವಾಗಿ ಪತ್ರಿಕೆಗಳಲ್ಲಿ ಇನ್ನೂ ಕೆಲ ಲೇಖಗಳು ಪ್ರಕಟವಾಗಿದ್ದವು. ಚಕ್ರವರ್ತಿಯವರು ಮಾತ್ರ ವಿಜ್ಞಾನ ಪರಿಷತ್ತಿನ ಅಧ್ಯಕ್ಷ ಭಾಷಣ ಬರೆಯುವುದರಲ್ಲಿ ತಲ್ಲೀನರಾಗಿ ಪ್ರಸನ್ನಚಿತ್ತದಿಂದ ಇದ್ದರು.

ಒಂದು ದಿನ ಮುಂಜಾನೆ ಕಾಫಿಯಾದ ನಂತರ ತಂದೆ-ಮಗ ಜಗುಲಿಯ ಮೇಲೆ ಕುಳಿತಿದ್ದಾಗ ಪತ್ರಿಕೆಯೊಂದನ್ನು ಹಿಡಿದುಕೊಂಡು ಆಶಾದೇವಿ ಬಿರುಗಾಳಿಯಂತೆ ಬಂದು "ನೋಡಿದಿರೇನು, ಎಂಥೆಂಥ ಸುಳ್ಳು ಬರೆಯುತ್ತಿದ್ದಾರೆ!" ಎಂದಳು.

"ಏನು ಬರೆದಿದ್ದಾರಮ್ಮಾ?" ಹೇಮಂತ ಕೇಳಿದ.

ಆಶಾದೇವಿ ಪತ್ರಿಕೆಯನ್ನು ಅವನೆದುರು ಹಿಡಿದಳು. ಪತ್ರಿಕೆಯಲ್ಲಿ ಒಂದು ಪತ್ರ ಪ್ರಕಟವಾಗಿತ್ತು. ಆಶಾದೇವಿ ಹೇಮಂತ-ವಿಮಲೆಯರ ಲಗ್ನವನ್ನು ವಿಮಲೆ ವಿಧವೆ ಎಂಬ ಕಾರಣಕ್ಕಾಗಿ ವಿರೋಧಿಸಿದ್ದಳು ಎಂಬರ್ಥ ಬರುವಂತೆ ಆ ಪತ್ರದ ಧಾಟಿಯಿತ್ತು. ಇದು ನಿಜವಿದ್ದಲ್ಲಿ ಸಮಾಜ ಸುಧಾರಕ ಪರಿಷತ್ತಿನ ಅಧ್ಯಕ್ಷರನ್ನು ಆರಿಸುವಾಗ ವಿಚಾರ ಮಾಡಬೇಕು ಎಂದು ಹೇಳಲಾಗಿತ್ತು.

ಎಷ್ಟು ರುಚಿಕರ!



ಮನೆಗಳಿಗೆ—ಹೋಟೆಲುಗಳಿಗೆ

ಬ್ರೂಕ್ ಬಾಂಡ್

ಸ್ಪೆಷಲ್ ಹೋಟೆಲ್ ಬ್ಲೆಂಡ್

ಡಸ್ಟ್ ಟೀ

- ★ ಪ್ರತಿ ಪೊಟ್ಟಣ ನಿಮಗೆ ಹೆಚ್ಚು ಬಟ್ಟಲು ಉತ್ತಮ ಚಹವನ್ನು ನೀಡುವುದು
- ★ ತೇವ ತಗಲದಂತೆ ಪೊಟ್ಟಣ ಕಟ್ಟುವಿಕೆಯ ನಿಮಿತ್ತ ಅತ್ಯಂತ ಪರಿಶುದ್ಧವಾಗಿರುವುದು
- ★ ಮಿಲಿಯಗಟ್ಟಲೆ ಮನೆಗಳಲ್ಲಿ ಇದನ್ನು ಕುಡಿದು ಆನಂದ ಪಡೆಯುತ್ತಿದ್ದಾರೆ

3 ಗಾತ್ರಗಳಲ್ಲಿ ದೊರೆಯುತ್ತದೆ

500 ಗ್ರ್ಯಾಮ್, 100 ಗ್ರ್ಯಾಮ್,
50 ಗ್ರ್ಯಾಮ್

JWT BB 386

"ಎಂಥ ಉದ್ಧಟತನ! ಇನ್ನೊಬ್ಬರ ಖಾಸಗಿ ಜೀವನದಲ್ಲಿ ಕೈಹಾಕಲು ಇವರಿಗೇನು ಅಧಿಕಾರ?" ಎಂದು ಹೇಮಂತ ಅಬ್ಬರಿಸಿದ.

"ಸಾರ್ವಜನಿಕರ ಪ್ರೀತಿಯನ್ನು ಸಂಪಾದಿಸುವವರು ಈ ಬೆಲೆಯನ್ನು ತೆರಬೇಕಾಗುತ್ತದೆ," ಚಕ್ರವರ್ತಿಯವರು ಹೇಳಿದರು.

"ಈ ಅಧ್ಯಕ್ಷ ಪದ ಹಾಳಾಯಿತು. ನಾನೇನೂ ಅದಕ್ಕಾಗಿ ಬಾಯ್ತೆರೆದು ಕುಳಿತುಕೊಂಡಿಲ್ಲ. ಆದರೆ ಹೀಗೆ ಸುಳ್ಳುಸುಳ್ಳೆ ಕುತ್ಸಿತ ಪ್ರಚಾರ ಮಾಡುತ್ತಾರಲ್ಲ, ಅದಕ್ಕಾಗಿ ದುಃಖವಾಗುತ್ತದೆ. ಹೇಮಂತ ವಿಮಲೆಯನ್ನು ಲಗ್ನವಾಗುವುದು ಬೇಡ ಎಂದು ನಾನು ಎನ್ನುವುದಕ್ಕೆ ಅವಳು ವಿಧವೆಯೆಂಬುದು ನನ್ನ ಕಾರಣವಲ್ಲ ಎಂಬುದನ್ನು ನೀವು ಬಲ್ಲಿರಿ." ಆಶಾದೇವಿಯ ಕಣ್ಣುಗಳಲ್ಲಿ ನೀರು ಬಂದವು.

"ಗೊತ್ತಿದೆ ಅಮ್ಮಾ. ಈ ಪತ್ರ ಬರೆದವ ನನ್ನ ಕಣ್ಣಿಗೆ ಬಿದ್ದರೆ–ಒಂದು ಕೈ ನೋಡಿಬಿಡುತ್ತಿದ್ದೆ."

"ಸಾರ್ವಜನಿಕ ಜೀವನದಲ್ಲಿ ಕಾಲಿಟ್ಟವರು ಇಂಥ ಸಣ್ಣ ಮಾತಿಗೆಲ್ಲ ಬೇಸರಪಟ್ಟುಕೊಳ್ಳಬಾರದು" ಚಕ್ರವರ್ತಿ ನುಡಿದರು.

"ಸಣ್ಣ ಮಾತೇನು ಇದು! ಒಂದು ಮನೆತನದ ಅಂತರಂಗದ ವ್ಯವಹಾರವನ್ನು ಹೀಗೆ ತಪ್ಪುತಪ್ಪಾಗಿ ಬಯಲಿಗೆಳೆಯುವುದು ಸಣ್ಣ ಮಾತಲ್ಲ."

"ಈ ವಿಚಾರ ನನಗೆ ಬಿಟ್ಟುಬಿಡಮ್ಮ. ನಾವೂ ಒಂದು ಲೇಖ ಬರೆದು ಈ ಪತ್ರ ಬರೆದವನ.." ಹೇಮಂತ ಹೇಳಿದ.

"ಲೇಖ! ಯಾಕೆ ಅಷ್ಟು ಕಷ್ಟ? ಎರಡೇ ಎರಡು ಸಾಲು ಬರೆದು ನಾನು ಅವನಿಂದ ಕ್ಷಮಾಪಣೆ ಪಡೆಯಬಲ್ಲೆ" ಎಂದರು ಚಕ್ರವರ್ತಿಗಳು.

"ಹಾದೇನು? ಹಾಗಿದ್ದರೆ ಹಾಗೇಕೆ ಮಾಡುವುದಿಲ್ಲ?"

"ಸರಿ. ಬರೆದು ಕೊಡುತ್ತೇನೆ" ಎಂದು ಕಾಗದದ ಮೇಲೆ ಎರಡು ವಾಕ್ಯಗಳನ್ನು ಬರೆದು ಚಕ್ರವರ್ತಿಯವರು ಹೆಂಡತಿಗೆ "ಹಿಡಿ. ನಿನ್ನ ಸಹಿ ಹಾಕಿ ಇದನ್ನು ಪತ್ರಿಕೆಗೆ ಕಳಿಸು. ಏನಾಗುವುದೊ ನೋಡು" ಎಂದರು.

ಆಶಾದೇವಿ ಮತ್ತು ಹೇಮಂತ ಓದಿದರು.

"ನ್ಯಾಯಾಧೀಶ ಚಕ್ರವರ್ತಿಯವರ ಮಗ ಹೇಮಂತಕುಮಾರ ಮತ್ತು ಕುಮಾರಿ ವಿಮಲಾ ಭಟ್ಟಾಚಾರ್ಯರ ವಿವಾಹ ನಿಶ್ಚಿತವಾಗಿದೆ."

"ಎಲಾ! ಹೌದು. ಒಳ್ಳೇ ಅಸ್ತ್ರವಿದು."

ಮುಖ ಅರಳಿದ ಹೇಮಂತ ಹೇಳಿದ. "ಅಮ್ಮಾ, ಕಳಿಸಿಬಿಡಮ್ಮಾ. ನಿನ್ನ ವಿರೋಧಿಗಳು, ಟೀಕಾಕಾರರು ಎಲ್ಲರ ಬಾಯಿಗೆ ಬೀಗ ಬಿದ್ದುಹೋಗುತ್ತದೆ."

ಆಶಾದೇವಿಗೆ ಮಗನ ಅಂತರಂಗದ ಅರಿವಾಯಿತು. ಅವಳು "ವಿಮಲೆಯನ್ನು ನೀನು ಇಷ್ಟೊಂದು ಪ್ರೀತಿಸುತ್ತಿರುವಿಯಾ? ಆಗಲಿ. ಈಗ ಮೂರು ದಿನಗಳಿಂದಲೂ ನಿನಗೆ ಈ ಮಾತು ಹೇಳಿಬಿಡೋಣವೆಂದರೂ ಆಗಲಿಲ್ಲ. ವಿಮಲೆ ಮತ್ತು ನೀನು ಸತಿಪತಿಗಳಾಗಿ ಸುಖಿಗಳಾಗಿರಿ" ಎಂದು ಆ ಕಾಗದದ ಮೇಲೆ ಸಹಿ ಹಾಕಿದಳು.

ಈ ಕಾಗದ ಪ್ರಕಟವಾದೊಡನೆ ಅನೇಕ ಅಭಿನಂದನ ಪತ್ರಗಳು ನ್ಯಾಯಾಧೀಶರಿಗೆ ಬಂದವು. ಸಮಾಜ ಸುಧಾರಣಾ ಪರಿಷತ್ತಿನ ಅಧ್ಯಕ್ಷರಾಗಬೇಕೆಂಬ ಆಮಂತ್ರಣ ಆಶಾದೇವಿಗೆ ಬಂತು.

ಚಕ್ರವರ್ತಿಯವರು ತಮ್ಮ ಮೇಜಿನ ಬಳಿ ಕುಳಿತು ಏನೋ ಬರೆಯುತ್ತಿದ್ದರು. ಅವರ ಮಗಲಲ್ಲಿ ಹೇಮಂತ ಮತ್ತು ವಿಮಲೆ ನಿಂತಿದ್ದರು.

"ಯಾವುದೊ ಪತ್ರದ ವಿಚಾರ ಹೇಳುತ್ತಿದ್ದೆಯಲ್ಲ, ಯಾವ ಪತ್ರ, ಅದು ವಿಮಲಾ?" ನ್ಯಾಯಾಧೀಶರು ಕೇಳಿದರು.

"ಅದೇ ಕಕ್ಕಿಯ ವಿಷಯದಲ್ಲಿ ಆ ದುರಾತ್ಮ ಪತ್ರಿಕೆಯಲ್ಲಿ ಪ್ರಕಟಿಸಿದ ಪತ್ರದ ವಿಚಾರ. ಕಕ್ಕಾ, ತೀರ ಸಂಭಾವಿತರಂತೆ ಕಾಣುವವರು ಕೂಡ ಇಷ್ಟೊಂದು ಕುಹಕಿಗಳಾಗುತ್ತಾರಲ್ಲ, ಅದು ಹೇಗೆ?"

"ಅಂ! ಏನನ್ನುತ್ತಿ ನೀನು ತುಂಟಿ," ನ್ಯಾಯಾ

ಧೀಶರು ಮೆಲ್ಲಗೆ ಅವಳ ಕಿವಿ ಹಿಂಡಿದರು. "ಅಗತ್ಯವಿರುವಷ್ಟಕ್ಕಿಂತಲೂ ಹೆಚ್ಚಿಗೆ ತಿಳಿದುಕೊಳ್ಳುವ ಹವ್ಯಾಸ ನಿನಗಿದ್ದಂತಿದೆ ಅಲ್ಲವೆ?"

"ಹುಂ" ವಿಮಲೆ ನಗುತ್ತ ಹೇಳಿದಳು ಆಮೇಲೆ ಒಂದು ಮಡಚಿ ಮುದ್ದೆಯಾದ ಕಾಗದವನ್ನು ಹೇಮಂತನಿಗೆ ತೋರಿಸುತ್ತ ಅವಳು "ಇಲ್ಲಿ ನೋಡಿ. ಕಕ್ಕ ಬರೆದದ್ದೆಲ್ಲ ನಕಲು ಮಾಡುತ್ತೇನಲ್ಲ ನಾನು. ಅಕಸ್ಮಾತ್ ಇದು ಕಸದ ಬುಟ್ಟಿಯಲ್ಲಿ ಸಿಕ್ಕಿತು" ಎಂದಳು.

ಹೇಮಂತ ಆ ಕಾಗದ ಕಸಿದುಕೊಂಡು "ಎಲಾ, ಅಪ್ಪನ ಅಕ್ಷರ. ಅಂ! ಆ ಪತ್ರವನ್ನು ಪತ್ರಿಕೆಗೆ ಕಳಿಸಿದವನು ಅಪ್ಪ...."

"ಶ್ಶು!" ಆಶಾದೇವಿ ಬರುತ್ತಿರುವುದನ್ನು ಕಂಡ ಚಕ್ರವರ್ತಿಗಳು ಆ ಕಾಗದವನ್ನು ಕಸಿದುಕೊಂಡು ಹರಿದು ಹಾಕಿದರು. ಅವರು ಆಶಾದೇವಿಗೆ "ನೂತನ ದಂಪತಿಗಳಿಗೆ ಅರುಂಧತಿ ನಕ್ಷತ್ರವನ್ನು ತೋರಿಸುವ—"

"ಇರಲಿ ಬಿಡಿ ನಿಮ್ಮ ನಕ್ಷತ್ರಗಳ ಮಾತು. ಹೇಮಂತನ ಲಗ್ನವಾದ ಮರುದಿನವೇ ನಮ್ಮ ಸಮಾಜ ಪರಿಷತ್ತಿನ ಕಾರ್ಯಾರಂಭ. ಪರಿಷತ್ತಿಗೆ ಬಂದವರಿಗೆಲ್ಲ ಲಗ್ನದ ಔತಣವಿತ್ತರೆ ಹೇಗೆ ಎಂದು ಯೋಚಿಸುತ್ತಿದ್ದೆ."

"ಓಹೊ! ಆಗಲಿ ಆಗಲಿ. ನಮ್ಮ ವಿಜ್ಞಾನ ಪರಿಷತ್ತೂ ಅಂದೇ ಇದೆ. ಅವರ ಸದಸ್ಯರನ್ನೂ ಕರೆಯಬಾರದೇಕೆ?" ಚಕ್ರವರ್ತಿಗಳೆಂದರು.

"ವಿಮಲಾ, ನೀನೇನೆನ್ನುತ್ತಿ? ಬೊಕ್ಕತಲೆಯ ಕನ್ನಡಕಧಾರಿಗಳಾದ, ಗಂಭೀರ ಮುಖದ ಆ ಗೃಹಸ್ಥರನ್ನೆಲ್ಲ ನಮ್ಮ ಸಂಭ್ರಮದ ಸಮಾರಂಭಕ್ಕೆ ಕರೆಯೋಣವೆ" ಆಶಾದೇವಿ ನಾಚಿ ಕೆಂಪೇರಿದ್ದ ವಿಮಲೆಯನ್ನು ಕೇಳಿದಳು.

ವಿಮಲೆ ಮೃದುಸ್ವರದಲ್ಲಿ "ಕರೆಯೋಣ ಕಕ್ಕಿ. ವಿಜ್ಞಾನ ಪರಿಷತ್ತಿನ ಸದಸ್ಯರಲ್ಲಿ ಒಬ್ಬರಾದರೂ ಪೂರ್ಣ ಬೊಕ್ಕ ತಲೆಯವರಲ್ಲ ಎಂದು ನಾವು ಬಲ್ಲೆವು," ಎನ್ನುತ್ತ ನ್ಯಾಯಾಧೀಶರ ಬಿಳಿಗೂದಲನ್ನು ಸವರಿಸತೊಡಗಿದಳು. ★

ಮೂರ್ಖ ಪದ್ಧತಿ

ಸ್ವಾಮಿ ವಿವೇಕಾನಂದರು ಲೋಕಪ್ರಸಿದ್ಧಿ ಹೊಂದುವುದಕ್ಕೆ ಮೊದಲೊಮ್ಮೆ ರಾಜಪುತಾನದಲ್ಲಿ ರೈಲಿನಲ್ಲಿ ಪ್ರಯಾಣಿಸುತ್ತಿದ್ದರು. ಪಕ್ಕದಲ್ಲಿ ಕುಳಿತಿದ್ದ ಇಬ್ಬರು ಆಂಗ್ಲೇಯರು ಇವರನ್ನು ಸಾಮಾನ್ಯ ಸಾಧುವೆಂದು ಭಾವಿಸಿ ಇಂಗ್ಲೀಷಿನಲ್ಲಿ ಅಪಹಾಸ್ಯ ಮಾಡುತ್ತಿದ್ದರು. ಸ್ವಾಮೀಜಿ ಒಂದಕ್ಷರವೂ ತಿಳಿಯದವರಂತೆ ಸುಮ್ಮನಿದ್ದರು. ಆದರೆ ರೈಲು ಒಂದು ಕಡೆ ನಿಂತಾಗ ಅಲ್ಲಿನ ಸ್ಟೇಶನ್ ಮಾಸ್ಟರ್‌ನೊಂದಿಗೆ ಇಂಗ್ಲೀಷಿನಲ್ಲಿ ಒಂದು ಲೋಟ ನೀರು ಕೊಡಿರೆಂದು ಕೇಳಿದರು. ಈಗ ಪೇಚಿನಲ್ಲಿ ಸಿಕ್ಕಿಕೊಂಡ ಆಂಗ್ಲೇಯರು, ತಮ್ಮನ್ನು ಅಪಹಾಸ್ಯ ಮಾಡುತ್ತಿದ್ದರೂ ಸಹಿಸಿ ಸುಮ್ಮನಿದ್ದುದೇಕೆಂದು ಸ್ವಾಮೀಜಿಯನ್ನು ಕೇಳಿದರು. ಸ್ವಾಮೀಜಿ ಹೇಳಿದ್ದು: "ಗೆಳೆಯರೆ, ನಾನು ಮೂರ್ಖರನ್ನು ನೋಡುವುದು ಇದೇ ಮೊದಲನೆ ಸಲವಲ್ಲ."

ಸಂ:— ಲಕ್ಷ್ಮೀನಾರಾಯಣ

ಕಳೆದ 55 ವರ್ಷಗಳಿಂದಲೂ ಜನಾದರಣೆಯನ್ನು ಕಾಯ್ದಿಟ್ಟುಕೊಂಡು,
ಏಳಿಗೆಯ ಪಥದಲ್ಲಿ-ದಿನದಿಂದ ದಿನಕ್ಕೆ ಮುನ್ನಡೆಯುತ್ತಿರುವ ದಕ್ಷಿಣ
ಕನ್ನಡದ, ಏಕೆ? ದಕ್ಷಿಣ ಭಾರತದ ಮೊದಲನೇ ಸಂಸ್ಥೆ....
ಮತ್ತದರ ಬೃಹತ್ ಉದ್ಯಮದ ಉತ್ಪಾದನೆಗಳು



Manufacturers: **P. V. S. BEEDIES PRIVATE LTD.**
Post Box No. 7, Kodiyalbail MANGALORE – 3
Telegrams: "PUTHUBIDIS" PHONE: 83, 83 A RESIDENCE: 593,

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವುದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆ ಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾಗಿ ಅರ್ಥಗಳನ್ನು ವಿವರಿಸಿದೆ.

೧. ಕುತ್ಸಿತ

(ಅ) ಚಿಕ್ಕ (ಆ) ತುಂಡಾದ (ಇ) ಬೆಂದ (ಈ) ಕೀಳು

೨. ಕಿಂಕರ್ತವ್ಯವಿಮೂಢ

(ಅ) ಏನು ಮಾಡಬೇಕೆಂದು ತೋಚದ (ಆ) ಹಿರಿಯರ ಆಜ್ಞೆ (ಇ) ಶಾಸ್ತ್ರ ನಂಬದವ (ಈ) ಬುದ್ಧಿಹೀನ

೩. ಉದ್ವರ್ತನ

(ಅ) ಬೆಳ್ಳಿಯ ಪಾತ್ರೆ (ಆ) ಉಬ್ಬುವಿಕೆ (ಇ) ಗಾಬರಿ (ಈ) ಸುಳ್ಳುಸುದ್ದಿ

೪. ಗರ್ಹಣೀಯ

(ಅ) ಸುಂದರ (ಆ) ಸೆಳೆಯುವ (ಇ) ತೆಗಳಬೇಕಾದ್ದು (ಈ) ಗಂಭೀರ

೫. ಜ್ಯೋತ್ಸ್ನ

(ಅ) ಸೂರ್ಯಪ್ರಕಾಶ (ಆ) ನಕ್ಷತ್ರ (ಇ) ಬೆಳುದಿಂಗಳು (ಈ) ಭವಿಷ್ಯ

೬. ಅಕ್ಷಮ

(ಅ) ಭಾರಿ ಅಪರಾಧ (ಆ) ಕೈಲಾಗದ (ಇ) ಸೇಡಿನ ಬುದ್ಧಿಯುಳ್ಳ (ಈ) ಸಮೃದ್ಧ

೭. ಅತಿಮಾತ್ರ

(ಅ) ಧಾರಾಳ (ಆ) ಬಲು ಸ್ವಲ್ಪ (ಇ) ತಾಯಿಯ ಅಕ್ಕ (ಈ) ಬಾಯ್ಬಡಕ

೮. ಅಕೆವಾಳ

(ಅ) ಹೆಂಡತಿಗೆ ಅಧೀನ (ಆ) ಒಂದು ಆಯುಧ (ಇ) ಅಸಹ್ಯ (ಈ) ಶೂರ

೯. ಕಾದಲ

(ಅ) ಪ್ರಿಯಕರ (ಆ) ಬಹಳ ಬಿಸಿ (ಇ) ಚಿಗುರು (ಈ) ಕೊರತೆ

೧೦. ಅಕುತೋಭಯ

(ಅ) ನಿಷ್ಕಾರಣವಾದ ಅಂಜಿಕೆ (ಆ) ಎರಡು ಕಡೆ ಶತ್ರುಗಳ ಏರಾಟ (ಇ) ಏತರ ಭಯವಿಲ್ಲದ (ಈ) ಪ್ರೇಮಿಗಳ ಹೆದರಿಕೆ

೧೧. ಪಂಕ್ತಿಭೇದ

(ಅ) ಸಾಲೊಡೆಯುವುದು (ಆ) ಪಕ್ಷಪಾತ (ಇ) ಸಾಲುಹಿಡಿಯುವುದು (ಈ) ಜಗಳ ಹಚ್ಚುವುದು

೧೨. ಪಾಂಥ

(ಅ) ಕೆಣಕುವವ (ಆ) ಸ್ಪರ್ಧೆ (ಇ) ದೇಶ (ಈ) ದಾರಿಹೋಕ

' ಶಬ್ದಭಾಂಡಾರ ' ದ ಸರಿಯಾದ ಅರ್ಥಗಳು

೧. **ಕುತ್ಸಿತ** (ಈ) ಕೀಳು, ಹೇಯ, ಹೊಲಸು; ಬೈಗಳು, ನಿಂದೆ, ಚಾಡಿ. ಉದಾ- ಅವನ ಕುತ್ಸಿತ ಟೀಕೆಗಳನ್ನು ಕೇಳಿ ಮೈ ಯುರಿಯುತ್ತದೆ. [ಸಂ.]

೨. **ಕಿಂಕರ್ತವ್ಯವಿಮೂಢ** (ಅ) ಏನು ಮಾಡಬೇಕೆಂದು ತೋಚದ. ಉದಾ.— ನಾಲ್ಕು ಸುತ್ತಲೂ ತನಗೆ ವಿರೋಧ ಬರುತ್ತಿರುವುದನ್ನು ನೋಡಿ ಅವನು ಕಿಂಕರ್ತವ್ಯವಿಮೂಢನಾದನು. [ಸಂ. ಕಿಂ=ಏನು, ಕರ್ತವ್ಯ=ಮಾಡತಕ್ಕದ್ದು, ವಿಮೂಢ = ಭ್ರಮೆಗೊಂಡವ.]

೩. **ಉದ್ವರ್ತನ** (ಆ) ಉಬ್ಬುವಿಕೆ, ಮೇಲೇಳುವುದು ; ಪರಿಮಳ ದ್ರವ್ಯಗಳಿಂದ ಮೈ ತೊಳೆಯುವಿಕೆ. [ಸಂ. ಉದ್ = ಮೇಲೆ, ವರ್ತನ].

೪. **ಗರ್ಹಣೀಯ** (ಇ) ತೆಗಳತಕ್ಕದ್ದು, ನಿಂದ್ಯ, ಹೀನ. ಉದಾ.— ಗರ್ಹಣೀಯವಾದ ವಿಚಾರಗಳನ್ನು ಅವನು ಪ್ರಕಟಿಸಿದನು. [ಸಂ. ಗರ್ಹ್ = ಜರೆ— ಯಿಂದ]

೫. **ಜ್ಯೋತ್ಸ್ನೆ** (ಇ) ಬೆಳುದಿಂಗಳು; ಬೆಳುದಿಂಗಳ ರಾತ್ರಿ; ವೈಭವ. [ಸಂ.]

೬. **ಅಕ್ಷಮ** (ಆ) ಕೈಲಾಗದ, ಶಕ್ತಿಯಿಲ್ಲದ, ಕಾರ್ಯಕೌಶಲವಿಲ್ಲದ. ಉದಾ.— ಸರಕಾರಿ ಕಚೇರಿಗಳಲ್ಲಿ ಅಕ್ಷಮತೆಯು ಒಂದು ದೊಡ್ಡ ಸಮಸ್ಯೆ, ಅಂದರೆ ದಕ್ಷತೆಯಿಲ್ಲ. [ಸಂ. ಅ=ಇಲ್ಲ, ಕ್ಷಮ = ಶಕ್ತಿಯುಳ್ಳವ].

೭. **ಅತಿಮಾತ್ರ** (ಅ) ಧಾರಾಳ, ಮಿತಿಯಿಲ್ಲದಷ್ಟು, ತುಂಬ. ಉದಾ.— ಅವನ ಮಹತ್ವಾಕಾಂಕ್ಷೆ ಅತಿಮಾತ್ರವಾಗಿತ್ತು. [ಸಂ. ಅತಿ=ಮೀರಿದ, ಮಾತ್ರಾ=ಅಳತೆ]

೮. **ಆಕೆವಾಳ** (ಈ) ಶೂರ, ವೀರ. ಉದಾ- ಸೋತರೂ ಅಭಿಮನ್ಯುವಿನ ಆಕೆವಾಳತನ ಶತ್ರುಗಳನ್ನೂ ತಲೆದೂಗಿಸಿತು. [ಕನ್ನಡ, ಆರ್ಕೆ=ಸಾಮರ್ಥ್ಯ, ವಾಳ= ಉಳ್ಳವ].

೯. **ಕಾದಲ** (ಅ) ಪ್ರಿಯಕರ, ಪ್ರೇಮಪಾತ್ರ, ನಲ್ಲ; ಮಿಂಡ. [ಕನ್ನಡ, ಕಾದಲ್= ಪ್ರೇಮ-ದಿಂದ].

೧೦. **ಅಕುತೋಭಯ** (ಇ) ಯಾತರ ಭಯವೂ ಇಲ್ಲದ, ಎಲ್ಲಿಂದಲೂ ಅಪಾಯ ಬಾರದ. ಉದಾ.— ದೇವರನ್ನು ನಂಬಿದವನು ಅಕುತೋಭಯನಾಗುತ್ತಾನೆ. [ಸಂ. ಅ=ಇಲ್ಲ, ಕುತಃ=ಎಲ್ಲಿಂದ, ಭಯ = ಅಂಜಿಕೆ].

೧೧. **ಪಂಕ್ತಿಭೇದ** (ಆ) ಪಕ್ಷಪಾತ, ಒಬ್ಬರಿಗೊಂದು ಇನ್ನೊಬ್ಬರಿಗೊಂದು ಮಾಡುವಿಕೆ. [ಸಂ. ಪಂಕ್ತಿ = (ಒಂದೇ) ಸಾಲಿನಲ್ಲಿ (ಕುಳಿತವರಿಗೆ), ಭೇದ = (ಬಡಿಸುವಾಗ) ಹೆಚ್ಚುಕಡಿಮೆ ಮಾಡುವುದು].

೧೨. **ಪಾಂಥ** (ಈ) ದಾರಿಗ, ದಾರಿಹೋಕ, ಸಂಚಾರಿ, ಪ್ರವಾಸಿ. [ಸಂ. ಪಂಥಾ = ದಾರಿ ಎಂಬುದರಿಂದ.]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ತಿಳಿಯಿರಿ.

೬—೮ ಸರಿಯಿದ್ದರೆ	....	ಸಾಧಾರಣ
೯—೧೦ ,,	....	ಉತ್ತಮ
೧೧—೧೨ ,,	....	ಅತ್ಯುತ್ತಮ


ಪ್ರಶಾಂತತೆಯನ್ನು
ಕಾಪಾಡಿಕೊಳ್ಳಲು
Lavender
Lavender
KAMAL
TOILET SOAP
ಆರ್ದ್ರವಾದ ಗಾಳಿ ಮತ್ತು ಕುಲುಮೆಯಂತಿರುವ ಸೂರ್ಯ
ಇವರೊಡನೆ ಪ್ರಶಾಂತವಾಗಿರಲು ಮತ್ತು ಶಾಂತತೆಯನ್ನು
ಉಳಿಸಿಕೊಳ್ಳಲು ಅಫಘಾನ ಲೆವೆಂಡರನ್ನು
ಉಪಯೋಗಿಸುವದಕ್ಕಿಂತಲೂ ಬೇರಾವ ಒಳ್ಳೆ ದಾರಿ
ಲ. ಇದು ಸುವಾಸನೆಯುಕ್ತವಾಗಿದ್ದು ನಿಮ್ಮ ಚರ್ಮಕ್ಕೆ
ಸಂದದ ಯುಕ್ತ ಕಾಂತಿಯನ್ನು ನೀಡುತ್ತದೆ.
ಕಮಲ ಸಬೂನು, ಅಫಘಾನ
ಟೆಲಕಮ್, ಅಫಘಾನ ಸ್ನೋ
ಇವು ಮೂರು ನವ ವಧುವಿಗೆ
ಅವಶ್ಯ ವಸ್ತುಗಳು.
ಅಫಘಾನ ಸ್ನೋ
ಸೌಂದರ್ಯವನ್ನು ವೃದ್ಧಿಸುತ್ತದೆ.

ಅವಳ
ಚಾರಿತ್ರ್ಯ
ವಿಪರೀತವಾಗಿತ್ತು
ಆದರೆ
ಅವಳು
ಕಾಶ್ಮೀರಕ್ಕೆ
ಹಿತ
ಮಾಡಿದಳು



ಜಿತೇಂದ್ರ ಗುಪ್ತರ ಲೇಖದ ಆಧಾರದಿಂದ

ಕಾಶ್ಮೀರದ ರಾಣಿ ದಿದ್ದಾ

ಕಾಶ್ಮೀರದ ರಾಣಿ ದಿದ್ದಾಗೆ ಸರಿದೊರೆಯಾದ ಹೆಂಗಸು ಭಾರತದ ಇತಿಹಾಸದಲ್ಲಿ ಸಿಗುವುದು ಅಸಾಧ್ಯ. ಸುಲ್ತಾನಾ ರೆಜಿಯಾ ಯಾವುದನ್ನು ಮಾಡಲು ಯತ್ನಿಸಿ ಸೋತಳೋ ಅದನ್ನು ದಿದ್ದಾ ಮಾಡಿ ಗೆದ್ದಳು. ಇಜಿಪ್ಟಿನ ರಾಣಿ ಕ್ಲಿಯೊಪಾತ್ರಾಳಂತೆ ಅವಳು ಗಂಡಸರನ್ನು ಬೆರಳ ಸಂಕೇತಕ್ಕೆ ಕುಣಿಸಿದಳು, ಆದರೆ ಅವಳ ಹಾಗೆ ಸರ್ಪವಿಷದಿಂದ ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ. ಅವಳ ಕಾಮುಕತೆ ಪ್ರಜೆಗಳಲ್ಲಿ ಮನೆಮಾತಾಗಿದ್ದರೂ ಅವಳ ವಿರುದ್ಧ ಎದ್ದ ದಂಗೆಗಳು ಅವಳ ಕಡೆಗಣ್ಣೋಟದಿಂದಲೇ ಕರಗಿ ಹೋಗುತ್ತಿದ್ದವು. ಅವಳು ಅತ್ಯಂತ ನಿರಂಕುಶ ಪ್ರಭುವಾಗಿ ಆಳಿದಳು; ಮಂತ್ರಿಗಳನ್ನು ಸೇನಾಪತಿಗಳನ್ನು ಮನಬಂದಂತೆ ಬದಲಿಸಿದಳು; ಆದರೂ ಅವಳು ಆಮರಣ ಅಧಿಕಾರವನ್ನು ಕಾಪಾಡಿಕೊಂಡಳು. ಮತ್ತು ಎಲ್ಲಕ್ಕೂ ವಿಚಿತ್ರವೆಂದರೆ ಚರಿತ್ರಹೀನಳಾದ ಈ ರಾಣಿಯ ಕಾಲದಲ್ಲಿ ಕಾಶ್ಮೀರವು ಉನ್ನತಿಯನ್ನು ಕೂಡ ಸಾಧಿಸಿತು. ಅರುವತ್ತು ವರ್ಷ ಅವಧಿಯಲ್ಲಿ ಸುಂದರ ಕಾಶ್ಮೀರ ಕೊಳ್ಳದಲ್ಲಿ "ಹದಿನಾರು ರಾಜರು ತಲೆ ಕೆಳಗಾದರು." ದಿದ್ದಾ ಆ ವಿಲಕ್ಷಣ ಯುಗದ ಅತಿ ವಿಲಕ್ಷಣ ವ್ಯಕ್ತಿಯಾಗಿದ್ದಳು.

ಇಸವಿ ೯೬೨–೬೩ ಅಂದು ರಾಜಧಾನಿಯ ಮೇಲೆ ಮುತ್ತಿಗೆ ಹಾಕಲಾಗಿತ್ತು. ಪೂರ್ಣ ಸಿದ್ಧತೆಗಳೊಂದಿಗೆ ಒಳಸಂಚು ಸಫಲತೆಯ ದಾರಿಯಲ್ಲಿತ್ತು. ಮಹಾರಾಣಿ ದಿದ್ದಾಳ ಉಳಿವು ಕನಸಿನ ಗಂಟಾಗಿತ್ತು. ಅವಳ ಪಕ್ಷಕ್ಕೆ ಕೆಲ ನಿಷ್ಠ ಸೈನಿಕರನ್ನು ಬಿಟ್ಟರೆ ಇನ್ನಾರೂ ಇಲ್ಲ. ಪ್ರಚಂಡ ಸೇನೆ ಏರಿ ಬರುತ್ತಿದೆ. ಬಂದು ಅರಮನೆಯ ಬಾಗಿಲಿಗೇ ನಿಂತಿದೆ. ಪಟ್ಟದರಸು ಕ್ಷೇಮಗುಪ್ತ ಸತ್ತಿದ್ದಾನೆ. ತಾನು ವಿಧವೆಯಾಗಿದ್ದಾಳೆ. ತೀರ ಚಿಕ್ಕವನಾದ ಯುವರಾಜ ಅಭಿಮನ್ಯು ಪಟ್ಟದ ಮೇಲಿದ್ದಾನಷ್ಟೆ.

ವಿದ್ರೋಹಿಗಳ ನೇತೃತ್ವವನ್ನು ಕಾಶ್ಮೀರದ

ಅತಿ ಪ್ರಬಲ ಸರದಾರ ಯಶೋಧರ ವಹಿಸಿದ್ದ. ಮಂತ್ರಿಪುತ್ರ ಮಹಿಮ ಅವನ ಬೆಂಬಲಕ್ಕಿದ್ದ. ತಮ್ಮ ಒಳಸಂಚಿನ ಪರಿಪೂರ್ಣತೆಯ ಬಗ್ಗೆ ಭರವಸೆಯಿಂದ ಮಂತ್ರಿಪುತ್ರ ಮಹಿಮ "ಇನ್ನು ಆ ದಿದ್ದಾಳನ್ನು ದೇವರೇ ಕಾಪಾಡಬಲ್ಲ" ಎಂದು ಹೇಳಿದ.

ಕ್ಷಣದಲ್ಲಿ ಪರಿವರ್ತನೆ. ತೆರೆಯುರುಳಿತು. ಇನ್ನೊಂದು ದೃಶ್ಯ ಪ್ರಾರಂಭವಾಯಿತು. ರಾಜಮಾತೆ ದಿದ್ದಾ ಸ್ವತಃ ಸೇನೆಯನ್ನು ನಿಯಂತ್ರಿಸುವಳೆಂಬ ಸಮಾಚಾರ ಹಬ್ಬಿತು. ವಿದ್ರೋಹಿಗಳ ಸೈನ್ಯ ಸಡಿಲಾಗತೊಡಗಿತು. ನೂರಕ್ಕೆ ೯೦ ಬಂಡಾಯಗಾರ ನಾಯಕರು ತಮ್ಮ ಸೈನಿಕರೊಂದಿಗೆ ಹಿಂದಿರುಗತೊಡಗಿದರು. ಮಹಿಮನಿಗೆ ಆಶ್ಚರ್ಯದ ಸಿಡಿಲೇ ಬಡಿಯಿತು. ತಾನೂ ಓಡಿಹೋಗದಿದ್ದರೆ ಪ್ರಾಣಾಪಾಯವೆಂದಾತ ಅರಿತು ಓಡಿದ.

ಅವನ ಮಿತ್ರ ಯಶೋಧರ ನಡುಗುತ್ತಿದ್ದ. ದಿದ್ದಾಳ ದೂತನು ಗುಪ್ತವಾಗಿ ರಾಜಮಹಲಿನ ಬಳಿ ಕೊಟ್ಟು ಹೋದ ಪತ್ರವನ್ನು ಅವನು ಪುನಃ ಪುನಃ ನೋಡುತ್ತಿದ್ದ. "ನೀನು ಸೇನಾಪತಿಯಾಗುವಿ ಮತ್ತೂ ಏನೇನೋ ಆಗುವಿ" ಎಂಬ ವಾಕ್ಯವನ್ನು ಮರಮರಳಿ ಓದುತ್ತಿದ್ದ, ಆನಂದ ತುಂದಿಲನಾಗಿದ್ದ. ಯಶೋಧರನ ಸಂಗಡಿಗರೂ ಆನಂದೋತ್ಸವದಲ್ಲಿ ತೊಡಗಿದ್ದರು. ಮಹಿಮ ವಿಫಲನಾಗಿದ್ದ. ಅವನ ವಿಫಲತೆ ಕಂಡು ರೂಪಗರ್ವಿತೆಯಾದ ಚತುರೆ ದಿದ್ದಾ ಅಟ್ಟಹಾಸದಿಂದ ನಗುತ್ತಿದ್ದಳು.

ಈ ವಿಶೇಷತೆಯಿಂದಲೇ ದಿದ್ದಾ ಇತಿಹಾಸದಲ್ಲಿ ಅಮರಳಾದಳು ನೀಲನದಿಯ ಸರ್ಪಿಣಿ ಕ್ಲಿಯೊಪಾತ್ರಾಳ ಹಾಗೆಯೆ ಈಕೆ ಝೀಲಮ್ ನದಿಯ ಸರ್ಪಿಣಿ ದಿದ್ದಾ ಎಂದು ಹೇಳಬಹುದು.

ಖಶ್ ಪ್ರಾಂತದ ಸಾಮಂತನಾದ ಸಿಂಹರಾಜನಲ್ಲಿ ಹುಟ್ಟಿದ ದಿದ್ದಾಗೆ ಸೋಲು ಗೊತ್ತಿರಲಿಲ್ಲ. ಬಯಸಿದವನನ್ನು ಈಕೆ ದಾಸನನ್ನಾಗಿ ಮಾಡುತ್ತಿದ್ದಳು. ಇವಳ ಈ ಆಟಕ್ಕೆ ಬಲಿಯಾದ ಮೊದಲ ವ್ಯಗ ಕಾಶ್ಮೀರ ದೊರೆ ಕ್ಷೇಮಗುಪ್ತ. ದಿನಗಳೆದಂತೆ ಅವಳ ಪ್ರಭಾವ ಇವನ ಮೇಲೆ ಹೆಚ್ಚು ಹೆಚ್ಚು ಆಗುತ್ತ ಹೋಯಿತು.

ಕ್ರಿ. ಶ. ೯೫೦ ರಲ್ಲಿ ಈತ ಪಟ್ಟಕ್ಕೆ ಬಂದು ಮುಂದೆ ಎಂಟು ವರ್ಷಗಳಲ್ಲೇ ಮಡಿದ. ಆತ ಸತ್ತಾಗ ದಿದ್ದಾ ಸತಿ ಹೋಗಬೇಕೆಂದು ಪುರೋಹಿತರು ತಿಳಿಸಿದರು. ಆದರೆ ದಿದ್ದಾಳ ಒಂದೇ ಒಂದು ಕಡೆಗಣ್ಣ ನೋಟ ಈ ತರುಣ ಸೌಂದರ್ಯ ಅಗ್ನಿಯಲ್ಲಿ ಅನ್ಯಾಯವಾಗಿ ಬೆಂದುಹೋಗುವುದನ್ನು ನಿಲ್ಲಿಸಿತು ಇವಳ ದೃಷ್ಟಿಯಿಂದ ಪ್ರಭಾವಿತನಾದ ಮಂತ್ರಿ ನರವಾಹನನು, "ಮಹಾರಾಣಿ ದಿದ್ದಾ ಸತಿ ಹೋಗುವುದು ವಿಹಿತವಲ್ಲ. ಯುವರಾಜ ಅಭಿಮನ್ಯು ಮತ್ತು ಪ್ರಿಯ ಪ್ರಜೆಗಳ ಹಿತದ ದೃಷ್ಟಿಯಿಂದ ಅವರು ಜೀವಿಸಿರಲೇಬೇಕು" ಎಂದು ಹೇಳಿದನು. ವಾದದಲ್ಲಿ ನರವಾಹನನನ್ನು ಸೋಲಿಸಲು ಪುರೋಹಿತರಿಗಾಗಲಿಲ್ಲ. ಅಭಿಮನ್ಯುವಿಗೆ ಪಟ್ಟಗಟ್ಟಲಾಯಿತು. ರಾಜಮಾತೆ ದಿದ್ದಾ ರಾಜ್ಯದ ಸೂತ್ರಧಾರಿಣಿಯಾಗಿ ಉಳಿದಳು.

ಗಂಡನಿದ್ದಾಗಿನಿಂದಲೂ ರಾಜ್ಯದ ಸೂತ್ರಗಳನ್ನು ತನ್ನ ಕೈಯಲ್ಲಿ ಕೇಂದ್ರಿಸಿಕೊಂಡ ದಿದ್ದಾಗೆ ಈ ಹೊಸ ಜವಾಬ್ದಾರಿ ಕಷ್ಟದ್ದೇನೂ ಅನ್ನಿಸಲಿಲ್ಲ. ಆ ಮೇಲೆ ಎದ್ದ ಚಿಕ್ಕ ಪುಟ್ಟ ಒಳಸಂಚಗಳನ್ನು ಈಕೆ ಕೌಶಲದಿಂದ ಮುರಿದುಹಾಕುತ್ತಿದ್ದಳು. ದಿದ್ದಾ ನರವಾಹನನ ಪ್ರೇಯಸಿಯಾದಳು.

ಆದರೆ ಅವಳ ಪ್ರೇಮಕಟಾಕ್ಷಗಳು ಯಾರಲ್ಲೂ ಸ್ಥಿರವಾಗಿ ಉಳಿಯುವಂಥವಾಗಿರಲಿಲ್ಲ. ಪ್ರಯೋಜನವನ್ನರಿತು ಅವು ವ್ಯಕ್ತಿಯಿಂದ ವ್ಯಕ್ತಿಗೆ ಸ್ಥಾನಾಂತರ ಹೊಂದುತ್ತಿದ್ದವು. ಎಲ್ಲ ನಿರಂಕುಶ ಪ್ರಭುಗಳಂತೆ ದಿದ್ದಾಳ ಕಿವಿಯೂ ಹಿತ್ತಾಳೆಯದಾಗಿತ್ತು ಯಾರದೋ ಕೊಂಡೆಯದ ಮಾತು ಕೇಳಿ ವೃದ್ಧ ಮಂತ್ರಿ ಭಟ್ಟ ಫಾಲ್ಗುನನನ್ನು ಅವಳು ಪದಚ್ಯುತಗೊಳಿಸಿದ್ದರಿಂದ ಅಸಮಾಧಾನ ವ್ಯಾಪಕವಾಗಿ ಹಬ್ಬಿ ಭಟ್ಟ ಮಹಿಮನ ವಿದ್ರೋ

ಹದಲ್ಲಿ ಪರಿಣಮಿಸಿತ್ತು. ಈ ಇಕ್ಕಟ್ಟಿನಲ್ಲಿ ಅವಳ ನಲ್ಲ ನರವಾಹನನಿಂದ ಏನೂ ಪ್ರಯೋಜನ ಕಾಣಿಸಲಿಲ್ಲ. ಅವಳು ವಿದ್ರೋಹಿ ನಾಯಕ ಯಶೋಧರನನ್ನೇ ತನ್ನ ಸೇನಾಧಿಪತಿಯಾಗಿ ಮಾಡಿಕೊಂಡು ಸಮಸ್ಯೆಯನ್ನು ಬಗೆಹರಿಸಿಕೊಂಡಳು.

ಸಂಗಡಲೇ ಯಶೋಧರನ ಪ್ರೇಯಸಿಯೂ ಆದಳು ದಿದ್ದಾ. ಆದರೂ ಕ್ಷಣಕ್ಷಣಕ್ಕೆ ಬದಲಾಗುವ ಇವಳ ಚಿತ್ತವೃತ್ತಿಯಿಂದ ಒಮ್ಮೆ ಯಶೋಧರನನ್ನು ಅಪಾರ ಗೌರವದಿಂದ ಕಂಡರೆ ಇನ್ನೊಮ್ಮೆ ಅವನನ್ನು ಲೆಕ್ಕಕ್ಕೂ ಹಿಡಿಯುತ್ತಿದ್ದಿಲ್ಲೀಕೆ.

ಒಮ್ಮೆ ಸಾಮಂತರಾಜ ಥಕ್ಕನನು ವಿರೋಧಿಯಾಗಿ ನಿಂತ. ಆಗ ಅವನನ್ನು ಸದೆಬಡೆಯಲು ಯಶೋಧರನನ್ನು ಕಳಿಸಿದಳು. ಯಶೋಧರನು ಅವನನ್ನು ಸೋಲಿಸಿ, ಅವನಿಂದ ಕಪ್ಪ ವಸೂಲು ಮಾಡಿ ಅವನ ರಾಜ್ಯವನ್ನು ಅವನಿಗೇ ಒಪ್ಪಿಸಿ ಬಂದ. ಈ ಸಮಾಚಾರ ತಿಳಿಯುತ್ತಲೇ ದಿದ್ದಾ ಅವನನ್ನು ಪದಚ್ಯುತಗೊಳಿಸಿದಳು. ಇದನ್ನು ರಾಜಧಾನಿಗೆ ಮರುಳುತ್ತಲೇ ಕೇಳಿದ ಯಶೋಧರ ರಾಜಪತಾಕೆಯನ್ನು ನೆಲಕ್ಕೆ ಚೆಲ್ಲಿ ಕಾಲಿನಿಂದ ತುಳಿದು ವಿರೋಧದ ಪತಾಕೆ ಎತ್ತಿದ.

ಸಂಪೂರ್ಣ ಸಿದ್ಧತೆ ಮಾಡಿಕೊಳ್ಳದೆ ರಾಜಮಹಲಿನ ಮೇಲೆ ಮುತ್ತಿಗೆ ಹಾಕಿದ ಯಶೋಧರ ಮೊದಲೇ ಆ ಬಗ್ಗೆ ಜಾಗರೂಕಳಾಗಿದ್ದ ರಾಣಿಯಿಂದ ಸೋಲಬೇಕಾಯಿತು.

ಪ್ರತಿ ವಿರೋಧಿಯನ್ನೂ ಈಕೆ ಇದೇ ರೀತಿ ದಮನ ಮಾಡಿದಳು. ಯುದ್ಧದಲ್ಲಿ ಸೋಲಿಸಿ, ಕೂಟನೀತಿಯಿಂದ ಪದಚ್ಯುತಗೊಳಿಸಿ ಅಥವಾ ಸೌಂದರ್ಯಜಾಲದಲ್ಲಿ ಸಿಲುಕಿಸಿ, ತನ್ನನ್ನು ಕಾಪಾಡಿಕೊಳ್ಳುತ್ತಲೂ ವಿರೋಧಿಗಳನ್ನು ಮಣ್ಣುಗೂಡಿಸುತ್ತಲೂ ಹೋದಳು 'ರಾಜತರಂಗಿಣಿ'ಯ ಲೇಖಕ ಮಹಾಕವಿ ಕಲ್ಹಣನು ಬರೆದಿದ್ದಾನೆ: "೬೦ ವರ್ಷದಲ್ಲಿ ೧೬ ರಾಜರಾಗಿ ಹೋದರು. ಅವರ ಪ್ರಾಣ, ಪ್ರತಾಪ, ವೈಭವಗಳನ್ನು ಹರಣ ಮಾಡಿದ ರಾಜದ್ರೋಹಿ, ಮಂತ್ರಿಗಳು, ಹಾಗೂ ಅವರ ವಂಶಜರನ್ನು ದಿದ್ದಾದೇವಿ ಕೇವಲ ಭ್ರೂಭಂಗ ಮಾತ್ರದಿಂದ ನಿಃಶೇಷಗೊಳಿಸಿದಳು. ಅಸುರರನ್ನು ಸೋಲಿಸಿದ ದುರ್ಗೆಯಂತಿದ್ದಳು ದಿದ್ದಾ."

ಯಶೋಧರನ ಪ್ರಕರಣದಿಂದ ಬುದ್ಧಿಗಲಿತ ಈಕೆ ಬಹಳ ಎಚ್ಚರದಿಂದಿದ್ದಳು. ವಿರೋಧಿಗಳ ಕುತಂತ್ರಗಳನ್ನು ಗೊತ್ತುಹಚ್ಚಿ ಒಬ್ಬೊಬ್ಬರನ್ನೇ ನಿರ್ನಾಮಗೊಳಿಸಿದಳು. ನಿಷ್ಠಾವಂತರ ಗೌರವ ಹೆಚ್ಚಿಸಿದಳು. ಅವರನ್ನು ಮೇಲಿನ ಪದಗಳಿಗೆ ನಿಯುಕ್ತಪಡಿಸಿದಳು. ಆಗಲೇ ಹಳೇ ಪ್ರಿಯಕರ ನರವಾಹನನನ್ನು ಮತ್ತೆ ಪ್ರಧಾನಮಂತ್ರಿಯಾಗಿ ಮಾಡಿದ್ದಲ್ಲದೆ, 'ರಾಜಾನಕ' ಎಂಬ ಬಿರುದನ್ನೂ ಕೊಟ್ಟಳು. ಆದರೆ ಮತ್ತೆ ಹಳೇಕತೆಯ ಪುನರಾವೃತ್ತಿಯಾಯಿತು. ಮತ್ತೆ ವಿರೋಧವು ಪ್ರಬಲವಾಗತೊಡಗಿತು. ಆಗ ಕೋಶಾಧ್ಯಕ್ಷನಾದ ಸಿಂಧುವು "ನರವಾಹನನ ಚಟುವಟಿಕೆಗಳು ಸಂದೇಹಾಸ್ಪದವಾಗಿವೆ," ಎಂದು ಹೇಳಿದನು. ಕೂಡಲೇ ಅದನ್ನು ನಂಬಿ ದಿದ್ದಾ ಅವನೊಂದಿಗೆ ಕಟುವಾಗಿ ವರ್ತಿಸಲಾರಂಭಿಸಿದಳು. ದಿದ್ದಾ ಕೇವಲ ರಾಜಮಾತೆಯಾಗಿದ್ದರೆ ಮಾತು ಬೇರೆ ಇತ್ತು. ಆದರೆ ತನ್ನ ಪ್ರೇಯಸಿ ತನ್ನನ್ನು ಉಪೇಕ್ಷಿಸುವುದನ್ನು ನರವಾಹನ ಸಹಿಸಲಿಲ್ಲ. ಒಮ್ಮೆಯಂತೂ ಅವಳ ಕಕ್ಷದಲ್ಲಿ ಬೇರೊಬ್ಬ ಪ್ರಿಯಕರನನ್ನು ನರವಾಹನನು ಕಂಡ. ವಿಹ್ವಲಗೊಂಡು ನರವಾಹನ ಆತ್ಮಹತ್ಯೆ ಮಾಡಿಕೊಂಡ.

ನರವಾಹನನ ಮರಣದಿಂದ ಒಬ್ಬ ಕುಶಲ ಸಲಹೆಗಾರನನ್ನು ದಿದ್ದಾ ಕಳೆದುಕೊಂಡಳು. ಕೆಲದಿನಗಳಲ್ಲೇ ಮಗ ತರುಣ ಅಭಿಮನ್ಯು ಕ್ಷಯರೋಗಕ್ಕೆ ತುತ್ತಾದ ಅಶಾಂತಳಾದ ದಿದ್ದಾ ಈಗ ಧರ್ಮದ ಕಡೆ ಮನ ತಿರುಗಿಸಿದಳು. ನಗರ ಮಠಗಳನ್ನು ನಿರ್ಮಿಸಿದಳು. ಅಭಿಮನ್ಯುಪುರ, ಗಂಡನ ಸ್ಮೃತಿಗಾಗಿ ಕಂಕಣಪುರ, ದಿದ್ದಾಪುರ ಮುಂತಾದ ನಗರಗಳು, ಅಭಿಮನ್ಯುಸ್ವಾಮಿನ್, ದಿದ್ದಾಸ್ವಾಮಿನ್ ಎಂಬ ಮಂದಿರಮಠಗಳು ನಿರ್ಮಾಣವಾದವು. ಆದರೆ ಮುಂದೊಂದು

ವರ್ಷದಲ್ಲೇ ಈ ವಿರಾಗಿಣಿ ಪುನಃ ರಾಗಿಣಿಯಾದಳು. ಮಹಾತ್ವಾಕಾಂಕ್ಷೆ, ವಾಸನೆಗಳು ಹೆಡೆ ಎತ್ತಿದವು.

ಅಭಿಮನ್ಯುವಿನ ಮತ್ಯುವಾದ ಎಂಟೊಂಭತ್ತು ವರ್ಷಗಳಲ್ಲೇ ಅವನ ಮೂರು ಮಕ್ಕಳು ನಂದಿಗುಪ್ತ, ತ್ರಿಭುವನ ಮತ್ತು ಭೀಮಗುಪ್ತರು ಕಾಲವಾದರು. ಈ ಮೂವರನ್ನೂ ಈಕೆಯೆ ಕೊಲ್ಲಿಸಿದಳೆಂದು ಇತಿಹಾಸಕಾರರ ಊಹೆ ಇದೆ. ಕಲ್ಹಣನ ಕಥನದಲ್ಲೂ ಈ ಮಾತಿಗೆ ಪುಷ್ಟಿ ಸಿಗುತ್ತದೆ. ಆದರೂ ಇದನ್ನು ನಂಬುವುದು ಕಷ್ಟ ರಾಜಸತ್ತೆಗಾಗಿ ಈಕೆ ಹೀಗೆ ಮಾಡಿರಬಹುದೆಂದು ಭಾವಿಸಬೇಕಾದರೆ ಮೊದಲಿನಿಂದಲೂ ಇವಳೇ ರಾಜ್ಯ ನಡೆಸುತ್ತಿದ್ದಳು. ಅವಳನ್ನು ಮೀರುವ ಧೈರ್ಯ ಅವಳ ಮೊಮ್ಮಕ್ಕಳಿಗೆಲ್ಲಿತ್ತು? ಅಂದ ಮೇಲೆ ಅವರನ್ನು ಕೊಲ್ಲಿಸುವ ಅಗತ್ಯವೇನಿತ್ತು?

ಭೀಮಗುಪ್ತನ ಬಗ್ಗೆ ಮಾತ್ರ ಮಾತನ್ನು ನಂಬಬಹುದಾಗಿದೆ. ಯಾಕೆಂದರೆ ತನ್ನ ಕಾಮತೃಪ್ತಿಗಾಗಿ ಈಕೆ ಬೇಕಾದ ಯುವಕನನ್ನು ಶಯನಗೃಹಕ್ಕೆ ಕರೆಸುತ್ತಿದ್ದಳು. ತನ್ನೊಬ್ಬ ಮಂತ್ರಿಯ ಮನೆಯ ಮುಂದೆ ತುಂಗನೆಂಬ ಪತ್ರವಾಹಕನನ್ನು ದಿದ್ದಾ ಕಂಡಳಂತೆ. ಒಡನೆ ಅವನಲ್ಲಿ ಮೋಹಿತಳಾಗಿ ಅವನನ್ನು ಶಯನಾಗಾರಕ್ಕೆ ಕರೆಸಿಕೊಂಡಳು. ಅವನ ಮೇಲೆ ಪ್ರೇಮದ ಸುರಿಮಳೆಯೊಡನೆ ಪದವಿ ಅಧಿಕಾರಗಳ ಪೀಠೋನ್ನತಿಯೂ ಆಯಿತು. ಇದರಿಂದ ರೊಚ್ಚಿಗೆದ್ದ ಅವಳ ಆಪ್ತರೇ ಇವರಿಬ್ಬರನ್ನೂ ಕೊಲ್ಲುವ ಒಂದು ಒಳಸಂಚು ಸಂಘಟಿಸಿದರು. ಆದರೆ ಇತಿಹಾಸ ಮತ್ತೆ ಪುನರಾವರ್ತಿಸಿತು. ಒಳಸಂಚಿನ ಸುಳಿವು ದಿದ್ದಾಗೆ ಹತ್ತಿತು. ಒಳಸಂಚುಗಾರರನ್ನೆಲ್ಲ ಈಕೆ ಮೃತ್ಯುವಿನ ದವಡೆಗೆ ಕೊಟ್ಟಳು. ಅವರಲ್ಲಿ ಅವಳ ಮೊಮ್ಮಗ ಭೀಮಗುಪ್ತ ಹಾಗೂ ಮಹಾಪೌರನಾದ ಭುಯ್ಯನೂ ಇದ್ದರು. ಅವರಿಗೂ ಅದೇ ಶಿಕ್ಷೆ ಸಿಕ್ಕಿತು. ಈ ಬಗ್ಗೆ ಕಲ್ಹಣ ಹೀಗೆ ಬರೆದಿದ್ದಾನೆ: "ಎಷ್ಟೋ ಉಪಪತಿಗಳನ್ನು ಭೋಗಿಸಿದ ಮೇಲೂ ಈ ತರುಣನು ಇವಳಿಗೆ ಇಷ್ಟೇಕೆ ಪ್ರಿಯನೆನಿಸಿದನೊ ತಿಳಿಯದು."

ಭೀಮಗುಪ್ತನ ನಂತರ ಮತ್ತಾವ ಉತ್ತರಾಧಿಕಾರಿ ಇಲ್ಲದ್ದರಿಂದ ದಿದ್ದಾ ರಾಜಮುಕುಟವನ್ನು ತಾನೇ ಧರಿಸಿದಳು. ಈ ವರೆಗೆ ರಾಜಮಾತೆ ಮಾತ್ರಳಾಗಿದ್ದ ಈಕೆ ಈಗ ಸ್ವತಃ ಮಹಾರಾಣಿಯಾದಳು. ಮುಂದೆ ೧೯-೨೦ ವರ್ಷಗಳವರೆಗೆ ಒಳ್ಳೇ ರೀತಿಯಲ್ಲಿ ರಾಜ್ಯವಾಳಿ ಕಾಶ್ಮೀರದ ಉನ್ನತಿಗಾಗಿ ಯತ್ನಿಸಿ ಕೊನೆಗೆ ತನ್ನ ಉತ್ತರಾಧಿಕಾರವನ್ನು ತಮ್ಮನ ಮಗ ಸಂಗ್ರಾಮರಾಜನಿಗೆ ಒಪ್ಪಿಸಿದಳು. ನೂರು ವರ್ಷಗಳಿಂದ ವಿಪತ್ಕಳ್ಕೊಳಗಾಗಿದ್ದ ಕಾಶ್ಮೀರ ಶಾಸನಕ್ಕೆ ಇವನೊಬ್ಬ ಒಳ್ಳೇ ಶಾಸಕ ಸಿಕ್ಕಂತಾಯಿತು.

೧೦೦೩ ರಲ್ಲಿ ಈಕೆಯ ದೇಹಾವಸಾನವಾಯಿತು. ಹಿಂದುಳಿಯಿತು, ಈಕೆ ವಾರಾಂಗನೆಯೋ ವೀರಾಂಗನೆಯೋ ಎಂಬ ವಿವಾದ. ಅವಳು ತನ್ನ ಅಧಿಕಾರ ಕಾಲದಲ್ಲಿ ವಿದ್ರೋಹಗಳನ್ನು ದಮನ ಮಾಡಿ ಕಾಶ್ಮೀರಕ್ಕೆ ತಂದುಕೊಟ್ಟ ಸ್ಥೈರ್ಯ ಮಾತ್ರ ಇತಿಹಾಸಕ್ಕೆ ಬಳುವಳಿಯಾಗಿ ಉಳಿಯಿತು. *

ಅತಿಕುಪಿತಾ ಅಪಿ ಸುಜನಾ ಯೋಗೇನ ಮೃದೂಭವಂತಿ ನ ತು ನೀಚಾಃ।
ಹೇಮ್ನಃ ಕಠಿನಸ್ಯಾಪಿ ದ್ರವಣೋಪಾಯೋಸ್ತಿ ನ ತೃಣಾನಾಮ್॥

ಸಜ್ಜನರು ಬಹಳ ಸಿಟ್ಟಿಗೆದ್ದರೂ ಅನುನಯದಿಂದ ಅವರನ್ನು ಮೆತ್ತಗೆ ಮಾಡಬಹುದು; ಆದರೆ ನೀಚರು ಹಾಗಲ್ಲ. ಬಂಗಾರ ಎಷ್ಟು ಗಟ್ಟಿಯಾಗಿದ್ದರೂ ಅದನ್ನು ಉಪಾಯದಿಂದ ಕರಗಿಸಬಹುದು; ಆದರೆ ಹುಲ್ಲನ್ನು ಕರಗಿಸಲು ಸಾಧ್ಯವಿಲ್ಲ.

ಪುಸ್ತಕ ವಿಭಾಗ



ಕ್ರಿಸ್ತನ ಕೊನೆಯ ದಿನ

ಲೇಖಕ: ಶ್ರೀನಿವಾಸ ಹಾವನೂರ್

T.H.RAO

ಕ್ರಿಸ್ತನ ಕೊನೆಯ ದಿನ

ಕ್ರಿ. ಶ. ೩೦ ನೇ ಇಸವಿಯ ಎಪ್ರಿಲ ತಿಂಗಳ ೬ನೆಯ ತಾರೀಖು. ಅಂದು ಗುರುವಾರ ಪಶ್ಚಿಮದ ದಡದಲ್ಲಿ ಸೂರ್ಯನು ಅಸ್ತನಾಗುತ್ತಿರುವ ಸಮಯ.

ಬೆಥೆನಿಯಿಂದ ಜೆರೂಸಲೇಮ್‌ಗೆ ಹೋಗುವ ಮಾರ್ಗದಗುಂಟ ಯೇಸುವೂ ಅವನ ಹತ್ತು ಜನ ಶಿಷ್ಯರೂ ಜೆರೂಸಲೇಮ್‌ನತ್ತ ನಿದಾನವಾಗಿ ಸಾಗಿದ್ದರು. ದಾರಿಯ ಧೂಳಿನಿಂದ ಹೊಲಸಾದ ಅವರ ನಿಲುವಂಗಿಗಳು ಸಂಜೆಯ ಗಾಳಿಯಲ್ಲಿ ಹೊಯ್ದಾಡುತ್ತಿದ್ದವು. ಅವರ ದೃಷ್ಟಿ ಬಯಲಿನ ಹಸಿರು ಹೊಲಗಳನ್ನೂ ಬದಿಯಲ್ಲಿಯ ಕಿರಿಬೆಟ್ಟಗಳನ್ನೂ ತೂರಿಕೊಂಡು, ತಲೆಯೆತ್ತಿ ಮೆರೆಯುತ್ತಿರುವ ಪವಿತ್ರ ನಗರವೆನಿಸುವ ಜೆರೂಸಲೇಮಿನಲ್ಲಿ ನೆಟ್ಟಿದ್ದಿತು.

ಇಡೀ ಪೆಲೆಸ್ಟೈನ್ ರಾಜ್ಯದಲ್ಲಿಯೇ ಜೆರೂಸಲೇಮ್ ದೊಡ್ಡ ನಗರವಾಗಿದ್ದಿತು. ಸುಮಾರು ಮೂರು ಮೈಲಿನವರೆಗೆ ಹಬ್ಬಿರುವ ಆ ನಗರದಲ್ಲಿ ಆಗಿನ ಕಾಲದಲ್ಲಿ ಒಂದು ಲಕ್ಷದಷ್ಟು ಜನ ವಾಸವಾಗಿದ್ದರು. ಜೆರೂಸಲೇಮಿಗೆ ಮಹತ್ವವಿದ್ದುದು ಊರ ಮಧ್ಯದಲ್ಲಿರುವ ವಿಶಾಲವಾದ ದೇವ ಮಂದಿರದಿಂದಾಗಿ. ಯಹೂದ್ಯ ಜನರ ಏಕಮೇವ ಪರಮ ದೈವತವಾದ ಯೇಹೋವನು ಅಲ್ಲಿ ವಾಸಿಸುತ್ತಾನೆಂದು ಪ್ರತಿಯೋರ್ವ ಯಹೂದ್ಯನೂ ಅತ್ಯಂತ ದೃಢವಾಗಿ ನಂಬಿದ್ದನು. ದೇವನು ವಾಸಿಸುವ ಮಂದಿರವೋ ೧,೬೦೦ ಅಡಿ ಉದ್ದವಾಗಿಯೂ ೧,೦೦೦ ಅಡಿ ಅಗಲವಾಗಿಯೂ ಇದ್ದು, ಇಡೀ ನಗರದ ೧/೬ ದಷ್ಟು ಸ್ಥಳವನ್ನೇ ಆಕ್ರಮಿಸಿದ್ದಿತು. ಯಹೂದ್ಯರ ಆದಿ ಪುರುಷನಾದ ಡೇವಿಡ್‌ನ ಮಗ ಸಾಲೊಮನ್ನನು ಸಾವಿರಾರು ವರ್ಷಗಳ ಹಿಂದೆ ಅದನ್ನು ಕಟ್ಟಿಸಿದನು. ಈಚೆಗೆ ಅಂದರೆ ಕ್ರಿ. ಶ. ಪೂರ್ವದಲ್ಲಿ ಮೂವತ್ತು ವರ್ಷಗಳ ಹಿಂದೆ ಅದಕ್ಕೆ ಸಂಗಮವರಿಯ ಕಲ್ಲುಗಳನ್ನು ಎಲ್ಲೆಲ್ಲಿಯೂ ಕೂಡ್ರಿಸಿದ್ದರಿಂದ ಅದು ಅತೀವ ಶೋಭಾಯಮಾನವಾಗಿದ್ದಿತು.

ಯೇಸು ಮತ್ತು ಅವನ ಶಿಷ್ಯರು ನಗರದಲ್ಲಿ ಕಾಲಿರಿಸಿದಾಗ, ಅಲ್ಲಿಯ ಚಿಕ್ಕ ಬೀದಿಗಳಲ್ಲಿ ಜನ ಕಿಕ್ಕಿರಿದು ತುಂಬಿದ್ದಿತು. ಮೊದಲೇ ಜೆರೂಸಲೇಮ್ ನಿಬಿಡವಾದ ವಸತಿಯ ಊರು. ಈಗಂತೂ ಪಾಸ್ಕ ಹಬ್ಬವಿದ್ದುದರಿಂದ, ದೇಶ ವಿದೇಶಗಳಿಂದ ಮೂರು ಲಕ್ಷಕ್ಕೆ ಮಿಕ್ಕಿ ಯಾತ್ರಿಕರು ಬಂದಿದ್ದರು. ಅವರ ಧಾರ್ಮಿಕ ಸಮಾರಂಭಗಳಲ್ಲೆಲ್ಲ ಪಾಸ್ಕ ಹಬ್ಬವು ಅತಿ ಹೆಚ್ಚಿನದು.

ಈ ಪುರಾತನವಾದ ಹಬ್ಬದ ಸಮಾರಂಭದಲ್ಲಿ ಯೇಸುವಿನ ಶಿಷ್ಯರಿಗೆ ಸಹಜ ಉತ್ಸಾಹ ಮೂಡಿದ್ದಿತಾದರೂ, ಅವನ ಇಡೀ ದಿನದ ಮೌನದಿಂದ ಅವರಿಗೆ ಆಶಾಭಂಗವಾದಂತಾಗಿದ್ದಿತು. ಬೆಳಗಿನಲ್ಲಿ ತನ್ನ ತಾಯಿ ಮೇರಿ, ಚಿಕ್ಕತಾಯಿ ಅಲ್ಫಸ್ ಮೇರಿ ಮತ್ತು ಮೆಗ್ಡಲೀನ ಮೇರಿ ಇವರೊಟ್ಟಿಗೆ ಯೇಸು ಉಲ್ಲಸಿತನಾಗಿಯೆ ಇದ್ದ. ತನ್ನ ಹನ್ನೆರಡು ಜನ ಶಿಷ್ಯರನ್ನು ಕರೆದುಕೊಂಡು ಜೆರೂಸಲೇಮ್‌ಗೆ ಹೋಗುವುದಾಗಿ ತಿಳಿಸಿ, ಹೊರಟ ಮೇಲೆ ದಾರಿಯಲ್ಲಿ ಅವನು ಮಾತನಾಡಿದುದು ತೀರ ಕಡಿಮೆ ಅವನು ಹೀಗೆ ಅಂತರ್ಮುಖಿಯಾದುದು ಅವರಿಗ ಬೇಗುದಿಯನ್ನುಂಟುಮಾಡಿದ್ದಿತು.

ಬೆಥೆನಿಯಿಂದ ಹೊರಟಾಗ ಹನ್ನೆರಡು ಜನ ಶಿಷ್ಯರಿದ್ದರೆ, ಆ ಗಳಿಗೆಗೆ ಯೇಸುವಿನ ಜೊತೆಯಲ್ಲಿ ಹತ್ತು ಜನ ಮಾತ್ರವೇ ಇದ್ದರು. ಯೇಸು ಅವರಲ್ಲಿ ಇಬ್ಬರನ್ನು ಕುರಿತು ನೀವು ಪಟ್ಟಣದೊಳಗೆ ಹೋದಿರೆಂದರೆ ಅಲ್ಲಿ ಒಬ್ಬ ಮನುಷ್ಯನು

ತುಂಬಿದ ಕೊಡವನ್ನು ಹೊತ್ತುಕೊಂಡು ಹೋಗು ವುದನ್ನು ಕಾಣುವಿರಿ. ನೀವು ಅವನ ಮನೆಯ ತನಕ ಅವನನ್ನು ಹಿಂಬಾಲಿಸಿ, ಅವನಿಗೆ—"ನಮ್ಮ ಬೋಧಕನು ತನ್ನ ಶಿಷ್ಯರ ಸಂಗಡ ಈ ಪಾಸ್ಕ ಹಬ್ಬದ ಕಾಲದಲ್ಲಿ ಕೊನೆಯ ಭೋಜನ ವನ್ನು ಮಾಡಬೇಕೆನ್ನುತ್ತಾನೆ. ತನಗೆ ಭೋಜನ ಶಾಲೆ ಎಲ್ಲಿ ಎಂದು ಕೇಳುತ್ತಾನೆ, ಎಂಬುದಾಗಿ ಹೇಳಿರಿ. ಅವನು ತೋರಿಸುವ ಮೇಲಂತಸ್ತಿನಲ್ಲಿ ಎಲ್ಲವನ್ನೂ ಯಥಾಕ್ರಮದಲ್ಲಿ ಅಣಿಗೊಳಿಸಿರಿ" ಎಂದು ಹೇಳಿ ಮುಂದೆ ಕಳುಹಿದ್ದನು.

ಅವರಿಬ್ಬರು ಶಿಷ್ಯರೂ ಊರೊಳಕ್ಕೆ ಬಂದಾಗ, ತುಂಬಿದ ಕೊಡವನ್ನು ಹೊತ್ತುಕೊಂಡ ಮನುಷ್ಯನನ್ನು ಕಾಣುವುದು ಕಷ್ಟವಾಗಲಿಲ್ಲ. ಅದರಂತೆ ಅವರ ಮನೆತನಕ ಹೋಗಿ, ಅವನಿಗೆ, ತಮ್ಮ ಗುರುವಿನ ನಿರೋಪವನ್ನು ತಿಳಿಸಿ, ತಮ್ಮ ಕೈಗಾಣಿಕೆಗಳನ್ನು ಹಿಡಿದುಕೊಂಡು ದೇವಸ್ಥಾನಕ್ಕೆ ಬಂದರು. ಐವತ್ತು ಸಾವಿರ ಜನ ಅಲ್ಲಿ ನೆರೆದಿದ್ದರು. ಪ್ರತಿಯೊಬ್ಬರ ಬಗಲಲ್ಲಿಯೂ ಬಲಿಗೊಡಲೆಂದು ಒಂದೊಂದು ಎಳೆಯ ಕುರಿಯ ಮರಿ.

ಇಂದೇಕೋ ಯೇಸು ದೇವಾಲಯಕ್ಕೆ ಹೋಗಲಿಲ್ಲ. ಕಳೆದ ವಾರದಿಂದ ಅವನು ಅಲ್ಲಿಗೆ ಹೋಗುತ್ತಲಿದ್ದ. ಉಪದೇಶವನ್ನು ಗೈಯುತ್ತಲಿದ್ದ. ಮೊನ್ನೆಯಂತೂ ಅವನು, ದೇವಸ್ಥಾನವನ್ನು ಹೊಕ್ಕು, ಅಲ್ಲಿಯ ಪಟಾಂಗಣದಲ್ಲಿ ಕುಳಿತು ಪಾರಿವಾಳಗಳ ವ್ಯಾಪಾರ ಮಾಡುತ್ತಿದ್ದವರನ್ನೂ ಬಡ್ಡಿಯ ವ್ಯವಹಾರ ಮಾಡುತ್ತಿದ್ದ ಚಿನಿವಾಲರನ್ನೂ ಗದರಿಸಿ ಓಡಿಸಿದ್ದನು. ಕೈಯಲ್ಲಿ ತೊಗಲಿನ ಪಟ್ಟಿಯೊಂದನ್ನು ಹಿಡಿದುಕೊಂಡಿದ್ದನಾದರೂ, ಅವನ ದನಿಯಲ್ಲಿನ ಗುಡುಗಿಗೇ ಅವರು ಹೆದರಿ ಓಡಿದ್ದರು. "'ನನ್ನ ಆಲಯವು ಪ್ರಾರ್ಥನಾಲಯವೆನಿಸಿಕೊಳ್ಳುವುದು' ಎಂದು ದೇವರು ಹೇಳಿರುವಾಗ, ನೀವು ಅದನ್ನು ಕಳ್ಳರ ಗವಿಯನ್ನಾಗಿ, ಮೋಸದ ಮಾರುಕಟ್ಟೆಯನ್ನಾಗಿ ಮಾಡಿದ್ದೀರಿ" ಎಂದಾಗ ಅವರಿಗೆ ಅಲ್ಲಿ ನಿಲ್ಲುವ ಧೈರ್ಯವುಳಿದಿರಲಿಲ್ಲ. ಅವರು ಬಿಟ್ಟು ಹೋದ ಸ್ಥಳದಲ್ಲಿ ಯೇಸು ದೀನರಿಗೂ ದಲಿತರಿಗೂ ಬರಲು, ಬಂದು ದೇವರ ಪ್ರಾರ್ಥನೆ ಮಾಡಲು ಅವಕಾಶ ಮಾಡಿಕೊಟ್ಟಿದ್ದನು.

ಇಂದು ಅವನು ಅಲ್ಲಿಗೆ ಹೋಗಿದ್ದರೆ, ಅಲ್ಲಿ ನೆರೆದ ೫೦ ಸಾವಿರದ ಜನಸಮ್ಮರ್ದದಲ್ಲಿ, ಅವನ ಉಪದೇಶವನ್ನು ಕೇಳಿದ್ದ ಐದಾರು ಸಾವಿರ ಜನರಾದರೂ ಅವನಿಗೆ ಜಯಜಯಕಾರವನ್ನು ಮಾಡಿ ಸ್ವಾಗತಿಸುತ್ತಿದ್ದರೇನೋ! ಅವನು ದೇವರ ಶಾಂತಿದೂತ (ಮೆಸ್ಸಾಯಿ) ಎಂದು ತಿಳಿದವರ ಸಂಖ್ಯೆಗೂ ಕೊರತೆಯೇನೂ ಇರಲಿಲ್ಲ. ಶಾಂತಿದೂತನ ಆಗಮನವೆನ್ನುವುದು ಯಹೂದ್ಯರಿಗೆ ಅಮೃತವಚನವಿದ್ದಂತೆ! ಶಾಂತಿದೂತನೊಬ್ಬ ಬಂದು ತಮ್ಮ ಕಷ್ಟಗಳೆಲ್ಲವನ್ನೂ ಪರಿಹರಿಸುವನೆಂದೂ ತಮ್ಮ ಹರಿದುಹಂಚಿದ ೧೨ ಜನಾಂಗಗಳನ್ನು ಒಂದುಗೂಡಿಸಿ ಸುಖ, ಶಾಂತಿಗಳನ್ನು ತರುವನೆಂದೂ ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ಉಕ್ತವಾಗಿತ್ತು. ಒಂದು ಸಾವಿರ ವರ್ಷದ ಮೇಲೆ ಆ ಶಾಂತಿದೂತನು ಬರುವನೆಂದು ಪ್ರಮಾಣ ವಾಕ್ಯವಿದ್ದು, ಆ ಸಾವಿರ ವರ್ಷದ ಅವಧಿ ತೀರುತ್ತ ಬಂದಿದ್ದಿತು. ಯೇಸು ಪವಾಡಗಳನ್ನೂ ತೋರಿಸಿದ್ದ. ಕಣ್ಣಿಲ್ಲದವರಿಗೆ ದೃಷ್ಟಿಯನ್ನು ತಂದುಕೊಟ್ಟಿದ್ದ. ಮರಣಹೊಂದಿ ನಾಲ್ಕು ದಿನಗಳಾದ ಮೇಲೆ, ಲಾಜರಸ್ ಎಂಬವನನ್ನು ಗೋರಿಯಿಂದ ಕೈಹಿಡಿದು ಎಬ್ಬಿಸಿದ್ದ. ಎಲ್ಲಕ್ಕಿಂತ ಮುಖ್ಯವಾಗಿ ಪ್ರೇಮದ, ಶಾಂತಿಯ ಮಾತುಗಳನ್ನು ಹೇಳುತ್ತಲಿದ್ದ. ಆದರೆ ಅವನು ಉಪದೇಶವನ್ನು ಆರಂಭಿಸಿ ಎರಡು ವರ್ಷಗಳು ಮಾತ್ರ ಸಂದಿದ್ದುವಾದ್ದರಿಂದ, ಅವನ ಅನುಯಾಯಿಗಳ ಸಂಖ್ಯೆ ಅಷ್ಟು ವಿಸ್ತಾರವಾಗಿ ಹರಡಿದ್ದಿಲ್ಲ.

ಯೇಸುವಿಗಿಂತ ಮುಂಚೆ ಅನೇಕ ಜನ 'ಶಾಂತಿದೂತ'ರು ಆಗಿಹೋಗಿದ್ದರು. ಅವರು ಮಾಡಿ ತೋರಿಸುತ್ತಿದ್ದ ಮಂತ್ರ–ಮಾಟಗಳಿಗೆ ಬಲಿಬಿದ್ದು ಅವರೇ ಶಾಂತಿದೂತರೆಂದು ನಂಬಿ, ಅವರನ್ನು ಹಿಂಬಾಲಿಸಿ, ಕೊನೆಗೆ ಅವರ ದೈವತ್ವದ ಕೃತ್ರಿ-

ಮತೆಯ ಅರಿವಾಗಿ ಜನವೇ ಅವರ ಅವತಾರ ಸಮಾಪ್ತಿಯನ್ನು ಮಾಡುತ್ತಿದ್ದಿತು. ಈ ವರೆಗೆ ಇಂಥ ಶಾಂತಿದೂತರ ವಿಷಯದಲ್ಲಿ ದೇವಮಂದಿರದ ಪುರೋಹಿತರು ಕೈ ಹಾಕಿರಲಿಲ್ಲ. ಆದರೆ ನಾಜರೇಥಿನಿಂದ ಬಂದ ಈ ಯೇಸು ಮಾತ್ರ ತಮ್ಮ ಮಧ್ಯದಲ್ಲಿಯೇ ನಿಂತುಕೊಂಡು, ಜನರಿಗೆ ತಮ್ಮ ವಿರುದ್ಧವಾಗಿ ಉಪದೇಶಿಸುತ್ತಿದ್ದನು.

"ಸೋದರರೇ, ಈ ಪುರೋಹಿತರೂ ಶಾಸ್ತ್ರಿಗಳೂ ದೇವರ ಪೀಠದ ಬಳಿಯಲ್ಲಿ ಕುಳಿತವರು. ಆದುದರಿಂದ ಅವರು ಮಾಡುವ ಧರ್ಮೋಪದೇಶದಂತೆ ಅವಶ್ಯವಾಗಿ ನಡೆಯಿರಿ. ಆದರೆ ಅವರ ನಡತೆಯನ್ನು ಅನುಸರಿಸಬೇಡಿರಿ. ಅವರು ಉಪದೇಶ ಮಾಡುವವರೇ ಹೊರತಾಗಿ, ಅದರಂತೆ ಸ್ವತಃ ತಾವು ನಡೆಯುವವರಲ್ಲ. ಅಯ್ಯೋ, ಕಪಟಿಗಳಾದ ಪುರೋಹಿತರೇ, ನೀವು ಪರಲೋಕ ರಾಜ್ಯದ ಬಾಗಿಲನ್ನು ಮುಚ್ಚಿಬಿಟ್ಟಿದ್ದೀರಿ. ನೀವು ಸುಣ್ಣ ಹಚ್ಚಿದ ಸಮಾಧಿಗಳಂತಿದ್ದೀರಿ. ಅವು ಹೊರಗೆ ನೋಡುವುದಕ್ಕೆ ಚೆಂದ. ಒಳಗೆ ನೋಡಿದರೆ ಎಲುಬು, ನಾರುವ ಮಾಂಸ, ಕೊಳೆಗಳಿಂದ ಕೂಡಿರುತ್ತವೆ. ಹಾಗೆಯೆ ನೀವು ಹೊರಗೆ ಸತ್ಪುರುಷರಂತೆ ಕಂಡರೂ ಒಳಗೆ ಕಪಟದಿಂದಲೂ ಅನ್ಯಾಯದಿಂದಲೂ ತುಂಬಿದವರಾಗಿದ್ದೀರಿ."

ಪ್ರಾಪಂಚಿಕ ಆಮಿಷಗಳಿಗೆ ಒಳಗಾದ ಯಾವ ಪುರೋಹಿತನು ಇದನ್ನು ಕೇಳಿ ಸುಮ್ಮನಿದ್ದಾನು? ಮೇಲಾಗಿ ಯೇಸು ಆ ಪುರೋಹಿತರ ಹಸ್ತಕರಾಗಿ, ಸುಂಕವನ್ನು ಸಲ್ಲಿಸುವ ಆ ಚಿನಿವಾಲರನ್ನೂ ವ್ಯಾಪಾರಿಗಳನ್ನೂ ಹೊರಹಾಕಿದನಲ್ಲ. ಇವನಿಗೆ ಏನು ಅಧಿಕಾರ? ಇನ್ನೊಮ್ಮೆ ಅವನು ಬಂದಾಗ ಅವನನ್ನು ಇಲ್ಲವಾಗಿಸಬೇಕು ಎಂದು ಅವರು ಯೋಚಿಸುವುದು ಸಹಜವಾಗಿತ್ತು. ಅವನನ್ನು ಗುಪ್ತವಾಗಿ ಕೊಲ್ಲಿಸಬೇಕೆಂಬ ಎತ್ತುಗಡೆಯಲ್ಲಿರುವರೆಂಬ ವಾರ್ತೆ ಯೇಸುವಿನ ಕಿವಿವರೆಗೂ ಬಂದಿದ್ದಿತು. ಆದರೂ ಅವನು ಜೆರೂಸಲೇಮ್‌ಗೆ ಮತ್ತೆ ಬಂದಿದ್ದ.

ಯೇಸುವಿನ ಆ ಇಬ್ಬರು ಶಿಷ್ಯರು ಮಂದಿರದಲ್ಲಿ ತಾವು ತಂದಿದ್ದ ಕುರಿಮರಿಗಳನ್ನು ಬಲಿ ಗೊಟ್ಟರು. ಅವರು ತಮ್ಮ ನಿಯೋಜಿತ ಭೋಜನ ಮನೆಯ ಕಡೆಗೆ ಸಾಗಿವಾಗ ಕತ್ತಲಾಗತೊಡಗಿದ್ದಿತು. ಆ ಮನೆಯ ಯಜಮಾನನು ಇನ್ನಾರೂ ಅಲ್ಲ, ಯೇಸುವಿನ ಅನುಯಾಯಿಗಳಲ್ಲಿ ಒಬ್ಬನಾದ ಮಾರ್ಕನ ತಂದೆಯಾಗಿದ್ದನು.

ಯೇಸು ಮಾರ್ಕನ ತಂದೆಯ ಮನೆಯಲ್ಲಿ ಕಾಲಿರಿಸಿದಾಗ, ಇವರ ಅಡಿಗೆಯ ಸಿದ್ಧತೆ ಮುಗಿಯುತ್ತ ಬಂದಿದ್ದಿತು. ಮೇಲಂತಸ್ತಿಗೆ ಹೋದಾಗ ಆಸನಗಳೆಲ್ಲ ಸಿದ್ಧವಾಗಿದ್ದುವು. ಒಂದು ಅಡಿಯಷ್ಟು ಮಾತ್ರ ಎತ್ತರವಿದ್ದ ಮೇಜುಗಳನ್ನು ಕುದುರೆಯ ನಾಲಿನ ಆಕಾರದಲ್ಲಿ ಹೊಂದಿಸಲಾಗಿದ್ದಿತು. ಮಧ್ಯದಲ್ಲಿ ಜೀಸಸ್ ಕುಳಿತರೆ, ಎಡಬಲಕ್ಕೆ ಆರಾರು ಜನ ಶಿಷ್ಯರು ಕೂಡ್ರುತ್ತಿದ್ದರು. ಗುರುವಿನ ಪಕ್ಕದಲ್ಲಿ ಈ ಬದಿ, ಆ ಬದಿಗೆ ಕೂಡುವ ಪ್ರಾಶಸ್ತ್ಯವು ಇಬ್ಬರಿಗೆ ಮಾತ್ರ ಇದ್ದಿತು. ಅವರೆಂದರೆ ಪಟ್ಟಶಿಷ್ಯನಾದ ಪೀಟರ್, ಇನ್ನೊಬ್ಬ ದಿವಾಣನಂತೆ ಆರ್ಥಿಕ ಆಗು-ಹೋಗುಗಳನ್ನು ನೋಡಿಕೊಂಡು ಹೋಗುತ್ತಿದ್ದ ಜೂಡಾಸ್. ಆದರೆ ಆ ದಿನ ಜೂಡಾಸ್ ಬಳಿಯಲ್ಲಿ ಕೂಡ್ರದೆ ಎಲ್ಲರಿಗಿಂತ ವಯಸ್ಸಿನಲ್ಲಿ ಕಿರಿಯನಾದ ಜಾನ್ ಕುಳಿತಿದ್ದನು. ಗಡ್ಡ ಬಿಟ್ಟವರೆಂದು ಎಲ್ಲರೂ ನೋಡುವುದಕ್ಕೆ ಒಂದೇಯಾಗಿ ಕಂಡರೂ ಅವರ ಗಾತ್ರ, ವಯಸ್ಸು, ವಿದ್ಯೆ, ಧರ್ಮಬುದ್ಧಿ, ನಡತೆ, ಮಾತುಗಳಲ್ಲಿ ತುಂಬಾ ವೈವಿಧ್ಯವಿದ್ದಿತು. ಧರ್ಮಗ್ರಂಥಗಳನ್ನು ಆಳವಾಗಿ ಅಭ್ಯಸಿಸಿದ ಪಾಂಡಿತ್ಯದ ಲಕ್ಷಣ ಅವರಲ್ಲಿ ತೋರುತ್ತಿರಲಿಲ್ಲ. ಅವರು ಭಾವನಾಶೀಲರೂ ತಮ್ಮ-ತಮ್ಮಲ್ಲಿ ವಾದ ಮಾಡುವ ಪ್ರವೃತ್ತಿಯುಳ್ಳವರೂ ಆಗಿದ್ದರು.

ಇವರೆಲ್ಲ ಯೇಸುವಿನ ತಾಯ್ನಾಡಾದ ಗ್ಯಾಲಿಲಿಯಿಂದ ಬಂದವರಾಗಿದ್ದರೆ ಒಬ್ಬನೇ ಒಬ್ಬ ಜೇರೂಸಲೇಮಿನಿಂದ (ಜ್ಯೂಡಿಯಾ) ಬಂದವನಾಗಿದ್ದ. ಅವನೇ ಇಸ್ಕಾರಿಯಟ್‌ದ ಜೂಡಾಸ್. ತಾನಾಗಿ ಯೇಸುವಿನ ಶಿಷ್ಯತ್ವವನ್ನು ವಹಿಸಿ

ಬಂದವನಾದರೂ. ಅವನು ಈ ಗುಂಪಿನ ಆರ್ಥಿಕ ಆಗುಹೋಗುಗಳನ್ನು ನೋಡಿಕೊಳ್ಳುವವನಾಗಿದ್ದನು. ಯೇಸುವಿನ ಉಪದೇಶವನ್ನು ಕೇಳಿ, ತಮ್ಮ ಧನ, ಸಂಪತ್ತನ್ನು ದಾನವಾಗಿ ಕೊಟ್ಟಿದ್ದ ಸಿರಿವಂತ ಜನ ಬೇಕಾದಷ್ಟು ಇದ್ದರು. ಅದನ್ನು ಸತ್ಪಾತ್ರದಲ್ಲಿ ದಾನವಾಗಿ ಹಂಚುವ ಕೆಲಸ ಇವನದು ಈ ಕೆಲಸದಲ್ಲಿಯೆ ಅವನ ವೇಳೆ ಹೋಗುತ್ತಿತ್ತಾದ್ದರಿಂದ, ಅವನಿಗೆ ಪ್ರವಚನಾದಿಗಳನ್ನು ಕೇಳಲು ವಿಶೇಷ ವ್ಯವಧಾನವಿರುತ್ತಿರಲಿಲ್ಲ. ಹಣವನ್ನೆಲ್ಲ ಅವನು ಒಂದು ಚರ್ಮದ ಚೀಲದಲ್ಲಿ ಹಾಕಿ ಅದನ್ನು ಟೊಂಕಕ್ಕೆ ಕಟ್ಟಿಕೊಂಡಿರುತ್ತಿದ್ದನು. ಅವನು ವ್ಯಾವಹಾರಿಕ ಜಗತ್ತಿನಲ್ಲಿ ಇತರ ಎಲ್ಲರಿಗಿಂತ ಹೆಚ್ಚು ಬುದ್ಧಿವಂತನಾಗಿದ್ದ. ಆದರೆ ಅತಿಯಾಗಿ ಬುದ್ಧಿವಂತಿಕೆಯನ್ನು ತೋರಿಸಿ ಹಣವನ್ನು ಎತ್ತಿಹಾಕುತ್ತಾನೆ ಎಂಬುದಾಗಿ ಇತರ ಶಿಷ್ಯರ ಆರೋಪವಿದ್ದಿತು. ಅವನು ಹಣವನ್ನು ಅತಿಯಾಗಿ ಲೋಭಿಸುತ್ತಿದ್ದನೆಂಬುದು ಯೇಸುವಿಗೂ ತಿಳಿದಿದ್ದಿತು.

ತನ್ನ ಸಂದೇಶವನ್ನು, ತನ್ನ ನಂತರ ಜಗತ್ತಿನಲ್ಲಿ ಸಾರಬೇಕಾದ ಈ ಪರಿವಾರದೊಂದಿಗೆ ಯೇಸು ಭೋಜನಕ್ಕೆ ಕುಳಿತನು.

"ನಾನು ದೇಹಯಾತನೆಯನ್ನು ಅನುಭವಿಸುವುದಕ್ಕೆ ಮುಂಚೆ, ನಿಮ್ಮ ಸಂಗಡ ಕೊನೆಯ ಬಾರಿ ಹಬ್ಬದ ಊಟಕ್ಕೆ ಕುಳಿತಿದ್ದೇನೆ. ದೇವರ ರಾಜ್ಯವು ನೆರವೇರುವ ತನಕ ನಾನು ಇನ್ನುಮೇಲೆ ಇದನ್ನು ಮುಟ್ಟುವುದಿಲ್ಲ"

ಈ ಮಾತಿನ ಅರ್ಥವನ್ನು ಅವರಿಗೆ ಪೂರ್ಣ ಗ್ರಹಿಸಲಿಕ್ಕಾಗಲಿಲ್ಲ. ತನ್ನ ಅವತಾರದ ಸಮಾಪ್ತಿಯ ಕಾಲ ಎಂದು ಸನ್ನಿಹಿತವಾಗುವುದೆಂಬುದನ್ನು ಅವನು ಈ ಹಿಂದೆ ಅವರಿಗೆ ಹೇಳಿಯೇ ಇದ್ದನು. ಜ್ಯೂಡಿಯಾದ ಧಾರ್ಮಿಕ ಕಂದಾಚಾರಗಳನ್ನು ಕೊನೆಗೊಳಿಸಿ, ದೇವರ ರಾಜ್ಯವನ್ನು, ಸತ್ಸಂಪ್ರದಾಯಗಳನ್ನು ಸ್ಥಾಪಿಸಲಿಕ್ಕಾಗದ್ದಕ್ಕಾಗಿ ನೊಂದಮನದಿಂದ ಹಾಗೆ ಹೇಳುತ್ತಿದ್ದಾನೆಂದು ಅವರು ಭಾವಿಸಿದ್ದರು.

ಊಟಕ್ಕೆ ಕೂಡ್ರುವ ಮುನ್ನ ಕಾಲು, ಕೈಗಳನ್ನು ತೊಳೆದುಕೊಳ್ಳಬೇಕು. ಅದಕ್ಕಾಗಿ ಸೇವಕರು ನೀರಿನ ಹೂಜಿಯನ್ನೂ, ಹರಿವಾಣ ಹಾಗೂ ಟಾವೆಲನ್ನೂ ತಂದಾಗ ಯೇಸು ಅದನ್ನು ಅವರಿಂದ ಇಸಿದುಕೊಂಡನು. ತಾನೇ ಆ ಕೆಲಸವನ್ನು ಮಾಡಲು ಅಣಿಯಾದಾಗ ಶಿಷ್ಯರು ಗಡಬಡಿಸಿದರು.

ಯೇಸು ಎದ್ದು ಬಂದು, ಬಲಬದಿಯ ಮೇಜಿನ ಕೊನೆಗೆ ಕುಳಿತಿದ್ದ ಶಿಷ್ಯನ ಮೆಟ್ಟುಗಳನ್ನು ತಾನೇ ಕೈಯಾರೆ ಕಳಚಿ, ಆ ಕಾಲುಗಳನ್ನು ಹರಿವಾಣದಲ್ಲಿ ಇಟ್ಟು ತೊಳೆದು, ಟಾವೆಲಿನಿಂದ ಒರೆಸಿದನು. ಅದರಂತೆ ಕೈಗಳನ್ನೂ ಶುದ್ಧಗೊಳಿಸಿದನು. ಆ ಶಿಷ್ಯನಿಗಂತೂ ಮಾತನಾಡುವ ಬಾಯಿಯೇ ಹೋದಂತಾಗಿತ್ತು. ಇತರರೂ ಅದರಂತೆ ಸುಮ್ಮನೆ ಉಳಿದರು. ಆ ಬಲಬದಿಯಲ್ಲಿ ಕುಳಿತಿದ್ದ ಜೂಡಾಸನ ಹಾಗೂ ಜಾನನ ಸರತಿಯೂ ಮುಗಿಯಿತು. ಅಲ್ಲಿಂದ ಎಡಬದಿಯಲ್ಲಿ ಮೊದಲಿಗನಾಗಿದ್ದ ಪೀಟರನ ಬಳಿಗೆ ಬಂದನು. ಪೀಟರನು ತನ್ನ ಕಾಲುಗಳನ್ನು ಹಿಂದೆಗೆದುಕೊಂಡಾಗ ಯೇಸು ಕಣ್ದೆರೆದು ಅವನನ್ನು ನೋಡಿದನು. ಆಗ ಪೀಟರ್— "ನನ್ನ ಕಾಲುಗಳನ್ನು ನೀವು ತೊಳೆಯುವುದೆ?" ಎಂದು ತನ್ನ ವಿರೋಧವನ್ನು ವ್ಯಕ್ತಪಡಿಸಿದನು.

"ನಾನೇನು ಮಾಡುತ್ತಿರುವೆನೆಂದು ಈಗ ನಿಮಗೆ ತಿಳಿಯದು. ಆದರೆ ಆಮೇಲೆ ಎಲ್ಲವೂ ಅರ್ಥವಾಗುವುದು" ಎಂದು ಯೇಸು ನುಡಿದನು.

"ಇದು ಎಂದಿಗೂ ಕೂಡದು" ಎಂದು ಉತ್ತರಿಸುವಲ್ಲಿ ಪೀಟರ್ ಬಹಳ ಧೈರ್ಯವನ್ನು ತೋರಿದನೆನ್ನಬೇಕು.

"ನಾನು ನಿನ್ನ ಕಾಲುಗಳನ್ನು ತೊಳೆಯುವುದಿಲ್ಲವೆಂದರೆ, ನೀನು ನನ್ನವನಲ್ಲ ಎಂದ ಹಾಗಾಯಿತು."

ಪ್ರತಿವಾದಿಯಂತೆ ಮಾತನಾಡುವ ಯೇಸುವಿನ ಈ ಕೃತಿಯ ಉದ್ದೇಶವು ತನ್ನ ಶಿಷ್ಯರಿಗೆ ಸೇವಾಧರ್ಮದ ಮಹತ್ವವನ್ನು ತಿಳಿಸಿ ಕೊಡು

ವುದೇ ಆಗಿದ್ದಿತು. ದೇವರ ಮಹಿಮಾನ್ವಿತ ಪುತ್ರನೂ ತನಗಿಂತ ಕೆಳಗಿನವರನ್ನು ಸಮಾನ ವಾಗಿ ಕಾಣುತ್ತಾನೆಂಬುದನ್ನು ಬಿಂಬಿಸುವುದೇ ಅವನ ಇಂಗಿತವಾಗಿದ್ದಿತು. ಪೀಟರನ ಕಾಲುಗ ಳನ್ನೂ, ಕೈಗಳನ್ನೂ ತೊಳೆದು ಒರೆಸಿದ ಯೇಸು ಹೇಳಿದ—

"ನೀವು ನನ್ನನ್ನು ಗುರುವೆಂದು ಸನ್ಮಾನಿಸು ತ್ತೀರಿ. ನಾನು ಗುರುವೆಂಬುದು ನಿಜ. ಗುರು ವಾದವನು ತನ್ನ ಶಿಷ್ಯರ ಕಾಲು ತೊಳೆದು ಸೇವೆ ಗೈದುದಾದರೆ, ಶಿಷ್ಯರು ತಮ್ಮಲ್ಲಿಯೂ, ಇತರರ ಲ್ಲಿಯೂ ಈ ಗುಣವನ್ನು ಆಚರಿಸಬೇಕು ಎಂದು ನಾನು ಹೇಳುತ್ತೇನೆ."

ಗುಜುಗುಜು ಮಾತಿನಿಂದ ಆರಂಭವಾದ ಊಟದ ಕಾರ್ಯಕ್ರಮವು ಮುಂದುವರಿದಿತ್ತು. ಹಸಿದವರಾದ ಅವರು ಅದರಲ್ಲಿ ತಲ್ಲೀನರಾಗಿ ದ್ದಾಗ ಯೇಸು ಹೇಳಿದ—

"ನನ್ನ ಸಂಗಡ ಕುಳಿತು ಊಟ ಮಾಡುವ ನಿಮಲ್ಲಿ ಒಬ್ಬನು ನನ್ನನ್ನು ಹಿಡಿದುಕೊಡುವನು."

ಆ ಮಾತನ್ನು ಕೇಳಿ. ಶಿಷ್ಯರೆಲ್ಲ ಊಟದಿಂದ ಥಟ್ಟನೆ ತಮ್ಮ ಕೈಯನ್ನು ಹಿಂತೆಗೆದರು. ಯೇಸು ವನ್ನು ಕೊಲ್ಲಿಸುವುದಕ್ಕಾಗಿ ದೇವ ಮಂದಿರದ ಪುರೋಹಿತರು ಯತ್ನಿಸುತ್ತಿದ್ದಾರೆಂದು ಅವರಿಗೆ ಗೊತ್ತಿತ್ತು. ಆದರೆ ಆ ಕಾರ್ಯದಲ್ಲಿ ತಮ್ಮಲ್ಲಿಯೇ ಒಬ್ಬನು ಭಾಗಿಯಾಗುವನೆಂದು ಮಾತ್ರ ಸಿಡಿಲಿ ನಂತೆ ಅವರ ಮನಕ್ಕೆ ಎರಗಿತು. ಎತ್ತಿದ್ದ ತುತ್ತನ್ನು ಕೆಳಗೆ ಬಿಟ್ಟು ಒಬ್ಬರೊಬ್ಬರ ಮುಖ ನೋಡಿದರು. "ದೊರೆಯೇ, ನಾನೆಯೆ?" ಎಂದು ಹಲವರು ಕುಗ್ಗಿದ ದನಿಯಲ್ಲಿ ಕೇಳಿದರು. ಯೇಸು ಉತ್ತರವೀಯಲಿಲ್ಲ. ಅವನ ತೀರ ಸನಿಹ ದಲ್ಲಿ ಕುಳಿತಿದ್ದ ಜಾನ್ ಮಾತ್ರ, ಅವನ ಕಿವಿಯ ಹತ್ತಿರಕ್ಕೆಯೆ ಮುಖವನ್ನು ಚಾಚಿ "ಯಾರು, ಆ ವ್ಯಕ್ತಿ?" ಎಂದು ಕೇಳಿಬಿಟ್ಟನು. "ಈ ತುತ್ತನ್ನು ನಾನು ಯಾರಿಗೆ ಕೊಡುತ್ತೇನೆಯೊ ಅವನೇ" ಎಂದು ಯೇಸು ಮೆಲ್ಲನೆ ಉಸುರಿದನು. ಊಟದ ಒಂದು ತುತ್ತನ್ನು ಬಟ್ಟಲಿನಲ್ಲಿ ಅದ್ದಿ, ಅದನ್ನು ಜೂಡಾಸನ ಮುಂದೆ ಹಿಡಿದನು. ಜೂಡಾಸ್, ಅದನ್ನು ಪ್ರಸಾದವೆಂಬಂತೆ ಸ್ವೀಕರಿಸಿದನು. ಅವನಿಗಾಗಲೀ, ಇತರರಿಗಾಗಲೀ ಜಾನ್‌ನ ಪ್ರಶ್ನೆಯೂ, ಯೇಸುವಿನ ಉತ್ತರವೂ ಕೇಳಿಸಿ ರಲೇ ಇಲ್ಲ. ಜೂಡಾಸ್ ತನ್ನ ವಿಚಾರದಲ್ಲೇ

ಕೊನೆಯ ಭೋಜನ



ಮಗ್ನನಾಗಿದ್ದನು.

"ಹೌದು, ನಿಮ್ಮಲ್ಲಿ ಒಬ್ಬ ನನ್ನನ್ನು ಈ ದಿನ ಹಿಡಿದುಕೊಡುವನು. ದೇವಪುತ್ರನೇನೋ ಈ ಜಗತ್ತಿನಿಂದ ಇಲ್ಲವಾಗುವನು. ಹಾಗೆಂದು ಶಾಸ್ತ್ರದಲ್ಲಿ ಬರೆದುದೇ ಆಗಿದೆ. ಆದರೆ ಅವನನ್ನು ಹಿಡಿದುಕೊಡುವ ಮನುಷ್ಯನಿಗಾಗಿ ನಾನು ಮರುಗುತ್ತೇನೆ. ಅವನು ಹುಟ್ಟದೆ ಇದ್ದಿದ್ದರೆಯೆ ಚೆನ್ನಾಗಿತ್ತು."

ಜೂಡಾಸ್‌ನಿಗೆ ಆ ಮಾತನ್ನು ಕೇಳಿ ಧೈರ್ಯ ಬಂತು. ಯೇಸು ಏನು ಮಾಡುವನೋ ಎಂದಾತ ಅಂಜಿದ್ದನು. ಇಷ್ಟೇ ತಾನೇ ಅವನು ಮಾಡುವುದು! ಯೇಸು ಸಾಯುವುದಕ್ಕೆ ಸಿದ್ಧನೆಂದಂತಾಯಿತು. ಅಲ್ಲದೆ ತನ್ನನ್ನು ಹಿಡಿದು ಕೊಡುವವನ ವಿಷಯದಲ್ಲಿ ಯಾವ ಕೋಪ, ಪ್ರತೀಕಾರಗಳೂ ಇಲ್ಲ! ಆಗ ಜೂಡಾಸ್ ಕೇಳಿದ: "ನಾನೆಯೆ ಆ ವ್ಯಕ್ತಿ?"

"ನೀನು ಹಾಗೆ ಹೇಳಿದಿ" ಎಂದು ಯೇಸು ಮಾರ್ನುಡಿದನು. ಅದರಲ್ಲಿ ಎರಡು ಅರ್ಥ. ಮೇಲು ನೋಟಕ್ಕೆ "ನೀನೇ ಹಾಗೆ ನುಡಿದವ, ನಾನಲ್ಲ" ಎಂಬ ಅರ್ಥವೂ ಆದೀತು. "ಹೌದು, ನಿನ್ನ ಮಾತು ಸರಿ" ಎಂಬುದೂ ಆಗಬಹುದು. ಯೇಸು ಜೂಡಾಸನನ್ನು ನೀಳ ನೋಟದಿಂದ ನೋಡುತ್ತ ಹೇಳಿದನು—

"ನೀನು ಮಾಡಬೇಕೆಂದುದನ್ನು ಬೇಗ ಮಾಡಿ ಮುಗಿಸು."

ಜೂಡಾಸ್ ಮೇಲೆದ್ದು ನಿಂತನು. ಆಮೇಲೆ ಹೊರಳಿ ನೋಡದೇ ತನ್ನ ಸಹೋದ್ಯೋಗಿಗಳ ನಿರೋಪವನ್ನೂ ತೆಗೆದುಕೊಳ್ಳದೆ ಹೊರ ಹೊರಟನು. ಆದರೆ ಹಣದ ವಿಷಯದ ಯಾವುದೊ ಒಂದು ಕೆಲಸಕ್ಕೆ ಯೇಸು ಅವನನ್ನು ಕಳಿಸಿದನೆಂದು ಇತರರು ತಿಳಿದರು.

ಜೂಡಾಸ್ ತಾನಾಗಿ ಯೇಸುವಿನ ಪಂಥವನ್ನು ಸೇರಿದ್ದ. ಒಂದು ವರ್ಷದ ಹಿಂದೆ ಯೇಸುವಿನ ಉಪದೇಶವನ್ನು ಮೊದಲ ಬಾರಿಗೆ ಕೇಳಿದಾಗ, ಈತ ನಿಜವಾಗಿ ದೇವದೂತ, ಇವನಿಂದ ಮಹತ್ವದ ಘಟನೆಗಳು ಜರುಗುವುದು ಖಂಡಿತ, ಅದರಿಂದ ತನಗೆ ಪ್ರಯೋಜನವುಂಟು ಎಂಬುದಾಗಿ ಯೋಚಿಸಿ ಅವನನ್ನು ಹಿಂಬಾಲಿಸಿದ್ದನು. ದಿನಗಳೆದಂತೆ ತಾನು ಮೋಸಹೋದೆನೆನಿಸ ಹತ್ತಿತ್ತು. ಈತ ಕ್ರಾಂತಿಯ ಕಿಡಿಗಳನ್ನು ಹಾರಿಸುವ ಕರ್ತೃತ್ವಶಾಲಿಯಲ್ಲ. ಬರಿಯ ಕರುಣೆ, ಬಂಧುತ್ವ, ತ್ಯಾಗ, ಮುಂತಾದವುಗಳ ವಿಷಯವಾಗಿ ಬಡಾಯಿ ಕೊಚ್ಚುವವ ಎಂದೆನಿಸತೊಡಗಿತು. ಜೆರೂಸಲೇಮ್‌ನಲ್ಲಿ ಇಷ್ಟು ಜನ ಭಕ್ತರಿದ್ದಾರೆ. ಒಬ್ಬರಾದರೂ ಇವನನ್ನು ಕೇಳಿಕೊಂಡು ಬಂದರೆ? ಇವ ಮೋಸಗಾರನೇನಲ್ಲ. ನಿಜ. ಆದರೆ ಓರ್ವ ತಲೆತಿರುಕ. ಮಾಟ, ಮಂತ್ರ ಸ್ವಲ್ಪ ಗೊತ್ತಿದ್ದವನೂ ಇರಬೇಕು! ಅಷ್ಟೆ. ಇಂದು ಅತ್ತೂ ಇಲ್ಲ ಇತ್ತೂ ಅಲ್ಲ ಎಂಬಂತೆ ತನ್ನ ಸ್ಥಿತಿಯಾಗಿದೆ. ಮಂದಿರದ ಪುರೋಹಿತರಂತೂ ಅವನ ನಿರ್ನಾಮಕ್ಕೆ ತೊಡಗಿಯೆ ಇದ್ದಾರೆ. ಇಂದಿಲ್ಲ ನಾಳೆ ಸನ್ನಿಹಿತವಾಗುವ ಆ ಪ್ರಸಂಗದಲ್ಲಿ ತನಗೂ ದುರ್ಗತಿಯಾಗಬಹುದು. ಅದಕ್ಕಿಂತ ನಾನೇ ಅವನನ್ನು ಪುರೋಹಿತರಿಗೆ ಒಪ್ಪಿಸಿಬಿಟ್ಟರೆ ಹೇಗೆ? ಯೇಸುವನ್ನು ಹಿಡಿದುಕೊಟ್ಟು ಮಂದಿರದ ಪುರೋಹಿತರ ವಿಶ್ವಾಸವನ್ನು ಗಳಿಸಿದ್ದಾದರೆ ಮಂದಿರದಲ್ಲಿ ವ್ಯಾಪಾರ ಮುಂತಾದ ವಹಿವಾಟನ್ನು ಮಾಡಬಹುದು. ಈಗ ಸದ್ಯ ಪ್ರತಿಫಲವೆಂದು ಹಣವನ್ನು ಕೇಳಿ ಪಡೆಯಬಹುದು. ಅದಕ್ಕಿಂತ ಧರ್ಮಲಂಡನೋರ್ವನನ್ನು ಹಿಡಿದುಕೊಟ್ಟು ದೇವಕಾರ್ಯವನ್ನು ನೆರವೇರಿಸಿದ ಪ್ರತಿಷ್ಠೆಯೂ ಊರಲ್ಲಿ ತನಗೆ ದೊರೆಯಬಹುದಲ್ಲವೆ?

ಜೂಡಾಸ್ ಹೊರಟುಹೋದಮೇಲೆ ಯೇಸುವಿಗೆ ಮನಬಿಚ್ಚಿ ಮಾತಾಡುವ ಅವಕಾಶವೊದಗಿ ಬಂದಂತಾಯಿತು. ತನ್ನನ್ನೆ ನಂಬಿದ ಶಿಷ್ಯರನ್ನು ನಡುವೆಯೆ ಬಿಟ್ಟುಹೋಗುವುದು ಅವನ ಮನಸ್ಸಿಗೆ ನೋವನ್ನುಂಟುಮಾಡಿದ್ದಿತು. ಆಗ ಅವನು ತನ್ನ ಶಿಷ್ಯರಿಗೆ ತನ್ನನ್ನೆ ಹಂಚಿಕೊಡುವ ಮನೋಭಾವದಲ್ಲಿದ್ದನು. ಕೈಯಲ್ಲಿದ್ದ ರೊಟ್ಟಿ

ಯನ್ನು ತುಣುಕುಗಳನ್ನಾಗಿ ಮಾಡುತ್ತ "ಇದನು ತಗೊಳ್ಳಿ. ಇದು ನನ್ನ ದೇಹ." ಎಂದನು. ಅದರಂತೆ ಮದ್ಯವು ತನ್ನ ರಕ್ತಕ್ಕೆ ಸಮಾನವೆಂದು ಅದನ್ನೂ ಅವರಿಗೆ ಹಂಚಿದನು, ಹೇಳತೊಡಗಿದನು:

"ಅಧಿಕಾರವುಳ್ಳವರು ತಮ್ಮ ಕೈಕೆಳಗಿನವರ ಮೇಲೆ ಸತ್ತೆಯನ್ನು ನಡೆಸುತ್ತಾರೆ. ಹಾಗೆ ಮಾಡಿಯೆ ಅವರು ಧರ್ಮಿಷ್ಠರೆನಿಸಿಕೊಳ್ಳುತ್ತಾರೆ. ನೀವು ಹಾಗಾಗಬೇಡಿರಿ. ನಿಮ್ಮಲ್ಲಿ ಹೆಚ್ಚಿನವನು ಚಿಕ್ಕವನಾಗಬೇಕು, ಮುಖ್ಯಸ್ಥನು ಸೇವಕನಂತಾಗಬೇಕು, ನೀವು ನನ್ನ ಕಷ್ಟ-ನಷ್ಟಗಳಲ್ಲಿ ನನ್ನ ಸಂಗಡ ಇದ್ದವರು. ಆದುದರಿಂದ ದೇವರು ನನಗೆ ಒಪ್ಪಿಸಿದ ಕಾರ್ಯವನ್ನು ನಾನು ನಿಮಗೆ ಬಿಟ್ಟುಕೊಡುತ್ತಿದ್ದೇನೆ—"

ಹೇಳಹೇಳುತ್ತ ಅವನ ಧ್ವನಿ ಇನ್ನಷ್ಟು ಮಿದುವಾಯಿತು, "ಮಕ್ಕಳೇ, ನಾನು ಕೆಲವೇ ಹೊತ್ತು ನಿಮ್ಮೊಂದಿಗೆ ಇರುತ್ತೇನೆ. ನನ್ನನ್ನು ನೀವು ಕಳೆದುಕೊಳ್ಳುತ್ತೀರಿ. ಆದರೆ ನಾನು ಎಲ್ಲಿಗೆ ಹೋಗುವೆನೋ ಅಲ್ಲಿಗೆ ನೀವು ಬರಲಾರಿರಿ. ಈ ಗಳಿಗೆಯಲ್ಲಿ ನಾನು ನಿಮಗೆ ಹೇಳುತ್ತೇನೆ, ನಿಮ್ಮಲ್ಲಿ ಪರಸ್ಪರ ಬಂಧುತ್ವ, ಪ್ರೀತಿಗಳಿರಲಿ. ಎಲ್ಲರನ್ನೂ ಪ್ರೀತಿಸಿರಿ. ಈ ಪ್ರೀತಿಯ ಬಂಧನದಿಂದಲೇ ಜಗತ್ತಿಗೆಲ್ಲ ನೀವು ನನ್ನ ಶಿಷ್ಯರು ಎಂಬುದು ಗೊತ್ತಾಗಲಿ."

ಪೀಟರನು ಸುಮ್ಮನಿರಲಾಗದೇ "ದೊರೆಯೇ, ನೀವೆಲ್ಲಿಗೆ ಹೋಗುತ್ತೀರಿ?" ಎಂದು ಕೇಳಿದನು.

"ನಾನು ಎಲ್ಲಿಗೆ ಹೋಗಲಿರುವೆನೊ ಅಲ್ಲಿಗೆ ನೀನು ನನ್ನನ್ನು ಹಿಂಬಾಲಿಸಲಾರೆ."

"ಅದೇಕೆ ದೊರೆಯೆ? ನಾನೇಕೆ ನಿಮ್ಮ ಹಿಂದೆ ಬರಲಾರೆ? ನಿಮಗಾಗಿ ನನ್ನ ಜೀವವನ್ನೂ ಕೊಡುವುದಕ್ಕೆ ಸಿದ್ಧ."

"ಜೀವವನ್ನೂ ಕೊಡುತ್ತೀಯಾ? ಹುಂ. ಈ ದಿನ ಕೋಳಿ ಕೂಗುವುದರೊಳಗಾಗಿ ನೀನು ನನ್ನ ವಿಷಯದಲ್ಲಿ ಏನೂ ಅರಿಯೆನೆಂದು ಮೂರುಬಾರಿ ಹೇಳುವಿ" ಎಂದು ಯೇಸು ನುಡಿದನು. ಆಗ ಅವರೆಲ್ಲರ ಮುಖವು ಕಂದಿಹೋಗಿದ್ದಿತು. ಒಲ್ಲದ ಮನದಿಂದ ಒಂದೊಂದು ತುತ್ತನ್ನು ಬಾಯಿಗಿರಿಸಿಕೊಳ್ಳುತ್ತಿದ್ದರು.

"ನೀವು ದುಃಖಿಸಬೇಡಿರಿ. ನಾನು ಪರಲೋಕಕ್ಕೆ ಹೊರಟು ನಿಂತಾಗ ನೀವು ಬರಲಾರಿರಾದರೂ ವಸ್ತುತಃ ನಾನು ನಿಮಗಾಗಿಯೂ ಅಲ್ಲಿ ಹೋಗುತ್ತಿದ್ದೇನೆ. ನನ್ನ ತಂದೆಯ ರಾಜ್ಯದಲ್ಲಿ ನಿಮಗೂ ಇಂಬು ಮಾಡಿ ಇಟ್ಟ ಮೇಲೆ ನೀವು ಬಂದೇ ಬರುವಿರಂತೆ." ಆಗ ಫಿಲಿಪ್ ಕೇಳಿದ, "ಆ ತಂದೆಯನ್ನು ತೋರಿಸಿರಿ. ಅಂದರೆ ನಮಗೆ ಸಮಾಧಾನವಾಗುವುದು" ಅಂದರೆಯೆ ನಾವು ನಿಮ್ಮ ಮಾತನ್ನು ನಂಬುವೆವು ಎಂಬ ಭಾವ ಆ ಪ್ರಶ್ನೆಯಲ್ಲಿದ್ದಿತು.

"ಫಿಲಿಪ್, ಇಷ್ಟು ದಿನ ನನ್ನೊಂದಿಗೆ ಇದ್ದು ನಿನಗೆ ಇದು ಅರಿಯದೇ ಹೋಯಿತೆ? ಕೇಳು. ನನ್ನನ್ನು ಯಾರು ಕಾಣುವರೋ ಅವರು ತಂದೆಯನ್ನು ಕಾಣುತ್ತಾರೆ, ನನ್ನಲ್ಲಿ ಆ ಶಕ್ತಿ ಇರುವುದನ್ನು ನೀನು ಅರಿಯದೇ ಹೋದೆಯಾ? ಎಲ್ಲರೂ ಈ ಮಾತನ್ನು ನೆನೆದಿರಿ. ಇವು ನನ್ನ ಮಾತುಗಳಲ್ಲ. ಆ ತಂದೆಯೇ ನನ್ನ ಬಾಯಿಂದ ಹಾಗೆ ನುಡಿಯಿಸುತ್ತಿದ್ದಾನೆ. ನನ್ನನ್ನು ನಂಬಿರಿ. ನನ್ನ ಹೆಸರಿನಲ್ಲಿ ನೀವು ಏನನ್ನೂ ಕೇಳಿರಿ. ಅದು ನಿಮಗೆ ಸಿದ್ಧಿಸುವುದು. ನನ್ನನ್ನು ನೀವು ಮುಂದೂ ಪ್ರೀತಿಸಿದಿರಾದರೆ ನಿಮಗೆ ಎಲ್ಲವೂ ದೊರೆಯುವುದು."

ಹೀಗೆ ಹೇಳಿ ಯೇಸು ಎದ್ದು ನಿಂತನು. ಎಲ್ಲರೂ ಶಾಂತ ಚಿತ್ತದಿಂದ ಸಾಮೂಹಿಕವಾಗಿ ದೇವರ ಪ್ರಾರ್ಥನೆಯನ್ನು ಮಾಡಿದರು. ಕೆಳಗಿಳಿದು ಬಂದಾಗ ಯೇಸು ಅಲ್ಲಿಯೇ ನಿಂತಿದ್ದ ಮಗುವಿನ ಹಣೆಗೆ ಮುತ್ತಿಟ್ಟು "ನಿಮಗೆಲ್ಲ ಸುರಾತ್ರಿ" ಎಂದು ಊಟದ ಮನೆಯವರಿಗೆ ಹೇಳಿ, ಎಂದಿನಂತೆ ರಾತ್ರಿಯ ವಿಶ್ರಾಂತಿಗಾಗಿ ಇಪ್ಪೆ ದಿನ್ನೆಯತ್ತ ಮುನ್ನಡೆದನು. ಆಗ ರಾತ್ರಿ ಹನ್ನೊಂದು ಗಂಟೆಯಾಗಿರಬೇಕು.

ಜೂಡಾಸ್ ಊಟದ ಮನೆಯಿಂದ ನೇರವಾಗಿ

ಮಂದಿರದ ಮುಖ್ಯ ಪುರೋಹಿತ ಕೈಫಸ್‌ನ ನಿವಾಸಕ್ಕೆ ಬಂದ. ಆಗ ಕೈಫಸ್ ತನ್ನ ಮಾವನ ಹತ್ತಿರ ವಿದ್ದನು. ಕೈಫಸ್ ಮುಖ್ಯ ಪುರೋಹಿತನ ಕಾರ್ಯವನ್ನು ತೂಗಿಸಿಕೊಂಡು ಹೋಗುತ್ತಿದ್ದನಾದರೂ ಅವನ ಮಾವ ಅನ್ನಾಸನೇ ಮುಖ್ಯ ಪುರೋಹಿತನ ಅಧಿಕಾರಸ್ಥಾನದಲ್ಲಿದ್ದನು. ಅನ್ನಾಸ್ ಈಗ ಶತಾಯುಷಿ. ಅವನು ನಿವೃತ್ತನಾದ ಮೇಲೆ ಅವನ ನಾಲ್ವರು ಮಕ್ಕಳಲ್ಲಿ ಒಬ್ಬೊಬ್ಬರು ಆಧಿಪತ್ಯ ನಡೆಸಿದ ನಂತರ, ಈಗ ಅಳಿಯನ ಕಾಲಕ್ಕೂ ಅವನು ಬದುಕಿ ಉಳಿದಿದ್ದನು. ದೇವ ಮಂದಿರದ ಆವಾರದಲ್ಲಿ ವ್ಯಾಪಾರ, ಉದ್ಯಮಗಳಲ್ಲಿ ತೊಡಗಿದವರೆಲ್ಲ ಅನ್ನಾಸನಿಗೆ ತೆರಿಗೆಯನ್ನು ಕೊಡುವವರೇ ಆಗಿದ್ದರು. ಅವನ ಧಾರ್ಮಿಕ ಗತ್ತುಗಾರಿಕೆಗೂ ಧೂರ್ತತನಕ್ಕೂ ಎಣೆಯಾದವರು ಆ ಕಾಲದಲ್ಲಿ ಇನ್ನಾರೂ ಇರಲಿಲ್ಲ. ಜಾತ್ಯಾ ಧರ್ಮಭೀರುಗಳಾದ ಯಹೂದ್ಯ ಜನರ ಮೇಲೆ ಸಂಪೂರ್ಣವಾದ ಅಧಿಕಾರವನ್ನು ಆತನು ತನ್ನ ಅಳಿಯನ ಮುಖಾಂತರ ನಡೆಸುತ್ತಿದ್ದನೆಂದರೂ ಅಡ್ಡಿಯಿಲ್ಲ.

ಹಾಗೆ ನೋಡಿದರೆ ಜೆರೂಸಲೇಮ್‌ನ್ನು ಮೂರು ಆಧಿಪತ್ಯಗಳು ಆಳುತ್ತಿದ್ದುವೆನ್ನಬಹುದು. ರಾಜಕೀಯ ಆಧಿಪತ್ಯವನ್ನು ಹಲವು ವರುಷಗಳಿಂದ ನಡೆಸಿಕೊಂಡು ಬಂದವರು ರೋಮನ್ನರು. ಅವರ ಪ್ರತಿನಿಧಿಯಾಗಿ ಪೈಲೇಟ್ ಎಂಬವನು ಸದ್ಯಕ್ಕೆ ಅಲ್ಲಿಯೇ ವಾಸಿಸುತ್ತಿದ್ದನು. ಜ್ಯೂಡಿಯಾ ಪ್ರಾಂತದ ಇತರ ಆಡಳಿತವನ್ನು ನೋಡಿಕೊಳ್ಳಲು ಹೆರಾಡ್ ವಂಶಜರನ್ನು ಅಧಿಪತಿಯನ್ನಾಗಿ ಈಗ ೨೦ ವರ್ಷಗಳ ಹಿಂದೆ ರೋಮನ್ನರು ನಿಯಮಿಸಿದ್ದರು. ಧಾರ್ಮಿಕ ಅಧಿಕಾರಕ್ಕೆ ಬಾಧ್ಯನಾದವನೆಂದರೆ ಅನ್ನಾಸ್. ಅವನ ಸಂಪತ್ತೋ ಅಪಾರವಾದುದು. ಧಾರ್ಮಿಕ ಕಾಣಿಕೆಗಳು, ತೆರಿಗೆಗಳು, ಬಲುಮೆಗಳು ಅನೇಕ ವಿಧವಾಗಿ ಪ್ರತಿ ವರುಷ ಸಂಪತ್ತನ್ನು ತಂದು ಸುರುವುತ್ತಲಿದ್ದವು— ರೋಮನ್ನರು ತಮ್ಮ ಸ್ಥಾನವನ್ನು ಸ್ಥಿರವಾಗಿ ಉಳಿಸಿಕೊಳ್ಳುವ ದೂರದೃಷ್ಟಿಯಿಂದ ಯಹೂದ್ಯರಿಗೆ ಸಂಪೂರ್ಣವಾಗಿ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಟ್ಟಿದ್ದರು.

ಆದರೆ ಈ ನಾಜರೆಥದ ಯೇಸುವಿನ ಸಮಸ್ಯೆ ಬೇರೆಯೇ ಆಗಿದ್ದಿತು. ಈತ ತಮ್ಮವನೇ ಆಗಿ ತಮ್ಮ ವಿರುದ್ಧ ನಿಂತಿದ್ದ. ತಾನು ಪ್ರವಾದಿ, ದೇವದೂತನೆಂದು ಹೇಳಿಕೊಳ್ಳುತ್ತಿದ್ದ. ಪುರೋಹಿತರನ್ನು ಮನಬಂದಂತೆ ಟೀಕಿಸುತ್ತಿದ್ದ. ಕೀಳು ಜನರೊಡನೆ ಬೆರೆಯುತ್ತಿದ್ದ. ಜಾರಸ್ತ್ರೀಯಾದವಳನ್ನು ಶಾಸ್ತ್ರದ ಪ್ರಕಾರ ಕಲ್ಲಿಕ್ಕಿ ಕೊಲ್ಲಬೇಕೆಂದಿದ್ದರೆ ಅಂಥವರನ್ನು (ಮೇರಿ ಮೆಗ್ದಲೀನ್) ಆತ ಉಳಿಸಿದ್ದ. ಇವೆಲ್ಲಕ್ಕೆ ಕಳಸವಿಡುವಂತೆ, ಈ ದೇವ ಮಂದಿರವು ಕಲ್ಲಿನಿಂದ ಕಟ್ಟಿದುದಿದ್ದು, ಅವೆಲ್ಲವನ್ನು ತಾನು ಕೆಡವಿ, ಮೂರೇ ದಿನಗಳಲ್ಲಿ ಮತ್ತೊಂದು ಶಾಶ್ವತ ಕಟ್ಟಡವನ್ನು ಕಟ್ಟಬಲ್ಲೆ ಎಂದಿದ್ದ. ಮಂದಿರದಲ್ಲಿಯ ವ್ಯಾಪಾರಿಗಳನ್ನೆಲ್ಲ ಹೊಡೆದೋಡಿಸಿ ತಮ್ಮ ಆರ್ಥಿಕ ಸಂಚಯಕ್ಕೆ ಅಡ್ಡ ಬರುವವನಿದ್ದ.

ಜೂಡಾಸ್ ಯೇಸುವಿನ ಶಿಷ್ಯರಲ್ಲೇ ಒಬ್ಬ— ಈ ಧರ್ಮಲಂಡನನ್ನು ಹಿಡಿದುಕೊಡುವೆನೆಂದು ಹೇಳಬಂದಿದ್ದುದನ್ನು ಕಂಡು ಕೈಫಸ್‌ನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ಅದನ್ನು ವಿಶೇಷವಾಗಿ ತೋರಗೊಡದೆ—"ನಿನಗೆ ನಾವು ಏನು ಕೊಡಬೇಕು?" ಎಂದು ಕೇಳಿದನು.

"ನನಗೆ ೩೦ ನಾಣ್ಯಗಳನ್ನು ಕೊಡುವಿರಾ?" ಎಂದನು ಜೂಡಾಸ್. ಯೇಸುವಿನ ಜೀವದ ಬೆಲೆ ಜೂಡಾಸ್‌ನ ದೃಷ್ಟಿಯಲ್ಲಿ ಅಷ್ಟೇ ಇದ್ದಿತೆ? ಕೈಫಸ್‌ನಂತಹರಿಗೂ ಅದರ ಬೆಲೆ ಇನ್ನೂ ಹೆಚ್ಚು ಎಂದೆನಿಸುತ್ತಿತ್ತು. ಜೂಡಾಸ್ ಸಾವಿರ ನಾಣ್ಯಗಳನ್ನು ಕೇಳಿದ್ದರೂ ಅವನು ಕೊಡಲು ಸಿದ್ಧನಿದ್ದನು.

ಆದರೆ ಇಷ್ಟು ಬೇಗ ಈ ಕೆಲಸ ನೆರವೇರೀತೆಂದು ಕೈಫಸ್ ನಿರೀಕ್ಷಿಸಿರಲಿಲ್ಲ. ಆ ಬಗ್ಗೆ ಅವನು ಯಾವ ಪೂರ್ವಸಿದ್ಧತೆಯನ್ನೂ ಮಾಡಿರಲಿಲ್ಲ. ಮಂದಿರದ ಕಾವಲಿನವರನ್ನು ಜೂಡಾಸ್‌ನ ಸಂಗಡ ಕಳಿಸಬಹುದಿತ್ತು. ಆದರೆ ಇಂಥ ವಿಷಯದಲ್ಲಿ ರೋಮನ್ನರ ಸಹಾಯವನ್ನು ಪಡೆ

ಯುವುದು ಒಳಿತೆಂದು ಕಂಡಿತು. ಅವನಿಗೆ ಅಲ್ಲಿಯೆ ನಿಲ್ಲಹೇಳಿ ತಾನು ರೋಮನ್ ಪ್ರತಿನಿಧಿ ಪಾಂಟಿಯಸ್ ಪೈಲೇಟನ ನಿವಾಸಕ್ಕೆ ಹೊರಟನು.

ಇದಕ್ಕೆ ಕಾರಣವಿತ್ತು. ಮಂದಿರದ ಕಾವಲುಗಾರರನ್ನು ಕಳಿಸಿಯೆ ಯೇಸುವನ್ನು ಹಿಡಿತರಿಸಬಹುದಾಗಿತ್ತಾದರೂ ಮುಂದೆ ಮರಣದಂಡನೆಯನ್ನು ದೃಢಪಡಿಸುವ-ಪಡಿಸದಿರುವ ಅಧಿಕಾರ ರಾಜಪ್ರತಿನಿಧಿ ಪೈಲೇಟನಿಗಿದ್ದುದರಿಂದ ಯೇಸುವಿನ ಬಂಧನದಲ್ಲೆ ಅವನನ್ನೂ ತೊಡಕಿಹಾಕಿಕೊಂಡರೆ ಮುಂದೆ ಕಾರ್ಯ ಸುಗಮವಾದೀತೆಂದು ಪುರೋಹಿತನ ತರ್ಕ. ಪೈಲೇಟ್ ಸೈನ್ಯ ಕೊಡಲೊಪ್ಪುವಾಗ ಅವನ ರಾಜಕೀಯ ಮತಿಯೂ ಕೆಲಸ ಮಾಡುತ್ತಿತ್ತು. ಪುರೋಹಿತ ವರ್ಗ ಒಳಗೊಳಗೆ ರೋಮನ್ನರನ್ನು ದ್ವೇಷಿಸುತ್ತಿತ್ತೆಂದು ಆತ ಬಲ್ಲ. ಯೇಸುವನ್ನು ಹಿಡಿಯಲು ನೆರವಾಗಿ ಆ ಮೇಲೆ ಮರಣದಂಡನೆಯನ್ನು ರದ್ದುಪಡಿಸಿದರೆ ಪುರೋಹಿತರ ಮುಖಭಂಗವಾಗಿ ಯೇಸುವಿನ ಅನುಯಾಯಿಗಳು ತಮ್ಮ ಕಡೆಗಾಗುವರು. ಒಡೆದು ಆಳುವ ನೀತಿ ಅನಾದಿಯಿಂದಲೂ ಇದ್ದುದ್ದೇ ತಾನೆ.

ಕೈಫ಼ಸನ ಕಳವಳಗಳು ಇನ್ನೂ ಇದ್ದುವು. ಸೈನ್ಯಸಹಾಯ ಸಿಕ್ಕಿದರೂ ಯೇಸು ಆ ಮನೆಯಲ್ಲಿಲ್ಲದಿದ್ದರೇನು ಗತಿ? ಹನ್ನೆರಡು ಶಿಷ್ಯರ ನಡುವೆ ಅವನನ್ನು ಗುರುತಿಸುವುದೆಂತು? ಇನ್ನಾರನ್ನಾದರೂ ಬಂಧಿಸಗೊಟ್ಟು ಅವನು ನುಣಚಿಕೊಂಡರೆ? ಇದಕ್ಕೆಲ್ಲ ಸಮಾಧಾನ ಹೇಳಲು ಜೂಡಾಸನಿಗೆ ಸಾಕುಬೇಕಾಗಿ ಹೋಯಿತು.

ಹಿಡಿದ ಮೇಲೂ ಕೆಲಸ ಸುಲಭವಿರಲಿಲ್ಲ. ೨೭೦ ಜನ ಸದಸ್ಯರುಳ್ಳ ಸ್ಯಾನ್ ಹೆಡ್ರಿನ್ ಸಭೆ ಯೇಸುವನ್ನು ಅಪರಾಧಿಯೆಂದು ತೀರ್ಮಾನಿಸಬೇಕು. ಇನ್ನೊಂದು ದಿನ ಅದೇ ಸಭೆ ಶಿಕ್ಷೆಯನ್ನು ದೃಢಪಡಿಸಿದ ಮೇಲೆ ಪೈಲೇಟನು ಅದನ್ನು ಒಪ್ಪಬೇಕು, ಇಷ್ಟೆಲ್ಲ ನಾಳೆ ಮುಂಜಾನೆಯೊಳಗೆ ಮುಗಿಯಬೇಕು. ಹಬ್ಬಕ್ಕಾಗಿ ಸೇರಿದ ಲಕ್ಷಾಂತರ ಜನ ಇಲ್ಲಿರುವಾಗ ಈ ಪ್ರಕರಣ ಬೆಳೆದರೆ ಬಂಡಾಯವೇಳಬಹುದು.

ಇತ್ತ ಯೇಸು ತನ್ನ ಹನ್ನೊಂದು ಜನ ಅನುಯಾಯಿಗಳೊಡನೆ ಊರ ಹೊರಗಿನ ಗಿಡಗಳ ಹೊನ್ನೆರಳಲ್ಲಿ ಆ ಇರುಳನ್ನು ಕಳೆಯಲು ಹೊರಟಿದ್ದನು. ಆ ಪ್ರಶಾಂತವಾದ ಸ್ಥಳವು ಅನೇಕ ಬಾರಿ ಅವರ ವಿಶ್ರಾಂತಿಧಾಮವಾಗಿದ್ದಿತು. ಅಂದಂತೂ ತುಂಬಿದ ಬೆಳುದಿಂಗಳಿನ ಶೀತಲ ಕಿರಣಗಳು ಇಡೀ ಜೆರೂಸಲೇಮ್ ನಗರವನ್ನೂ ಹೊರಗಿನ ಬಯಲಿನ ಗಿಡ, ಬೆಟ್ಟಗಳನ್ನೂ ತಬ್ಬಿಕೊಂಡು ನೆನೆಯಿಸಿಬಿಟ್ಟಿದ್ದುವು. ಯೇಸು ದಾರಿಯಲ್ಲಿಯೂ ಮಾತನಾಡುತ್ತಲಿದ್ದ. ಯಾರಿಗಾದರೂ ಶಿಷ್ಯರಿಗೆ ಕೇಳಿಸಲಿಲ್ಲವೆಂದು ಸಂದೇಹ ಬಂದರೆ ನಡುದಾರಿಯಲ್ಲಿಯೆ ನಿಲ್ಲುವನು. ಅವರೆಲ್ಲ ಅವನನ್ನು ಸುತ್ತುಗಟ್ಟಿ ನಿಂತು ಕೇಳುವರು. ಹೀಗೆ ಸಾಗಿತ್ತು ಅವರ ಪಯಣ.

ಇಷ್ಟೆ ಗಿಡಗಳ ಗುಂಪಲಿಗೆ ಬಂದಾಗ ಅವರೆಲ್ಲ ತುಂಬಾ ದಣಿದು ಹೋಗಿದ್ದರೂ ತಮ್ಮ ಗುರುವಿನ ರಸವಾಣಿಯ ಅಮೃತ ವಚನವನ್ನು ಕೇಳಿ ಅವರ ಆತ್ಮವು ತೃಪ್ತಿಹೊಂದಿದ್ದಿತು. ಅವನು ತಮ್ಮನ್ನು ಬಿಟ್ಟು ಹೋಗುವವನಿದ್ದರೂ ತಮ್ಮ ಕೈಬಿಡುವುದಿಲ್ಲ ಎಂಬ ಆತ್ಮೀಯ ಆಶ್ವಾಸನವನ್ನು ಕೊಟ್ಟಿದ್ದ. ಒಂದು ವೇಳೆ ಏನಾದರೂ ಹೆಚ್ಚು ಕಡಿಮೆಯಾದರೆ ಅದನ್ನು ಸುಲಭವಾಗಿ ನಿವಾರಿಸುವ ದೈವೀ ಸಾಮರ್ಥ್ಯ ಅವನಲ್ಲಿದೆಯೆಂಬ ವಿಶ್ವಾಸವೂ ಅವರಿಗಿತ್ತು.

ಎಲ್ಲರೂ ಒಂದೆಡೆ ಕುಳಿತ ಮೇಲೆ ಯೇಸು ಹೇಳಿದ—"ನಾನಾಗಿ ನಿಮ್ಮನ್ನು ದೇವರ ಕೆಲಸಕ್ಕೆಂದು ಆಯ್ದಿದ್ದೇನೆ. ಅದನ್ನು ದೃಢ ಮನಸ್ಸಿನಿಂದ ನಡೆಸಿಕೊಂಡು ಹೋಗಿರಿ. ಜಗತ್ತು ನಿಮ್ಮನ್ನು ದ್ವೇಷಿಸಬಹುದು, ಆದರೆ ಅದಕ್ಕೆ ಮೊದಲು ಜಗತ್ತು ನನ್ನನ್ನು ದ್ವೇಷಿಸಿದೆಯೆಂಬುದನ್ನು ಮರೆಯದಿರಿ. ಪ್ರೇಮ! ಸಮಸ್ತರಲ್ಲಿ ಪ್ರೇಮ ಭಾವನೆಯೊಂದೇ ನಿಮ್ಮ ಜೀವನದ ಊರುಗೋಲಾಗಲಿ."

ಆಮೇಲೆ ಯೇಸು ತನ್ನ ಸುಮಧುರ ವಾಣಿಯಿಂದ, ತಾನೇ ರಚಿಸಿದ ಪ್ರಾರ್ಥನೆಯನ್ನು ಹಾಡಿದನು. ಶಿಷ್ಯರೆಲ್ಲ ಮಂತ್ರಮುಗ್ಧರಾದವರಂತೆ ಅದನ್ನು ಕೇಳಿದರು. ಅದೇ ಅವನ ಕೊನೆಯ ಪ್ರವಚನವಾಗಿತ್ತು. ತಾನು ಹೇಳಬೇಕೆಂದಿರುವುದನ್ನು ಎರಡನೆಯ ಸಲ ಹೇಳಿದ್ದನು. 'ಆಮೇನ್' (ತಥಾಸ್ತು) ಎಂದು ನುಡಿದು ತಾನು ಎದ್ದು ನಿಂತನು. ತನ್ನ ನೆಚ್ಚಿನ ಶಿಷ್ಯರನ್ನು ಬಿಟ್ಟು ಹೋಗುವುದು ಹೃದಯಭೇದಕವಾಗಿ ತೋರಿತು. ಅವರನ್ನು ಅಲ್ಲಿಯೆ ನಿಲ್ಲಿಸಿ, ಒಂದು ಹಾಸುಬಂಡೆಯ ಮೇಲೆ ಬಂದು, ಅದರ ಮೇಲೆ ಬಾಗಿ ಮುಖವೆತ್ತಿ ತಾರಕ ಸ್ವರದಿಂದ ಕೂಗಿ ಹೇಳಿದನು—

"ತಂದೆಯೇ, ನೀನು ಸರ್ವಶಕ್ತನು. ಈ ಬದುಕೆಂಬ ಪಾತ್ರದಿಂದ ನನ್ನನ್ನು ಬಿಡುಗಡೆ ಮಾಡುವಿಯಾ? ನನ್ನ ಇಷ್ಟದಂತಲ್ಲ, ನಿನ್ನ ಇಷ್ಟದಂತೆಯೆ ಆಗಲಿ."

ಯೇಸು ಅದೆಷ್ಟು ಹೊತ್ತು ಆ ಭಾವಸಮಾಧಿಯಲ್ಲಿದ್ದನೊ, ಆ ವೇಳೆಗೆ ಅವನ ಶಿಷ್ಯರೆಲ್ಲ ನಿದ್ರೆ ಹೋಗಿದ್ದರು. ಗಾಢವಾದ ನಿದ್ರೆಯಲ್ಲಿ, ಮುಂದಾಗುವ ಮಹತ್ವದ ಘಟನೆಯ ಲವಲೇಶವನ್ನು ಅರಿಯದವರಂತೆ ಮಗ್ನರಾಗಿದ್ದರು.

ಈ ವೇಳೆಗೆ ಮಾರ್ಕನು ಓಡೋಡುತ್ತ ಅಲ್ಲಿಗೆ ಬಂದನು. ಫಿಲಿಪ್ ಮುಂತಾದ ಶಿಷ್ಯರು ಮಲಗಿದ್ದಲ್ಲಿಗೆ ಬಂದು, ಅವರನ್ನು ಬಡಿದೆಬ್ಬಿಸುತ್ತ, ಮಂದಿರದ ಕಾವಲುಗಾರರು ರೋಮನ್ ಸೈನಿಕರೊಡನೆ ತಮ್ಮ ಮನೆಗೆ ಮುತ್ತಿಗೆ ಹಾಕಿದ್ದರೆಂದೂ ಗುರುವು ಅಲ್ಲಿ ಇಲ್ಲದುದನ್ನು ಕಂಡು ಇತ್ತ ಕಡೆಗೇ ಹೊರಟಿವ್ದಾರೆಂದೂ ಕೂಗಿಕೊಂಡನು.

ಅದೇ ವೇಳೆಗೆ ಯೇಸು ಬೇರೆಡೆ ಮಲಗಿದ್ದ ತನ್ನ ಮೂವರು ಪ್ರೀತಿಯ ಶಿಷ್ಯರನ್ನು ಮೆಲ್ಲಗೆ ಎಬ್ಬಿಸುತ್ತ, "ಏಳಿರಿ. ಪ್ರಾರ್ಥನೆಯನ್ನು ಗೈಯಿರಿ! ಆಮಿಷಕ್ಕೆ ಒಳಗಾಗದಿರಿ" ಎಂದನು.

ಆದರೆ ಅವರ ನಿದ್ದೆಯ ಗುಂಗನ್ನು ಕಂಡು "ಆಹ್! ದೇವನ ಲೀಲೆ! ಮನಸ್ಸು ಸಿದ್ಧವಾಗಿದೆ. ಆದರೆ ದೇಹಕ್ಕೆ ಆ ಬಲವಿಲ್ಲ" ಎಂದು ನುಡಿದನು.

ಅಷ್ಟರಲ್ಲಿ ಹಿಲಾಲುಗಳನ್ನು ಹಚ್ಚಿಕೊಂಡು, ದಿನ್ನೆಯನ್ನು ಏರಿ ಬರುತ್ತಿದ್ದವರ ದೊಡ್ಡ ಗುಂಪು ಕಾಣಿಸಿತು. ಅವರಲ್ಲಿ ಅನೇಕರು ಹಿಡಿದಿದ್ದ ದೊಣ್ಣೆ, ಬಡಿಗೆ, ಕತ್ತಿಗಳು ಆ ಬೆಳಕಿನಲ್ಲಿ ಹೊಳೆಯುತ್ತಿದ್ದವು.

ಹೌದು. ಜೂಡಾಸನೇ ಎಲ್ಲರಗಿಂತ ಮುಂದಾಗಿ, ಎಲ್ಲರನ್ನೂ ಕರೆದುಕೊಂಡು ಬರುವವನಾಗಿದ್ದನು. ತನ್ನ ಗುರುವಿನ ಮುಖವನ್ನು ನೋಡಿದನು. ಅಲ್ಲಿ ಹಣೆಯ ಮೇಲೆ ಮಣ್ಣಿನಿಂದ ಹೊಲಸಾಗಿದ್ದ ರಕ್ತದ ಚಿಕ್ಕ ಹನಿಗಳನ್ನು ಕಂಡನು. ಅದು ಭಾವೋನ್ಮಾದದಲ್ಲಿ ನರಗಳಿಂದ ಸಿಡಿದು ಬಂದ ರಕ್ತವೇ ಆಗಿದ್ದಿತೆಂದು ಅವನಿಗೆ ತಿಳಿಯಲಿಲ್ಲ. ಹಾಗೆ ಯೋಚಿಸುವುದಕ್ಕೆ ಅವಕಾಶವೂ ಇರಲಿಲ್ಲ. "ದೊರೆಯೇ!" ಎಂದು ಹೇಳುತ್ತ ಅವನು ಯೇಸುವಿನ ಮುಖಕ್ಕೆ ಮುದ್ದಿಟ್ಟನು. ಪೂರ್ವಯೋಜಿತದಂತೆ ಆ ಕೂಡಲೇ ಮಂದಿರದ ಕಾವಲುಗಾರರು, ಯೇಸುವನ್ನು ಬಂಧಿಸಲೆಂದು ಮುಂದಡಿ ಇಟ್ಟರು.

ಯೇಸು ಕೇಳಿದ: "ಯಾರು ಬೇಕಿತ್ತು ನಿಮಗೆ?"

"ನಾಜರೇಥಿನ ಯೇಸು."

"ನಾನೇ ಆತ. ನೀವು ಖಡ್ಗಗಳನ್ನೂ, ದೊಣ್ಣೆಗಳನ್ನೂ ಹಿಡಿದುಕೊಂಡು ಇಷ್ಟು ದೊಡ್ಡ ಸಂಖ್ಯೆಯಲ್ಲಿ ನನ್ನನ್ನು ಹಿಡಿಯಬಂದಿರಾ? ದಿನ ಬಿಟ್ಟು ದಿನ ನಿಮ್ಮ ಮಂದಿರದಲ್ಲಿಯೇ ಬಂದು ನಾನು ಪ್ರವಚನಗೈಯುತ್ತಿದ್ದಾಗ ನೀವು ನನಗೆ ಏನೂ ಮಾಡಲಿಲ್ಲ... ಆದರೆ...ನಿಮ್ಮದೂ ತಪ್ಪಲ್ಲ. ಶಾಸ್ತ್ರದಲ್ಲಿ ಉಕ್ತವಾದಂತೆ ನಡೆಯಲೇ ಬೇಕಲ್ಲ."

ಪೀಟರನು ತನ್ನ ಗುರುವಿಗೆ ಬಂದ ವಿಪತ್ತನ್ನು ಕಂಡು, ಆ ಕ್ಷಣಕ್ಕೆ ಅವನ ಮಹಿಮೆಯನ್ನು ಮರೆತನು. ಅವನು ತನ್ನನ್ನು ರಕ್ಷಿಸಿಕೊಳ್ಳಲು ಯೇಸು ಅಸಮರ್ಥನೆಂಬಂತೆ, ತಮ್ಮಲ್ಲಿದ್ದ ಒಂದು ಹಳೆಯ ಕತ್ತಿಯನ್ನು ಹಿರಿದವನೇ ಮುಂದಡಿಯಿಟ್ಟಿದ್ದ ಕಾವಲುಗಾರನೊಬ್ಬನ ಕುತ್ತಿಗೆಗೆ ಗುರಿಯಿಟ್ಟನು. ಅದು ಆ ಕಾವಲುಗಾರನ ಕಿವಿಯನ್ನು ತರೆದುಕೊಂಡು ಗಾಯವನ್ನುಂಟು ಮಾಡಿತು. ಕೂಡಲೇ ಇತರ ಸೈನಿಕರು, ತಮ್ಮ ಕತ್ತಿಗಳನ್ನು ಹಿರಿದರು.

ಆ ಕ್ಷಣವೇ ಯೇಸು "ಪೀಟರ್, ಏನಿದು? ನಿನ್ನ ಕತ್ತಿಯನ್ನು ಒರೆಗಿಳಿಸು. ನನ್ನ ತಂದೆಯ ಬಳಿಗೆ ನಾನು ಹೊರಟು ನಿಂತಿದ್ದ ಗಳಿಗೆಯನ್ನು ತಡೆಯಬಯಸುವಿಯಾ?" ಎಂದು ಆ ಕೂಡಲೇ ಆ ಗಾಯಗೊಂಡವನ ಕಿವಿಯ ಮೇಲೆ ಕೈಯಾಡಿಸಲು ಅದು ಮಾಯ್ದುಹೋಯಿತು! ಅದು ಇನ್ನಾರ ಗಮನಕ್ಕೂ ಬರಲಿಲ್ಲ.

ಯೇಸುವನ್ನು ಹೆಡಮುರಿಗೆ ಕಟ್ಟಿದರು. ಅವನನ್ನು ಮುಂದೆ ಮಾಡಿಕೊಂಡು ಮಂದಿರದತ್ತ ಹೊರಟರು. ಅವನ ಶಿಷ್ಯರು ಎದುರಿಸುವವರಂತೆ, ಸ್ವಲ್ಪ ಮುಂದೆ ಬರುತ್ತಲೂ ಸೈನಿಕರು ಪ್ರತಿಭಟಿಸಿದರೋ ಇಲ್ಲವೊ, ಎಲ್ಲರೂ ಅಲ್ಲಿಂದ ಕಾಲು ಕಿತ್ತರು.

ಕೈಫಸ್ ಮಹಾಸಭೆಯ ಸದಸ್ಯರನ್ನು ಕಲೆ ಹಾಕುವ ದೊಡ್ಡ ಕೆಲಸದಲ್ಲಿ ಮಗ್ನನಾಗಿದ್ದನು. ಆ ಗಡಿಬಿಡಿಯಲ್ಲಿಯೂ, ಯೇಸು ಮಾಯೆಯಿಂದ ಬಂಧನವನ್ನು ತಪ್ಪಿಸಿಕೊಂಡರೇನು ಗತಿ ಎಂಬ ದುಗುಡ ಬಾಧಿಸುತ್ತಲೇ ಇತ್ತು.

ಅನಿತರಲ್ಲಿ ಕೈಫಸ್‌ನಿಗೆ ತನ್ನ ಜನ ಬರುವುದು ಕಂಡಿತು. ಅವರು ಹಿಡಿದ ಬೆಳಕಿನಲ್ಲಿ ಬಂಧಿತನಾದ ಒಬ್ಬ–ಒಬ್ಬನೇ–ವ್ಯಕ್ತಿಯೂ ಕಂಡನು. ಅವನಿಗಾದ ಸಮಾಧಾನ ಅಷ್ಟಿಷ್ಟಲ್ಲ. ಆ ಗಳಿಗೆಗೆ ಜೂಡಾಸ್ ಬಂದು ಬದಿಯಲ್ಲಿ ಕೈಜೋಡಿಸಿ ನಿಂತದ್ದು ಮೊದಲು ಅವನ ಗಮನಕ್ಕೆ ಬಂದಿರಲೇ ಇಲ್ಲ. ಕೈಫಸ್ ತನಗೆ "ಶಹಬಾಸ್" ಎಂದು ಹೇಳುವನೆಂದು ಜೂಡಾಸ್ ತಿಳಿದಿದ್ದನು. ಕೈಫಸ್ ಅದಕ್ಕೆ ಬದಲಾಗಿ, "ಯಾರಲ್ಲಿ?


‘ಅವರನ್ನು ಮೆಚ್ಚಿಸುವುದು ಸುಲಭವಲ್ಲ...’
‘ಅವರನ್ನು ಮೆಚ್ಚಿಸುವುದು ಸುಲಭವೆಂದು ನೀವು ತಿಳಿದಿದ್ದರೆ ಅದು
ತಪ್ಪು ಗೃಹಿಣಿ’ ಎಂದು ಶ್ರೀಮತಿ ಆರ್. ಆರ್. ಪ್ರಭು, ಹೇಳು
ತ್ತಾರೆ. ‘ಬಟ್ಟೆಗಳ ವಿಷಯ ಹೇಳುವುದಾದರೆ... ಈಗ ನಾನು ಅವರ
ಎಲ್ಲಾ ಬಟ್ಟೆಗಳನ್ನು ಸನ್‌ಲೈಟ್‌ನಿಂದಲೇ ಒಗೆಯುತ್ತೇನೆ—ಆದ
ರಿಂದ ಅವರಿಗೆ ತೃಪ್ತಿಯಾಗುತ್ತದೆ. ನನಗೂ ತೃಪ್ತಿಯೆ. ಸನ್‌ಲೈಟ್
ನಿಂದ ಹೇರಳ ನೊರೆಯಾಗುತ್ತದೆ, ನನ್ನ ಕೆಲಸವೂ ಬಹಳ
ಸುಲಭವಾಗುತ್ತದೆ! ಬಟ್ಟೆಗಳೆಲ್ಲ ಅತ್ಯಂತ ಬೆಳ್ಳಗೆ ಮತ್ತು ಪ್ರಕಾಶ
ಮಾನವಾಗುತ್ತವೆ. ನನಗೆ ಯಾವಾಗಲೂ ಸನ್‌ಲೈಟೇ ಬೇಕು!’
ಬಟ್ಟೆಗಳ ರಕ್ಷಣೆಗೆ ಶುದ್ಧ
ಹಾಗೂ ಸೌಮ್ಯವಾದ ಸನ್
ಲೈಟ್ ಸೋಪು ಅತ್ಯುತ್ತಮ
ವಾಗಿದೆಯೆಂದೂ, ಅದ
ರಂಥದ್ದು ಬೇರೆ ಇಲ್ಲವೆಂದೂ
ಗೃಹಿಣಿಯರಿಗೆ ತಿಳಿದಿದೆ.
ನಿಮಗೂ ಗೊತ್ತಾಗುವುದು.
ಸನ್‌ಲೈಟ್
SUNLIGHT SOAP
Rs.10,000 Reward!
ನಿಮ್ಮ ಬಟ್ಟೆಗಳಿಗೆ ಅತ್ಯಂತ ಹಿತಕರ!
ಹಿಂದುಸ್ತಾನ್ ಲೀವರ್ ಅವರ ತಯಾರಿಕೆ

ಇವನಿಗೆ ೩೦ ನಾಣ್ಯಗಳನ್ನು ಕೊಟ್ಟು ಕಳುಹಿರಿ" ಎಂದನು. ಯಾರೋ ಹಣವನ್ನು ತಂದರು. ಜೂಡಾಸ್ ಬೊಗಸೆಯೊಡ್ಡಿದನು. ನಾಣ್ಯಗಳನ್ನು ಒಂದೊಂದಾಗಿ ಎಣಿಸಿ ಅದರಲ್ಲಿ ಚೆಲ್ಲಿದರು. ತಾನು ಉಂಡು ಒಗೆದ ಎಲುಬಿನ ಚೂರುಗಳನ್ನು ಬೀದಿಯ ನಾಯಿಗೆ ಬೀಸಾಡಿದ-ದನ್ನು ನೋಡುವವರಂತೆ ಜೂಡಾಸ್‌ನನ್ನು ನೋಡಿ, ಕೈಫಸ್ ಅಲ್ಲಿಂದ ಹೊರಟನು.

ಯೇಸುವನ್ನು ಅಲ್ಲಿಗೆ ತಂದು ಅನ್ನಾಸನ ಮುಂದೆ ನಿಲ್ಲಿಸಲಾಯಿತು. ಅನ್ನಾಸ್ ತನ್ನ ನೂರು ವರ್ಷದ ಸುದೀರ್ಘ ಜೀವಿತದಲ್ಲಿ ರಾಜಕೀಯ, ಧಾರ್ಮಿಕ ವಿಪತ್ತುಗಳು ಹಲವಾರನ್ನು ಸಲೀಲವಾಗಿ ಜೀರ್ಣಿಸಿದ್ದವ. ಈ ಹೊಸ ದೇವದೂತನನ್ನು ನೋಡಿ, ಒಂದೆರಡು ಮಾತನ್ನು ಕೇಳುವ ಕುತೂಹಲವಿದ್ದಿತು.

"ನಿನ್ನ ತತ್ವಪ್ರಣಾಲಿ ಯಾವುದು?" "ನಿನ್ನ ಶಿಷ್ಯರಾರು?" "ಅವರು ಎಷ್ಟು ಮಂದಿ?" "ನಿನ್ನ ಮುಂದಿನ ವಿಚಾರವಾದರೂ ಏನು?"—

ಒಂದರ ಮೇಲೊಂದು ಬರುತ್ತಿದ್ದ ಈ ಪ್ರಶ್ನೆಗಳಿಗೆ ಯೇಸು ಹೇಳಿದ:

"ನನ್ನನ್ನೇನು ಕೇಳುತ್ತೀ? ಬಯಲಲ್ಲಿ ನಿಂತು ಬಹಿರಂಗವಾಗಿಯೇ ಯಾರೆದುರು ನನ್ನ ಎಲ್ಲ ವಿಚಾರಗಳನ್ನು ವಿಶದಪಡಿಸಿದ್ದೇನೆಯೋ ಅಂಥ ಯಹೂದ್ಯ ಜನರನ್ನೇ ಕೇಳು."

ಕೇಳಿದ ಪ್ರಶ್ನೆಗೆ ಸರಳ ಉತ್ತರ ಕೊಡುವುದನ್ನು ಬಿಟ್ಟು ಈ ಉದ್ಧಟತನದ ಮಾತೆ? ಕಾವಲುಪಡೆಯ ಮುಖ್ಯಸ್ಥನಿಗೆ ಸಿಟ್ಟುಬಂತು. ಧನಿಯ ಎದುರಿಗೆ ತನ್ನ ವಿಧೇಯತೆಯ ಪ್ರದರ್ಶನ ಮಾಡುವ ತವಕದಿಂದ ಆತ ಯೇಸುವಿನ ಕೆನ್ನೆಗೆ ಬಿಗಿದನು. ಇನ್ನು ಮುಂದೆ ಹಿಂಡಾಗಿ ಬರಲಿರುವ ದೈಹಿಕ ಶಿಕ್ಷೆಗಳಿಗೆ ಅದು ನಾಂದಿಯಾಯಿತು.

ಅನ್ನಾಸ್, ಕೈಬೀಸಿ ಅವನನ್ನು ಕರೆದ-ಕೊಂಡು ಹೋಗೆಂದು ಸಂಜ್ಞೆ ಮಾಡಿದನು.

ಇತ್ತ ಪೀಟರ್ ಮತ್ತು ಜಾನ್‌ರು ಅನ್ಯಮಾರ್ಗದಿಂದ ಓಡುತ್ತ ಬಂದು ನಗರವನ್ನು ಪ್ರವೇಶಿಸಿದರು. ಮಂದಿರದ ಮುಂದುಗಡೆ ಕೆಲವು ಕಾವಲುಗಾರರು ಉರಿಯೆಬ್ಬಿಸಿ, ಚಳಿಗೆ ಮೈ ಕೈಗಳನ್ನು ಕಾಯಿಸುತ್ತ ಕುಳಿತಿದ್ದರು. ಅವರೊಂದಿಗೆ ತಾವೂ ಸೇರಿಕೊಂಡರು. ಅವರ ಮಾತಿನಿಂದ ಯೇಸುವನ್ನು ಅನ್ನಾಸ್‌ನ ಕಡೆಗೆ ಒಯ್ದ ವಿಷಯ ತಿಳಿಯಿತು. ಅಷ್ಟರಲ್ಲಿ ಅಲ್ಲಿ ಬಂದು ನಿಂತಿದ್ದ ಹುಡುಗಿಯೊಬ್ಬಳು ಪೀಟರನ ಮುಖವನ್ನು ನೋಡುತ್ತ—

"ನೀನು ಆ ಮನುಷ್ಯನ ಶಿಷ್ಯರಲ್ಲಿ ಒಬ್ಬನೊ?" ಎಂದು ಕೇಳಿದಳು.

ತಾನು ಸತ್ಯವನ್ನು ನುಡಿದದ್ದಾದರೆ ತನ್ನನ್ನು ಇಲ್ಲಿಂದ ಹೊರದಬ್ಬುವರೆಂದು ತಿಳಿದು ಪೀಟರ್, "ಅಲ್ಲ. ನಾನೇನಲ್ಲ" ಎಂದು ನುಡಿದನು.

ಕಾವಲುಗಾರರು ಬಂಧನದ ವಿವರಗಳನ್ನೂ ಕಣ್ಣಿಗೆ ತೆಗೆಯುವುದರಲ್ಲಿ ಓಡಿಹೋದ ಅಂಜುಗುಳಿ ಶಿಷ್ಯರನ್ನೂ ಕುರಿತು ಮಾತನಾಡಿಕೊಳ್ಳುತ್ತಿದ್ದರು. ಆಗ ಅವರಲ್ಲೊಬ್ಬನು "ನೀನು ಆ ನಾಜರೇಥಿನ ಮನುಷ್ಯನ ಶಿಷ್ಯನು ಹೌದು!" ಎಂದನು.

"ಇಲ್ಲ. ನಾನು ಅವನ ಶಿಷ್ಯನಲ್ಲ" ಎಂದು ಪೀಟರ್ ಮತ್ತೊಮ್ಮೆ ಒತ್ತಿ ಹೇಳಿದ. ಆದರೆ ಮತ್ತೂ ಒಬ್ಬ "ಹೌದು, ನಾನು ನೋಡಿದ್ದೇನೆ. ನೀನು ಅವನ ಶಿಷ್ಯನೆಂಬುದು ನಿಜ" ಎಂದಾಗ ಪೀಟರ್ ಆಕ್ರೋಶದಿಂದ, "ಅಲ್ಲ, ಅಲ್ಲ! ನಾನಲ್ಲ ಎಂದು ಹೇಳಿದೆನಲ್ಲ" ಎಂಬುದಾಗಿ ನುಡಿದನು.

ಹೀಗೆ ಅವನು ತನ್ನ ಗುರುವನ್ನು ಮೂರು ಸಲ ನಿರಾಕರಿಸಿ ಮುಗಿಸುತ್ತಿದ್ದಾಗ ಪ್ರವಾದಿಯ ಮಾತನ್ನು ಸತ್ಯವಾಗಿಸುವ ತೆರದಲ್ಲಿ ಕೋಳಿ ಕುಕೂಕೂ ಎಂದು ಸ್ವರವೆತ್ತಿ ಕೂಗಿತು. ತನ ಗುರುವಿನ ಮಾತು ನೆನಹಿಗೆ ಬಂದು ಪೀಟರ್ ಮರೆಗೆ ಹೋಗಿ ಗಳಗಳನೆ ಅತ್ತನು.

ಆಗ ಬೆಳಗಿನ ನಾಲ್ಕು ಗಂಟೆಯಾಗಿರಬೇಕು. ಬಹು ಪ್ರಯಾಸದಿಂದ ಕೈಫಸ್ ನೆರೆಯಿಸಿದ



ಮಹಾಸಭೆಯ ಜನ ಸೇರಿತು. ಹಬ್ಬದ ಮೂಲ-ಕವೂ ಇರಬೇಕು, ೨೭೦ ಸದಸ್ಯರಲ್ಲಿ ಕೇವಲ ೭೦ ಜನ ಬಂದಿದ್ದರು. ಅವರಲ್ಲಿ ಈ ಆಳುವ ಸದ್ದೂಕೀ ಪುರೋಹಿತ ಕುಟುಂಬಕ್ಕೆ ಆಗದವರಾದ ಫಾರಸೀಯರೂ ಇದ್ದರು. ಆದುದರಿಂದ ಒಳ್ಳೆಯ ಚಾಣಾಕ್ಷತನದಿಂದ ಮುಂದಿನ ಕೆಲಸವನ್ನು ನಡಸಿಕೊಂಡು ಹೋಗಬೇಕಾಗಿತ್ತು.

ಅನ್ನಾಸನ ಅಧ್ಯಕ್ಷತೆಯಲ್ಲಿ ಕೂಡಿದ ಆ ಸಭೆಯಲ್ಲಿ ಮೊದಲು ಎಲ್ಲ ಸದಸ್ಯರ ಹೆಸರನ್ನು ಕೂಗಿ ಹಾಜರಿದ್ದವರನ್ನು ನಮೂದಿಸುವ ಕೆಲಸ ಮುಗಿಯಿತು. ಅಲ್ಲಿಂದ ಯೇಸುವಿನ ಮೇಲಿನ ಧರ್ಮಲಂಡತನದ ಆರೋಪಗಳನ್ನು ಓದಿ ಹೇಳಲಾಯಿತು. ಅನಂತರ ಆರೋಪಿಯು ಅದಕ್ಕೆ ತನ್ನ ಉತ್ತರವನ್ನು ಕೊಡಬೇಕು. ದೇವದೂತನೆಂದು ಹೇಳಿಕೊಳ್ಳುವ ಅವನ ಬಾಯಿಂದ ಹೊರಡುವ ಮಾತಿನಲ್ಲಿ ಯಾವ ಭಯಾವಹ ಘಟನೆಯಡಗಿದೆಯೋ ಎಂದು ಹಿರಿಯರು ಕಾದಿದ್ದರು. ಆದರೆ ಅವನ ಮಲಿನವಾದ ನಿಲುವಂಗಿ, ಮಾಸಿದ ತಲೆಗೂದಲು, ರಕ್ತದ ಕಲೆಗಳು ಅಂಟಿಕೊಂಡಿದ್ದ ಎತ್ತಲೋ ನೋಡುತ್ತಿದ್ದ ಮುಖ, ಇವನ್ನು ನೋಡಿದವರಿಗ ಅವನೊಬ್ಬ ದೊಡ್ಡ ವಿಭೂತಿ ಎಂಬ ಭಾವನೆ ಹುಟ್ಟುವಂತೆಯೇ ಇರಲಿಲ್ಲ.

ನ್ಯಾಯಸ್ಥಾನದಲ್ಲಿ ನಿಂತೂ ತನ್ನ ಮಾತಿಗೆ ಉತ್ತರ ಕೊಡದುದಕ್ಕೆ ಶತಾಯುಷಿಗೆ ಕೋಪ ಬಂದಿತು. ಆದರೆ ಅದನ್ನು ಪ್ರಕಾಶಪಡಿಸುವುದಕ್ಕೆ ಅದು ಸಮಯವಾಗಿರಲಿಲ್ಲ. ಅಲ್ಲಿಂದ ಸಾಕ್ಷಿದಾರರನ್ನು ·ಕರೆಯಲಾಯಿತು. ಅವರೆಲ್ಲ ದೇವ ಮಂದಿರದಲ್ಲಿ ಕೆಳತರಗತಿಯ ಕೆಲಸವನ್ನು ಮಾಡಿಕೊಂಡು ಇರುವವರಾಗಿದ್ದರು. ಆದರೆ ಅವರು ಒಬ್ಬೊಬ್ಬರೇ ಪ್ರತ್ಯೇಕವಾಗಿ ನುಡಿದ ಸಾಕ್ಷ್ಯಗಳೆಲ್ಲ ಪರಸ್ಪರ ವಿರೋಧಿಗಳಾಗಿ ಹೊರಟವು. ಕೊನೆಗೆ ಮೇಲಿನ ವರ್ಗದಲ್ಲಿದ್ದ 'ವಿದ್ಯಾವಂತ' ವ್ಯಕ್ತಿಗಳನ್ನು ಸಾಕ್ಷಿದಾರರೆಂದು ತಂದು ನಿಲ್ಲಿಸಲಾಯಿತು. ಅವರಲ್ಲಿ ಒಬ್ಬ ಹೇಳಿದ:

"ಮನುಷ್ಯ ನಿರ್ಮಿತವಾದ ಈ ಮಂದಿರವನ್ನು

ತಾನು ಕೆಡಹಿ ಬಿಟ್ಟು, ಮೂರೇ ದಿನಗಳಲ್ಲಿ ಮನುಷ್ಯನ ಸಹಾಯವಿಲ್ಲದೆ ಇನ್ನೊಂದನ್ನು ಕಟ್ಟುವೆನು— ಎಂಬುದಾಗಿ ಈತ ತುಂಬಿದ ಸಭೆಯಲ್ಲಿ ಸಾರಿದ್ದಾನೆ."

"ನಾಜರೇಥಿನ ಮನುಷ್ಯನೇ, ಇದಕ್ಕೆ ನಿನ್ನ ಉತ್ತರವೇನು?" ಎಂದೊಬ್ಬ ಸಭಾಸದನು ಯೇಸುವನ್ನು ಕೇಳಿದನು. ಅದಕ್ಕೆ ಉತ್ತರವಾಗಿ ಯೇಸು "ತಾನು ಹೇಳಿದ್ದುದು ತನ್ನ ದೇಹ ಮಂದಿರವನ್ನು ಕುರಿತು" ಎಂದು ನುಡಿಯಬಹುದಿತ್ತೇನೊ

ಆದರೂ ಆತ ಮೌನಿ!

ಕೈಫಸ್‌ನ ಮುಖ ವಿವರ್ಣವಾಯಿತು. ಇಷ್ಟರ ಮೇಲಿಂದ ಅವನನ್ನು ಧರ್ಮಲಂಡನೆಂದು ತೀರ್ಮಾನಿಸುವುದು ಸಾಧ್ಯವೆ? ಕೈಫಸ್ ಕೂಗಿನ ದನಿಯಲ್ಲಿ ನುಡಿದನು:

"ಕೊನೆಯ ಬಾರಿ ನಿನ್ನನ್ನು ಕೇಳುತ್ತೇವೆ. ನೀನು ದೇವರ ಮಗ ಹೌದೋ ಅಲ್ಲವೋ? ನೀನು ಶಾಂತಿದೂತನೇ?"

ಇದಕ್ಕೆ ಉತ್ತರ ಹೇಳಬೇಕೆ? ಹೌದೆಂದು ಹೇಳಿದರೆ ಅವರು ನಂಬುವವರಲ್ಲ. ಇಲ್ಲವೆಂದು ಹೇಳುವುದಂತೂ ಶಕ್ಯವೇ ಇಲ್ಲ. ಯೇಸು ನುಡಿದನು:

"ಹೌದು! ನೀವೆನ್ನುವುದು ನಿಜ. ಆದರೆ ಎಚ್ಚರಿಕೆ! ಇನ್ನು ಮುಂದೆ ಮಾನವ ಪುತ್ರನು ದೇವರ ಬಲಬದಿಯಲ್ಲಿ ಕುಳಿತುಕೊಳ್ಳುವನು. ಮತ್ತು ಮೋಡಗಳ ಮೇಲಿಂದ ಕಾಣಿಸಿಕೊಳ್ಳುವನು."

ಕೈಫಸ್‌ನಿಗೆ "ಹೌದು!" ಎನ್ನುವ ಒಂದೇ ಒಂದು ಮಾತು ಸಾಕಾಗಿತ್ತು. "ಕೇಳಿದಿರಾ! ಅವನೇ ತನ್ನ ಬಾಯಿಂದ ಉತ್ತರಿಸಿದ್ದಾನೆ. ನಿಮ್ಮ ನಿರ್ಣಯವನ್ನೀಗ ಹೇಳಿರಿ!" ಎಂದು ಆತ ಉಚ್ಚ ಕಂಠದಲ್ಲಿ ಸಭಿಕರನ್ನುದ್ದೇಶಿಸಿ ಕೂಗಿದನು.

ಸದಸ್ಯರು ಸಾರಿದರು: "ಅವನು ಅಪರಾಧಿ. ಮರಣದಂಡನೆಗೆ ಪಾತ್ರನಾಗಿದ್ದಾನೆ."


ಯೇಸುವಿಗೆ ಈ ವಿಚಾರಣೆಯು ಯಹೂದ್ಯ ಜನದ ಕಾನೂನಿಗೆ ಬದ್ಧವಾಗಿ ನಡೆದಿಲ್ಲವೆಂಬುದು ತಿಳಿದಿದ್ದಿತು. ರಾತ್ರಿಯಲ್ಲಿ, ಬಹುಜನ ಸದಸ್ಯರಿಲ್ಲದೆ, ಸರಿಯಾದ ಸಾಕ್ಷಿಗಳಿಲ್ಲದೆ, ಮತ್ತು ಸಾಕ್ಷಿಯಾದ ಅದೇ ದಿನ ಈ ರೀತಿಯ ನಿರ್ಣಯ ಹೇಳಲು ಬರುವುದಿಲ್ಲವೆಂಬುದು ತಿಳಿದಿತ್ತು. ಆದರೂ ಆತ ಏನನ್ನೂ ಹೇಳಲಿಲ್ಲ.

ಸಭೆ ಮುಗಿಯಿತೆಂದು ಸಭಾಸದರು ಎದ್ದು ಹೋಗುವಾಗ ಕೆಲವರು ಅವನ ಮುಖಕ್ಕೆ ಉಗುಳಿದರು. ಇನ್ನು ಕೆಲವರು ಒದ್ದು ಹೋದರು.

ಬೆಳಗಾಗಲು ಇನ್ನು ಒಂದು ಗಂಟೆಯ ಅವಕಾಶವಿದ್ದಿತು. ಮರಣದಂಡನೆಯ ಶಿಕ್ಷೆ ವಿಧಿಸಬೇಕಾದರೆ ಇನ್ನೊಮ್ಮೆ ಸಭೆ ಸೇರಿ ಅದರಲ್ಲಿ ಸ್ಥಿರೀಕರಣವಾಗಬೇಕಷ್ಟೆ. ಅದೇ ದಿನ ಅದನ್ನು ಮಾಡಬರುವಂತಿದ್ದಿಲ್ಲ. ಬೆಳಗಾಯಿತೆಂದರೆ ಮತ್ತೊಂದು ದಿನವೆನ್ನುವುದು ಆರಂಭವಾಗುವುದಷ್ಟೆ. ಅದರಿಂದ ಸಭಾನಿಯಮದ ಉಲ್ಲಂಘನವಾದಂತಾಗಲಾರದಲ್ಲವೆ? ಅಂತೆಯೆ ಬೆಳಗಿನಲ್ಲಿ ಮತ್ತೊಮ್ಮೆ ಸಭೆ ಸೇರುವುದೆಂದು ಸಾರಲಾಯಿತು.

ಈ ಬಿಡುವಿನ ವೇಳೆಯಲ್ಲಿ ಯೇಸುವನ್ನು ಮಂದಿರದ ಕಾವಲುಗಾರರ ಮಧ್ಯದಲ್ಲಿ ಬಿಡಲಾಗಿದ್ದಿತು. ಅವರು ಅವನನ್ನು ಎದುರು ನಿಲ್ಲಿಸಿಕೊಂಡು ಪ್ರಶ್ನೆಗಳನ್ನು ಕೇಳತೊಡಗಿದರು. ಉತ್ತರ ಬಾರದಿದ್ದಾಗ ಸರದಿಯ ಮೇಲೆ ಅವನ ಕೆನ್ನೆಗೆ ಬಿಗಿದರು. ಒಬ್ಬನು ಒಂದು ಅರಿವೆಯನ್ನು ತಂದು ಅವನ ಮುಖದ ಮೇಲೆ ಹಾಕಿ, ಮರೆಮಾಡಿ, ಬಿಗಿದ ಮುಷ್ಟಿಯಿಂದ ಮೂಗು, ಗಲ್ಲಗಳ ಮೇಲೆ ಒಂದೆರಡು ಏಟನ್ನು ಹಾಕಿ, "ನೀನು ದೇವರ ಮಗನಲ್ಲವೆ? ನಿನಗೆ ಯಾರು ಹೊಡೆದರೆಂದು ಹೇಳಬಲ್ಲಿಯಾ?" ಎಂದು ಪ್ರಶ್ನಿಸಿದನು.

ಅಖಂಡವಾಗಿ ಒಂದು ತಾಸಿನ ವರೆಗೆ ಅವರಿಂದ ಚಿತ್ರಹಿಂಸೆಗೆ ಗುರಿಯಾಗಿ ಯೇಸು ಬಳಲಿ ನೆಲಕ್ಕೊರಗಿದನು. ಆಗ ಕಾವಲಿನವರು ಒಂದಿಷ್ಟು ನೀರು ತಂದು ಮುಖಕ್ಕೆ ಬಳಿಯುವ


LIFEBUOY
SOAP
ಎಷ್ಟು ಗೆಲುವು, ಆರೋಗ್ಯದ ಉಲ್ಲಾಸ ಲೈಫ್‌ಬಾಯ್
ಯಿಂದ ಸ್ನಾನ ಮಾಡಿದ ಮೇಲೆ! ಯಾರಿಗೂ ಕೊಳೆಯಿಂದ
ಮತ್ತು ಕ್ರಿಮಿಗಳಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ
ಲೈಫ್‌ಬಾಯ್ ಸೋಪು ಕೊಳೆಯಲ್ಲಿರುವ ಕ್ರಿಮಿಗಳನ್ನು
ತೊಳೆದು ತೆಗೆಯುತ್ತದೆ. ಲೈಫ್‌ಬಾಯ್‌ಯಿಂದ
ಮನೆಯವರೆಲ್ಲರಿಗೆ ಆರೋಗ್ಯ.
ಲೈಫ್‌ಬಾಯ್ ಎಲ್ಲಿದೆಯೋ
ಅಲ್ಲಿದೆ ಆರೋಗ್ಯ!
ಹಿಂದುಸ್ಥಾನ್ ಲೀವರ್ ಅವರ ತಯಾರಿಕೆ
L.29-X29 KN

ಕರುಣೆಯನ್ನು ತೋರಿದರು. ಯೇಸು ಅಲ್ಲಿಂದ ಹೊರಬರುವುದನ್ನೆ ಒಬ್ಬನು ಕಾದಿದ್ದನು. ಅವನೇ ಜೂಡಾಸ್. ಈ ಪ್ರಕರಣ ಇಷ್ಟು ದೂರ ಹೋಗಿ ಅವನ ಮರಣಕ್ಕೆ ಕಾರಣವಾದೀತೆಂಬ ಕಲ್ಪನೆ ಅವನಲ್ಲಿ ಇರಲೇ ಇಲ್ಲ. ಬಹುಶಃ ಅವನನ್ನು ಹಿಡಿದು ಗಡಿಪಾರು ಮಾಡಿಬಿಡುವರೆಂದು ತಿಳಿದಿದ್ದನೊ ಏನೊ. ಯೇಸು ಯಾವುದೇ ಪ್ರತಿಭಟನೆಯನ್ನು ಮಾಡದೇ ಇದ್ದುದು ಅವನ ಮನಸ್ಸಿನಲ್ಲಿ ಒಂದೇ ಸಮನೆ ಕೊರೆಯುತ್ತಿದ್ದಿತು. "ಅಯ್ಯೋ, ಈತ ನನಗೆ ವೈಯಕ್ತಿಕವಾಗಿ ಏನೂ ಅನ್ಯಾಯ ಬಗೆಯದಿದ್ದಾಗ, ನಾನು ಇದನ್ನೇನು ಮಾಡಿಟ್ಟೆ?" ಎಂದು ಒರಲಿದನು. ಮುಖದ ಮೇಲೆ ಹೊದಿಕೆಯನ್ನು ಎಳೆದುಕೊಂಡು ಅಪರನ್ನು ಹಿಂಬಾಲಿಸಿದನು.

ಮತ್ತೊಮ್ಮೆ ಮಹಾ ಸಭೆಯ ಮುಂದೆ ಯೇಸುವಿನ ವಿಚಾರಣೆ! ಕೈಫಸ್ ಎರಡನೆಯ ಸಭೆಯನ್ನು ಇಷ್ಟು ಬೇಗ ಕರೆದುದಕ್ಕೆ ಸಬ್ಬಾಥ್ (ಜ್ಯೂ ಜನರ ವಿಶ್ರಾಂತಿಯ ದಿನ) ದ ಸಮಯ ಅಂದು ಸಂಜೆಯಿಂದ ಸುರುವಾಗಲಿದ್ದುದರ ಕಾರಣವನ್ನು ಕೊಟ್ಟನು. ಯೇಸುವಿನ ಮರಣ ದಂಡನೆಯ ನಿರ್ಣಯದ ಸ್ಥಿರೀಕರಣಕ್ಕೆ ಹೆಚ್ಚು ಹೊತ್ತು ಕಾಯುವ ಅಗತ್ಯ ಬೀಳಲಿಲ್ಲ. ಅಲ್ಲಿಗೆ ಈ ರುದ್ರನಾಟಕದ ಚಿಕ್ಕ ದೃಶ್ಯವೊಂದು ಮುಕ್ತಾಯಗೊಂಡಂತಾಯಿತು. ಯೇಸು ಆಗೂ ಮಾತನಾಡಲಿಲ್ಲ. ಹೊಡೆತಗಳಿಂದ ನುಗ್ಗಾಗಿ ಹೋಗಿದ್ದ ಅವನಿಗೆ ಏನನ್ನು ಆಡುವುದೂ ಸಾಧ್ಯವಿದ್ದಿರಲಿಲ್ಲವೇನೊ.

ಪೈಲೇಟನ ನಿವಾಸದ ಹೊರಗಿನ ಪಟಾಂಗಣದಲ್ಲಿ ಅಲ್ಲಲ್ಲಿ ವ್ಯವಸ್ಥಿತವಾಗಿ ನಿಂತ ರೋಮನ್ ಸೈನಿಕರ ಮಧ್ಯದಲ್ಲಿ ಜನಸ್ತೋಮವು ನೆರೆದಿದ್ದಿತು. ಈ ಜನಸ್ತೋಮವನ್ನು ಕೈಫಸನೇ ಕಳಿಸಿದ್ದ. ಪೈಲೇಟನೇನಾದರೂ ಯೇಸುವನ್ನು ಬಿಡುಗಡೆ ಮಾಡಬೇಕೆಂದು ಯೋಚಿಸಿದರೆ ಯೇಸುವಿನ ವಿರುದ್ಧ ಕೂಗಾಡಿ ಪೈಲೇಟನನ್ನು ಅಂಜಿಸಲು ಅವನು ಹಾಕಿದ ಸೂತ್ರವಾಗಿತ್ತು. ಅಲ್ಲದೆ ಯೇಸು ರೋಮನ್ ಚಕ್ರವರ್ತಿಗೂ ವಿರೋಧಿಯೆಂದು ತೋರಿಸಲು ಕೂಡ ಅವನು ಹಂಚಿಕೆ ಹಾಕಿಟ್ಟಿದ್ದ. ಒಂದೆಡೆ ಕೈಫಸ್ ತನ್ನ ಸಂಗಡಿಗರೊಡನೆ ಕಾದು ನಿಂತಿದ್ದ. ಇನ್ನೊಂದು ಬದಿಯಿಂದ, ಬಂಧನಕ್ಕೊಳಗಾದ ಯೇಸುವನ್ನು ಕರತರುವುದಕ್ಕೂ ಪೈಲೇಟ್ ಬಂದು ತನ್ನ ಆಸನದಲ್ಲಿ ಮಂಡಿಸುವುದಕ್ಕೂ ಸರಿಹೋಯಿತು. ಯೇಸು ಮತ್ತು ಪೈಲೇಟ್ ಒಬ್ಬರನ್ನೊಬ್ಬರು ಒಂದು ಕ್ಷಣ ನೋಡಿದರು. ಅವರಿಬ್ಬರ ಭೆಟ್ಟಿಯಾಗುವುದು ಅದೇ ಪ್ರಥಮಸಲವಾಗಿತ್ತು. ಆಗ ಪೈಲೇಟ್ ನೆರೆದ ಜನರನ್ನುದ್ದೇಶಿಸಿ ಕೇಳಿದನು:

"ಈ ಮನುಷ್ಯನ ವಿರುದ್ಧ ನಿಮ್ಮ ದೂರು ಏನಿದೆ?"

ಎಂಥ ಪ್ರಶ್ನೆ! ನಿನ್ನೆಯೇ ಕೈಫಸ್ ಭೆಟ್ಟಿಯಾಗಿ ವಿಷಯವನ್ನು ತಿಳಿಸಿರುವಾಗ, ಅವನ ಸೈನ್ಯದ ನೆರವನ್ನೂ ಪಡೆವಾಗ ಈ ಮಾತೆ?

"ಇವನು ಅಪರಾಧಿಯಲ್ಲದಿದ್ದರೆ ನಾವು ನಿಮ್ಮೆಡೆ ಇವನನ್ನು ಕರತರುತ್ತಲೇ ಇಲ್ಲ" ಎಂದನು ಕೈಫಸ್.

"ಹಾಗಿದ್ದರೆ, ನಿಮ್ಮ ಧರ್ಮಶಾಸ್ತ್ರದ ರೀತ್ಯಾ, ಅವನಿಗೆ ನೀವು ಶಿಕ್ಷೆ ವಿಧಿಸಿ. ಅದರಂತೆ ಮಾಡಿರಲ್ಲ!"

ಆಗ ಕೈಫಸ್‌ನ ಹಸ್ತಕನೊಬ್ಬ- "ಈತ ನಮ್ಮ ದೇಶದ ವಿರುದ್ಧ ದಂಗೆಯೆದ್ದು, ಜನಗಳನ್ನು ಪ್ರಚೋದಿಸುತ್ತಿದ್ದಾನೆ. ತಾನೇ ನಾಜರೇಥಿನ ಅರಸನೆಂದು ಹೇಳಿಕೊಂಡು, ಸೀಜರ್‌ನಿಗೆ ತೆರಿಗೆಯೊಪ್ಪಿಸಲು ನಿರಾಕರಿಸುತ್ತಾನೆ."

ಹೂಂ. ಸೀಝರನ ಮೇಲಿನ ಈ ಅನಿರೀಕ್ಷಿತ ಭಕ್ತಿಯನ್ನೂ ಈ ಪ್ರಕರಣದಲ್ಲಿ ರಾಜಕೀಯದ ಬಣ್ಣಬಳಿಯುವುದನ್ನೂ ಪೈಲೇಟ್ ಗುರುತಿಸಿದನು. ಅದಕ್ಕೆ ಉತ್ತರ ಕೊಡಬೇಕೆನ್ನುವಲ್ಲಿ, ಅವನ ಹೆಂಡತಿ ಕ್ಲಾಡಿಯಾಳಿಂದ ಒಂದು ಸಣ್ಣ ಚೀಟಿ ಬಂದಿತು.

ಕ್ಲಾಡಿಯಾ ಹಿಂದಿನ ರಾತ್ರಿ ಕೈಫಸ್ ಬಂದು

ಹೋದ ಮೇಲೆ ಗಂಡನಿಂದ ಎಲ್ಲ ವರ್ತಮಾನವನ್ನು ಕೇಳಿದ್ದಳು. ಆಮೇಲೆ ರಾತ್ರಿಯೆಲ್ಲ ಅವಳಿಗೆ ನಿದ್ದೆ ಬಾರದೇ, ಯೇಸುವಿನ ಪರಿತಾಪದ ಕನಸುಗಳನ್ನು ಆಕೆ ಕಂಡಳು. ರೋಮಿನವಳಾದರೂ, ಅವಳು ಸ್ವಭಾವತಃ ದೇವರು, ದೈವಗಳು, ಸಂಪ್ರದಾಯಗಳು ಇವುಗಳಲ್ಲಿ ಅಂಧ-ಶ್ರದ್ಧೆಯನ್ನಿಟ್ಟವಳು. ಜೀವಂತ ಸೀಜರನ ಮೂರ್ತಿಯನ್ನು ಮೊದಲು ಮಾಡಿಕೊಂಡು ಆಕೆ ಹಲವಾರು ದೈವತಗಳನ್ನು ಪೂಜಿಸುತ್ತಿದ್ದಳು. ಅವಳು ತನ್ನ ಚೀಟಿಯಲ್ಲಿ—

—ಈ ನಿರಪರಾಧಿ ಮನುಷ್ಯನ ಗೊಡವೆಗೆ ಹೋಗಬೇಡಿರಿ. ರಾತ್ರಿಯೆಲ್ಲ ನಾನು ಅವನ ಕನಸಿನಲ್ಲಿ ಪರಿತಪಿಸಿದ್ದೇನೆ— ಎಂದಷ್ಟೇ ಬರೆದಿದ್ದಳು.

ಪೈಲೇಟ್ ಅದನ್ನು ಓದಿ ಒಂದು ಮುದ್ದೆ ಮಾಡಿಕೊಂಡು ಕೈಯಲ್ಲಿ ಹಿಡಿದನು. ಇಂಥ ಕನಸುಗಳಿಗೆಲ್ಲ ಅವನು ಬೆಲೆ ಕೊಟ್ಟವನಲ್ಲ. ಆದರೂ ಹೆಂಡತಿ ಹೇಳಿದಾಗ ಅವನ ಮನಸ್ಸು ತುಸು ಅಧೀರವಾಗದೇ ಇರುತ್ತಿರಲಿಲ್ಲ. ಆಗ ಪೈಲೇಟ್, ಸೆರೆಯಾಳನ್ನು ತನ್ನ ಮಂದಿರದೊಳಗೆ ಕರತರಲು ಆಜ್ಞೆ ಇತ್ತು ತನ್ನ ಆಸನವನ್ನು ಬಿಟ್ಟು ಎದ್ದನು. ಮತ್ತು ತನ್ನ ಹೆಂಡತಿಗೆ, 'ಅವನನ್ನು ನಾನು ಕೊಲ್ಲುವುದಿಲ್ಲ. ಯೋಚನೆ ಬೇಡ' ಎಂದು ಹೇಳಿ ಕಳುಹಿದನು.

ಒಳಗಿನ ಕೋಣೆಗೆ ಯೇಸುವನ್ನು ಕರತಂದಾಗ, ಪೈಲೇಟ್ ಅವನ ಎದುರು ಹೋಗಿ ನಿಂತು "ನೀನು ಯಹೂದ್ಯರ ಅರಸನೆ?" ಎಂದು ಕೇಳಿದಾಗ— ಅದು ವರೆಗೆ ಸುಮ್ಮನಿದ್ದ ಯೇಸು "ಈ ಮಾತನ್ನು ನಿನ್ನ ಅನುಭವದಿಂದ ಹೇಳುತ್ತಿದ್ದೀಯಾ? ಏನು ಪರರ ಮಾತನ್ನು ನಂಬಿದ್ದೀಯಾ?" ಎಂದು ಮರು ಪ್ರಶ್ನೆ ಕೇಳಿದನು.

" ಅದಿರಲಿ, ನಿಮ್ಮ ಜಾತಿಯವರೇ ನಿನ್ನನ್ನು ಹಿಡಿದು ತಂದು, ನೀನೊಬ್ಬ ಧರ್ಮಲಂಡ ಎನ್ನುತ್ತಾರೆ ನೀನು ರಾಜನೆಂದು ಹೇಳಿಕೊಳ್ಳುವಿ ಎನ್ನುತ್ತಾರೆ. ನೀನೇನು ಮಾಡಿದ್ದೀ?"

"ನನ್ನ ದೊರೆತನವು ಈ ಇಹಲೋಕಕ್ಕೆ ಸಂಬಂಧಪಟ್ಟುದಲ್ಲ. ನಾನು ಇಲ್ಲಿಯ ರಾಜನಾಗಿದ್ದರೆ, ನನ್ನ ಪ್ರಜೆಗಳೆನ್ನುವವರು ನನ್ನನ್ನು ಹೀಗೆ ಸುಸೂತ್ರವಾಗಿ ಬಿಟ್ಟುಕೊಡುತ್ತಿದ್ದರೆ? ನಾನು ರಾಜನು ಹೌದು. ಅದಕ್ಕಾಗಿ ನಾನು ಹುಟ್ಟಿಬಂದೆ ಸತ್ಯವನ್ನು, ಪ್ರೇಮವನ್ನ ಜಗತ್ತಿಗೆ ಸಾರಲೆಂದು ನಾನು ಬಂದೆ."

ಪೈಲೇಟನಿಗೆ ಅಷ್ಟು ಸಾಕಾಗಿತ್ತು. ಯೇಸುವಿನೊಡನೆ ಹೊರಗೆ ಬಂದನು. ಬದಿಯಲ್ಲಿ ನಿಲ್ಲಿಸಿಕೊಂಡು "ಈ ಮನುಷ್ಯನಲ್ಲಿ ನಾನು ತಪ್ಪೇನನ್ನೂ ಕಾಣಲಿಲ್ಲ" ಎಂದು ಹೇಳಿ ಕುಳಿತುಕೊಂಡನು.

ಜನಸ್ತೋಮದಿಂದ ಆಗ ದೊಡ್ಡ ಧ್ವನಿಯೇ ಮೇಲೆದ್ದಿತು ಪೈಲೇಟನು ಬೇಕೆಂದೇ ಯೇಸುವನ್ನು ಮುಕ್ತಗೊಳಿಸುತ್ತಿದ್ದಾನೆಂಬುದು ಪುರೋಹಿತ ಮಂಡಲಿಗೆ ಖಚಿತವಾಯಿತು. ಅವರಲ್ಲಿ ಕೆಲವರು ಪೈಲೇಟನೆಡೆಗೆ ಧಾವಿಸಿ ಬಂದು–

"ತನ್ನ ವಿತಂಡ ಪ್ರವಚನಗಳಿಂದ ಅವನು ದೇಶದ ಜನಗಳಲ್ಲಿ ಕ್ಷೋಭೆಯನ್ನುಂಟುಮಾಡುತ್ತಿದ್ದಾನೆಂಬುದನ್ನು ನೀವು ಅರಿಯದೇ ಹೋದಿರಾ? ಮೊದಲು ಗ್ಯಾಲಿಲಿಯ ದೇಶವಾಯಿತು ಈಗ ಇಲ್ಲಿ ವಿರೋಧಿ ಚಟುವಟಿಕೆ ನಡೆಸಿದ್ದಾನೆ" ಎಂದು ಚೀರಿದರು.

ಅವರ ಮಾತಿನ ರಭಸಕ್ಕೂ, ಜನದ ಗೌಜಿಗೂ ಪೈಲೇಟ್ ವಿಚಲಿತನಾದನು. ಗ್ಯಾಲಿಲಿಯ ಎಂಬ ಪದವೊಂದರಿಂದ, ಅವನಿಗೆ ಒಂದು ಉಪಾಯ ತೋರಿತು.

"ಇವನು ಗ್ಯಾಲಿಲಿಯದವನೆ? ಹಾಗಿದ್ದರೆ ಆ ಸೀಮೆಯ ಒಡೆಯನಾದ ಹೆರಾಡ್‌ನ ಬಳಿಗೆ ಇವನನ್ನ ಕರೆದುಕೊಂಡು ಹೋಗಿರಿ" ಎಂದನು.

ಸುದೈವದಿಂದ ಹೆರಾಡ್ ಎಂಟಿಪಸ್ ಅದೇ ಊರಲ್ಲಿ ತಂಗಿದ್ದನಾದ್ದರಿಂದ ಉಪಾಯ ಕಾ-ಣದೇ ಯೇಸುವನ್ನು ಅಲ್ಲಿಗೆ ಕೊಂಡೊಯ್ಯಲು ಕಾವಲುಗಾರರಿಗೆ ಕೈಫಸ್ ಸಂಜ್ಞೆ ಮಾಡಿದನು.

ಹೆರಾಡನೂ ಯೇಸುವಿನ ದೈವಿಕತೆಯ ಬಗ್ಗೆ ಕೇಳಿದ್ದನು. ಅಲ್ಲದೆ ಬ್ಯಾಪ್ಟಿಸ್ಟ್ ಜಾನನ ಮೇಲೆ ತಾನೆಸಗಿದ ಅನ್ಯಾಯದ ಪಶ್ಚಾತ್ತಾಪವೂ ಅವನನ್ನ ಬಾಧಿಸುತ್ತಿತ್ತು ಈ ಬ್ಯಾಪ್ಟಿಸ್ಟ್ ಜಾನ್ ಒಂದು ರೀತಿಯಲ್ಲಿ ಯೇಸುವಿನ ಗುರು, ಯೇಸುವಿನಿಗೆ ಧರ್ಮದೀಕ್ಷೆಯನ್ನು ಕೊಟ್ಟವನೇ ಅವನು. ಜಾನ್ ಸ್ಪಷ್ಟವಾದಿ. ಹೆಂಡತಿಯ ಮಾತನ್ನು ಕೇಳಿ ಜಾನ್‌ನನ್ನು ಹೆರಾಡ್ ತಲೆ ಹೊಡಿಸಿ, ಅವನ ತಲೆಯನ್ನು ಅವಳಿಗೆ ಕಾಣಿಕೆಯಾಗಿ ಕೊಟ್ಟಿದ್ದನು ಆದರೆ ಜಾನ್‌ನ ತೆರೆದ ಕಣ್ಣಿನ ಆ ರುಂಡವು ಇನ್ನೂ ಅವನ ಮನವನ್ನು ಬಾಧಿಸುತಲಿತ್ತು. ಈಚೆಗೆ ಜಾನನೇ ಈ ಯೇಸುವಿನಲ್ಲಿ ಮೂರ್ತೀಭವಿಸಿದ್ದಾನೆ ಎಂಬ ಶಂಕೆ ತಲೆದೋರಿದ್ದಿತು. ಈಗ ಜಾನ್‌ನ ಅಂಶ ಅವನಲ್ಲಿದ್ದರೆ, ಅವನನ್ನು ಬದುಕಿಸಿ, ತನ್ನ ಹಿಂದಿನ ಪಾಪಕರ್ಮಕ್ಕೆ ತುಸುವಾದರೂ ಪ್ರಾಯಶ್ಚಿತ್ತದ ಲೇಪವನ್ನು ತೊಡೆಯಬಹುದಲ್ಲವೆ?

ಹೆರಾಡ್ ಕಣ್ದೆರೆದು ಯೇಸುವನ್ನು ಚೆನ್ನಾಗಿ ನೋಡಿದನು. ಬ್ಯಾಪ್ಟಿಸ್ಟ್ ಜಾನ್‌ನ ಯಾವ ಲಕ್ಷಣವೂ ಇಲ್ಲವೆಂಬುದನ್ನು ಮೊದಲಿಗೆ ಕಂಡುಕೊಂಡನು.

ಹೆರಾಡ್ ತನ್ನ ಆಸನದಲ್ಲಿ ಮುಂದಿಸುತ್ತ, ತಾನು ಯೇಸುವಿನ ಬಗ್ಗೆ ಈ ಹಿಂದೆ ಕೇಳಿದುದಾಗಿಯೂ, ಆತನು ದೇವರಿಂದ ಕಳಿಸಲ್ಪಟ್ಟ ದೂತನೇ ಆಗಿದ್ದರೆ, ತಾನು ನಮಸ್ಕಾರ ಹಾಕಲೂ ಸಿದ್ಧನೆಂದೂ ಹೇಳಿದನು. ಆದರೆ ಅವನು ದೇವದೂತನೆಂದು ಸಿದ್ಧಮಾಡಿಕೊಡಬೇಕಲ್ಲವೆ? ಅದಕ್ಕಾಗಿ ಒಂದಿಷ್ಟು ಪವಾಡಗಳನ್ನು ಮಾಡಿ ತೋರಿಸಿದರೆ ಎಲ್ಲವೂ ಸರಿಹೋಗುವುದು. ಉದಾಹರಣೆಗೆ ಈ ಪಾತ್ರೆಯಲ್ಲಿರುವ ನೀರನ್ನು ಮದ್ಯವನ್ನಾಗಿ ಪರಿವರ್ತಿ-ಸಲು ಸಾಧ್ಯವೆ?

ಯೇಸು ಮೌನಿ!

ಹೆರಾಡ್ ಮತ್ತೊಮ್ಮೆ ಕೇಳಿದ. ಮತ್ತೂ ಒಮ್ಮೆ ಯತ್ನಿಸಿದ. ಯೇಸು ತುಟಿ ಬಿಚ್ಚಲಿಲ್ಲ. ಹೆರಾಡ್‌ನಿಗೆ ಕೋಪ ಬಂತು. ಆಸನವನ್ನು ಬಿಟ್ಟು ಎದ್ದು ಬಂದು ಹೀಗೆಳೆಯಲು ಸುರುವು ಮಾಡಿದನು.

"ನೀನೆಂಥ ರಾಜ! ಆಹಾ, ಏನು ನಿನ್ನ ವೇಷ! ನಿನ್ನ ಮುಖವು ಭಿಕ್ಷುಕರಿಗಿಂತ ಕಡೆಯದು."

ಹೆರಾಡ್ ತನ್ನ ಸೇವಕನಿಗೆ ಸನ್ನೆ ಮಾಡಿ, ಒಂದು ಹಳೆಯ ಕೆಂಪು ನಿಲುವಂಗಿಯನ್ನು ತರಿಸಿ, ಅದನ್ನು ಯೇಸುವಿಗೆ ಹೊದಿಸಿದನು. ಗೊಂಬೆಯ ವೇಷಗಳನ್ನು ಹಾಕಿದ ರಾಜರಂತೆ ಅದು ಕಂಡೀತು ಎಂಬ ಹೆರಾಡ್‌ನ ನಿರೀಕ್ಷೆ ಸರಿ ಹೊಂದಿತು. ಚಪ್ಪಾಳೆ ತಟ್ಟುತ್ತ, "ಆಹಾ! ಈಗ ನೀನು ನಿಜವಾದ ರಾಜನ ಹಾಗೆ ಕಾಣುತ್ತೀ" ಎಂದೆನ್ನುತ್ತ ಅವನನ್ನು ಹಾಗೆಯೇ ಕೊಂಡೊಯ್ಯಲು ಆಜ್ಞೆ ಇತ್ತನು.

ಎಲ್ಲಿಗೆ? ಮರಳಿ ಪೈಲೇಟನ ಕಡೆಗೇ ಹೋಗಬೇಕಲ್ಲವೆ? ಕೈಫಸ್ ಮತ್ತು ಇತರ ಸದ್ದೂಸೀ ಪುರೋಹಿತರು ತಮ್ಮಲ್ಲಿ ಆಲೋಚನೆಗೆ ತೊಡಗಿದರು. ಜನಗಳಿಂದ ಗದ್ದಲ ಮಾಡಿಸದೆಯೇ ಪೈಲೇಟನು ಹಾದಿಗೆ ಬರುವವನಲ್ಲ ಎಂದು ತೋಚಿತು. ಅದಕ್ಕಾಗಿ ತಮಗೆ ಅನುಕೂಲರಾದ ಹೆಚ್ಚೆಚ್ಚು ಜನರನ್ನು ಕೂಡಿಸಿ "ಯೇಸುವನ್ನು ಕೊಲ್ಲಬೇಕು" ಎಂದು ಪೈಲೇಟನ ಮುಂದೆ ಗದ್ದಲ ಮಾಡಲೆಂದು ಕರೆಕೊಟ್ಟು ಅಲ್ಲಿಗೆ ಕಳುಹಿದರು.

ಎಲ್ಲರೂ ಮತ್ತೆ ತನ್ನಲ್ಲಿಗೆ ಬಂದಾಗ, ಮೊದಲಿಗಿಂತ ಜನಜಂಗುಳಿ ಹೆಚ್ಚಾಗಿದ್ದುದನ್ನು ಪೈಲೇಟ್ ಕಂಡನು.

"ಇದು ನೋಡಿರಿ, ಇವನು ಅಪರಾಧ ಮಾಡಿಲ್ಲವೆಂದು ನಾನು ನಿರ್ಣಯ ಕೊಟ್ಟಿದ್ದೇನೆ. ಅದೇ ಕಾರಣದಿಂದ ನಮ್ಮ ಮಿತ್ರ ಹೆರಾಡ್‌ನೂ

ಹಾಗೆಯೇ ಮಾಡಿದ್ದಾನೆ. ಇವನೊಬ್ಬ ಧಾರ್ಮಿಕ ಹುಚ್ಚ. ಆದ್ದರಿಂದ ಇವನಿಗೆ ನಾಲ್ಕೇಟು 'ಥಳಿಸಿ' ಬಿಟ್ಟುಬಿಡುತ್ತೇವೆ" ಎಂದನು.

ಆದರೆ ಇದೇನು? ಇದೆಂಥ ವಿಪರೀತ ಕೂಗಾಟ! ಸಾವಿರಾರು ಸಂಖ್ಯೆಯಲ್ಲಿ ಜನ ಬಂದು ಅವನ ನಿವಾಸಕ್ಕೆ ಮುತ್ತಿಗೆ ಹಾಕುವವರಂತೆ ಕಂಡರು. ಯೇಸುವಿಗೆ ಅನುಕೂಲವಾಗಿ ಹೇಳುವವರು ಯಾರೂ ಮುಂದೆ ಬರುತ್ತಿಲ್ಲವಲ್ಲ? ಈ ಪರಿಸ್ಥಿತಿಯಿಂದ ಸುಲಭದಲ್ಲಿ ಪಾರಾಗುವ ಹಂಚಿಕೆ ತೋರದಾಯಿತು.

ಪಾಸ್ಕ ಹಬ್ಬದ ಕಾಲಕ್ಕೆ ಯಾರೊಬ್ಬ ಕೈದಿಯನ್ನು ಬಿಡುಗಡೆ ಮಾಡುವ ಅಧಿಕಾರ ಪೈಲೇಟನಿಗಿತ್ತು. ಹಾಗೆ ಒಬ್ಬನನ್ನು ಬದುಕಿಸಬೇಕೆಂದು ಕೇಳುವ ಸಂಪ್ರದಾಯದ ಅಧಿಕಾರ ಜನರಿಗಿದ್ದಿತು. ಬಾರಬ್ಬಾಸ್ ಎಂಬವ ರೋಮನ್ನರ ವಿರುದ್ಧ ದಂಗೆಯೆದ್ದ ಕೈದಿ. ಅದೇ ದಿನ ಅವನಿಗೆ ಶಿಲುಬೆಯ ಶಿಕ್ಷೆಯು ಕಾದಿದ್ದಿತು. ಪೈಲೇಟನಿಗೆ ಪಾಸ್ಕ ಹಬ್ಬದ ಕಾಲದ ಈ ಕ್ಷಮಾಪಣೆಯ ಪ್ರಸಂಗವನ್ನು ಯೇಸುವಿಗೆ ಅನುಕೂಲವಾಗುವ ಹಾಗೆ ಪರಿವರ್ತಿಸಬಹುದೆಂದು ಕಂಡಿತು. "ಒಳ್ಳೆದು, ಈ ಪಾಸ್ಕ ಹಬ್ಬದ ಪ್ರಸಂಗದಲ್ಲಿ ನಿಮಗೆ ಯಾರು ಬೇಕು? ತಪ್ಪು ಮಾಡದ ಈ ಯೇಸುವೊ ಆ ಬಾರಬ್ಬಾಸನೋ?"

ಜನಜಂಗುಳಿಯ ಮನೋಭೂಮಿಕೆ ಇಂದು ಹೇಗೋ, ಎರಡು ಸಾವಿರ ವರ್ಷಗಳ ಹಿಂದೆಯೂ ಹಾಗೆಯೇ ಇದ್ದಿತೆನ್ನಬೇಕು, ಏಕೆಂದರೆ ಯಾರೋ ಕೆಲವರು—

"ನಮಗೆ ಬಾರಬ್ಬಾಸನ ಬಿಡುಗಡೆ ಬೇಕು" ಎಂದು ಕೂಗಿದರು. ಅನೇಕ ಕಂಠಗಳು "ಹೋ" ಎಂದು ಅದಕ್ಕೆ ದನಿಗೂಡಿಸಿದವು!

ಪೈಲೇಟ್ ಕಂಗಾಲಾಗಿ ಕೇಳಿದ—

"ಹಾಗಾದರೆ ಈ ನಿಮ್ಮ ಅರಸನನ್ನೇನು ಮಾಡಬೇಕೆನ್ನುತ್ತೀರಿ?"

"ಅವನನ್ನು ಶಿಲುಬೆಗೇರಿಸಿರಿ! ಸೀಝರನನ್ನುಳಿದು ನಮಗೆ ಅನ್ಯ ರಾಜರಿಲ್ಲ!"

"ಅವನನ್ನು ಬಿಡುಗಡೆ ಮಾಡಿದ್ದಾದರೆ ನೀನು ಸೀಝರನ ವೈರಿಯಾಗುವಿ." ತಾನೇನಾದರೂ ಇವನನ್ನು ಬಿಟ್ಟರೆ ಇವರು ಸೀಝರನ ತನಕ ದೂರು ಒಯ್ಯುವವರೇ ಎಂದು ಪೈಲೇಟ್ ಎಣಿಸಿದನು. ಉದ್ರೇಕಗೊಂಡಿದ್ದ ಜನಜಂಗುಳಿಯನ್ನು ನಿಯಂತ್ರಣದಲ್ಲಿಡುವುದು ಅಸಾಧ್ಯವೆಂದು ಕಾಣುತ್ತಲೂ ಪೈಲೇಟ್ ತನ್ನಲ್ಲಿಯ ಶತಸೈನ್ಯದ ಒಬ್ಬ ಅಧಿಪತಿಯನ್ನು ಕರೆದು ಬಾರಬ್ಬಾಸನನ್ನು ಬಿಡುಗಡೆಮಾಡಲು ತಿಳಿಸಿದನು. ಮತ್ತು ಯೇಸುವಿನ ಕಡೆಗೆ ಬೆರಳು ತೋರಿಸಿ—

"ಇವನನ್ನು ನಿಮಗೇ ಒಪ್ಪಿಸಿದ್ದೇನೆ" ಎಂದು ಹೇಳಿದವನೆ ಒಳಗೆ ಹೋದನು.

ಜೂಡಾಸ್ ಇದುವರೆಗೆ ಜನಜಂಗುಳಿಯನ್ನು ಹಿಂಬಾಲಿಸಿಯೆ ಇದ್ದನು. ಕೊನೆಯ ಫಲಿತಾಂಶ ತಿಳಿಯುತ್ತಲೂ ಹೌಹಾರಿದನು. ಜೀವ ಹೋಗುವ ಪ್ರಸಂಗದಲ್ಲಿಯೂ ತನ್ನ ಗುರು ಒಂದು ಬಿರುನುಡಿಯನ್ನೂ ಆಡಲಿಲ್ಲ. ಸಮರ್ಥಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಯಾರ ಸಹಾಯವನ್ನು ಕೇಳಲಿಲ್ಲ. ಅಯ್ಯೋ! ಅವನ ದೈಹಿಕ ಸ್ಥಿತಿಯೆ! ನಿಲ್ಲಲಿಕ್ಕೂ ತ್ರಾಣವಿಲ್ಲದ, ತಾಸುಗಟ್ಟಲೆ ನಿಂತು ಇನ್ನಷ್ಟು ನಿರ್ವಿಣ್ಣನಾಗಿದ್ದವನನ್ನು ಜೂಡಾಸ್ ನೋಡಲಾರದೇ ಹೋದನು. ತಾನು ಪಡೆದ ೩೦ ನಾಣ್ಯಗಳ ಭಾರ ಅವನ ಒಳಮೈಗೆ ತಾಕಿತು. ಆ ಹಣವನ್ನು ತಿರುಗಿ ಕೊಡಬೇಕು. ಮತ್ತು ತನ್ನ ಗುರುವನ್ನು ಬಿಟ್ಟುಕೊಡಿರಿ ಎಂದು ಕೇಳಬೇಕು. ಹೌದು! ಅದೇ ಉಪಾಯ, ಎಂದುಕೊಳ್ಳುತ್ತ ಜೂಡಾಸ್ ಮಂದಿರಕ್ಕೆ ಧಾವಿಸಿದ. ಮಂದಿರದಲ್ಲಿದ್ದ ಕೋಶಾಧಿಕಾರಿಯೆದುರು ಜೂಡಾಸ್ ತನ್ನ ಅಳಲನ್ನು ತೋಡಿಕೊಂಡು ಹಣವನ್ನು ಮುಂದೆ ಚಾಚಿದಾಗ ಅಲ್ಲಿದ್ದವರು ಖೊಳ್ಳೆಂದು ನಕ್ಕರು. ಜೂಡಾಸ್ ಆ ಹಣವನ್ನು ಅವರ ಮುಂದೆ ಬಿಸಾಡಿದವನೆ ಹುಚ್ಚನಂತೆ ಓಡಿದನು. ಎಲ್ಲಿಗೆಂದು ತಿಳಿಯದೆ ನಗರದ ಹೊರಗೆ ಧಾವಿಸಿದನು. ಒಂದು ಆಳವಾದ ಕಂದಕದ ಮೇಲಿನ ದಿಬ್ಬದಲ್ಲಿರುವ ಗಿಡವೊಂದರ ಟೊಂಗೆಗೆ

ಜೋತುಬಿದ್ದು, ಕಂದಕದಲ್ಲಿ ಹಾರಿದನು. ತನ್ನ ಗುರುವಿಗಿಂತ ಮೊದಲೇ ದೇವರ ಲೋಕದತ್ತ ಸಾಗಿಹೋದನು.

ಇತ್ತ ಪೈಲೇಟ್ ಥಳಿಸುವ ಶಿಕ್ಷೆಯೊಂದನ್ನು ವಿಧಿಸಿದ್ದನಲ್ಲವೆ? ಅದು ಬೇಡವೆಂದು ಬೇರೆಯಾಗಿ ಹೇಳಿರಲಿಲ್ಲವಲ್ಲ! ಸರಿ, ಸೈನಿಕರು ಯೇಸುವನ್ನು ಥಳಿಸುವಿಕೆಯ ರಂಗಸ್ಥಳಕ್ಕೆ ತಂದರು. ಸೈನಿಕರು ಹೆರಾಡನು ತೊಡಸಿದ್ದ ನಿಲುವಂಗಿಯನ್ನು ಕಳಚಿದರು. ಇತರ ಬಟ್ಟೆಗಳನ್ನೂ ತೆಗೆದು, ನೆಲಕ್ಕೆ ಕೂರಿಸಿದ ನಾಲ್ಕು ಕಬ್ಬಿಣದ ಬಳೆಗಳಿಗೆ ಅವನ ಕೈಕಾಲುಗಳನ್ನು ಕಟ್ಟಿದರು. ಬಿಸಿಲು ಏರುತ್ತ ನಡೆದು ಯೇಸುವಿನ ಬೆನ್ನನ್ನು ಸುಡುತ್ತಲಿತ್ತು.

'ಥಳಿಸುವುದು' ಎನ್ನುವುದು ಒಂದು ವ್ಯವಸ್ಥಿತವಾದ, ವಿಶಿಷ್ಟ ನಿಯಮಗಳಿಗೊಳಗಾದ ಶಿಕ್ಷೆಯಾಗಿದ್ದಿತು. ತಪ್ಪು ಮಾಡಿದವನನ್ನು ಬರಿಮೈ ಮಾಡಿ, ಹಾಗೆ ಸಾರ್ವಜನಿಕ ಸ್ಥಳದಲ್ಲಿ ಬೆನ್ನು ಮೇಲಾಗಿ ಮಲಗಿಸುವುದು. ಅಲ್ಲಿಂದ ಅವನು ಮಾಡಿದ ತಪ್ಪನ್ನು ನೆರೆದಿದ್ದವರಿಗೆ ವಿವರಿಸುವುದು ಅನಂತರ ಥಳಿಸುವ ಕಾರ್ಯಕ್ಕೆಂದೇ ನೇಮಕವಾದ ಓರ್ವ ಧಾಂಡಿಗನು ಚರ್ಮದ ಪಟ್ಟಿ ಹಾಗೂ ಚಿಕ್ಕ ಚಿಕ್ಕ ಸರಪಳಿಗಳನ್ನು ತುದಿಗೆ ಕಟ್ಟಲಾದ ಬಾರುಕೋಲಿನಿಂದ ಎಣಿಸಿ ೩೯ ಪೆಟ್ಟುಗಳನ್ನು ಹಾಕುವನು. ಎಡಭುಜ, ಬಲಭುಜ ಹಾಗೂ ಟೊಂಕ ಇವು ಮೂರೂ ತಲಾ ಹದಿಮೂರರಂತೆ ಆ ಏಟುಗಳನ್ನು ಧರಿಸಬೇಕು.

ಯೇಸುವಿನ ಮಿದುವಾದ ಬೆನ್ನ ಮೇಲೆ ಬಾರಕೋಲಿನ ಹೊಡೆತಗಳು ಒಂದೊಂದಾಗಿ ಬಿದ್ದಾಗ ಒಮ್ಮೆ, ಎರಡನೆಯ ಸಲ ಆತ ನರಳಿದನು. ಅಲ್ಲಿಂದ ಅವನ ಸದ್ದು ಕೇಳಿಬರದಂತಾಗಲು ಮೇಲ್ವಿಚಾರಕನು ಆ ಧಾಂಡಿಗನನ್ನು ತಡೆದು, ಕೆಳಗೆ ಬಗ್ಗಿ ಯೇಸುವಿನ ಮುಖವನ್ನು ನೋಡಿದ. ಅವನಿಗೆ ಪ್ರಜ್ಞೆ ಇದ್ದಂತೆ ತೋರಲಿಲ್ಲ. ಕಾರಣ ಅವನ ಕಟ್ಟುಗಳನ್ನು ಬಿಚ್ಚಲಾಯಿತು. ಬಿಸಿಲಲ್ಲಿಯೆ ಮಲಗಿಸಲಾಯಿತು. ನೀರನ್ನು ತಂದು ಗಾಯವಾದಲ್ಲೆಲ್ಲ ಮತ್ತು ಮುಖದ ಮೇಲೆ ಎರಚಿದರು. ನೀರೆರಚುವುದು ಸಹಾನುಭೂತಿಯ ಲಕ್ಷಣವೇನೂ ಅಲ್ಲ. ಅದರಿಂದ ಪ್ರಜ್ಞೆ ಮೂಡಿದಾಗ ನೋವಿನ ಬಾಧೆಯು ತೀವ್ರತರವಾಗಿಯೇ ವೇದ್ಯವಾಗುವಂತಹದು. ಅಲ್ಲಿಂದ ಅವನನ್ನು ಒಂದು ಕಲ್ಲಿನ ಮೇಲೆ ಕುಳ್ಳಿರಿಸಲಾಯಿತು.

ಒಬ್ಬನಿಗೆ ಇನ್ನೂ ಮೋಜು ಮಾಡಬೇಕೆಂದು ಕಂಡಿತು. ಯೇಸುವಿಗೆ ಹರಿದು ಹಳೆಯದಾದ ಒಂದು ಜಾಂಬಳಿ ನಿಲುವಂಗಿಯನ್ನು ತೊಡಿಸಿದರು. ಕೈಯಲ್ಲಿ ಒಂದು ಕಟ್ಟಿಗೆಯ ಕೋಲನ್ನು ಕೊಟ್ಟು "ಇದು ನೋಡು, ನಿನ್ನ ರಾಜದಂಡ" ಎಂದರು. ಮತ್ತೊಬ್ಬ ಹಸಿ ಮುಳ್ಳುಗಳಿಂದ ಕೂಡಿದ ಎರಡು ಬಳ್ಳಿಗಳನ್ನು ತಂದು, ಒಂದಕ್ಕೊಂದನ್ನು ಜಾಗರೂಕತೆಯಿಂದ ಹೊಸೆದು "ರಾಜನಾದವನಿಗೆ ಕಿರೀಟ ಬೇಕಲ್ಲವೆ? ಇದು ತಗೋ" ಎಂದು ಅವನ ತಲೆಯ ಮೇಲೆ ಊರಿದನು. ಈ ಅಣಕ ವೇಷದ ರಾಜನ ಸ್ವರೂಪವನ್ನು ನೋಡಿ "ನಾಜರೇಥಿನ ರಾಜ! ಹೋ!" ಎಂದು ಅವರೆಲ್ಲ ಬೊಬ್ಬಿರಿದರು.

ಯೇಸುವಿನ ಕೊನೆಯ ಯಾತ್ರೆಯಲ್ಲಿ ಅವನ ಜೊತೆಗೆ ಇಬ್ಬರು ಅಪರಾಧಿಗಳಿದ್ದರು. ಬದಿಯಲ್ಲಿ ಶತಾಧಿಪತಿ ಮೇಲ್ವಿಚಾರಕನಾಗಿ ಹೊರಟಿದ್ದನು. ಅವರನ್ನು ಸುತ್ತಿಕೊಂಡು ಶಸ್ತ್ರಧಾರಿಗಳಾದ ಸೈನಿಕರಿದ್ದರು. ಅವರ ಹಿಂದೆ ಕೆಲವು ಪುರೋಹಿತರು. ನೂರಿನ್ನೂರು ಜನ ಹಾದಿಗರೂ ಹೊರಟಿದ್ದರು. ಮಧ್ಯಾಹ್ನದ ವೇಳೆಗೆ ಈ ಮೆರವಣಿಗೆ ಹೊರಟಿತು.

ತಪ್ಪಿತಸ್ಥರನ್ನು ಶಿಲುಬೆಗೇರಿಸಿ ಕೊಲ್ಲುವ ಪದ್ಧತಿ ಆ ಹಿಂದೆ ಸಾವಿರಾರು ವರ್ಷಗಳಿಂದ ಪ್ರಚಾರದಲ್ಲಿದ್ದಿತು. ಮರಣದಂಡನೆಗೆ ಗುರಿಯಾದ ಅಪರಾಧಿಯ ತಲೆಯನ್ನು ಒಂದೇಟಿಗೆ ಹೊಯ್ದುಬಿಟ್ಟರೆ ಅದರಿಂದ ಅವನ ತಪ್ಪಿನ ಅರಿವುಂಟಾಗುವುದಿಲ್ಲ. ಅವನು ನೋವುಗಳಿಂದ ನರಳುತ್ತ ಕ್ರಮೇಣ ಸಾಯಬೇಕೆಂದು ಈ

ಉಪಾಯವನ್ನು ಹುಡುಕಿ ತೆಗೆದಿದ್ದರು. ಆರು ಸಾವಿರ ಜನರನ್ನು ಒಮ್ಮೆ ಒಂದೇ ದಿನಕ್ಕೆ ಶಿಲುಬೆಗೇರಿಸಿದ ಉದಾಹರಣೆಗಳೂ ಇದ್ದುವು. ಅನೇಕ ವರ್ಷಗಳಿಂದ ನಡೆದುಕೊಂಡು ಬಂದ ಈ ಕ್ರಮವನ್ನು ಒಂದು ವ್ಯವಸ್ಥಿತ ತಂತ್ರವನ್ನಾಗಿ ಮಾರ್ಪಡಿಸಿದ್ದರು. ಶಿಲುಬೆಯಲ್ಲಿ ಒಂದು ಉದ್ದನೆಯ ಕಂಬ, ಕಟ್ಟಿಗೆಯ ಇನ್ನೊಂದು ಅಡ್ಡ ಪಟಿ ಇರುವುದಷ್ಟೆ. ಅಡ್ಡ ಪಟಿಯನ್ನು ಅಪರಾಧಿಗಳೇ ತಮ್ಮ ಬಲಭುಜದ ಮೇಲೆ ಹೊತ್ತುಕೊಂಡು ನಡೆಯಬೇಕು. ಅದು ಆರಡಿ ಅಗಲುಳ್ಳ ದಪ್ಪನ್ನ ಪಟ್ಟಿಯಾಗಿದ್ದು ಅದರ ಭಾರವು ೩೦ ಪೌಂಡುಗಳಷ್ಟಾದೀತು.

ಆ ದಿನ ಶಿಲುಬೆಗೇರಿಸಲ್ಪಡುವವರಾಗಿದ್ದ ಆ ಇಬ್ಬರು ಅನ್ಯ ಅಪರಾಧಿಗಳಲ್ಲಿ ಒಬ್ಬ ಕಳವಿಗಾಗಿ ಶಿಕ್ಷೆಗೆ ಗುರಿಯಾದವ, ಇನ್ನೊಬ್ಬ ಕೊಲೆಗಡುಕನಾಗಿದ್ದ. ಅವರನ್ನೂ ಅದೇ ಸ್ಥಳಕ್ಕೆ ತಂದು, ಅವರ ಮೇಲೆ ಅವರವರ ಅಡ್ಡ ಪಟ್ಟಿಗಳನ್ನು ಹೊರಿಸಲಾಯಿತು. ಊರ ಹೊರಗಿದ್ದ ಶಿಲುಬೆಯ ಸ್ಥಾನವಾದ ಗೊಲ್ಗಾಥಾವನ್ನು ಅತಿ ಹತ್ತಿರದ ಮಾರ್ಗದಿಂದ ಮುಟ್ಟುವುದೆಂದರೂ, ಮುಕ್ಕಾಲು ಮೈಲು ಅಂತರವನ್ನು ಕ್ರಮಿಸಬೇಕಾಗಿತ್ತು. ಸೈನಿಕರು ಹೊಟ್ಟೆ ತುಂಬ ಖಾದ್ಯಪೇಯಗಳನ್ನು ಸವಿದು ಸಿದ್ಧರಾದರು.

ಆದರೆ ಯೇಸು ಆ ಶಿಲುಬೆಯ ತೊಲೆಯನ್ನು ಹೊರುವ ದೈಹಿಕ ಸ್ಥಿತಿಯಲ್ಲಿದ್ದನೆ? ಅದನ್ನು ಮೇಲೆ ಹೊರಿಸುತ್ತಲೂ ನಿಶ್ಶಕ್ತಿಯಿಂದ ಕುಂಠಿತನಾಗಿದ್ದ ಅವನು ನೆಲಕ್ಕುರುಳಿದನು. ಬಿದ್ದಾಗ ಕಿರೀಟದ ಮುಳ್ಳುಗಳು ತಲೆಯನ್ನು ಚುಚ್ಚಿದವು. ಆ ಭಾರವಾದ ತೊಲೆಯು ಅವನ ಮೈಮೇಲೆ ಬಿದ್ದು ನುಗ್ಗುಮಾಡಿತು. ಸೈನಿಕರಿಗೆ ಅಸಹನೆಯುಂಟಾಯಿತು. ಜೊತೆಗಿನ ಇಬ್ಬರು ಹೊತ್ತಿದ್ದಾಗ ಇವನಿಗೇನು ಧಾಡಿ? ಶತಾಧಿಪತಿಯ

ಆಜ್ಞೆಯಂತೆ ಅವನನ್ನು ಎಬ್ಬಿಸಿ ನಿಲ್ಲಿಸಲಾಯಿತು. ಮತ್ತೆ ಆ ಅಡ್ಡಪಟ್ಟಿಯನ್ನು ಹೊರಿಸಲಾಯಿತು.

ದಾರಿಯಲ್ಲಿದ್ದವರು, ಬೆಳಗಿನಿಂದ ನಡೆದ ಘಟನೆಗಳ ಪರಿಚಯವಿಲ್ಲದವರು "ಯಾರು ಈತ? ಇವನು ಏನು ತಪ್ಪು ಮಾಡಿದ್ದಾನೆ?" ಎಂದು ಕೇಳಿದರು ಹೆಂಗಸರು ತಮ್ಮ ಮನೆಗಳ ಮೇಲಿಂದ ನಿಂತು ನೋಡುತ್ತಿರುವಾಗ, ತಡೆಯಲಾಗದೇ ಅವನನ್ನು ಗೊಲ್ಗಾಥಾದ ವರೆಗೆ ಹಿಂಬಾಲಿಸಿಕೊಂಡು ಬಂದರು. ಅವರಲ್ಲಿ ಕೆಲವರು ಈ ಮೊದಲು ಅವನ ಉಪದೇಶವನ್ನು ಕೇಳಿ, ಅವನ ಧರ್ಮಕಾರ್ಯಕ್ಕೆ ಧನ, ಕನಕಗಳನ್ನು ಕೊಟ್ಟವರಿದ್ದರು. ಎಳೆಯ ಮಕ್ಕಳು ತಮ್ಮ ತಂದೆತಾಯಿಗಳನ್ನು ಕುರಿತು, "ಈತ ಏನು ಮಾಡಿದ್ದಾನೆ? ರಕ್ತ ಬರುವ ಹಾಗೆ ಇವನಿಗೆ ಹೊಡೆದರೇಕೆ?" ಎಂದು ಕೇಳುತ್ತಿದ್ದವು. ಎಷ್ಟೋ ಜನಕ್ಕೆ ಈ ವಿಷಯವೇ ಗೊತ್ತಿರಲಿಲ್ಲ. ನೆರೆದಿದ್ದ ೨-೩ ಲಕ್ಷ ಜನರಲ್ಲಿ ಎರಡು ಮೂರು ಸಾವಿರ ಜನಕ್ಕಷ್ಟೇ ಈ ವಿಷಯದ ಪೂರ್ವಾಪರವು ತಿಳಿಯಬಂದಿದ್ದಿತು.

ಇಲ್ಲ; ಎದ್ದು ನಿಲ್ಲಲೂ ಆಗದ ಯೇಸುವಿನಿಂದ ಆ ಪಟ್ಟಿಯನ್ನು ಎಳೆದುಕೊಂಡು ಹೋಗುವುದಾಗಲಿಲ್ಲ. ಅವನು ತಡೆದು ನಿಂತಾಗೆಲ್ಲ ಸೈನಿಕರು ದೂಗಿಸುತ್ತಿದ್ದರು. ಅಂತೂ ಊರ ಹೊರಗೆ ಬರುವಷ್ಟರಲ್ಲಿ ಇನ್ನು ಯೇಸು ಅದನ್ನು ಹೊರುವ ಸ್ಥಿತಿಯಲ್ಲೇ ಇಲ್ಲವೆಂದು ಆ ಶತಾಧಿಪತಿಗೆ ಖಾತ್ರಿಯಾಯಿತು. ಇನ್ನೇನು ಮಾಡುವುದು? ಆಗ ಹೊಲದಿಂದ ಮರಳಿ ಹೊರಟಿದ್ದ ಒಬ್ಬ ರೈತನು ಕಂಡನು. ನೋಡಲಿಕ್ಕೆ ಸದೃಢನಾಗಿದ್ದನು. ಶತಾಧಿಪತಿಯು ಅವನನ್ನು ತಡೆದು "ಎಲೋ ಇದನ್ನು ಹೊತ್ತುಕೊಂಡು ಗೊಲ್ಗಾಥಾದ ವರೆಗೆ ನಡೆ" ಎಂದು ಅಪ್ಪಣೆಯಿತ್ತನು. ಸೈನಿಕರ ಸಹವಾಸ! ಒಲ್ಲದ ಮನದಿಂದ ಆ ರೈತನು (ಸೈಮನ್ ಎಂದು ಅವನ ಹೆಸರು) ಅದನ್ನು ಹೊತ್ತುಕೊಂಡು ಬಂದನು.

ಗೊಲ್ಗಾಥಾದಲ್ಲಿ ಈಗಾಗಲೇ ಕೆಲವು ಜನ ನೆರೆದಿದ್ದರು. ತನ್ನ ದೇಹದ ಅವ್ಯಾಹತವಾದ ನೋವಿನಲ್ಲಿ, ದೇವರನ್ನು ಸಮೀಪಿಸುವ ತವಕದಲ್ಲಿ ಯೇಸು ತನ್ನ ಸುತ್ತಲೂ ನಡೆದ ವಿದ್ಯಮಾನಗಳತ್ತ ಗಮನವನ್ನು ಕೊಡುವುದಾಗಿರಲಿಲ್ಲ. ಈ ಮುಂಚೆ ಅಲ್ಲಿ ನೆರೆದ ಜನರನ್ನು ಮಾತ್ರ ನೋಡಿದನು. ಅವನ ಮುಖದಲ್ಲಿ ಒಂದು ಕ್ಷೀಣವಾದ ಮಂದಹಾಸವು ಮೂಡಿತು. ಏಕೆಂದರೆ ಅಲ್ಲಿ ಅವನು ತನ್ನ ತಾಯಿ ಮೇರಿಯ ಮುಖವನ್ನೂ ಕಂಡನು.

ಅವಳನ್ನು ಅಲ್ಲಿಗೆ ಕರತಂದವನು ಜಾನ್. ರಾತ್ರಿಯಲ್ಲೇ ಬೆಥೆನಿಯ ವರೆಗೆ ಓಡಿ ಹೋಗಿ ಅವಳಿಗೆ ಸುದ್ದಿಯನ್ನು ಮುಟ್ಟಿಸಿದ್ದನು. ಅವಳು ಅವನ ಭೆಟ್ಟಿಗೆ ಹೋಗಬೇಕೆಂದಾಗ ಜಾನ್ ಅವನ ಪರಿತಾಪವನ್ನು ನೋಡುವುದು ಅವಳಿಂದ ಸಹಿಸಲಿಕ್ಕಾಗಲಿಕ್ಕಿಲ್ಲವೆಂದು, ಬರಬಾರದಾಗಿ ಅಂಗಲಾಚಿ ಬೇಡಿಕೊಂಡನು. ಆದರೂ ಆಕೆ ಕೇಳಿರಲಿಲ್ಲ. ಅವಳ ಜೊತೆಗೆ ಅವಳ ದೂರದ ತಂಗಿಯಾದ ಅಲ್ಫಸ್ ಮೇರಿಯೂ ಒಂದು ಕಾಲಕ್ಕೆ ಪತಿತೆಯೆನಿಸಿಕೊಂಡಿದ್ದ ಮೆಗ್ಡಲೀನ್ ಮೇರಿಯೂ, ಪೀಟರ್, ಜೇಮ್ಸರ ತಾಯಿಯಾದ ಸಲೋಮೆಯೂ ಹೊರಟು ಬಂದರು. ಯೇಸು ತನ್ನ ತಾಯಿಯನ್ನು ತಬ್ಬಿಕೊಳ್ಳುವ ಆತುರದಲ್ಲಿದ್ದ. ಆದರೆ ತನ್ನೀ ಸ್ಥಿತಿಯಲ್ಲಿ ಸರಿಯಲ್ಲವೆಂದು ಅವಳನ್ನು ದೂರ ಕರೆದುಕೊಂಡು ಹೋಗುವಂತೆ ತನ್ನ ಆತ್ಯಂತಿಕ ಪ್ರೀತಿಯ ಶಿಷ್ಯನಾದ ಜಾನ್‌ನಿಗೆ ಹೇಳಲೆಂದು ಅವನೆಡೆಗೆ ತಿರುಗಿದರೆ, ಅವನೂ ಗಳಗಳನೆ ಅಳುತ್ತಿದ್ದಾನೆ! ಎಲ್ಲರ ಶೋಕವೂ ನಿರ್ಭರವಾಗಿದ್ದುದನು ಕಂಡು—

"ನಾನು ಇದಕ್ಕಾಗಿಯೆ ಈ ಭೂಮಿಗೆ ಬಂದುದೆಂಬುದನ್ನು ಮರೆತುಬಿಟ್ಟಿರಾ? ದೇವರ ಇಚ್ಛೆಯೇ ಹೀಗಿದೆ ಎಂದು ನಾನು ಹೇಳಿರಲಿಲ್ಲವೆ? ಅಳಬೇಡಿ. ನಾನು ಮೂರು ದಿನದಲ್ಲಿ ಮತ್ತೆ ಬರುತ್ತೇನೆ ಎಂಬ ಮಾತನ್ನೂ ನೆನಪಿನಲ್ಲಿಡಿ." ಯೇಸು

ತನ್ನ ದುಃಖವನ್ನು ಸಹಿಸಿಕೊಳ್ಳಲು ಸಮರ್ಥನಾಗಿದ್ದರೂ ಇತರರ ದುಃಖವನ್ನು ನೋಡುವುದಾಗಲಿಲ್ಲ.

ಅಷ್ಟರಲ್ಲಿ ಸೈನಿಕರು ಆಳವಾದ ಮೂರು ತಗ್ಗುಗಳನ್ನು ತೋಡಿಯಾಗಿತ್ತು. ಅಪರಾಧಿಗಳು ಹೊತ್ತು ತಂದ ಅಡ್ಡಪಟ್ಟಿಗಳನ್ನು ಮೂರು ಕಂಬಗಳಿಗೆ ಜೋಡಿಸಲಾಗಿತ್ತು. ಆಗ ಅದರ ಮೇಲೆ ಯೇಸುವನ್ನು ಎಳೆದು ತಂದು ಮಲಗಿಸಿದರು. ಅವನ ಕೈಗಳೆರಡನ್ನೂ ಅಡ್ಡಪಟ್ಟಿಯ ಆ ಬದಿ, ಈ ಬದಿಗೆ ಇರಿಸಿದರು. ಒಬ್ಬ ಅವನ ಮುಂಗೈಯ ಮೇಲ್ಭಾಗವನ್ನು ತುಳಿದು ಹಿಡಿದಾಗ, ಇನ್ನೊಬ್ಬ ಐದಾರು ಇಂಚಿನ ಚೌಕ ಮೊಳೆಯನ್ನೂ ಸುತ್ತಿಗೆಯನ್ನೂ ತಂದು ಯೇಸುವಿನ ಅಂಗೈಯ ನಡುವಿನಲ್ಲಿ ಚೆನ್ನಾಗಿ ಬಡಿದನು.

ಆ ಹೃದಯದ್ರಾವಕ ದೃಶ್ಯವನ್ನು ಮೇರಿಯು ನೋಡಬಾರದೆಂದು ಜಾನ್ ಕೂಡಲೇ ಅವಳ ಮುಖವನ್ನು ತನ್ನ ಭುಜಕ್ಕೆ ಒರಗಿಸಿಕೊಂಡನು. ಹಾಗೆಯೆ ಯೇಸುವಿನ ಇನ್ನೊಂದು ಕೈಗೂ ಮೊಳೆಯನ್ನು ಬಡಿಯಲಾಯಿತು. ಯಾರಿಗೂ ಎಂದೂ ಹೊಡೆಯದಿದ್ದ ಆ ಕೈಗಳು, ದೀನರಿಗೆ, ದಲಿತರಿಗೆ ಅಭಯದ ಕರುಣೆಯ ಆಶ್ವಾಸನವನ್ನು ಕೊಡುವ ಆ ಕೈಗಳು ಆ ನೋವನ್ನು ಅದು ಹೇಗೆ ಸಹಿಸಿಕೊಂಡವೊ? ಅಲ್ಲಿಂದ ಕಾಲುಗಳಿಗೂ ಮೊಳೆಗಳನ್ನು ಬಡಿದು ಕೂಡ್ರಿಸಲಾಯಿತು. ಕಾಲುಗಳ ಬುಡದಲ್ಲಿ ಒಂದು ಚಿಕ್ಕ ಹಲಗೆಯನ್ನು ಕೊಡಲಾಗಿದ್ದಿತು. ನಾಲ್ಕಾರು ಮಾರುದ್ದದ ಹೆಗ್ಗದ ಕೆಲಸವನ್ನು ನಾಲ್ಕೇ ಮೊಳೆಗಳು ಮುಗಿಸಿಬಿಟ್ಟವು. ಮೊಳೆಗಳ ಹೊಡೆತ ತಾಳಲಾರದೆ ಯೇಸು ಮೂರ್ಛೆಹೋದನು.

ಮೂರೂ ಕಂಬಗಳ ಬುಡಗಳನ್ನು ಆ ಆ ತಗ್ಗುಗಳಲ್ಲಿ ಇಳಿಸಿ ಕಲ್ಲು ಮಣ್ಣುಗಳಿಂದ ಮುಚ್ಚಿದರು. ಕಂಬದ ತುದಿಗಳಲ್ಲಿ, ಮಧ್ಯದಲ್ಲಿ ಯೇಸು, ಎಡ-ಬಲಕ್ಕೆ ಆ ಇಬ್ಬರು.

ಶಿಲುಬೆಗೇರಿಸಲಾದ ಪ್ರತಿಯೊಬ್ಬನ ಅಡ್ಡಪಟ್ಟಿಯ ಮಧ್ಯದಲ್ಲಿ ತುಸು ಮೇಲ್ಗಡೆ ಅವರ ಅಪರಾಧದ ಒಕ್ಕಣಿಕೆ ಇರುತ್ತದೆ. ಯೇಸುವಿಗೂ ಇದ್ದಿತು. ಪೈಲೇಟನ ಅಪ್ಪಣೆಯ ಮೇರೆಗೆ "ನಾಝರೇಥಿನ ಜೀಸಸ್, ಜ್ಯೂ ಜನರ ಅರಸ" ಎಂಬ ಫಲಕವಿದ್ದಿತು. ನೆರೆದವರಲ್ಲಿ ಅನೇಕರು ಆ ಫಲಕವನ್ನೂ ಅವನ ಮುಖವನ್ನೂ ನೋಡುತ್ತಿದ್ದರು. ಈತ ದೇವರ ಮಗನಲ್ಲವೆ? ಕೊನೆಗಳಿಗೆಯಲ್ಲಿ ಏನಾದರೂ ಪವಾಡವನ್ನು ಮೆರೆಯಬಹುದೇ?— ಕೈಫಸ್‌ನೂ ಕೆಲ ಪುರೋಹಿತರೂ ಇದಕ್ಕಾಗಿಯೇ ಅಲ್ಲಿ ಬಂದಿದ್ದರು.

ಯೇಸು ಕಣ್ಣು ತೆರೆದನು. ಕೆಳಗೆ ಸೈನಿಕರು ಆಟವಾಡುತ್ತ ಕುಳಿತಿದ್ದರು. ತನ್ನ ಬಟ್ಟೆಗಳನ್ನು ನಿಯಮದ ಪ್ರಕಾರ ಹಂಚಿಕೊಂಡು ಇವನ ಸಾವಿನ ದಾರಿಯನ್ನು ಕಾಯುತ್ತಿದ್ದರು. ಯೇಸು ಕಣ್ಣು ತೆರೆಯುತ್ತಲೂ ಒಬ್ಬನು ನುಡಿದನು:

"ದೇವ ಮಂದಿರವನ್ನು ನೆಲಕ್ಕುರುಳಿಸುವವನಲ್ಲವೇ ನೀನು?"

"ದೇವರ ಮಗನೆಂದು ಹೇಳಿಕೊಳ್ಳುತ್ತೀ. ಅದು ನಿಜವಾಗಿದ್ದರೆ ಈ ಶಿಲುಬೆಯಿಂದ ತಪ್ಪಿಸಿಕೊಂಡು ಬಾ ನೋಡೋಣ."

"ಛೇ, ಅವನು ಮಂದಿಯನ್ನು ಬದುಕಿಸುವವ. ತನ್ನನ್ನೆ ಬದುಕಿಸುವ ಶಕ್ತಿಯನ್ನು ಅವನ ದೇವರು ಅವನಿಗೆ ಕೊಡಲಿಲ್ಲ" ಇದು ಕೈಫಸ್‌ನ ವಾಣಿ.

ಯೇಸುವಿಗೆ ತನ್ನ ದೇಹದ ನೋವಿಗಿಂತ ಅವರು ತಮ್ಮ ತಂದೆಗೆ, ದೇವರಿಗೆಯೆ ಅನ್ಯಾಯವೆಸಗುತ್ತಿದ್ದಾರಲ್ಲ ಎಂದು ಕರುಣೆ ಹುಟ್ಟಿತು. ತನ್ನ ಅಮಿತವಾದ ನೋವನ್ನು ಆ ಕ್ಷಣಕ್ಕೆ ಮರೆತು ಮೆಲ್ಲನೆಯ ಸ್ವರದಲ್ಲಿ ಪ್ರಾರ್ಥಿಸಿದನು:

"ತಂದೆಯೇ, ಇವರನ್ನು ಕ್ಷಮಿಸು; ತಾವೇನು ಮಾಡುತ್ತಿದ್ದೇವೆಂಬುದರ ಅರಿವು ಅವರಿಗಿಲ್ಲ." ಜಗತ್ತಿನಲ್ಲಿ ತಪ್ಪು ಮಾಡಿದ ಎಲ್ಲರ ಪರವಾಗಿಯೂ ಕ್ಷಮೆ ಕೋರುವಂತಿತ್ತು ಆ ಪ್ರಾರ್ಥನೆಯಲ್ಲಿ.

ಆಗ ಆಕಾಶದಲ್ಲಿ ಅದೇಕೊ ಕತ್ತಲೆ ಕವಿಯಲಾರಂಭಿಸಿತು. ಆಕಾಶದತ್ತ ಜನ ನೋಡಿತು.

ಮೋಡಗಳೇನೂ ಇರಲಿಲ್ಲ, ಸೂರ್ಯನ ಪ್ರಕಾಶವು ಹೀಗೇಕೆ ಮಂದವಾಯಿತೆಂಬುದು ಯಾರಿಗೂ ಅರ್ಥವಾಗಲಿಲ್ಲ. ಎಲ್ಲಿಂದಲೊ ಉಸುಕಿನ ಬಿರುಗಾಳಿ ಬೀಸಿದೆ ಎಂದು ಭಾವಿಸಿದರು. ಇನ್ನು ಇಲ್ಲಿರುವುದು ತರವಲ್ಲವೆಂದು ಹೆಚ್ಚಿನ ಜನ ಅಲ್ಲಿಂದ ಕಾಲ್ತೆಗೆಯಿತು.*

ಶಿಲುಬೆಗೇರಿಸಿದ ಒಂದು ತಾಸಿನ ನಂತರದಲ್ಲಿ ಉಳಿದವರೆಂದರೆ ಹತ್ತಿಪ್ಪತ್ತು ಜನ ಮಾತ್ರ. ಯೇಸುವಿನ ಮುಂಗೈಯ ನರಗಳು ಒಂದೇ ಸವನೆ ಜಗ್ಗಿಜಗ್ಗಿ ಅಪಾರ ಯಾತನೆಯನ್ನು ಕೊಡುತ್ತಲಿದ್ದವು. ಕಾಲುಗಳ ನರಗಳಂತೂ ಸೇದುತ್ತಲಿದ್ದವು. ಅವುಗಳ ಮುಂದೆ ಇತರ ದೈಹಿಕ ಪರಿತಾಪವು ಏನೂ ಅಲ್ಲವೆಂಬಂತಿತ್ತು. ಅದನ್ನು ತಾಳಲಾರದೆ ಅವನು ಒಮ್ಮೆ ಜೋರಾಗಿ ನರಳಿದನು.

ಆಗ ಯಾರೋ ಒಬ್ಬರು ಒಂದು ಕೋಲಿಗೆ ಕಟ್ಟಿದ ಬಟ್ಟೆಯನ್ನು ಒದ್ದೆ ಮಾಡಿ ಅವನ ಬಾಯಿಗೆ ಹಿಡಿದರು. ಸಾಯುವವರಿಗಾಗಿ ಈ ರೀತಿಯ ಅನುಕಂಪ ತೋರುವುದಕ್ಕೆ ಅನುಮತಿ ಇದ್ದಿತು. ಯೇಸು ಮುಖವನ್ನು ತಿರುಗಿಸಿ ಅದನ್ನು ನಿರಾಕರಿಸಿದನು.

ರಾಜಕೀಯ ದರೋಡೆಖೋರನಿಗೆ ಮಾತ್ರ ನೋವು ದುಸ್ಸಹವಾಯಿತು. ಯೇಸುವಿನ ಮೇಲೆ ಅದೇಕೊ ಅವನಿಗೆ ಸಿಟ್ಟು ಬಂತು.

"ನೀನು ದೇವದೂತನೆ? ಹಾಗಿದ್ದರೆ ನಿನ್ನನ್ನು ಬದುಕಿಸಿ, ನಮ್ಮನ್ನೂ ಪಾರುಮಾಡಲಾರೆಯಾ?" ಎಂದು ಹೀಗಳೆದನು.

ಯೇಸು ಏನೂ ಮಾತನಾಡಲಿಲ್ಲ. ಇನ್ನೊಬ್ಬ ಅಪರಾಧಿಯೇ ಉತ್ತರಿಸಿದನು:

"ದೇವರ ಬಗ್ಗೆ ನಿನಗೆ ಸ್ವಲ್ಪವೂ ಭಯ-ಭಕ್ತಿ ಬೇಡವೆ? ನಾವು ತಪ್ಪು ಮಾಡಿದ್ದೆವು. ನಮಗೆ ತಕ್ಕ ಶಿಕ್ಷೆಯಾಯಿತು. ಈತನೊ ನಿರಪರಾಧಿ"

ತುಸು ತಡೆದ ಮೇಲೆ ಆತ ಮತ್ತೆ ನುಡಿದನು:
"ಯೇಸು, ನೀನು ಪರಲೋಕವನ್ನು ಸೇರಿದ ಮೇಲೆ ನನ್ನ ನೆನಪಿರಲಿ."

ಉಸಿರನ್ನು ಬಲವಾಗಿ ಎಳೆದುಕೊಳ್ಳುತ್ತ ಯೇಸು "ನೀನೂ ಈ ದಿನ ನನ್ನೊಟ್ಟಿಗೆ ಸ್ವರ್ಗಕ್ಕೆ ಬರುವಿ" ಎಂದನು. ಅವನೇ ಯೇಸುವಿನ ಕೊನೆಯ ಗಳಿಗೆಯಲ್ಲಿ ಕೊನೆಯ ಅನುಯಾಯಿಯಾಗಿ ನಿಂತನು. ಅವನ ಇತರ ಅನುಯಾಯಿಗಳೆಲ್ಲ ಎಲ್ಲಿ ಇದ್ದರೋ ತಿಳಿಯದು. ಅವರ ನೆನಪಿನಲ್ಲಿ ಯೇಸು ಜಾನ್‌ನತ್ತ ನೋಡಿದನು. ಕಣ್ಣಿನಿಂದಲೇ ಸನ್ನೆ ಮಾಡಿದನು. ಜಾನ್ ಕೂಡಲೇ ತಾಯಿ ಮೇರಿಯನ್ನು ಕರೆದುಕೊಂಡು ಸನಿಹಕ್ಕೆ ಬಂದನು. ಆಗ ಯೇಸು ಕಾರುಣ್ಯದಿಂದ ಮೆಳಿತವಾದ ಸ್ವರದಿಂದ ತಾಯಿಗೆ ಹೇಳಿದನು:

"ತಾಯೀ, ಇವ ನಿನ್ನ ಮಗ." ಅಲ್ಲಿಂದ ಜಾನ್‌ನತ್ತ ಹೊರಳಿ "ಮಗೂ, ಇವಳೇ ನಿನ್ನ ತಾಯಿ" ಎಂದನು. ಜಾನ್‌ನಿಗೆ ಅವನ ಮಾತಿನ ಇಂಗಿತವು ತಿಳಿಯಿತು. ಆತ ಕಣ್ಣುಗಳನ್ನು ಒರಸಿಕೊಂಡು, ತಾಯಿಯನ್ನು ತಬ್ಬಿಹಿಡಿದುಕೊಂಡು ತನ್ನ ಕಣ್ಣಿನ ಸಂಜ್ಞೆಯಿಂದಲೇ ಯೇಸು ಕೇಳಿದ ಭರವಸೆಯನ್ನು ಇತ್ತನು.

ತನ್ನ ಮರಣ ಕಾಲವು ಸನ್ನಿಹಿತವಾಯಿತೆಂದು ಯೇಸುವಿಗೆ ಅನಿಸತೊಡಗಿತು. ದೇಹದ ಅವಯವಗಳ ಚಲನೆ ಸುಂದಾಗತೊಡಗಿತು. ದೇವರು ತನ್ನನ್ನು ಕರೆದುಕೊಳ್ಳಲು ಅದೇಕೆ ತಡಮಾಡುತ್ತಿದ್ದಾನೆ ಎಂದು ಕಂಡಿತು. ಯೇಸು ತನ್ನೆಲ್ಲ ಶಕ್ತಿಯನ್ನು ನಾಲಗೆಯಲ್ಲಿ ಎಳೆದು ತಂದು, "ಎಲೊಯಿ (ಓ ದೇವರೇ!) ಇನ್ನೂ ನನ್ನ ಮೇಲೆ ಕರುಣೆ ಬಾರದೇ?" ಎಂದು ಕೂಗಿದನು.

ಆಯಿತು. ಯೇಸುವಿನ ಕೊನೆಯುಸಿರು ಅದೇ ಬೀಸಿದ ಸುಳಿಗಾಳಿಯೊಂದರಲ್ಲಿ ತೇಲಿಕೊಂಡು ಹೋಯಿತು. ಅವನ ದೇಹವು ಕಟ್ಟು ಹಾಕಿದ

* ಈ ಮಬ್ಬುಬೆಳಕು ಗೊಲ್ಗಾಥಾ, ಜೆರೂಸಲೇಮ್‌ಗಳಲ್ಲಿ ಅಲ್ಲದೆ ಯುರೋಪಿನ ಇತರ ಭಾಗಗಳಲ್ಲಿ ಕಾಣಿಸಿದ ಬಗ್ಗೆ ಪುರಾವೆಗಳಿವೆಯೆಂದು ಜಿಮ್ ಬಿಶಪ್ ಬರೆಯುತ್ತಾರೆ.

ಆ ಶಿಲುಬೆಯಲ್ಲಿಯೇ ಕುಸಿಯಿತು. ಆ ಕ್ಷಣಕ್ಕೆ ಭೂಮಿ ನಡುಗಿತು. ಅದನ್ನು ಕಂಡು ಶತಾಧಿಪತಿಯೂ ಸೈನಿಕರೂ ಗಾಬರಿಯಿಂದ ಎದ್ದು ನಿಂತರು. ಯೇಸುವಿನ ಇಳಿಬಿದ್ದ ದೇಹವನ್ನು ನೋಡಿದರು. ನೋಡನೋಡುವಷ್ಟರಲ್ಲಿ ಭೂಮಿಯ ಕಂಪನದಿಂದ ಗೊಲ್ಗಾಥಾ, ಜೆರೂಸಲೇಮ್ ಸೀಮೆಯಲ್ಲಿ ಬಿರುಕು ಬಿದ್ದಿತು.

ಹೆಂಗಳೆಯರೆಲ್ಲ ನೀರವವಾಗಿ ಅಳುತ್ತಿದ್ದರು. ಯಾರಿಗೆ ಯಾರೂ ಸಮಾಧಾನ ಹೇಳುವ ಸ್ಥಿತಿಯಲ್ಲಿರಲಿಲ್ಲ. ಒಬ್ಬನು ಮಾತ್ರ ಭರದಿಂದ ನಗರದ ಕಡೆಗೆ ಹೆಜ್ಜೆ ಹಾಕಿದನು. ಅವನು ಪುರೋಹಿತ ಸಭೆಯ ಸದಸ್ಯರಲ್ಲಿ ಒಬ್ಬನಾದ ಜೋಸೆಫ್. ನೇರವಾಗಿ ಆತನು ಪೈಲೇಟನ ನಿವಾಸಕ್ಕೆ ಬಂದನು. ಯೇಸು ಸತ್ತಿರುವನೆಂದೂ ಅವನ ದೇಹವನ್ನು ಅಂತ್ಯಕ್ರಿಯೆಗಾಗಿ ತನಗೊಪ್ಪಿಸಬೇಕೆಂದೂ ಕೇಳಿದನು.

"ಆಂ. ಇಷ್ಟುಬೇಗ ಸತ್ತನೇ?" ಎಂದು ಪೈಲೇಟ್ ಉದ್ಗಾರವೆತ್ತುವಂತಾಯಿತು!

ಶಿಲುಬೆಗೇರಿಸಿದ ಮೂರು ತಾಸಿನಲ್ಲಿಯೆ ಯೇಸು ಮರಣವನ್ನೈದಿದ್ದನು. ಇನ್ನು ಅವನ ದೇಹವನ್ನು ಅವನ ಆಪ್ತರಿಗೆ ಒಪ್ಪಿಸಬೇಕು. ಆದರೆ ಅವನ ಕಳೇವರವನ್ನು ಕೇಳಲಿಕ್ಕೆ ಬಂದವನು ಆಪ್ತನಲ್ಲ. ಅವನನ್ನು ಮರಣದಂಡನೆಗೆ ಗುರಿಪಡಿಸಿದ ಪುರೋಹಿತ ಮಹಾಸಭೆಯ ಸದಸ್ಯನೊಬ್ಬ! ಈ ರೀತಿಯಾಗಿ ತಾನು ಬಹಿರಂಗವಾಗಿ ಯೇಸುವಿನ ಅನುಯಾಯಿಯಂತೆ ನಡೆದುಕೊಂಡರೆ ತನ್ನ ಗತಿಯೇನಾದೀತು ಎಂಬ ಅರಿವು ಇದ್ದರೂ ಜೋಸೆಫ್ ಆ ಕೆಲಸಕ್ಕೆ ಮುಂದೆ ಬಂದಿದ್ದನು.

ಜೋಸೆಫ್ ತನ್ನ ಸಂಗಡ ತನ್ನ ಮಿತ್ರ ನೈಕೋಡೆಮಸ್‌ನನ್ನು ಕರೆದುಕೊಂಡನು. ದೇಹಕ್ಕೆ ಸವರಬೇಕಾದ ಎಣ್ಣೆಯನ್ನು ಸಿದ್ಧಪಡಿಸಲು ಮಸಾಲೆಗಳನ್ನು ಅವರು ತೆಗೆದುಕೊಂಡರು, ಬಟ್ಟೆಯನ್ನು ತಂದರು. ಗೊಲ್ಗಾಥಾದತ್ತ ಅವಸರದಿಂದ ಹೆಜ್ಜೆ ಹಾಕಿದರು. ಆ ಗಳಿಗೆಗೆ ಅಲ್ಲಿ ಇನ್ನೂ ಒಬ್ಬಿಬ್ಬ ಪುರೋಹಿತರು ಇರುವರೆಂಬುದು ಗೊತ್ತಿತ್ತು. ತಾವು ಯೇಸುವಿನ ಅಂತ್ಯವಿಧಿಗೆ ಒದಗಿದ್ದುದಷ್ಟೇ ಅಲ್ಲದೆ, ಜೋಸೆಫ್‌ನ ಒಡೆತನದಲ್ಲಿದ್ದ ಒಂದು ಕಲ್ಲಿನ ಚಿಕ್ಕ ಗವಿಯಲ್ಲಿಯೆ ಅವನ ಶವವನ್ನಿಡಲು ಗೊತ್ತು ಮಾಡಿದುದೂ ಅವರಿಗೆ ತಿಳಿಯಬಂದರೆ, ತಮಗೆ ಇನ್ನಿಲ್ಲದ ಶಿಕ್ಷೆ ಕಾದಿದೆಯೆಂದು ಅವರು ಚೆನ್ನಾಗಿಯೆ ಅರಿತಿದ್ದರು.

ಯೇಸುವಿನ ದೇಹವನ್ನು ಶಿಲುಬೆಯಿಂದ ಮೆಲ್ಲಗೆ ಬಿಡಿಸಿ ಇಳಿಸುವ ಕಾರ್ಯದಲ್ಲಿ ತಾನೂ ನೆರವಾಗುವುದಾಗಿ ಜಾನ್‌ನು ಧಾವಿಸಿದನು. ಮೇರಿತ್ರಯರನ್ನು ಸಮಾಧಾನ ಪಡಿಸುವುದು ಹೆಚ್ಚಿನ ಕೆಲಸವೇ ಆಗುವುದೆಂದು ಜೋಸೆಫ್ ಬೇಡ

ವೆಂದ. ಆದರೆ ಜಾನ್ ಕೇಳಲಿಲ್ಲ. ಹಿಂದಿನಿಂದ ಶಿಲುಬೆಯನ್ನು ಏರಿ, ತಂದಿದ್ದ ಅರಿವೆಯನ್ನು ಸುತ್ತಿ, ಆ ಶಿಲುಬೆಯಿಂದ ಯೇಸುವಿನ ಶರೀರವನ್ನು ಮೆಲ್ಲಗೆ ಇಳಿಬಿಟ್ಟರು.

ಸೂರ್ಯನು ಮುಳುಗುವುದರೊಳಗೆ, ಸಬ್ಬಾಥದ ಅವಧಿಗಿಂತ ತುಸುವೆ ಮುಂಚೆ ಯೇಸುವಿನ ಶರೀರವನ್ನು ಆ ಕಲ್ಲಿನ ಗವಿಯಲ್ಲಿ ಮೇಣ ಬತ್ತಿಯ ಮಂದ ಬೆಳಕಿನಲ್ಲಿ ಮಲಗಿಸಿ, ಒಂದು ಬಂಡೆಯನ್ನು ಮುಚ್ಚಲಾಯಿತು. ಸಬ್ಬಾಥದ ಒಂದು ದಿನದ ಅವಧಿ ಮುಗಿದ ಮೇಲೆ ರವಿವಾರ ಇತರ ಕ್ರಿಯೆಗಳನ್ನು ಯಥಾವಿಧಿಯಾಗಿ ಮುಗಿಸಬೇಕೆಂದು ಗೊತ್ತು ಮಾಡಿದರು.

ಅನ್ನಾಸನಿಗೆ ನಡೆದುದೆಲ್ಲದರ ವರದಿ ಒಪ್ಪಿಸಿದವರು, ತಮ್ಮ ಕೃತಕೃತ್ಯತೆಯನ್ನು ಸಾರಿದಾಗ ಅವನಿಗೆ ಇನ್ನೊಂದು ವಿಚಾರ ಬಂತು. "ಈ ಧರ್ಮ ಖಂಡನು ಮೂರು ದಿನಗಳ ಮೇಲೆ ಎದ್ದು ಬರುವೆನೆನ್ನುತ್ತಿದ್ದ. ಅವನ ಶವವನ್ನು ಕಾಯಲು ಯಾರನ್ನಾದರೂ ನಿಯಮಿಸಿದ್ದೀರಾ? ಇಲ್ಲವಾದರೆ ಅವನ ಶಿಷ್ಯರು ಅವನ ದೇಹವನ್ನು ಕೊಂಡೊಯ್ದು, ಅವನು ಜೀವಂತನಿರುವನೆಂದು ಸುದ್ದಿ ಹಬ್ಬಿಸಿದರೆ ಮತ್ತೆ ಬಂಡೇಳಬಹುದು" ಎಂದನು. ಕೂಡಲೇ ಸೈನಿಕರನ್ನು ಕಾವಲಿಗೆಂದು ಕಳಿಸಲು ಪೈಲೇಟನ ಹತ್ತಿರ ದೂತರನ್ನು ಅಟ್ಟಿದನು.

ಇತ್ತ ತಾಯಿ ಮೇರಿಯನ್ನು ಜಾನ್‌ನು ಅಲ್ಲಿಂದ ಕರೆದೊಯ್ದನು. ಅವಳು ಅತ್ತು ಅತ್ತು ಮನಸ್ಸು ದೇಹಗಳೆರಡರಿಂದಲೂ ನಿರ್ವಿಣ್ಣಳಾಗಿದ್ದಳು. ಜೊಸೆಫ್, ಅವನ ಸಂಗಡಿಗರೂ ಹೊರಟು ನಿಂತರು. ಮೆಗ್ಡಲೀನ್ ಮೇರಿ ಹಾಗೂ ಆಲ್ಫಸ್ ಮೇರಿಯರು ಎಷ್ಟು ಹೇಳಿದರೂ ಕೇಳದೆ ತಾವು ಅಲ್ಲೇ ಇರುವುದಾಗಿ ಹೇಳಿ ಆ ಗವಿಯ ಬದಿಯ ಹಾಸುಗಲ್ಲಿನ ಮೇಲೆಯೇ ಕುಳಿತುಕೊಂಡರು. ರಾತ್ರಿ ಬಲು ಹೊತ್ತಿನ ವರೆಗೆ ಯೇಸುವಿನ ಮಾತು, ಕೃತಿಗಳನ್ನು ನೆನೆದುಕೊಂಡು ತಮ್ಮ ದುಃಖವನ್ನು ಮರೆಯಬೇಕೆಂದರು.

ಅವರು ಎಚ್ಚತ್ತಾಗ ಬೆಳಗು ಹರಿದಿತ್ತು. ಆದರೆ ಆಶ್ಚರ್ಯ! ಮರೆಮಾಡಿದ ಆ ಬಂಡೆಗಲ್ಲು ಉರುಳಿ ಬದಿಗೆ ಬಿದ್ದಿತ್ತು. ಒಳಗೆ ಯೇಸುವಿನ ದೇಹವಿರಲಿಲ್ಲ. ವಿಹ್ವಲರಾದ ಮೇರಿಯರಿಬ್ಬರೂ ಅಡವಿಯಲ್ಲಿ, ಊರಲ್ಲಿ ಅಂಡಲೆದರು. ಮೂರನೆಯ ದಿನದ ನಸುಕಿನಲ್ಲಿ ಮೆಗ್ಡಲೀನ್ ಮೇರಿಗೆ ಯೇಸು ಕಾಣಿಸಿಕೊಂಡನು. ಶಿಲುಬೆಗೇರಿಸಿದ ಯೇಸುವಲ್ಲ, ತನಗೆ ಜೀವದಾನ ಮಾಡಿದ್ದ ಯೇಸುವನ್ನು ಕಂಡಳು. ಅವನ ನಿಲುವಂಗಿಯನ್ನು ಹಿಡಿಯಲೆಂದು ಧಾವಿಸಿದಳು. ಅದು ಕೈಗೆ ಹತ್ತಿದಂತಾಗಿದ್ದರೂ ತನ್ನ ಕೈಗೆ ಸಿಲುಕಿದಂತೆ ಅನಿಸಲಿಲ್ಲ.

"ಏಳು ಮಗಳೇ. ನಾನು ಮತ್ತೆ ಬಂದಿದ್ದೇನೆ. ನಾನೀಗ ಅಶರೀರಿ. ನನ್ನನ್ನು ನೀನು ಮುಟ್ಟಲಾರಿ. ಆದರೂ ನನ್ನ ಯಾರೇ ಶಿಷ್ಯರು ಕರೆದಾಗ ಬರುತ್ತೇನೆ. ಯೋಚನೆ ಬೇಡ. ನಾನು ನಿಮ್ಮ ಬೆನ್ನಿಗೇ ಇರುವೆ."

ಆ ತರಹದ ವಾಣಿ ಇನ್ನೂ ಅನೇಕ ಸ್ಥಳಗಳಲ್ಲಿ ಕೇಳಬಂದಿತು. ಅದರಿಂದ ಅವನ ಶಾಂತಿ ಸತ್ಯ, ಪ್ರೇಮಗಳ ಸಂದೇಶವನ್ನು ಜಗತ್ತಿಗೆಲ್ಲ ಬೀರಲು ಅವರು ಅಂತಃಸ್ಫೂರ್ತಿಯನ್ನು ಪಡೆಯುವಂತಾಯಿತು. *

ನಿರುಪಯುಕ್ತ ಮಾಹಿತಿ

ಭಾರತದಲ್ಲಿ ಈಗ ೪,೬೦,೦೦೦ ಟೆಲಿಫೋನುಗಳು ಕೆಲಸ ಮಾಡುತ್ತವೆ. ಮೊದಲನೆ ಪಂಚವಾರ್ಷಿಕ ಯೋಜನೆಯ ಕೊನೆಗೆ ಕೇವಲ ೨,೬೦,೦೦೦ ಟೆಲಿಫೋನುಗಳಿದ್ದವು. ಆದರೆ ಇದೇನೂ ಹೆಚ್ಚಲ್ಲ. ಇಡೀ ಭಾರತದಲ್ಲಿಯ ಎರಡು ಪಟ್ಟು ಟೆಲಿ-ಫೋನುಗಳು ಟೋಕಿಯೊ ನಗರ ಒಂದರಲ್ಲಿಯೇ ಇವೆ. ವಾ. ಕೃ. ಮು.

This Magazine owned by the Loka Shikshana Trust, Hubli is printed and published by Shri H. R. Purohit at the Samyukta Karnatak Press, Koppikar Road, Hubli.